ಕೆರೆ ಹೊನ್ನಮ್ಮ

ಮತ್ತು

ಇತರ ಲಾವಣಿಗಳು

ಸಂಪಾದಕ

ಟಿ. ಎಸ್. ರಾಜಪ್ಪ

ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯ

1974

KERE HONNAMMA MATTU ITARA LAVANIGALU—
edited by T. S. Rajappa; published by the Institute of Kannada Studies, University of Mysore, Manasa Gangotri, Mysore.
First Edition 1974 ; pp. XXIV + 256.

ಬೆಲೆ: ಒಂಬತ್ತು ರೂಪಾಯಿಗಳು

ಮಾರಾಟಗಾರರು: ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು—570012

ಮುದ್ರಣ: ಮಿತ್ರ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು—570008

ಮುನ್ನುಡಿ

ಕರ್ನಾಟಕದಲ್ಲಿ ಜಾನಪದ ಅಧ್ಯಯನದ ಬಗ್ಗೆ ಹೊಸ ಆಸಕ್ತಿ ಉತ್ಸಾಹಗಳು ತೋರಿಬರುತ್ತಿರುವುದು ಗಮನಾರ್ಹವಾದ ವಿಷಯ. ಶಾಸ್ತ್ರೀಯವಾದ ತಳಹದಿಯ ಮೇಲೆ ಜಾನಪದ ಸಂಗ್ರಹ, ಸಂಶೋಧನೆಗಳು ನೆಲೆಗೊಳ್ಳಬೇಕಾಗಿದೆ. ಸಂಸ್ಕೃತಿಯ ತಾಯಿಬೇರಾದ ಜಾನಪದದ ಬಗೆಗೆ ಭಾರತದಲ್ಲಿ ನಿರ್ಲಕ್ಷ್ಯವೇ ಹೆಚ್ಚಾಗಿದ್ದು ಈವರೆಗೆ ನಡೆದಿರುವ ಸಂಗ್ರಹಕಾರ್ಯ ತುಂಬ ಅಸಮಗ್ರ ಎನಿಸಿದೆ. ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ ಕೆಲವು ಜಾನಪದ ಪ್ರಕಾರಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳು ನಡೆದಿದ್ದರೂ ಸಮಗ್ರ ಜಾನಪದದ ಬಗೆಗೆ ವ್ಯಾಪಕವಾದ ಕಾರ್ಯ ಇನ್ನೂ ಆಗಬೇಕಾಗಿದೆ. 'ಭಾರತ ಜಾನಪದದ ತೌರು' ಎಂಬ ಅಂಶವನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು ಒಪ್ಪಿಕೊಂಡರೂ ಸಂಗ್ರಹ, ಅಧ್ಯಯನಗಳು ಇನ್ನೂ ಸಮರ್ಪಕ ರೀತಿಯಲ್ಲಿ ವೈಜ್ಞಾನಿಕವಾಗಿ ಭಾರತದಲ್ಲಿ ಆಗಬೇಕಾಗಿದೆ ಎಂಬ ವಿಷಯವನ್ನೂ ಸ್ಪಷ್ಟಪಡಿಸಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಕೈಯಾಡಿಸಿದ ಯಾವ ವಿದ್ವಾಂಸನಾದರೂ ಈ ಮಾತನ್ನು ಒಪ್ಪಿಕೊಳ್ಳಬೇಕಾಗಿದೆ.

ಜಾನಪದದ ಸಾಹಿತ್ಯಿಕ ಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆಗಳಿಗೆ ಸಂಬಂಧಿಸಿದಂತೆ ಕತೆ, ಗೀತೆ, ಲಾವಣಿ, ಒಗಟು, ಗಾದೆ, ನಂಬಿಕೆ, ಸಂಪ್ರದಾಯ, ವೈದ್ಯ, ಅಡುಗೆ, ಉಡುಗೆ, ತೊಡುಗೆ, ವೃತ್ತಿ, ಮಾಟ, ಮಂತ್ರ, ನೃತ್ಯ, ನಾಟಕ, ಚಿತ್ರ, ಶಿಲ್ಪ, ಆಟ, ಕೂಟ, ನಡೆ, ನುಡಿ ಮುಂತಾಗಿ ಜನಪದ ಜೀವನದ ಎಲ್ಲ ಸ್ತರಗಳನ್ನೂ ಒಳಗೊಳ್ಳುವ ವಿಸ್ತಾರ, ವೈವಿಧ್ಯದ ಹಿನ್ನೆಲೆಯಲ್ಲಿ ಪರಿಶೋಧನೆ ಸಂರಕ್ಷಣೆಗಳು ನಡೆಯಬೇಕಾದುದು ಅತ್ಯಂತ ಅವಶ್ಯಕವಾದ ವಿಷಯವಾಗಿವೆ. ವಿಶ್ವವಿದ್ಯಾನಿಲಯಗಳಂತಹ ಶ್ರೇಷ್ಠ ಅಧ್ಯಯನ ಕೇಂದ್ರಗಳು ಈ ಕಾರ್ಯವನ್ನು ಕೈಗೊಂಡಾಗ ಮಾತ್ರ ಅದು ಸಾಕಷ್ಟು ಸಮರ್ಪಕವಾಗಿ, ಶಾಸ್ತ್ರೀಯವಾಗಿ, ಸುವ್ಯವಸ್ಥಿತವಾಗಿ ನಡೆಯಲು ಸಾಧ್ಯವಾಗುತ್ತದೆ. ಅನೇಕ ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳು ಜಾನಪದ ವಸ್ತು ಸಂಗ್ರಹಾಲಯ, ಸಂಶೋಧನಾಲಯ, ಅಧ್ಯಯನ ಕೇಂದ್ರಗಳ ವ್ಯವಸ್ಥೆಯನ್ನು ಎಷ್ಟೋ ವರ್ಷಗಳ ಹಿಂದೆಯೇ ಮಾಡಿವೆ; ಶಾಲಾ ಕಾಲೇಜುಗಳಲ್ಲಿ ಜಾನಪದ ಅಧ್ಯಯನ ವಿಷಯಗಳಲ್ಲಿ ಒಂದಾಗಿ ಸ್ವೀಕೃತವಾಗಿದೆ.

ಕರ್ನಾಟಕದಲ್ಲಿ ಜಾನಪದ ಸಂಗ್ರಹ ಕಳೆದ ಶತಮಾನದಿಂದಲೇ ಆರಂಭವಾದರೂ ಗೀತೆ ಮತ್ತು ಗಾದೆಗಳಿಗೆ ಸಂಬಂಧಿಸಿದಂತೆ ಮಾತ್ರ ಆ ಕಾರ್ಯ ತಕ್ಕಮಟ್ಟಿಗೆ ಆಗಿದೆ. ಜಾನಪದದ ಉಳಿದ ಪ್ರಕಾರಗಳತ್ತ ಯಾರೂ ವಿಶೇಷವಾದ ಆಸಕ್ತಿಯನ್ನು ಹರಿಸದೆ ಆ

ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಅಪಾರವಾಗಿ ಉಳಿದಿದೆ. ಗೀತೆ, ಗಾದೆಗಳನ್ನೊಳಗೊಂಡಂತೆ ಜಾನಪದದ ಉಳಿದ ಎಲ್ಲ ಪ್ರಮುಖ ಪ್ರಕಾರಗಳ ವ್ಯಾಪಕವಾದ ಸಂಗ್ರಹ ಕಾರ್ಯ ತ್ವರಿತವಾಗಿ ಆಗಬೇಕಾಗಿದೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಒಂದು ಸ್ಥಿರವಾದ ಬುನಾದಿಯನ್ನು ಪ್ರಪ್ರಥಮವಾಗಿ ಹಾಕಿಕೊಟ್ಟ ಕೀರ್ತಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲಬೇಕು. ಜಾನಪದ ಸಂಬಂಧವಾದ ಚಟುವಟಿಕೆಗಳು ಇಲ್ಲಿ ಸಕ್ರಮವಾಗಿ ಆರಂಭವಾಗಿ ವ್ಯಾಪಕವಾದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿದೆ. ಆರು ವರ್ಷಗಳ ಹಿಂದೆಯೇ ಜಾನಪದವನ್ನು ಅಧ್ಯಯನ ವಿಷಯವನ್ನಾಗಿ ಕನ್ನಡ ಎಂ. ಎ. ತರಗತಿಗೆ ಅಳವಡಿಸಿದ್ದರ ಜೊತೆಗೆ ಕಳೆದ ಮೂರು ವರ್ಷಗಳಿಂದ ಜಾನಪದ ಡಿಪ್ಲೊಮಾ ತರಗತಿಗಳು ಸಹ ನಡೆಯುತ್ತಿವೆ. ಜಾನಪದ ಸಂಶೋಧನೆ, ಜಾನಪದ ವಸ್ತುಸಂಗ್ರಹಾಲಯದ ಸ್ಥಾಪನೆಯ ಮೂಲಕ ಕನ್ನಡ ಅಧ್ಯಯನ ಸಂಸ್ಥೆ ಉತ್ತಮ ರೀತಿಯ ಜಾನಪದ ಸಂವರ್ಧನ ಕಾರ್ಯವನ್ನು ಕೈಗೊಂಡಿದೆ. ಅಪೂರ್ವ ಜನಪದ ಗೀತೆಗಳನ್ನು ಧ್ವನಿಮುದ್ರಣ ಮಾಡಿ ಸಂರಕ್ಷಿಸಲಾಗುತ್ತಿದೆ. ಇದರ ಜೊತೆಗೆ ಇತರ ಸಂಗ್ರಹಕರು ಕೈಗೊಳ್ಳುವ ಜಾನಪದ ಸಂಬಂಧವಾದ ಸಂಶೋಧನೆಗಳಿಗೂ ವಿಶೇಷ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಶಾಸ್ತ್ರೀಯ ಪ್ರಕಟಣೆಗಳಿಗೆ ಆದ್ಯಗಮನ ಕೊಡಲಾಗುತ್ತಿದೆ. ಇದೆಲ್ಲಕ್ಕೂ ಕಿರೀಟಪ್ರಾಯವಾಗಿ ಭಾರತದಲ್ಲಿಯೇ ಮೊದಲ ಸಲಕ್ಕೆ ಜಾನಪದ ಎಂ. ಎ. ತರಗತಿಗಳನ್ನು ಈ ವರ್ಷದಿಂದ ಆರಂಭಿಸಲಾಗಿದೆ.

'ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು' ಜಾನಪದ ಮಾಲೆಯಲ್ಲಿ ಪ್ರಕಟವಾಗುತ್ತಿರುವ ಇತ್ತೀಚಿನ ಗಮನಾರ್ಹ ಕೃತಿಯಾಗಿದೆ. ಜಾನಪದ ಮಾಲೆಯಲ್ಲಿ ಹೊರಬರುತ್ತಿರುವ ಗ್ರಂಥಗಳಲ್ಲಿ ಈ ಸಂಕಲನ ಇಪ್ಪತ್ತೇಳನೆಯದು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರಾಗಿರುವ ಶ್ರೀ ಟಿ. ಎಸ್. ರಾಜಪ್ಪನವರು ಈ ಗ್ರಂಥವನ್ನು ಸಂಪಾದಿಸಿಕೊಟ್ಟಿದ್ದಾರೆ. ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

ಜಾನಪದ ಅಧ್ಯಯನ, ಸಂಗ್ರಹ, ವಿಭಜನೆ ಹಾಗೂ ವ್ಯಾಖ್ಯಾನ ಮುಂತಾಗಿ ಮೂರು ಮುಖ್ಯ ಹಂತಗಳಲ್ಲಿ ನಡೆಯುತ್ತದೆ. ಸಂಗ್ರಹಕಾರ್ಯ ಜಾನಪದ ಸಂಶೋಧನೆಯ ಮೊದಲ ಹೆಜ್ಜೆ. ಕ್ಷೇತ್ರಕಾರ್ಯದಲ್ಲಿ ತೊಡಗಿದ ವಿದ್ವಾಂಸರು ಸಂಗ್ರಹಿತ ಸಾಹಿತ್ಯವನ್ನು ಗ್ರಂಥರೂಪದಲ್ಲಿ ಪ್ರಕಟಿಸದಿದ್ದರೆ, ಜಾನಪದ ಅಧ್ಯಯನ ವ್ಯಾಪಕವಾಗಿ ನಡೆಯಲು ಸಾಧ್ಯವಾಗುವುದಿಲ್ಲ. ಈ ಪ್ರಕಟಣ ಕಾರ್ಯದಲ್ಲಿ ಸಾಕಷ್ಟು ಹೊಸ ಸಾಹಿತ್ಯವನ್ನೂ ಜಾನಪದ ಸಂಬಂಧಿಯಾದ ಇತರ ವಿಷಯಗಳನ್ನೂ ದೊರಕಿಸುವುದರತ್ತ ಆದ್ಯಗಮನ ನೀಡುವುದು ಸೂಕ್ತ. ಈ ಹಿನ್ನೆಲೆಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ಮಾಲೆಯಲ್ಲಿ ಗ್ರಂಥಗಳನ್ನು ಹೊರತರಲಾಗುತ್ತಿದೆ.

ಕನ್ನಡ ಅಧ್ಯಯನ ಸಂಸ್ಥೆ ಜಾನಪದ ಅಧ್ಯಯನವನ್ನು ಬೋಧನಾಂಗಕ್ಕೆ ಅಳವಡಿಸಿದ ತರುಣದಲ್ಲೆ ಜಾನಪದ ಸಂಬಂಧವಾದ ಸಂಶೋಧನಾ ಶಾಖೆಯನ್ನೂ ಆರಂಭಿಸಿತು. ಜಾನಪದ ಸಂಬಂಧವಾಗಿ ಕೈಗೊಳ್ಳಬಹುದಾದ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಅವುಗಳಲ್ಲಿ ಮುಖ್ಯವಾದವು:

(೧) ಜಾನಪದ ವಸ್ತುಸಂಗ್ರಹಾಲಯದ ಯೋಜನೆ; (೨) ಕ್ಷೇತ್ರಕಾರ್ಯ, ಜಾನಪದ ಧ್ವನಿಮುದ್ರಣ, ಜಾನಪದ ಸಂಗ್ರಹ; (೩) ಜಾನಪದ ಕೃತಿಗಳ ಸಂಪಾದನೆ, ಪ್ರಕಟಣೆ.

ಇತ್ತೀಚೆಗೆ ಈ ಕಾರ್ಯಕ್ರಮಗಳ ಜೊತೆಗೆ ವಾರ್ಷಿಕ 'ಜಾನಪದ ಕಲಾ ಮಹೋತ್ಸವ', 'ಛಾಯಾಚಿತ್ರ ವಿಭಾಗ', 'ಜಾನಪದ ರೂಪಶಿಲ್ಪ ವಿಭಾಗ'ಗಳನ್ನೂ ಅಳವಡಿಸಿ ಜಾನಪದ ವಿಭಾಗವನ್ನು ವಿಸ್ತರಿಸಲಾಗಿದೆ.

ಜಾನಪದ ಮಾಲೆಯಲ್ಲಿ ಈಗಾಗಲೇ ಇಪ್ಪತ್ತಾರು ಕೃತಿಗಳನ್ನು ಪ್ರಕಟಿಸಲಾಗಿದೆ. ಪ್ರಕಟಣಕಾರ್ಯ ಅಧ್ಯಯನ ಸಂಸ್ಥೆಯ ಸಂಗ್ರಹಗಳನ್ನು ಹೊರತರುವುದಕ್ಕೆ ಮಾತ್ರ ಸೀಮಿತವಾದುದಲ್ಲ. ನಾಡಿನ ಬೇರೆ ಬೇರೆ ಕಡೆಗಳಲ್ಲಿ ವಿವಿಧ ವಿದ್ವಾಂಸರು ಜನಪದ ಸಾಹಿತ್ಯ ಸಂಗ್ರಹವನ್ನು ಕೈಗೊಂಡು, ಶಾಸ್ತ್ರೀಯವಾಗಿ ಸಂಗ್ರಹಿಸಿಕೊಟ್ಟ ಕೃತಿಗಳನ್ನು ಪ್ರಕಟಿಸಲು ಸಾಕಷ್ಟು ಅವಕಾಶವಿದೆ. ಬಹಳ ಹಿಂದೆಯೇ ಪ್ರಕಟಗೊಂಡು ಸಂಶೋಧಕರಿಗೆ ದುರ್ಲಭವೆನಿಸಿರುವ ಕೆಲವು ಅತ್ಯುತ್ತಮ ಸಂಕಲನಗಳನ್ನು ಆರಿಸಿ ಪುನರ್ಮುದ್ರಿಸಲು ವ್ಯವಸ್ಥೆ ಮಾಡಲಾಗಿದೆ.

ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗ ಕರ್ನಾಟಕದಾದ್ಯಂತ ಕೈಗೊಂಡಿರುವ ಜಾನಪದ ಪರಿವೀಕ್ಷಣೆ, ಸಂಗ್ರಹಣೆಗಳ ಫಲವಾಗಿ ಈಗಾಗಲೇ ಹೊರಬಂದಿರುವ ಅನೇಕ ಕೃತಿಗಳ ಸಾಲಿನಲ್ಲಿ ನಾಡಿನ ಬೇರೆ ಬೇರೆ ಭಾಗಗಳ ಲಾವಣಿಗಳಿಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಜಾನಪದ ಮಾಲೆಯ ಕೃತಿಗಳು ಜನಪದ ಕಾವ್ಯಾಭ್ಯಾಸಿಗಳ ಸಂಶೋಧಕರ ಆಸಕ್ತಿಯನ್ನು ಕೆರಳಿಸಿವೆ. ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಕನ್ನಡ ಲಾವಣಿ ಸಂಗ್ರಹವೊಂದು ಪ್ರಕಟವಾಗುತ್ತಿರುವುದು ಇದೇ ಮೊದಲು. ಅತ್ಯಂತ ಜನಪ್ರಿಯ ಲಾವಣಿ 'ಕೆರೆಗೆ ಹಾರ'ದ ಆಶಯದ ಮೇಲೆ ಬೆಳವಣಿಗೆಗೊಂಡಿರುವ ಸುದೀರ್ಘ ಲಾವಣಿ 'ಕೆರೆ ಹೊನ್ನಮ್ಮ' ಅತ್ಯಂತ ಗಮನಾರ್ಹವಾದುದು. ಬೇರೆಡೆಗಳಲ್ಲಿ ಇದರ ಸಂಗ್ರಹರೂಪಗಳು ಕಂಡುಬರುತ್ತವೆ. ಆದರೆ ಈ ಕತೆ ಇಷ್ಟು ವ್ಯಾಪಕವಾಗಿ ಬೆಳವಣಿಗೆಯನ್ನು ಪಡೆದುಕೊಂಡಿರುವುದು ಆಶ್ಚರ್ಯದ ವಿಷಯವಾಗಿದೆ. ಈ ಲಾವಣಿಯ ಜೊತೆಗೆ ಇನ್ನೂ ಉತ್ತಮ ಲಾವಣಿಗಳನ್ನು ಜಾನಪದ ವಿಭಾಗದ ಸಹಾಯಕ ಸಂಶೋಧಕರಲ್ಲೊಬ್ಬರಾಗಿರುವ ಶ್ರೀ ಟಿ. ಎಸ್. ರಾಜಪ್ಪ ಅವರು ಸಂಗ್ರಹಿಸಿ ಸಂಪಾದಿಸಿದ್ದಾರೆ. ಪ್ರಾದೇಶಿಕ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯದ ಅಧ್ಯಯನವನ್ನು ಕೈಗೊಳ್ಳುವವರಿಗೆ ಈ ಕೃತಿ ಹೆಚ್ಚು ಸಹಾಯಕವಾಗುತ್ತದೆ. ಇದರ ಪೂರ್ಣಪ್ರಯೋಜನವನ್ನು ಜಾನಪದ ಪ್ರೇಮಿಗಳು ಪಡೆದುಕೊಳ್ಳಲೆಂದು ಆಶಿಸುತ್ತೇನೆ.

ಜೀ. ಶಂ. ಪರಮಶಿವಯ್ಯ
ವಿಭಾಗ ಸಂಪಾದಕ

ಅರಿಕೆ

ಕರ್ನಾಟಕದ ಪ್ರತಿ ಜಿಲ್ಲೆಯ ಎಲ್ಲ ಬಗೆಯ ಜಾನಪದ ಪ್ರಕಾರಗಳನ್ನೂ ಸಂಗ್ರಹಿಸುವ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಯೋಜನೆಯಂತೆ, ಸಂಸ್ಥೆಯ ವತಿಯಿಂದ ಉತ್ತರ ಕೊಡಗು ಜಿಲ್ಲೆಯಲ್ಲಿ ೧೯೭೨ರ ಮೇ ತಿಂಗಳಿನಲ್ಲಿ ಸಂಗ್ರಹ ಕಾರ್ಯ ನಡೆಸಲಾಯಿತು.

ಕ್ಷೇತ್ರಕಾರ್ಯ ಮಾಡಲು ಪ್ರೋತ್ಸಾಹಕೊಟ್ಟು ಅವಕಾಶವನ್ನು ಕಲ್ಪಿಸಿಕೊಟ್ಟ ಡಾ.ಹಾ. ಮಾ. ನಾಯಕ ಅವರಿಗೂ, ಈ ಸಂಕಲನವನ್ನು ಸಿದ್ಧಪಡಿಸುವಾಗ ಸೂಕ್ತ ಮಾರ್ಗದರ್ಶನ ನೀಡಿದ ಡಾ. ಜೀ. ಶಂ. ಪರಮಶಿವಯ್ಯನವರಿಗೂ, ಮತ್ತು ಶ್ರೀ ಸುಧಾಕರ ಅವರಿಗೂ ಕೃತಜ್ಞನಾಗಿದ್ದೇನೆ.

ಅಪೂರ್ವ ಜನಪದ ಹಾಡುಗಾರ್ತಿ ಶ್ರೀಮತಿ ಗಂಗಮ್ಮನವರ ಪರಿಚಯವಾಗುವಲ್ಲಿ ಆತ್ಮೀಯರಾದ ಆರ್. ಪಿ. ಲಕ್ಷ್ಮೀಗೌಡರು ನೆರವಾಗಿದ್ದಾರೆ. ಶ್ರೀಮತಿ ಗಂಗಮ್ಮ ತಮಗಿದ್ದ ಕಷ್ಟಗಳನ್ನೆಲ್ಲಾ ಮರೆತು ನಾನಿದ್ದಲ್ಲಿಗೆಯೆ ಬಂದು ತುಂಬುಮನಸ್ಸಿನಿಂದ ವಿವಿಧ ಮಟ್ಟುಗಳಲ್ಲಿ ಹಾಡಿದ್ದಾರೆ. ಶ್ರೀಮತಿ ಕೆಂಚಮ್ಮ ಅತ್ತಿಗೆಯೊಡನೆ ಸೊಲ್ಲು ಕೊಟ್ಟು ಸಹಕರಿಸಿದ್ದಾರೆ. ಊಟ ವಸತಿ ಸೌಕರ್ಯಗಳನ್ನೊದಗಿಸಿಕೊಟ್ಟು ಸಂಗ್ರಹ ಕಾರ್ಯದಲ್ಲಿ ನೆರವಾದವರು ಹಿರಿಯರಾದ ಶ್ರೀ ಪರಮೇಶ್ವರಗೌಡರು ಮತ್ತು ಕುಟುಂಬದವರು.

ಈ ಎಲ್ಲರ ಸಹಾಯವನ್ನು ನಾನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

ಟಿ. ಎಸ್. ರಾಜಪ್ಪ

ಪರಿವಿಡಿ

ಪ್ರಸ್ತಾವನೆ

ಕೆರೆ ಹೊನ್ನಮ್ಮ

ಹೆಣ್ಣು ಮಕ್ಕಳ ತ್ಯಾಗ ಬಲಿದಾನಗಳ ಹೃದಯ ವಿದ್ರಾವಕ ಘಟನೆಗಳನ್ನುಳ್ಳ ಕಥೆಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿ ಸಿಕ್ಕುತ್ತವೆ. ಹೆಣ್ಣಿನ ಕಷ್ಟಸುಖಗಳು ಹೆಣ್ಣಿಗೆ ಹೆಚ್ಚು ಸಂವೇದನಾಶೀಲವಾಗುವುದರಿಂದ, ಜನಪದ ಸಾಹಿತ್ಯದಲ್ಲಿ ಹೆಣ್ಣುಮಕ್ಕಳಿಂದ ಹೊಮ್ಮಿದ ಹೆಣ್ಣಿನ ಚಿತ್ರಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ತ್ಯಾಗ ಬಲಿದಾನಗಳ ಕಥೆಗಳಾಗಿ ಈಗಾಗಲೇ ಜನಪದ ಸಾಹಿತ್ಯದಲ್ಲಿ ಜನಪ್ರಿಯವಾಗಿರುವ ಕೆರೆಗೆ ಹಾರ, ಒಡ್ಡರಬೋಯಿ, ಅಣಜಿಹೊನ್ನಮ್ಮ, ಹುಳಿಯಾರು ಕೆಂಚಮ್ಮ ಮುಂತಾದ ಒಂದೇ ಬಗೆಯ ವಸ್ತುಗಳನ್ನುಳ್ಳ ಸಾಲಿನಲ್ಲಿ 'ಕೆರೆ ಹೊನ್ನಮ್ಮ' ಮಹತ್ವಪೂರ್ಣ ಕೃತಿ.

ಮಳತೆ ಮಲ್ಲೇಗೌಡರು ಪ್ರಸಿದ್ಧಿಯಾದವರು. ಹೆಂಡತಿ ಮಲ್ಲಮ್ಮ, ಮಕ್ಕಳು ಬೊಮ್ಮಣ್ಣ ಸೆಟ್ಟಿ ಮತ್ತು ನಿಂಗಣ್ಣ. ಹಿರಿಯ ಮಗನಿಗೆ ಮದುವೆ ಮಾಡಬೇಕೆಂದು ಊರು ಊರು ತಿರುಗಿದರೂ ಸರಿಯಾದ ಹೆಣ್ಣು ಸಿಕ್ಕಲಿಲ್ಲ. ಮಲ್ಲೇಗೌಡರು ತಲೆ ತುಂಬಾ ಯೋಚನೆ ಮಾಡುತ್ತಾ ಕುಳಿತರು. ಬೊಮ್ಮಣ್ಣ ಸಂಗಡಿಗರೊಡನೆ ತಿರುಗಾಡಲು ಹೋದಾಗ ಅವರು 'ನೀನು ಈ ವರ್ಷ ಮದುವೆಯಾಗದಿದ್ದರೆ ನಮ್ಮ ಜೊತೆ ಬಿಡಬೇಕಾಗುತ್ತದೆಂದು' ಹೇಳಿದರು. ಬೊಮ್ಮಣ್ಣ ತಡವಾಗಲು ಕಾರಣವನ್ನು ತಿಳಿಸಿದಾಗ ಸ್ನೇಹಿತರು ಹೆಸರಾದಂತ ಕೋಟೆಯೂರಿನ ಅರಸರಾಯರ ಹಿರಿಮಗಳು ದೊಡ್ಡಹೊನ್ನಮ್ಮನನ್ನು ಮದುವೆಯಾಗುವಂತೆ ಸೂಚಿಸಿದಾಗ ಬೊಮ್ಮಣ್ಣ ಸಂತೋಷದಿಂದ ತಾಯಿಗೆ ತಿಳಿಸುತ್ತಾನೆ. ಷಿಕಾರಿಗೆ ಹೋಗಿದ್ದ ಮಲ್ಲೇಗೌಡರು ಮನೆಗೆ ಬಂದಾಗ ಮಲ್ಲಮ್ಮ 'ಅನ್ನದಾನದಲ್ಲಿ ಹೆಸರಾದ ಅರಸರಾಯರ ಮಗಳು ದೊಡ್ಡಹೊನ್ನಿ'ಯನ್ನು ಮದುವೆ ಮಾಡಬೇಕೆಂದು ಮಗ ಹೇಳುತ್ತಿದ್ದಾನೆಂದು ತಿಳಿಸಿದರು.

ಅರಸರಾಯರಿಗೆ 'ನಾವು ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ಥಾಕಲಾರೆವು' ಎಂದು ಪತ್ರ ಬರೆದು ಮಲ್ಲೇಗೌಡರು ಕಳುಹಿಸಿದರು. ಅರಸರಾಯರು ಪತ್ರವನ್ನು ಓದಿ ಹೆಂಡತಿಗೆ ವಿಷಯ ತಿಳಿಸಿದಾಗ 'ಹೆಣ್ಣು ಮಕ್ಕಳನ್ನು ಹೆರರಿಗೆ ಕೊಡಬೇಕೆಂದು' ಶಾಸ್ತ್ರ ಸಂಬಂಧ ಸರಿಬಂದರೆ ಒಪ್ಪಂದಕ್ಕೆ ಬರಬಹುದೆಂದು ಸ್ಪಷ್ಟ ಅಭಿಪ್ರಾಯವನ್ನು ತಿಳಿಸುತ್ತಾಳೆ. ಅರಸರಾಯರ ಸಮ್ಮತಿಪತ್ರ ನೋಡಿದ ಮಲ್ಲೇಗೌಡರು ಹೆಂಡತಿಗೆ ಪತ್ರದ ಸಾರಾಂಶವನ್ನು ತಿಳಿಸಿ ಹಿಗ್ಗಿ ಹೆಗ್ಗೋಡಾಗುತ್ತಾರೆ. ಚಿನ್ನದ ಹರಿವಾಣದಲ್ಲಿ ಪೂಜೆ ಸಾಮಾನು ತೆಗೆದುಕೊಂಡು ಊರಿನ ಜೋಯಿಸರ ಮನೆಗೆ ಹೋಗಿ ಶಾಸ್ತ್ರ ಕೇಳಿದಾಗ ಮೊದಲ ಸುತ್ತಿನಲ್ಲಿ ಸಂಬಂಧ ಕೂಡಿಬರಲಿಲ್ಲ. ಮಲ್ಲೇಗೌಡರ ಮಾತಿನಂತೆ ಮತ್ತೊಂದು

ಪಂಚಾಂಗ ನೋಡಿ ಮದುವೆ ನಿಶ್ಚಯ ಮಾಡಿದರು. ಮದುವೆಯ ಹೆಣ್ಣಿಗೆ 'ಪಟ್ಟೆಯ ಸೀರೆ ಕುಶಲದ ರವಿಕೆ' ತೆಗೆದುಕೊಂಡು ಮದುಮಗನನ್ನು ಕರೆದುಕೊಂಡು ಬಂಧುಬಳಗದೊಡನೆ ಮಲ್ಲೇಗೌಡರು ಮಲ್ಲಮ್ಮತಾಯಿ ಕೋಟೆಯೂರಿನ ಬಾಗಿಲಿಗೆ ಬಂದಾಗ ಅರಸರಾಯರು ಬೀಗರನ್ನು ಸ್ವಾಗತಿಸಿ ಮುತ್ತಿನ ಹಸೆಯ ಮಣೆಯಮೇಲೆ ಕುಳ್ಳಿರಿಸಿ, ತುಪ್ಪದಾರತಿಯ ಬೆಳಗಿ ಪನ್ನೀರಿನಲ್ಲಿ ಪಾದ ತೊಳೆದರು. ಮಡಿವಾಳ ಮಾಚಯ್ಯನವರ ನಡೆಮಡಿ, ಕುಂಬಾರರ ಗುಂಡಯ್ಯನವರ ಗುಂಬರಣೆ, ಹರಿಜನರ ಹೊನ್ನಯ್ಯನವರ ವಾಲಗ, ಶಾಸ್ತ್ರಗಳು ಮುಗಿದು ಸಭೆಗೆ ಬಂದಿದ್ದವರ ಅಪ್ಪಣೆ ಕೇಳಿ ಬೊಮ್ಮಣ್ಣ ದೊಡ್ಡಹೊನ್ನಮ್ಮನಿಗೆ ಮಾಂಗಲ್ಯ ಧಾರಣೆ ಮಾಡುತ್ತಾನೆ. ಹೆಣ್ಣುಗಂಡು ಹೊರಟುನಿಂತಾಗ ಅರಸರಾಯರು 'ಮಗಳನ್ನು ಕರೆಯಲು ಎಂದು ಬರೋಣವೆಂದಾಗ' ಮಲ್ಲೆಗೌಡರು 'ತಂದ ಸೊಸೆಯನ್ನು ಮತ್ತೆ ತೌರಿಗೆ ಕಳುಹಿಸುವ ಸಂಪ್ರದಾಯ ನಮ್ಮಲ್ಲಿ ಇಲ್ಲ'ವೆಂದು ಹೇಳುತ್ತಾರೆ. ಕೇಳಿದವರಿಗೆ ಸಿಡಿಲು ಬಡಿದಂತಾಯಿತು. 'ಅವಳ ಹಣೆಯಲ್ಲಿ ಬರೆದದ್ದು' ಎಂಬ ಸಮಾಧಾನದಿಂದ ಮಗಳಿಗೆ ಬುದ್ಧಿವಾದ ಹೇಳಿ ಹೋಗಲು ತುಂಬಿ ಕಳುಹಿಸಿ ಅರಸರಾಯರು ಪಟ್ಟೆಯ ವಸ್ತ್ರದಲ್ಲಿ ಮುಖ ಮುಚ್ಚಿಕೊಂಡು ದುಃಖಿಸುತ್ತಾರೆ.

ಹೊನ್ನಮ್ಮ ಗಂಡನ ಮನೆಯಲ್ಲಿಯೇ ದೊಡ್ಡವಳಾದಾಗ ತೌರಿಗೆ ಹೋಗಲು ಅಪ್ಪಣೆ ಕೊಡಿರೆಂದು ಅತ್ತೆ, ಮಾವ, ಗಂಡನನ್ನು ಬೇಡುತ್ತಾಳೆ. ಮನೆತನದ ಪದ್ಧತಿಗೆ ವಿರುದ್ಧವಾಗಿ ನಡೆಯಲು ಸಾಧ್ಯವಿಲ್ಲವೆಂದಾಗ ಗಂಡನ ಅಸಹಾಯಕ ಪರಿಸ್ಥಿತಿಯನ್ನು ತಿಳಿದು ತೌರು ಮನೆಗೆ ಹೋಗುವ ಹಂಬಲವನ್ನು ಹತ್ತಿಕ್ಕುತ್ತಾಳೆ. ಹೊನ್ನಮ್ಮ ತೌರು ಮನೆಗೆ ಪತ್ರ ಕಳುಹಿಸಿದಾಗ ಅವರು 'ಒಂದೇ ಮಾತಿನಲ್ಲಿ ನಾವು ಹೆಣ್ಣುಕೊಟ್ಟು ಕೆಟ್ಟೆವಲ್ಲಾ' ಎಂದು ಚಿಂತಿಸಿದರು. ತೌರಿನಲ್ಲಿ ವಾಡಿಕೆಯಂತೆ ನಡೆಯಬೇಕಾಗಿದ್ದ ಶಾಸ್ತ್ರವಾದ್ದರಿಂದ ಗಂಡನ ಮನೆಯ ಒಡವೆ ವಸ್ತ್ರಗಳನ್ನು ನಿರಾಕರಿಸಿ ಮಡಿವಾಳಿಯ ಮೂಲಕ ತೌರಿನಿಂದ ಬಂದಿದ್ದವುಗಳನ್ನು ಬಳಸುತ್ತಾಳೆ. ಗಂಗೆ ಪೂಜೆಯಾದ ಎರಡು ತಿಂಗಳಿಗೆ ಹೊನ್ನಮ್ಮ ಗರ್ಭಿಣಿ ತವರೂರಿನ ಆಸೆ ಬಲವಾಗುತ್ತದೆ. ಅತ್ತೆಮಾವರನ್ನು ಬೇಡುತ್ತಾಳೆ. ಗಂಡನನ್ನು ಕಾಡುತ್ತಾಳೆ. ಆದರೆ ಎಲ್ಲಿಂದಲೂ ನಿರಾಕರಣೆಯೇ ಉತ್ತರವಾಗಿ ಬಂತು. ಎಂಟುತಿಂಗಳು ಸೊಂಟ ನೋವು ಒಂಭತ್ತು ತಿಂಗಳಾಯಿತು ಹೊಟ್ಟೆನೋವು. ಸೂಲಗಿತ್ತಿ ಸಂಗಮ್ಮನ ಸಹಾಯದಿಂದ ಸುಖಪ್ರಸವ ಗಂಡುಮಗು, ಹೊನ್ನಮ್ಮ ತೌರಿಗೆ ಪತ್ರ ಕಳುಹಿಸುತ್ತಾಳೆ. ಅವರು ಮೊಮ್ಮಗನನ್ನು ತಮ್ಮ ಕೈನಿಂದ ಮುಟ್ಟಿ ಮುದ್ದಾಡಲಿಲ್ಲವೆಂದು ಸಂಕಟಪಡುತ್ತಾರೆ. ಹೊನ್ನಮ್ಮ ತೌರಿನವರು ಕಳುಹಿಸಿಕೊಟ್ಟಿದ್ದ ಚಿನ್ನದ ತೊಟ್ಟಿಲಿಗೆ ರನ್ನದ ಹಗ್ಗ ಹಾಕಿಕಟ್ಟಿ, ಮಗುವಿಗೆ ವಜ್ರದ ಉಡುದಾರ ಕಟ್ಟಿ, ಕೊರಳಿಗೆ ತಕ್ಕನಾದ ಪದಕ ಹಾಕಿ ಗೆಜ್ಜೆಗಿಲಿಕೆ ಕೊಟ್ಟು ಮಲಗಿಸುತ್ತಾಳೆ.

ಬೊಮ್ಮಣ್ಣ ಸ್ನೇಹಿತರ ಬಲವಂತದಿಂದ ವ್ಯಾಪಾರಕ್ಕೆಂದು ಘಟ್ಟಕ್ಕೆ ಹೊರಟಿದ್ದಾನೆ. ಹೊನ್ನಮ್ಮ ಗಂಡನ ಕೊರಳು ತಬ್ಬಿಕೊಂಡು 'ಮೂರು ತಿಂಗಳು ಮಗುವನ್ನು ಬಿಟ್ಟು ಹೋಗಬೇಡಿರೆಂದು' ಪರಿಪರಿಯಾಗಿ ಬೇಡುತ್ತಾಳೆ. ಸ್ನೇಹಿತರ ಹಾಸ್ಯಕ್ಕೆ ಗುರಿಯಾಗ

ಲಾರದೆ ಬೊಮ್ಮಣ್ಣ ಹೊರಡಲನುವಾದಾಗ ಅನೇಕ ಅಪಶಕುನಗಳಾದರೂ ಅವುಗಳ ನ್ನೆಲ್ಲಾ ಉಪೇಕ್ಷೆಮಾಡಿ ಹೆಂಡತಿಗೆ ಧೈರ್ಯ ಹೇಳಿ ಕಂದನ ಮುದ್ದಾಡಿ ಶೃಂಗಾರದ ಕುದುರೆಯಮೇಲೆ ಹೋಗುತ್ತಾನೆ.

ಮೂಡಲದೇಶದಿಂದ ಮೂರು ಸಾವಿರ ಒಡ್ಡರು ಬಂದು ಊರ ಹೊರಗೆ ಕುಳಿತಿದ್ದಾರೆ. ಹೊನ್ನಮ್ಮ ನೀರು ತರಲು ಹೋದಾಗ ಬಳಲಿ ಬಾಯಾರಿ ಬಂದಿದ್ದ ಒಡ್ಡರು ಮಜ್ಜಿಗೆ ಬೇಡುತ್ತಾರೆ. ಹೊನ್ನಮ್ಮ ಮಜ್ಜಿಗೆ ತೆಗೆದುಕೊಂಡು ಹೋಗಿ ಕೊಟ್ಟಾಗ ಹೊನ್ನಮ್ಮನ ಜೊತೆ ಒಡ್ಡಗೌಡ ಬಂದು ಮಲ್ಲೇಗೌಡರಿಗೆ ನಮಸ್ಕಾರಮಾಡಿ ತಾನು ಬಂದಿರುವ ಕೆಲಸವನ್ನು ಹೇಳಿಕೊಳ್ಳುತ್ತಾನೆ. ಹುಟ್ಟಿದ ದಿನಸಗಳಿಂದಲೂ ಸಾರ್ಥಕವಾದ ಪುಣ್ಯ ಕೆಲಸಗಳನ್ನು ಮಾಡಿಲಿಲ್ಲವೆಂದು ಯೋಚಿಸಿದ ಮಲ್ಲೇಗೌಡರು ಈಗಲಾದರೂ ಒಂದು ಕೆರೆಯನ್ನು ತೆಗೆಯಿಸಿ ಪುಣ್ಯವನ್ನು ಪಡೆಯೋಣವೆಂದು ಒಡ್ಡಗೌಡನ ಜೊತೆಯಲ್ಲಿ 'ಅಡ್ಡ ಆರುಮಾರು ಉದ್ದ ಒಂಭತ್ತುಮಾರು, ಹನ್ನೆರಡು ಆಳುದ್ದ' ಕೆರೆಯನ್ನು ತೆಗೆಯಲು ಒಪ್ಪಂದ ಮಾಡಿಕೊಂಡರು. ಒಳ್ಳೆಯ ದಿನ ನೋಡಿ ಪೂಜೆಮಾಡಿ ಆಯಾವ ಹಿಡಿದಿದ್ದಾರೆ. ಕೆರೆ ತೆಗೆಯುವ ಕೆಲಸ ಮುಗಿಯಿತು ಆದರೆ ಜಲವೇ ಬರಲಿಲ್ಲ. ಎಲ್ಲರೂ ಮಲಗಿದ್ದಾಗ ಸರಿರಾತ್ರಿಯಲ್ಲಿ ಒಡ್ಡಗೌಡನ ಹೆಂಡತಿಯನ್ನು ಕೆರೆ ಆಹುತಿ ಕೇಳುತ್ತದೆ. ಗುಟ್ಟುಬಿಡದೆ ಒಪ್ಪಿದ ಹಣ ತೆಗೆದುಕೊಂಡು ಒಡ್ಡಗೌಡ ತನ್ನವರೊಡನೆ ಹೊರಟು ಹೋಗುತ್ತಾನೆ.

ಮಲ್ಲೇಗೌಡರು ಕೆರೆ ನೋಡಲು ಹೋದಾಗ ನೀರೇ ಬಂದಿಲ್ಲ ಚಿಂತಾಕ್ರಾಂತರಾಗಿ ಮಕಾಡೆ ಮಲಗಿದರು. ಯಾವುದೋ ಶಕ್ತಿ 'ಕಿರುಬೆರಳನ್ನು ಆಹುತಿಕೊಟ್ಟರೆ ಕೆರೆ ತುಂಬಾ ನೀರುಬರುತ್ತದೆಂದು' ಹೇಳುತ್ತಿದೆ. ತಮ್ಮ ಕಿರುಬೆರಳನ್ನು ಕೊಡಲು ನಿರಾಕರಿಸಿ ಅಂತೆಯೇ ಹೆಂಡತಿ, ಮಕ್ಕಳಲ್ಲಿ ಯಾರನ್ನಾದರೂ ಕೊಡುವಂತೆ ಕೇಳಿದಾಗ ಒಂದೊಂದು ಕಾರಣವನ್ನು ಕೊಟ್ಟು ಕೊನೆಗೆ ಮನೆ ಹಿರಿಸೊಸೆ ದೊಡ್ಡಹೊನ್ನಮ್ಮನನ್ನು ಕೊಡಲು ಒಪ್ಪಿ ಮನೆಗೆ ಬಂದು ದುಃಖದಿಂದ ಮಲಗಿದ್ದಾರೆ. ಏನು ಅರಿಯದ ಹೊನ್ನಮ್ಮ ಸಹಜವಾದ ಪ್ರೀತಿಯಿಂದ ಮಾವನನ್ನು ಉಪಚರಿಸಲು ಬಂದಾಗ ತಮ್ಮ ಮನದಲ್ಲಿದ್ದ ದುಗುಡವನ್ನು ತಿಳಿಸಲಾರದೆ ಒದ್ದಾಡುತ್ತಿದ್ದಾರೆ. ಮುಚ್ಚಿಡುತ್ತಿರುವುದೇನೆಂದು ಕೇಳಿ ಸಂತೈಸಿದಾಗ ಹೊನ್ನಮ್ಮನಿಗೆ ಮಲ್ಲೇಗೌಡರು ಆಹುತಿಯ ವಿಷಯವನ್ನು ತಿಳಿಸುತ್ತಾರೆ. ಹೊನ್ನಮ್ಮ ಸ್ವಲ್ಪವೂ ವಿಚಲಿತಳಾಗದೆ ಸಂಯಮದಮೂರ್ತಿಯಾಗಿ ತನ್ನ ಆಹುತಿಯ ತಯಾರಿ ನಡೆಸವುದನ್ನು ನೋಡಿದಾಗ ಕಲ್ಲೆದೆಯೂ ಕರಗುತ್ತದೆ.

ಘಟ್ಟದಿಂದ ಬರುವ ಗಂಡನಿಗೆ ಅಡಿಗೆ ಮಾಡಿಟ್ಟು ಮಗುವಿಗೆ ಹಾಲುಕುಡಿಸಿ ಅದು ತಬ್ಬಲಿಯಾಗುವ ಚಿತ್ರಣವನ್ನು ನೆನೆದು ಇದಕ್ಕೆ ಕಾರಣರಾದ ಅತ್ತೆ ಮಾವರಿಗೆ ಶಪಿಸಿ ತನ್ನ ಸಂಕಟವನ್ನು ಅಲ್ಲೇ ಮರೆತು ಕೊನೆಯ ಬಾರಿಗೆ ತೌರನ್ನು ನೋಡಿ ಬರುವ ಆಸೆಯಿಂದ ಮುಂದಡಿ ಇಡಲಾರದೆ ಅಡಿ ಇಟ್ಟಿದ್ದಾಳೆ. ಹೊನ್ನಮ್ಮ ತನಗೆ ಒದಗಿರುವ ಆಪತ್ತಿನ ಬಗ್ಗೆ ಕಿಂಚಿತ್ತೂ ಬಾಯಿಬಿಡದೆ ಏನೂ ಆಗಿಲ್ಲವೆಂಬಷ್ಟು ಸಹಜವಾಗಿ ಎಲ್ಲರೊ

ಡನೆ ನಡೆದುಕೊಳ್ಳುವ ಅವಳ ಸಹನೆ ನಿಜಕ್ಕೂ ಅದ್ಭುತವಾದದ್ದು. ಮನೆಯವರಿಗೆ ಅವಳ ಕಂದಿದ ಮುಖನೋಡಿ ಸಂಶಯ ಬಂದು ನಿಜಸ್ಥಿತಿ ಅರಿಯಲು ಪ್ರಯತ್ನಿಸುತ್ತಾರೆ. ಆಗ ಮನೆಯ ಕೆಲಸ ಬಹಳವಾಗಿರುವುದರಿಂದ ಚಿಕ್ಕ ಹೊನ್ನಮ್ಮನನ್ನು ತನ್ನ ಗಂಡನಿಗೆ ಮದುವೆ ಮಾಡಿಕೊಡಬೇಕೆಂದು ತಂದೆಯಿಂದ ವಾಗ್ದಾನ ಪಡೆದು ಊಟಮಾಡುತ್ತಾಳೆ. ಬರುವ ದಾರಿಯಲ್ಲಿ ಯಾರೋ ಪುಣ್ಯಾತ್ಮರು ಕೆರೆ ತೋಡಿಸಿದ್ದಾರೆ ಅದಕ್ಕೆ ಪೂಜೆಮಾಡಿ ಮುಂದೆ ಹೋಗುತ್ತೇನೆಂದು ಪೂಜೆಗೆ ಬೇಕಾದ ಸಾಮಗ್ರಿಗಳನ್ನು ತೆಗೆದುಕೊಂಡು ಬಂಧು ಬಳಗದೊಡನೆ ಕೆರೆ ಹತ್ತಿರ ಬರುತ್ತಾಳೆ. ಕೆರೆಯಲ್ಲಿ ಹನಿ ನೀರೂ ಇಲ್ಲ ಎಲ್ಲರಿಗೂ ಆಶ್ಚರ್ಯ. ಪೂಜೆ ಮಾಡಿದರೆ ನೀರು ಬರುತ್ತದೆಂದು ಹೇಳಿ ತಾಯಿತಂದೆಗಳಿಗೆ ನಮಸ್ಕಾರಮಾಡಿ ಕೆರೆಗೆ ಪೂಜೆಮಾಡಿ ತಾನು ಆಹುತಿ ಆಗುತ್ತಿರುವುದನ್ನು ತಿಳಿಸುತ್ತಾಳೆ. ಎಲ್ಲರ ದುಃಖದ ಕಟ್ಟೆಯೊಡೆಯುತ್ತದೆ. ಹೊನ್ನಮ್ಮ ಆಹುತಿಯಾಗುವುದುಬೇಡ, ನಾವುಗಳು ಆಗುತ್ತೇವೆಂದು ಪ್ರತಿಯೊಬ್ಬರೂ ಮುಂದೆ ಬಂದರೂ, ತನ್ನ ಸರದಿಯನ್ನು ಬಿಟ್ಟುಕೊಡದೆ ಅವರಿಗೆ ಸಮಾಧಾನ ಹೇಳಿ ಒಂದೊಂದೇ ಹಂತವನ್ನು ಶಾಂತ ಮನಸ್ಸಿನಿಂದ ಇಳಿಯುತ್ತಾ ಹೋಗುತ್ತಿದ್ದಂತೆಯೇ ಕೆರೆಯಲ್ಲಿ ನೀರು ತುಂಬಿಬರುತ್ತದೆ. ಹೊನ್ನಮ್ಮ ನೀರಿನಲ್ಲಿ ಲೀನವಾಗುತ್ತಾಳೆ.

ಬೊಮ್ಮಣ್ಣನಿಗೆ ಕೆಟ್ಟಕನಸು ಬಿದ್ದು, ನಿಂತ ಹೆಜ್ಜೆಯಲ್ಲಿಯೇ ಹಿಂತಿರುಗಿ ಬರುವಾಗ ದಾರಿಯಲ್ಲಿದ್ದ ಹೊಸ ಕೆರೆಯನ್ನು ನೋಡಿ ಆಶ್ಚರ್ಯ ಪಡುತ್ತಾನೆ. ಮನೆಗೆ ಬಂದರೆ ಹೆಂಡತಿ ಕಾಣುವುದಿಲ್ಲ. ಮಲ್ಲಿಸ್ವ ತಾಯಿ 'ನಿನ್ನ ಹೆಂಡತಿ ತೌರು ಮನೆಗೆ ಹೋಗಿರುತ್ತಾಳೆಂದು' ಹೇಳಿದಾಗ ಮಾವನಮನೆಗೆ ಹೋಗಿ ಹೆಂಡತಿಯ ಬಗ್ಗೆ ವಿಚಾರಿಸಿದಾಗ ಅವರು ಅನೇಕ ಕಾರಣಗಳನ್ನು ಹೇಳಿ ಕೊನೆಗೆ ಹೊನ್ನಮ್ಮ ಕೆರೆಗೆ ಆಹುತಿಯಾದ ಸಂಗತಿಯನ್ನು ತಿಳಿಸುತ್ತಾರೆ. ಬೊಮ್ಮಣ್ಣ ದುಃಖದಿಂದ ಮನೆಗೆ ಬಂದು ಮಗುವನ್ನು ಕರೆದುಕೊಂಡು ಕೆರೆಯ ಬಳಿ ಹೋಗಿ ಮೂರು ಬಾರಿ ಹೊನ್ನಮ್ಮನ ಹೆಸರಿಡಿದು ಕೂಗಿದಾಗ ಹೊನ್ನಮ್ಮ ಕೆರೆಯಿಂದ ಮೇಲೆ ಬಂದು 'ಮನೆತನದ ಮರ್ಯಾದೆಯನ್ನು ಉಳಿಸುವ ಸಲುವಾಗಿ ನಾನು ಆಹುತಿಯಾಗಲೇಬೇಕಾಗಿದೆಂದು ಸಮಾಧಾನ ಹೇಳಿ ಚಿಕ್ಕ ಹೊನ್ನಿಯನ್ನು ಮದುವೆಯಾಗಿ ಸುಖವಾಗಿರಬೇಕೆಂದು' ಹೇಳುತ್ತಾಳೆ. ಹೊನ್ನಮ್ಮ ಮತ್ತೆ ಕೆರೆಗೆ ಇಳಿದಾಗ ಬೊಮ್ಮಣ್ಣ 'ಮಗುವನ್ನು ನಿನ್ನೊಡನೆಯೇ ಕರೆದುಕೊಂಡು ಹೋಗಬೇಕೆಂದು ತಬ್ಬಲಿ ಎನ್ನಿಸಲು ನನಗಿಷ್ಟವಿಲ್ಲವೆಂದು' ದುಃಖಿಸಿದಾಗ, ಹೊನ್ನಮ್ಮ ಮಗುವನ್ನು ಮಡಿಲಿನಲ್ಲಿ ಕಟ್ಟಿಕೊಂಡು ಕೆರೆಗೆ ಇಳಿದಾಗ ಬೊಮ್ಮಣ್ಣ ಸಂಕಟ ತಡೆಯಲಾರದೆ ಹೆಂಡತಿಯ ಸೆರಗನ್ನು ಹಿಡಿದುಕೊಂಡು ಹೆಂಡತಿ ಮಗುವಿನೊಡನೆ ನೀರಿನಲ್ಲಿ ಐಕ್ಯವಾಗುತ್ತಾನೆ. ಮೈದ ನಿಂಗಣ್ಣ, ಮೂವರೂ ಹೋದಮೇಲೆ ತಾನಿನ್ನು ಬದುಕಿರಬಾರದೆಂದು ಕೆರೆಯಲ್ಲಿ ಮುಳುಗಲು ಪ್ರಯತ್ನಿಸಿದಾಗ ಹೊನ್ನಮ್ಮನೇ ತಡೆದು 'ಲೋಕಾಪವಾದ ಬರುತ್ತದೆಂದು. ಕೆರೆಯ ದಡದಲ್ಲಿ ಬಸವಣ್ಣನಾಗಿ ಒಡಮೂಡು ವರ್ಷಕ್ಕೊಂದುಸಲ ಪೂಜೆ ನಿನಗೆ ನಡೆದು ಬರಲಿ, ನನಗಿಂತ ನಿನಗೆ ಹೆಚ್ಚಿಗೆ ಹೂವುಗಳು ಬರಲೆಂದು' ಹಾರೈಸುತ್ತಾಳೆ.

ಕೆರೆಹೊನ್ನಮ್ಮ ಲಾವಣಿ ಸಣ್ಣ ಸಣ್ಣ ವಾಕ್ಯಗಳಲ್ಲಿ ಸಾವಧಾನದಿಂದ ಮುಂದುವರಿಯುತ್ತದೆ. ಮುಖ್ಯಾಂಶಕ್ಕೆ ಭಂಗ ಬಾರದಂತೆ ಸನ್ನಿವೇಶಗಳಿಗೆ ತಕ್ಕ ಸಹಜ, ಸುಂದರ ವರ್ಣನೆಗಳ ಬೆಸವಣಿಗೆಯಿಂದ ದೀರ್ಘವಾಗಿರುವ ಈ ರಚನೆಯಲ್ಲಿ ಹೃದಯಾಂತರಾಳದ ಭಾವನೆಗಳು ಹೊರಹೊಮ್ಮುವುದರೊಂದಿಗೆ ನಂಬಿಕೆಯ ಬಗೆಗೆ ಇರುವ ಅಚಲವಾದ ಶ್ರದ್ಧೆ, ಬಾಳಿನ ಬಗೆಗೆ ಇರುವ ಗೌರವ, ಸಂಯಮದೊಂದಿಗೆ ತ್ಯಾಗ ಮನೋಭಾವ–ಇವು **ಕೆರೆ ಹೊನ್ನಮ್ಮ** ಲಾವಣಿಯಲ್ಲಿ ಹೃದಯಸ್ಪರ್ಶಿಯಾಗಿವೆ.

ಬಾಣಾವತಿ ದೊರೆ

ಬಾಣವತಿದೇಶಕ್ಕೆ ಬಾಣವತಿ ದೊರೆ, ಮಗ ನಂದಗೊಮಾರ ಸೊಸೆ ಪದುಮಾವತಿ. ಬಡತನ ಬಂದಿದೆ ಶಿವಪಾರ್ವತಿಯರು ಇವರ ಸಂಕಟವನ್ನು ನೋಡಲಾರದೆ ಐಶ್ವರ್ಯವನ್ನು ಕರುಣಿಸಿ ಕೆಲವು ಕಾಲದನಂತರ ಪರೀಕ್ಷೆ ಮಾಡಬೇಕೆಂಬ ಬಯಕೆಯಿಂದ ಶಿವನು ವೇಷ ಮರೆಸಿಕೊಂಡು ಭಿಕ್ಷೆ ಬೇಡಿದಾಗ ದೊರೆ 'ತರುಮುಚ್ಚು ಗುರುಕಣ್ಣು' ಕೊಡಿಸುತ್ತಾರೆ. ಬೇಸರಗೊಂಡ ಶಿವನು 'ಲೋಕದ ಜನರು ಕೆಟ್ಟನುಡಿಯ ನುಡಿಯುತ್ತಾರೆ. ಏನಾದರೊಂದು ಒಳ್ಳೆಯ ಕಾರ್ಯ ಮಾಡಿ ಪುಣ್ಯ ಕಟ್ಟಿಕೊಳ್ಳಿ' ಎಂದು ಮಾಯವಾದನು. ದೊರೆ ಜನಗಳಿಗೆ ಉಪಯೋಗವಾಗಲೆಂದು ಬಾವಿ ತೆಗೆಸಿದಾಗ ಶಿವನ ಆದೇಶದಂತೆ ಆವನ ತಂಗಿಯರು ಜಲದ ಕಣ್ಣು ಕಟ್ಟಿ ಸ್ವಪ್ನದ ಮೂಲಕ ನಂದಗೊಮಾರನನ್ನು ಆಹುತಿ ಕೊಡುವುದಾದರೆ ನೀರು ಬರ.ತ್ತದೆಂದು ತಿಳಿಸುತ್ತಾರೆ. ಮಗನಿಗಿಂತ ಸಮಾಜ ದೊಡ್ಡದೆಂಬ ಉದಾತ್ತ ಮನಸ್ಸಿನಿಂದ ಮಗನನ್ನೆ ಆಹುತಿ ಕೊಡುವ ಸಲುವಾಗಿ ಹೆಂಡತಿಯಿಂದ ಭಾಷೆ ತೆಗೆದುಕೊಂಡು ಅವಳಿಂದ ಮಗನನ್ನು ಒಪ್ಪಿಸಿ ಆಹುತಿಯಾಗುವಂತೆ ಯೋಜಿಸುತ್ತಾನೆ. ಆದರೆ ಹೆತ್ತ ಹೊಟ್ಟೆ ಭೀಕರ ದುರಂತವನ್ನು ಸಹಿಸಲಾರದೆ ನಂದಗೊಮಾರ ದೇಶಾಂತರ ಹೋಗುವಂತೆ ಏರ್ಪಾಡು ಮಾಡುತ್ತಾಳೆ. ಪದುಮಾವತಿ ಗುಟ್ಟಾಗಿ ಗಂಡನನ್ನು ಹಿಂಬಾಲಿಸುತ್ತಾಳೆ. ಗರ್ಭಿಣಿ ಪದುಮಾವತಿ ಬಳಲಿ ಬಾಯಾರಿ ನೀರು ಕೇಳುತ್ತಾಳೆ. ನಂದಗೊಮಾರ ಪ್ರಾಣಿಗಳಿಂದ ಅಪಾಯವಾಗಬಾರದೆಂದು ಮೂರು ಮರಗಳು ಸೇರಿದ ತುದಿಗೆ ಪದುಮಾವತಿಯನ್ನು ಬಿಗಿದು ನೀರ ತರಲು ಹೋಗಿ ಕೊಳದಲ್ಲಿದ್ದ ರಾಕ್ಷಸನಿಗೆ ಬಲಿಯಾಗುತ್ತಾನೆ.

ಪದುಮಾವತಿಗೆ ಗಂಡುಮಗು ಜನನವಾಗಿ ನೆಲದಲ್ಲಿ ಬಿದ್ದಿದೆ, ಸಂಕಟ ತಡೆಯಲಾರದೆ ನರಳುತ್ತಿದ್ದಾಳೆ. ಶಿವನ ತಂಗಿಯರು ಅಡವಿಯಲ್ಲಿ ಸಂಚರಿಸುವಾಗ ಮಗು ಸಿಕ್ಕಿ ತಾಯಿ ಮಗು ಅವರ ಉಪಚಾರದಿಂದ ಬದುಕಿದ್ದಾರೆ. ಕಾಡಿನಲ್ಲಿ ಹುಟ್ಟಿದ ಕಾರಣ ಅರಣ್ಯ ಕುಮಾರನೆಂದು ಹೆಸರು ಕರೆದರು. ಅರಣ್ಯಕುಮಾರ ಬೆಳೆದು ಪ್ರಾಯಸಮರ್ಥನಾಗಿ ಅನೇಕ ವಿದ್ಯೆಗಳಲ್ಲಿ ಪರಿಣಿತಿಯನ್ನು ಪಡೆದಿದ್ದಾನೆ. ತನ್ನ ತಂದೆ ನೀರ ತರಲು ಹೋಗಿದ್ದ ಕೊಳಕ್ಕೆ ಆಕಸ್ಮಿಕವಾಗಿ ಹೋಗಿ ಅಲ್ಲಿದ್ದ ಹೆಣ್ಣು ರಾಕ್ಷಸವನ್ನು ಕೊಂದು ತಾಯಿಯನ್ನು ಬಲವಂತದಿಂದ ಒಪ್ಪಿಸಿ ಆ ಕೊಳದ ತಳದಲ್ಲಿದ್ದ ಅರಮನೆಯಲ್ಲಿ ವಾಸಮಾಡುತ್ತಾನೆ. ಅಲ್ಲೇ ಇದ್ದ

ಗಂಡು ರಾಕ್ಷಸ ಸಮಯ ಸಾಧಿಸಿ ಮೋಸದಿಂದ ಪದುಮಾವತಿಯನ್ನು ವಶಪಡಿಸಿಕೊಂಡು ಅವಳ ಮೂಲಕವೇ ಅರಣ್ಯ ಕುಮಾರನನ್ನು ಕೊಲೆ ಮಾಡುವ ಸಂಚುಮಾಡುತ್ತಾನೆ. ಆದರೆ ಅರಣ್ಯಕುಮಾರ ಅನೇಕ ಸಾಹಸಕಾರ್ಯಗಳನ್ನು ಮಾಡಿ ತಾಯಿಯೊಡನಿದ್ದ ರಾಕ್ಷಸನನ್ನು ಕೊಂದು, ಏನು ಅರಿಯದೆ ಮೋಸ ಹೋದ ತಾಯಿಯನ್ನು ಕ್ಷಮಿಸಿ, ಶಿವನಿಂದ ತನ್ನ ತಂದೆಯನ್ನು ಬದುಕಿಸಿ ಗಜಗನ್ನಿಯೊಡನೆ ಮದುವೆಯಾಗುತ್ತಾನೆ. ಅರಣ್ಯಕುಮಾರ ಹೆಂಡತಿ, ತಾಯಿ ತಂದೆಗಳೊಡನೆ ರಾಜಧಾನಿಗೆ ಬಂದಾಗ ಬಾವಿಯಲ್ಲಿ ನೀರು ಬಂದು ಎಲ್ಲರೂ ಸುಖವಾಗಿರುತ್ತಾರೆ.

ಬಾಣಾವತಿ ದೊರೆಯನ್ನು ಪರೀಕ್ಷೆ ಮಾಡುವ ಸಲುವಾಗಿ ಬಂದ ಶಿವನು ಕಷ್ಟದ ಪರಂಪರೆಯನ್ನೇ ಸೃಷ್ಟಿಸುತ್ತಾನೆ. ಒಂದು ಕಡೆ ಭಾಗ್ಯ ಕೊಟ್ಟು ಮತ್ತೊಂದು ಕಡೆಯಿಂದ ಅದನ್ನು ಅನುಭವಿಸಿ, ಸುಖಪಡದಂತೆ ನಿಯೋಜಿಸಿ, ಇಡೀ ಕುಟುಂಬವೇ ಕೆಲವು ಕಾಲ ದುಃಖದಿಂದ ಬದುಕಬೇಕಾಗುವ ಪ್ರಸಂಗ ನಿಜಕ್ಕೂ ದುರ್ಭರವಾಗಿರುತ್ತದೆ. ಆರಂಭದಲ್ಲಿ ದುರಂತ ಕಂಡು ಬಂದರೂ ಅಂತ್ಯ ಸುಖಾಂತವಾಗುತ್ತದೆ. ‘ಗೊಂದಲಿಗರ ಕಥೆಗಳು’ ಎಂಬ ಸಂಕಲನದಲ್ಲಿರುವ ‘ಅಡವಿ ಕುಮಾರ’ ಕಥೆಗೂ **ಬಾಣಾವತಿ ದೊರೆ** ಲಾವಣಿಗೂ ಆಶಯದೃಷ್ಟಿಯಿಂದ ಸ್ವಲ್ಪ ಸಾಮ್ಯ ಕಂಡು ಬಂದರೂ ನಿರೂಪಣೆಯಲ್ಲಿ ಎರಡೂ ಬೇರೆ ಬೇರೆಯಾಗಿವೆ.

ಹರಿಯಾಲ ದ್ಯಾವಮ್ಮ

ನೀಲಾವತಿ ದೊರೆಗೆ ಇಬ್ಬರು ಹೆಣ್ಣುಮಕ್ಕಳು ತಾಯಿ ಇಲ್ಲದ ತಬ್ಬಲಿಗಳನ್ನು ಊರಿನವರು ಸಾಕುತ್ತಾರೆ. ಬೆಳೆದ ಹೆಣ್ಣುಮಕ್ಕಳಿಗೆ ಮದುವೆ ಇಲ್ಲ. ಹಿರಿಯವಳು ಹರಿಯಾಲ ದ್ಯಾವಮ್ಮ, ಕಿರಿಯವಳು ಪಾರ್ವತಿ. ‘ನಮ್ಮನ್ನು ಬೀದೀಲಿ ಹೋಗೋ ದಾಸಯ್ಯನಿಗಾದರೂ ಕೊಟ್ಟು ಮದುವೆ’ ಮಾಡಿರೆಂದು ತಂದೆಯನ್ನು ಬೇಡಿಕೊಳ್ಳುತ್ತಾರೆ. ದೊರೆಯ ಆದೇಶದಂತೆ ಮಂತ್ರಿ ವರಗಳನ್ನು ಶೋಧಿಸಲು ಹೊರಡುತ್ತಾನೆ.

ಕಾಳಾವತಿ, ಐರಾವತಿ ದೊರೆಗಳಿಗೆ ಮದುವೆ ಇಲ್ಲ. ಯೋಗ್ಯ ವಧುಗಳನ್ನು ಹುಡುಕುತ್ತಾ ಬರುವಾಗ ನೀಲಾವತಿ ಮಂತ್ರಿಯ ಭೇಟಿಯಾಗಿ ಕುಶಲ ಪ್ರಶ್ನೆಗಳು ಮುಗಿದು, ಬಂದ ಕಾರ್ಯ ತಿಳಿದು ಎರಡು ಪಕ್ಷದವರು ಜೋಯಿಸರ ಬಳಿ ಹೆಣ್ಣುಗಂಡುಗಳ ಹೆಸರು ಬಲಕ್ಕೆ ಕೇಳಿದಾಗ ‘ಹರಿಯಾಲದ್ಯಾವಮ್ಮನ ಗಂಡನಾಗುವವನಿಗೆ ಧಾರೆ ಮನೆಯಲ್ಲಿ ಮರಣವೆಂದು’ ಬಂದರೂ ಗುಟ್ಟುಬಿಡದ ಜೋಯಿಸರು ಮದುವೆ ಗೊತ್ತುಮಾಡಿದರು. ಮದುವೆಗೆ ಸಕಲ ಸಿದ್ಧತೆಗಳಾಗಿವೆ ಅಕ್ಕತಂಗಿಯರು ತಮ್ಮ ಪತಿಗಳಾಗುವವರು ಹೇಗಿರುವರೆಂದು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಆನಂದಿಸುತ್ತಿದ್ದಾರೆ. ದಿಬ್ಬಣ ಬಂದಿಳಿಯಿತು. ಮುಂದಿನ ಮನೆಯಲ್ಲಿ ಹರಿಯಾಲದ್ಯಾವಮ್ಮನ ಚಪ್ಪರ ಹಿಂದಿನ ಮನೆಯಲ್ಲಿ ಪಾರ್ವತಿಯ ಚಪ್ಪರ. ಧಾರೆ ಸಮೀಪಿಸಿದೆ ಕಾಳಾವತಿ ದೊರೆಗಳಿಗೆ ‘ಅಂಗಟ ಸಂಗಟ’ ಬಂದು ಕತ್ತಿನ ಕಳಸ ಮುರಿಯಿತು. ಹಿಂದಿನ ಮನೆಗೆ ಗುಟ್ಟು ಕೊಡಲಿಲ್ಲ. ಹರಿಯಾಲ

ದ್ಯಾಮವ್ವ ದುರಂತ ಜೀವನನನ್ನು ನೆನೆಸಿಕೊಂಡು ಕುಟ್ಟಿ ಬಾಯಿಬಡಿಯುತ್ತಾಳೆ. ಹಾಡಿ ಅಂಗಲಾಪ ಪಡುತ್ತಿದ್ದಾಳೆ. ಶವಸಂಸ್ಕಾರವಾದನಂತರ ಯಾರ ಮಾತನ್ನೂ ಕೇಳದೆ ಗಂಡನ ಮನೆಗೆ ಹೋದ ದ್ಯಾಮವ್ವ ಕಾಳವ್ವನವರ ಮುಂದೆ 'ನಿನ್ನಂತೆ ನಾನು ಹೆಣ್ಣಲ್ಲವೋ' ಎಂದು ದುಃಖಿಸಿ ಸಂತಾನ ಭಾಗ್ಯ ಪಡೆದು ಬರುತ್ತಾಳೆ. ಗರ್ಭಿಣಿ ಹರಿಯಾಲದ್ಯಾಮವ್ವ ಸೂಲಗಿತ್ತಿ ಸಂಗವ್ವನ ಸಹಾಯದಿಂದ ಗಂಡುಮಗನನ್ನು ಹಡೆದು ಕಾಳಾವತಿ ದೊರೆ ಎಂದೇ ನಾಮಕರಣ ಮಾಡುತ್ತಾಳೆ. ದ್ಯಾಮವ್ವ ತಂಗಿಯನ್ನು ನೋಡಬೇಕೆಂದು ಬರಮಾಡಿಕೊಳ್ಳುತ್ತಾಳೆ. ಮಕ್ಕಳಿಲ್ಲದ ಪಾರ್ವತಿ ಮಗುವಿನ ಕತ್ತುಹಿಸುಕಿ ಹೊರಟು ಹೋಗುತ್ತಾಳೆ. ಕಾಳವ್ವನವರ ವರದಿಂದ ಮಗನನ್ನು ಬದುಕಿಸಿಕೊಂಡ ದ್ಯಾಮವ್ವ ತನ್ನ ದುರದೃಷ್ಟಕ್ಕಾಗಿ ಮರುಗುತ್ತಾಳೆ. ಕಾಳಾವತಿ ದೊರೆ ಬೆಳೆದು ಶಾಲೆಗೆ ಹೋಗುತ್ತಿದ್ದಾನೆ. ಪಾರ್ವತಿಯ ಮನಸ್ಸು ಮಾತ್ರ ಮಗು ನೋಡಿ ಸಂತೋಷಪಡುವ ಬದಲು ಕೊಲೆ ಮಾಡಬೇಕೆಂದೇ ತವಕಿಸುತ್ತಿದೆ. ಒಂದು ದಿವಸ ಕಾದಿದ್ದು ಮಗುವನ್ನು ಕೊಲ್ಲುತ್ತಾಳೆ. ವಾರಿಗೆಯವರು ಮನೆಗೆ ಬಂದರು, ಆದರೆ ಕಾಳಾವತಿ ದೊರೆ ಬರಲಿಲ್ಲ. ಹರಿಯಾಲ ದ್ಯಾಮವ್ವ ಕಂದನನ್ನು ಹುಡುಕಿಕೊಂಡು ಹೊರಟಿದ್ದಾಳೆ. ದಾರಿಯಲ್ಲಿ ಕೊಲೆಯಾದ ಮಗನನ್ನು ನೋಡಿ 'ಗಂಡ ಇದ್ದರೆ ಗಂಡನಾ ಸಿರಿ, ಮಕ್ಕಳಿದ್ದರೆ ಮಕ್ಕಳಾ ಸಿರಿ ನಾನ್ಯಾವ ಸಿರೀಲಿ ಬದುಕಲಿ' ಎಂದು ಶಿವಪಾರ್ವತಿಯರನ್ನು ಬೇಡಿದಾಗ ಅವರು ಪ್ರತ್ಯಕ್ಷರಾಗಿ ಜೀವಾಳದ ಕಡ್ಡಿಯಲ್ಲಿ ಮಂತ್ರಿಸಿ ಕಾಳಾವತಿದೊರೆಯನ್ನು ಬದುಕಿಸಿ ಮಾಯವಾಗುತ್ತಾರೆ. ಹೆತ್ತೊಟ್ಟೆ ತಣ್ಣಗಾಯಿತು. ಕಾಳಾವತಿದೊರೆ ಹರಿಯಾಲ ದ್ಯಾಮವ್ವನನ್ನು ಅರಮನೆಗೆ ಕಳುಹಿಸಿ ಚಿಕ್ಕಪ್ಪನವರಮನೆಗೆ ಹೋಗಿ ಚಿಕ್ಕವ್ವನಿಂದ ಒದಗಿದ ಕಷ್ಟಗಳನ್ನೆಲ್ಲಾ ವಿವರಿಸಿದಾಗ ಐರಾವತಿ ದೊರೆಗಳ ಕಣ್ಣಿನಲ್ಲಿ ನೀರು ಮಿಡಿಯಿತು. ಕಾಳಾವತಿ ದೊರೆ ಚಂದ್ರಾಯುಧದಿಂದ ಚಿಕ್ಕವ್ವನ ಕುತ್ತಿಗೆಯನ್ನು ಏಳು ತುಂಡಿಗೆ ತರಿದು ಏಳು ತೋರಣ ಹಾಕಿಸುತ್ತಾನೆ. ಕಾಳಾವತಿ ದೊರೆ ಚಿಕ್ಕಪ್ಪನಿಗೆ ಮತ್ತೊಂದು ಮದುವೆ ಮಾಡಿ ತಾನೂ ಮದುವೆಯಾಗಿ ಸುಖವಾಗಿ ಬದುಕುತ್ತಾನೆ.

ಹರಿಯಾಲದ್ಯಾಮವ್ವನ ವಿಧಿ ಕ್ರೂರವಾಗಿತ್ತು. ಲಗ್ನಕ್ಕೆ ಮುಂಚೆಯೇ ಕಾಳವತಿ ದೊರೆ ತೀರಿಕೊಂಡ. ಆದರೆ ಅವನೇ ಪತಿಯೆಂದು ಸ್ವೀಕರಿಸಿಯಾಗಿದೆ. ಲೌಕಿಕ ಸುಖವಿಲ್ಲದೆ ಬಾಳಿನುದ್ದಕ್ಕೂ ಬದುಕಬೇಕಾಗಿದೆ. ಹರಿಯಾಲದ್ಯಾಮವ್ವನಿಗೆ ಒಡಹುಟ್ಟಿದವಳಿಂದಲೇ ವಿಪತ್ತಿನ ಪರಂಪರೆ ಆದರೆ ದೇವರ ಶ್ರೀರಕ್ಷೆಯಿಂದ ಜಯ. ನಂಬಿದ ದೈವ ಕೈಬಿಡುವುದಿಲ್ಲವೆಂಬ ಅಚಲವಾದ ಮನಸ್ಸಿನ **ಹರಿಯಾಲ ದ್ಯಾಮವ್ವ** ಲಾವಣಿ ವಿಶಿಷ್ಟ ಶೈಲಿಯಿಂದ ಸುಂದರವಾಗಿದ್ದು, ತನ್ನ ಉದ್ದೇಶಿತ ಗುರಿಯ ಕಡೆಗೆ ನೇರವಾಗಿ ಓಡುತ್ತದೆ.

ಕುಸುಮಾಲೆ

ತಿಮ್ಮಪ್ಪಸ್ವಾಮಿ ಕುಸುಮಾಲೆ ಮದುವೆಯಾಗಿ ಆರು ವರ್ಷ. ಮಗುಹುಟ್ಟಿ ಮೂರು ವರ್ಷ. ವ್ಯಾಪಾರಕ್ಕೆಂದು ಘಟ್ಟಕ್ಕೆ ಹೊರಟ ತಿಮ್ಮಪ್ಪನಿಗೆ ತಾಯಿ, ತಂಗಿಯಿಂದ

ಅಸಹಕಾರ. ತವರಿನಲ್ಲಿರುವ ಹೆಂಡತಿಗೆ ವಿಷಯ ತಿಳಿಸಿ ಪ್ರಯಾಣಕ್ಕೆ ಅಣಿಮಾಡಿಸುತ್ತಾನೆ. ಕುಸುಮಾಲೆ ಹನ್ನೆರಡು ಜನ ಗೆಳತಿಯರ ಮನೆಗೆ ಹೇಳಿ ಬರಲು ಹೋಗುತ್ತಾಳೆ. ಗೆಳತಿಯರು ಪನ್ನೀರಿನಿಂದ ಪಾದ ತೊಳೆದು ಪಟ್ಟೆಯ ಮಂಚಾವ ತಟ್ಟನೆ ಹಾಸಿ ಬಾಯಿಗೆ ಬೇಕಾದ ಅಡಿಗೆ ಮಾಡಿ ಒಟ್ಟಿಗೆ ಊಟಮಾಡಿ ಮಂಡೆ ಬಾಚಿ ಮಲ್ಲಿಗೆ ಮುಡಿಸಿ, ಪಟ್ಟೆ ಸೀರೆ ಉಡಿಸಿ, ಪುಟ್ಟುಮುತ್ತ ಕಟ್ಟಿ, ಮುತ್ತಿನ ಮಡಲಕ್ಕಿ ಹುಯ್ದು ಅಗಲುವಿಕೆಯ ದುಃಖದಿಂದ ಬಳಲಿ ಮನೆಗೆ ಕರೆದುಕೊಂಡು ಬರುತ್ತಾರೆ. ತಾಯಿ ಮಗಳಿಗೆ ಬುದ್ಧಿ ಮಾತುಗಳನ್ನು ಹೇಳಿ ಜೋಳದ ಕಡ್ಡಿ ಸೀರೆ ಉಡಿಸಿ ಏಳೊಂದು ವಡವೆಯ ಧರಿಸಿ ಕಳುಹಿಸಿಕೊಡುತ್ತಾಳೆ.

ಕುಸುಮಾಲೆ ಮನೆ ಬರುತ್ತಿದ್ದಾಗೆಯೇ ಖಂಡುಗ ಕುಟ್ಟಬೇಕು ಖಂಡುಗ ಬೀಸಬೇಕು. ಅತ್ತೆ ಮಲ್ಲವ್ವ ನಾದಿನಿ ವರನಂದಿಯರ ಕಿರುಕುಳವನ್ನು ಸಹಿಸಬೇಕು. ಅವಳ ಪರಿಸ್ಥಿತಿ ಬಹಳ ಕಷ್ಟದ್ದಾಗಿದೆ. ತಿಮ್ಮಪ್ಪ ಘಟ್ಟಕ್ಕೆ ಹೊರಡಲು ಸಿದ್ಧತೆಗಳನ್ನು ಮಾಡಿಕೊಳ್ಳುವಾಗ ಅನೇಕ ಅಪಶಕುನಗಳಾದರೂ ಲೆಕ್ಕಿಸದೆ ಹೆಂಡತಿ ಮತ್ತು ಮಗುವಿಗೆ ಧೈರ್ಯ ಹೇಳಿ ಅಸಹಾಯಕನಾಗಿ ಹೋಗುತ್ತಾನೆ. ಕುಸುಮಾಲೆಗೆ ಬಾಯಾರಿಕೆಗೆ ನೀರು ಕೊಡಲಿಲ್ಲ ಹೊಟ್ಟೆಗೆ ಅಂಬಲಿ ಕೊಡಲಿಲ್ಲ ಆದರೆ ಮಿಣಿಸುತ್ತಿನ ಗುಂಬ ಕೊಟ್ಟು ನೀರು ತರಲು ಕಳುಹಿಸುತ್ತಾಳೆ. ಬಾವಿಗೆ ಬಗ್ಗಿದವಳು ನೀರು ಸೇದಲಾರದೆ ಜಗ್ಗಾಡುತ್ತಿದ್ದಾಳೆ. ತಾಯಿಯ ಆಪೇಶದಂತೆ ವರನಂದಿ ಇದೇ ಸಮಯ ನೋಡಿ ಕುಸುಮಾಲೆಯನ್ನು ಬಾವಿಗೆ ನೂಕಿ ಬರುತ್ತಾಳೆ. ಸತ್ತು ಹಗಲು ಮೂರು ದಿನ ಇರುಳು ಮೂರು ದಿನ ಗಮನ ಸುರಲೋಕಕ್ಕೆ ಹೋಗುತ್ತದೆ. ವೀಳ್ಯ ಮೆಲ್ಲುತ್ತಿದ್ದ ಶಿವಪಾರ್ವತಿಯರು ಬಂದು ನಾಗಬೆತ್ತದಿಂದ ಮಂತ್ರಿಸಿ ಕುಸುಮಾಲೆಯನ್ನು ಬದುಕಿಸಿ 'ಬಂಡಿಯಂತೆ ಭಾರವಾಗಿದ್ದ ಗುಂಬ ಹೂವಿನಷ್ಟು ಹಗುರವಾಗಲೆಂದು' ಹೇಳಿ ಮಾಯವಾದರು. ಕುಸುಮಾಲೆ ಮನೆಗೆ ಬಂದಾಗ ಎಂದಿನಂತೆ ಕಷ್ಟ ಮಗುವಿಗೆ ಹಾಲುಣಿಸಿ ಅಲ್ಲಿಗೆ ಆರು ದಿವಸ. ಅತ್ತೆ ಮಿಣಿ ಸುತ್ತಿನ ಹೆಡಿಗೆ ಕೊಟ್ಟು ಬೆರಣಿ ತರಲು ಕಾಡಿಗೆ ಅಟ್ಟುತ್ತಾಳೆ. ಕುಸುಮಾಲೆಯ ಸಂಕಟ ನೋಡಲಾರದ ಶಿವಪಾರ್ವತಿಯರ ಸಹಾಯ. ಕುಸುಮಾಲೆ ಊಟ ಮಾಡಿ ಅಲ್ಲಿಗೆ ಅನೇಕ ದಿನಗಳಾಗಿವೆ. ಮಾತೃವಾತ್ಸಲ್ಯದಿಂದ ಬತ್ತಿದ ಎದೆಯಲ್ಲಿಯೂ ಮಗುವಿಗೆ ಹಾಲು ಕುಡಿಸಿ ಗುಡಿಸಿಲಿನಲ್ಲಿಟ್ಟು ಬೀಗ ಹಾಕಿ ಬರುತ್ತಾಳೆ. ಕುಸುಮಾಲೆಗೆ ಅಂದು ಊಟ ಆದರೆ ಕೈತುತ್ತು ಬಾಯಿಗೆ ಒರಲಿಲ್ಲ ವರನಂದಿ ಕತ್ತು ಕಡಿದಳು. ತಾಯಿಮಗಳು ಗುಟ್ಟಾಗಿ ಶವ ಸಂಸ್ಕಾರಮಾಡಿ ಗುಡಿಸಿಲಿನಲ್ಲಿದ್ದ ಮಗುವನ್ನು ಬೆತ್ತಲೆ ಮೈನಲ್ಲಿ ಕತ್ತು ಹಿಡಿದು ಬೀದಿಗೆ ನೂಕುತ್ತಾರೆ. ವರನಂದಿ ಅತ್ತಿಗೆ ವಡವೆ ವಸ್ತ್ರಗಳನ್ನು ಧರಿಸಿ ಮೆರೆಯುತ್ತಾಳೆ.

ತಬ್ಬಲಿಯಾಗಿ ಬೀದಿಯಲ್ಲಿ ಅಳುತ್ತಿದ್ದ ಮಗುವನ್ನು ಸಂತೆಯಿಂದ ಬರುತ್ತಿದ್ದ ಮುದುಕಪ್ಪ ಕನಿಕರದಿಂದ ಮನೆಗೆ ಕರೆದುಕೊಂಡುಹೋಗಿ 'ತಬ್ಬಲಿ ಕಂದನ ಚೆನ್ನಾಗಿ ಸಾಕಿದರೆ ನಮಗೆ ಒಳ್ಳೆಯದಾಗುವುದೆಂದು' ಹೆಂಡತಿಗೆ ಹೇಳುತ್ತಾರೆ. ಕುಸುಮಾಲೆ ತಿಮ್ಮ

ಪ್ಪನ ಸ್ವಪ್ನಕ್ಕೆ ಹೋಗುತ್ತಾಳೆ. ತಿಮ್ಮಪ್ಪಸ್ವಾಮಿ ಘಟ್ಟದಿಂದ ಊರಿಗೆ ಬರುವ ದಾರಿಯಲ್ಲಿ ಮಗು ಕುದುರೆಯನ್ನು ಅಡ್ಡಗಟ್ಟುತ್ತದೆ. ಮಗುವಿನ ಅಂದಚಂದನ ನೋಡಿ ಅಜ್ಜಯ್ಯನಿಂದ ಅದರ ಪೂರ್ವೋತ್ತರಗಳನ್ನು ತಿಳಿದು ಮಗನೆತ್ತಿಕೊಂಡು ಮುದ್ದು ಕೊಟ್ಟು, ಮಗು ಕರೆದುಕೊಂಡು ಹೋದ ಜಾಗದತ್ತ ಹೋಗಿ ನೋಡಿದಾಗ ಅದು ಕುಸುಮಾಲೆಯ ಸಮಾಧಿ. ತಿಮ್ಮಪ್ಪ ಹೆಣ ತೆಗೆದು ಅವಳ ತಲೆಯನ್ನು ತೊಡೆಯ ಮೇಲೆ ಹಾಕಿಕೊಂಡು ಒಕ್ಕಳ ಸಂಕಟ ಮಾಡುತ್ತಾರೆ. ತಿಮ್ಮಪ್ಪನ ಗೋಳು ನೋಡಿದ ಶಿವಪಾರ್ವತಿಯರು ಬಂದು 'ಕಂಡವರ ಮಕ್ಕಳನ್ನು ತಂದು ಎಷ್ಟು ಗೋಳುಹುಯ್ಯುಕೊಳ್ಳುತ್ತೀರಿ' ಎಂದು ಕುಸುಮಾಲೆಯನ್ನು ಬದುಕಿಸಿ ಮಾಯವಾಗುತ್ತಾರೆ. ಹೆಂಡತಿ ಮಗುವಿನೊಡನೆ ಸಂತೋಷದಿಂದ ಮನೆಗೆ ಬಂದ ತಿಮ್ಮಪ್ಪ ಅವರಿಬ್ಬರನ್ನೂ ಬಚ್ಚಿಟ್ಟು ತಾಯಿ ಮತ್ತು ತಂಗಿಯನ್ನು ಹೆಂಡತಿ ಮಗುವಿನ ಬಗ್ಗೆ ಪ್ರಶ್ನಿಸಿ 'ಹಿರಿಯರಿಗೆ ಅನ್ನಹಾಕಬೇಕು ಅಡಿಗೆ ಮಾಡಿರೆಂದು' ಹೇಳುತ್ತಾನೆ. ತಾಯಿ ಮಗಳು ಊಟಕ್ಕೆ ಕುಳಿತಾಗ ಆರು ಮೂರು ಒಂಭತ್ತು ತುಂಡಾಗಿ ಅವರನ್ನು ಕತ್ತರಿಸುತ್ತಾನೆ. ತಿಮ್ಮಪ್ಪ ಕುಸುಮಾಲೆ ಮಗುವಿನೊಡನೆ ಸುಖವಾಗಿ ಬದುಕುತ್ತಾನೆ.

ಹೆಣ್ಣಿನ ಬದುಕಿನ ನಾನಾಮುಖಗಳಲ್ಲಿ ಸೊಸೆಯಾದವಳ ಬಾಳಿನಕಷ್ಟ ಸುಖಗಳೇನೆಂಬುದು **ಕುಸುಮಾಲೆ** ಲಾವಣಿಯಲ್ಲಿ ಅಪೂರ್ವವಾಗಿ ಚಿತ್ರಿತವಾಗಿದೆ.

ಬಾಣಂತಮ್ಮ-ಹುಲುಕೋಡಯ್ಯ

ಬಾಣಂತಮ್ಮನವರಿಗೆ ಏಳು ಜನ ಗಂಡುಮಕ್ಕಳು. ಹಿರಿಯ ಆರು ಜನರು ಕಾರಣಗಳನ್ನು ಕೊಟ್ಟು ಒಂದೊಂದು ಊರಿಗೆ ಹೋಗಿ ಪ್ರತಿಷ್ಠಾಪನೆ ಹೊಂದಿದ್ದಾರೆ. ಕೊನೆಯವರು ಕೊಮಾರಯ್ಯ ದೂರ ಪಯಣ ಹೊರಟಾಗ ಬಾಣಂತಮ್ಮನವರು 'ಹೋಗಬೇಡವೆಂದು ನೀನೊಬ್ಬನಾದರೂ ನನಗೆ ಆಸರೆಯಾಗಿರಬೇಕೆಂದು' ಹೇಳಿದರು. ಕೊಮಾರಯ್ಯ ಹೊರಡಲೇಬೇಕೆಂದು ಹೊರಡುತ್ತಾರೆ. ಬಾಣಂತಮ್ಮನವರು ಸಿಟ್ಟಿನಿಂದ ದುದಿಗೆ ಎಸೆದು ಮಗನ ಕಾಲು ಮುರಿದು ಅಲ್ಲೇ ಇರುವಂತೆ ಮಾಡುತ್ತಾರೆ. ಕೊಮಾರಯ್ಯನವರಿಗೆ ಕೂರಲು ಕುದುರೆ, ಹಿಡಿಯಲು ಛತ್ರಿ, ಬೀಸುವುದಕ್ಕೆ ಬೆಳ್ಳಿಯ ಚವುರಿ ತರಿಸಿಕೊಟ್ಟು ಸಮಾಧಾನ ಮಾಡಿದ ಬಾಣಂತಮ್ಮನವರು, ಕೊಮಾರಯ್ಯನವರಿಗೆ ಚಿಕ್ಕದೊಂದು ಗುಡಿ ಕಟ್ಟಿಸಿ ಒಪ್ಪೊತ್ತಿಗೊಂದು ಜಾತ್ರ ನಡೆಯುವಂತೆಯೂ, ತಾಯಿ ಮಕ್ಕಳಿಗೆ ಎಡೆಯಾದ ನಂತರ ನಾಯಿಗೊಂದು ಎಡೆ ತೆಗೆದಿಡಿಸಿ ಬಂದ ಜನರಿಗೆ ಪ್ರಸಾದ ದೊರೆಯುವಂತೆ ಏರ್ಪಾಟು ಮಾಡಿ ಮಾದೇವ ಸಾಲು ಹೊಡೆಸುತ್ತಾರೆ.

ಬಾಣಂತಮ್ಮನವರ ಮಕ್ಕಳಲ್ಲೈಕಿ ಹುಲುಕೋಡಯ್ಯನವರು ಬಹಳ ರೂಪವಂತರು. ಚಿಕ್ಕಮ್ಮನವರೊಡನೆ ಮದುವೆಯಾದರೂ ತುಂಟಾಟ ಬಿಡಲಿಲ್ಲ. 'ನಾ ಲೋಕಕೆಲ್ಲಾವ ಕಡುಚೆಲುವಾ ನನಗಿಂತ ಚೆಲುವಾರು ಇಲ್ಲವಲ್ಲಂತ್ತೇಳಿ' ಹಿಡ್ಲ ಹೊರೆ ಹೊತ್ತು ಬಾಗುತಾ ಬಳುಕುತಾ ಸೂರ್ಯನ ಹೊಳಪಿನಂತೆ ಹೊಳೆಯುತ್ತಾ ಬರುತ್ತಿರುವ ಎಡಗೈನವರ ಹೆಣ್ಣ

ನೋಡಿ ಮೋಹಿತರಾಗುತ್ತಾರೆ. ಮೈ ಎಲ್ಲಾ ಕಜ್ಜಿ ಇರುವ ಹೆಣ್ಣು ಮುದುಕರಂತೆ ವೇಷ ಧರಿಸಿ ಅವಳನ್ನು ಬೆನ್ನು ಕೆರೆಯುವಂತೆ ಹೇಳುತ್ತಾರೆ. ಅವಳು ತನ್ನ ಕುಲಗೋತ್ರಗಳನ್ನು ತಿಳಿಸಿ ನಿರಾಕರಿಸಿದರೂ ಬಿಡುವುದಿಲ್ಲ. ಅವಳು ಬಾಯಾರಿಕೆಯಿಂದ ಬಳಲಿ ಅಂಗಟಸಂಕಟ ಬಂದು ನೀರು ಕುಡಿಯಲು ಕೈ ತೊಳೆಯದೆ ಹಾಗೆಯೇ ಹಾಲಿನ ಕೊಳದಲ್ಲಿ ಹಾಲು ಕುಡಿದು ನೀರು ಕೊಳದಲ್ಲಿ ನೀರು ಕುಡಿಯುತ್ತಾಳೆ. ಹುಲುಕೋಡಯ್ಯನವರು ಇದನ್ನು ಮರೆಯಿಂದ ನೋಡಿ ಅವಳ ಮುಗ್ಧ ಮನಸ್ಸಿಗೆ ಮೆಚ್ಚಿ ಮದುವೆಯಾಗುವಂತೆ ಒತ್ತಾಯಿಸುತ್ತಾರೆ. ಅವಳು ಬಲವಾಗಿ ನಿರಾಕರಿಸಿದರೂ ಸಮಾಧಾನ ಹೇಳಿ ಧೈರ್ಯದಿಂದ ಬಲಗೈಲಿ ಭಾಷೆ ಕೊಡುವಂತೆ ಮಾಡಿ ಒಡ್ಲ ಹೊರೆಯೊಂದಿಗೆ ತಮ್ಮ ಮನೆಗೆ ಕಳುಹಿಸುತ್ತಾರೆ. ಹುಲುಕೋಡಯ್ಯನವರು ಹಿಂದೆಯೇ ಹೋಗಿ ಚಿಕ್ಕಮ್ಮನವರಿಂದ ತಲೆಗೆ ತುಪ್ಪ ಕೊಡಿಸಿ ಊಟಕ್ಕೆ ಹಾಕಿಸಿ ಮಡಿಲಕ್ಕಿ ತುಂಬಿಸುತ್ತಾರೆ. ಅವಳು ಹೊರಟಾಗ ಅವಳ ಹಿಂದೆ ಹೊರಟ ಗಂಡನನ್ನು ತಡೆದರೆ ಬಾಗಿಲಿನಾಚೆ ನೆಗೆದು ಅವಳನ್ನು ಕೂಡಿಕೊಂಡು ಹೋಗಿ ಕಾಡಿನಲ್ಲಿ ಗುಡಿಸಿಲು ಕಟ್ಟಿ ವಾಸಮಾಡುತ್ತಾರೆ.

ಗಂಡನ ಸ್ವಭಾವ ತಿಳಿದ ಚಿಕ್ಕಮ್ಮನವರು ಕಾದು ಕಾದು ಸಾಕಾಗಿ ಅತ್ತೆ ಭಾವ ಮತ್ತು ಮೈದುನರಿಗೆ ವಿಷಯ ತಿಳಿಸುತ್ತಾರೆ. ಮುತ್ತಿನ ಬಲೆ ಬೀಸಿ ಹುಲುಕೋಡಯ್ಯನವರನ್ನು ಹುಡುಕುತ್ತಿದ್ದಾರೆ ಎಲ್ಲಿಯೂ ಸುಳಿವಿಲ್ಲ. ಅರಣ್ಯ ಸೇರಿದಮೇಲೆ ಹಸಿವು ತಡೆಯಲಾರದೆ ತಮ್ಮ ಪ್ರೀತಿಯವಳೊಂದಿಗೆ ತಮ್ಮೂರಿಗೆ ಹುಲುಕೋಡಯ್ಯನವರು ಬಂದು, ಚಿಕ್ಕಮ್ಮನವರ ಮುಂದೆ 'ಹತ್ತೂರು ತಿರುಗಿದೇ ಹೊಟ್ಟೆ ಭಾಳಾ ಹಸಿವಾಯ್ತು' ಅಂಬಲಿ ಕೊಡಬೇಕೆಂದು ಕೇಳಿದಾಗ, ಚಿಕ್ಕಮ್ಮನವರು ದುಃಖದಿಂದ ಮುಖವಾ ಮುಚ್ಚಿಕೊಂಡು ಹಾಳೆಕೊಟ್ಟು ಕೆಳಗೆ ಕೂರಿಸಿ ಊಟ ಹಾಕುತ್ತಾರೆ. ತಮ್ಮ ಊಟವಾದನಂತರ 'ತಮ್ಮ ನಂಬಿ ಬಂದವಳಿಗೂ ಏನಾದರೂ ಅಷ್ಟು ಕೊಡಬೇಕೆಂದು' ಕೇಳಿ ಪಟ್ಟೆವಸ್ತ್ರದಲ್ಲಿ ಅನ್ನ ಕಟ್ಟಿಕೊಂಡು ಹೋಗುತ್ತಾರೆ. ಹುಲುಕೋಡಯ್ಯನವರ ಅಂತರಾಳವನ್ನು ತಿಳಿಯು ಸಲುವಾಗಿ ಅವಳು ಸ್ವಲ್ಪ ಮರೆಯಾದಾಗ ಹುಲುಕೋಡಯ್ಯನವರು ಕಂಗೆಟ್ಟು ಹುಡುಕುತ್ತಾರೆ. ಅವರ ಪ್ರೀತಿಯನ್ನು ಮನಸಾರೆ ಮೆಚ್ಚಿದ ಅವಳು ಮುಂದೆ ಬಂದಾಗ ಸಂತೋಷ ಮುಗಿಲುಮುಟ್ಟುತ್ತದೆ. ಇಬ್ಬರೂ ಸಂತೋಷದಿಂದ ತಾಂಬೂಲ ಹಾಕುತ್ತಿರುವಾಗ ಅಣ್ಣ ದೊಡ್ಡಯ್ಯನವರು ಬಂದು 'ಹಣೆಯಲ್ಲಿ ಬರೆದದ್ದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವೆಂದು' ಸಮಾಧಾನ ಹೇಳಿದರು. ಹುಲುಕೋಡಯ್ಯನವರಿಗೆ ಕುಲದವರ ಮುಂದೆ ಶುದ್ಧಮಾಡಿಸಿ ವರ್ಷಕ್ಕೊಂದು ಸಲ ಬಂದು ಹೋಗುವಂತೆ ಅಪ್ಪಣೆ ಕೊಡಿಸಿ ಯಾರಿಗೂ ಅನ್ಯಾಯವಾಗದಂತೆ ವ್ಯವಸ್ಥೆಮಾಡುತ್ತಾರೆ.

ತನಗೆ ಆಸರೆಯಾಗಿರಬೇಕೆಂಬ ತಾಯಿ ಹಂಬಲ, ಪ್ರಣಯ, ತ್ಯಾಗ ಮತ್ತು ಸಮರ್ಪಣ ಭಾವಗಳನ್ನು ವಸ್ತುವಾಗುಳ್ಳ **ಬಾಣಂತಮ್ಮ-ಹುಲುಕೋಡಯ್ಯ** ಲಾವಣಿ ಉತ್ತಮ ಮಟ್ಟದ್ದಾಗಿದೆ.

ಕೆಂಚಮ್ಮ

ಅಣ್ಣ ಸುಬ್ಬರಾಯರು ಹೆಣ್ಣು ನೋಡಿ ಬಂದಾಗ ತಂಗಿ ಕೆಂಚಮ್ಮ ಅಣ್ಣನನ್ನು ಉಪಚರಿಸಿ ಹೆಣ್ಣಿನ ಬಗ್ಗೆ ಕೇಳಿದರು. ಸುಬ್ಬರಾಯರು ಬರುವ ಹೆಣ್ಣಿನ ರೂಪ ವರ್ಣಿಸಿದಾಗ ಸಿಟ್ಟಾದ ಕೆಂಚಮ್ಮ 'ನಿಮ್ಮ ಹೆಂಡತಿಯಾಗಿ ಬರುವವಳಿಗೂ ನನಗೂ ಸಮವೇ ನಿಮಗೆ ತೆಂಗಿನಕಾಯಿಬೇಡ ನನಗೆ ಘಟ್ಟದ ಉಪ್ಪು ಬೇಡ' ಎಂದು ಉಟ್ಟಿದ್ದ ಸೀರೆಯಲ್ಲಿ ದೇಶಾಂತರ ಹೊರಡುತ್ತಾಳೆ. ಧಣಿವಾದ ಕೆಂಚಮ್ಮ ನೀರು ಕುಡಿಯುವ ಸಲುವಾಗಿ ಬಲಗಡೆಯಿಂದ ಬೆವರು ತೆಗೆದು ಬಿಸಾಡಿದಾಗ ಕಣಗಿಲಬಂಟನೆಂಬ ಮಗ ಹುಟ್ಟುತ್ತಾನೆ. ಅವನಿಗೆ ನೀರು ತರಲು ಹೇಳುತ್ತಾಳೆ. ಕಣಗಿಲಬಂಟ ನೀರು ತರಲು ಹೋಗಿ ಅಲ್ಲಿ ಆಟ ವಾಡುತ್ತಿದ್ದ ಐದು ಜನ ಬೇಡರ ಹುಡುಗಿಯರಿಗೆ ಮೋಹಿತನಾಗಿ ಅಲ್ಲೇ ಉಳಿಯುತ್ತಾನೆ. ಕೆಂಚಮ್ಮ ಮಗನಿಗಾಗಿ ಕಾದು ಬೇಸತ್ತು ಹಿಪ್ಪೆ ಮರದಲ್ಲಿ ಬಾವಿ ತೆಗೆದು ಬೇಕಾದಷ್ಟು ನೀರು ಕುಡಿದು ಎಡಗಡೆಯಿಂದ ಬೆವರು ತೆಗೆದು 'ಗಂಡಸರನ್ನು ಕೂಡಿದರೂ ಮುಂಡೆ ಮಕ್ಕಳ ಹೆತ್ತರೂ ಬಂಜೆ' ಎಂದು ಬಿಸಾಡಿದಾಗ ಸಿಂಗಪಟ್ಟಣನೆಂಬ ಮಗ ಹುಟ್ಟುತ್ತಾನೆ. ಈ ಮಗನಿಗೆ 'ನೀನು ಕಾವಲಿರಬೇಕು, ನಿನ್ನ ಹರಿವಾಣದಲ್ಲಿ ನಾನು ನೆಲೆಸುತ್ತೇನೆ. ನಿನಗೊಂದು ತೇರು ಹರಿಯುವಂತೆ ಮಾಡುತ್ತೇನೆಂದು' ಹೇಳಿ ಕೆಂಚಮ್ಮ ಒಡದು ಗುಡಿ ತುಂಬಾ ಮೂಡುತ್ತಾಳೆ. ಸುಬ್ಬರಾಯರಿಗೂ ಮದುವೆಯಾಗಲಿಲ್ಲ ಕೆಂಚಮ್ಮನಿಗೂ ಇಲ್ಲ.

ಬೇರೊಬ್ಬ ಹೆಣ್ಣುಮಗಳು ಮನೆಗೆ ಒಡತಿಯಾಗಿ ಬರುವುದನ್ನು ಸಹಿಸದ ನಾದಿನಿಯ ಮಾತ್ಸರ್ಯ ಬುದ್ಧಿ ಸಮಾಜದಲ್ಲಿ ಸಾಕಷ್ಟಿರಬಹುದು. ಜನಪದರು ತಮ್ಮ ಬದುಕಿನಲ್ಲಿ ಕಂಡುಂಡ ಸತ್ಯವನ್ನೇ ದೈವಕ್ಕೆ ಆರೋಪಿಸಿರುವುದನ್ನು **ಕೆಂಚಮ್ಮ** ಲಾವಣಿಯಲ್ಲಿ ಕಾಣಬಹುದು.

ಉತ್ತರದೇವಿ

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಈಗಾಗಲೇ ದೊರೆತಿರುವ 'ಉತ್ತರದೇವಿ' ಪಾಠಗಳನ್ನು ಗಮನಿಸಿದರೆ ಕಥೆಯ ಆರಂಭ ಸಾಮಾನ್ಯವಾಗಿ ಎರಡು ರೀತಿಯಲ್ಲಾಗುವುದು ಕಂಡುಬರುತ್ತದೆ. ಸರಿಯಾದ ಕಾರಣ ತಿಳಿಯದ ಅತ್ತೆ ಸೊಸೆಯರ ವಿರಸ. ಅತ್ತೆ ಸೊಸೆಯ ಶೀಲದ ಬಗ್ಗೆ ಸಂಶಯ ತಾಳುವುದರ ಮೂಲಕ ಅತ್ತೆ ಸೊಸೆಯರ ಜಗಳ. ಪ್ರಸ್ತುತ ಸಂಕಲನದಲ್ಲಿರುವ 'ಉತ್ತರದೇವಿ' ರಚನೆಯು ಆರಂಭ ಎರಡನೆಯ ಗುಂಪಿಗೆ ಸೇರುತ್ತದೆ. ಅಂತ್ಯ ಮಾತ್ರ ಒಂದೊಂದು ರಚನೆಯಲ್ಲಿ ಒಂದೊಂದು ಬಗೆ.

ಉತ್ತರದೇವಿ ನೀರಿನಿಂದ ಬರಲು ತಡವಾದ ಕಾರಣ ಅತ್ತೆ ಅವಳ ಶೀಲವನ್ನು ಶಂಕಿಸುತ್ತಾಳೆ. 'ಅತ್ತೆಗೂ ಸೊಸೆಗೂ ಹತ್ತ್ಯಾವೆ ಕಾಳಗ' ಊಟಕ್ಕೆ ಬಂದ ಮಗನಿಗೆ 'ಉತ್ತರದೇವೆಂಬಾ ಸೊಸಿ ಬ್ಯಾಡ' ಎಂದು ಒತ್ತಾಯ ಮಾಡುತ್ತಾಳೆ. ಮಗನು ತಾಯಿ ಮಾತಿಗೆ ಒಪ್ಪದೆ ಚರ್ಚೆ ಮಾಡುತ್ತಾನೆ. ತಾಯಿ ಅನೇಕ ರೀತಿಯ ಮಾತುಗಳನ್ನು ಹೇಳಿ

ಮೂಗುತಿ ಮುರಿದಾರೆ ಮಾಡಿಸಬಹುದು
ಮಡದಿ ಸತ್ತಾರೆ ತರಬಹುದು–ಕಂದಯ್ಯ
ನಿನ್ನ ಹೆತ್ತವ್ವನೆಲ್ಲಿ ಪಡೆದಿಯೋ

ಎಂದು ಮಗನನ್ನು ಒಪ್ಪಿಸುತ್ತಾಳೆ. ಕೊನೆಗೂ ಉತ್ತರದೇವಿ ಗಂಡನ ಮನೆ ಬಿಡಬೇಕಾಯಿತು. ಉತ್ತರದೇವಿಯನ್ನು ಕರೆದು 'ಆಗ ತಂದವನಲ್ಲ ಈಗ ಕಳಗವನಲ್ಲ ಹೋಗಿರು ನಿನ್ನ ತವರೀಗೆ' ಎಂದು ಗಂಡ ನುಡಿಯುಉತ್ತಾನೆ. ಹೊರಡುವ ಮುನ್ನ ಹಿತ್ತಿಲಿನಲ್ಲಿ ತಾನು ಹಾಕಿ ಬೆಳೆಸಿದ್ದ ಗಿಡಗಳಿಗೆಲ್ಲಾ ಸಮಾಧಾನ ಹೇಳಿ ಮನೆಯವರಿಗೆ ಹೇಳಿದಾಗ ಉತ್ತರದೇವಿಗೆ 'ಮಳ್ಳ ಮಗುಚಿ ಮನೆಗೆ ಬರಬ್ಯಾಡ' ಎಂದು ಅತ್ತೆ ನಾದಿನಿಯರು ಹೇಳುತ್ತಾರೆ. ಮಾವ, ಭಾವ 'ತೌರೊಳ್ಳೆದಂತ ಇರಬ್ಯಾಡ ನಾಳೆ ಬುಧುವಾರ ಬರಬೇಕು' ಎಂದು ಹೇಳುತ್ತಾರೆ. ಉತ್ತರದೇವಿ ತವರು ಮನೆಯಿಂದ ತಂದಿದ್ದ ಸಾಮಾನುಗಳನ್ನು ತೆಗೆದುಕೊಂಡು ದನಕರುಗಳೊಡನೆ 'ಒಂದಾನೆತ್ತಿಕೊಂಡು ಕಂದಾನ ಕೈಲಿಡ್ಕಂಡು' ಹೊರಟಾಗ 'ಪಟ್ಟೆಸೀರೆ ಉಟ್ಟು ಹೊಸ ಓಲೆ ಇಕ್ಕೊಂಡು ಹೋಗು' ಎಂದು ಅತ್ತೆ ಹೇಳುತ್ತಾಳೆ. ಉತ್ತರದೇವಿ ಅದಕ್ಕೆ ತಕ್ಕ ಉತ್ತರ ಹೇಳಿ ಮುಂದಲ ಚಿಕ್ಕಿ ಬೆಳಕಲ್ಲಿ ತೌರೂರಿಗೆ ಬರುವಾಗ ಕುಂದೂರು, ಭಾಗೂರು, ತಾಳೂರು, ಹೆತ್ತೂರು ಗೌಡರು ತಡೆದರೂ ನಿಲ್ಲದೆ ತಂದೆ ಮನೆ ಮುಂದೆ ಬಂದಿದ್ದಾಳೆ. ರಾತ್ರಿ ವೇಳೆಯಲ್ಲಿಯೇ ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿಯರ ಮನೆಮನೆ ಅಲೆದಳು. ಯಾರೂ ಬಾಗಿಲು ತೆಗೆಯಲಿಲ್ಲ. 'ಹತ್ತೂರು ತಿರುಗಿದರೂ ನೆತ್ತೀಗೆ ಎಣ್ಣೆಯಿಲ್ಲಾ ಒಬ್ಬಾರು ಕದವಾ ತೆಗೆನಿಲ್ಲಾ'. ಕೊನೆಗೆ ಹೆತ್ತ ತಾಯಿ ಮಗಳ ಸಂಕಟ ನೋಡಿ 'ನಿಮ್ಮಪ್ಪಾ ನನ್ನ ಉರಿಸಿದಾರು ನನ್ನ ಸಾಗು ನಿನಗೇ ಒದಗೀತು ಹೋಗವ್ವ ಹಂಪೆ ಹೊಳೆಗಾಗಿ' ಎಂದು ಹೇಳುತ್ತಾಳೆ.

ಹತಭಾಗಿನಿ ಉತ್ತರದೇವಿ ಕಡುದುಃಖದಿಂದ ಮಕ್ಕಳೊಡನೆ ಹೊಳೆಗೋಗಿ 'ನನ್ನಂತ ಪಾಪಿಗೆ ಯಾರೂ ಇಲ್ಲದವರಿಗೆ ನೀವೇ ತಂದೆ ತಾಯಿ' ಎಂದು ನಮಸ್ಕಾರಮಾಡಿ ಕಣ್ಣಿಗೆ ಬಟ್ಟೆ ಕಟ್ಟದ ಮಕ್ಕಳನ್ನು ಕಂಕುಳಲ್ಲಿ ಎತ್ತಿಕೊಂಡು ಒಂದೊಂದೇ ಹಂತವನ್ನು ಇಳಿದಳು. ಯಾರೂ ಆಶ್ರಯಕೊಡದ ಉತ್ತರದೇವಿಗೆ ಗಂಗಮ್ಮ ತಾಯಿ ತನ್ನ ಮಡಿಲಿನಲ್ಲಿ ಆಶ್ರಯ ಕೊಟ್ಟು ತುಂಬಿ ಹರಿದಳು.

ಕೊಟ್ಟ ಮನೆ, ತಂದ ಮನೆಗಳೆರಡರ ಬಾಗಿಲು ಮುಚ್ಚಿದಾಗ ಹೆಣ್ಣಾದವಳಿಗೆ ಒದಗುವ ಸಂಕಟಗಳ ಸರಮಾಲೆ ಎಲ್ಲರ ಚಿತ್ತವನ್ನು ಕಲಕುವಂತೆ **ಉತ್ತರದೇವಿ** ಲಾವಣಿಯಲ್ಲಿ ಚಿತ್ರಿತವಾಗಿದೆ.

ಗಿರಿಜಾಮಲ್ಲಯ್ಯ ಮತ್ತು ಶಿವಗಂಗೆ

ಧಾರ್ಮಿಕ ವೃತ್ತಿಗಾಯಕರು, ಲೌಕಿಕ ವೃತ್ತಿಗಾಯಕರು ಮತ್ತು ಹೆಂಗಸರು ಹಾಡುವ 'ಗಿರಿಜಾಮಲ್ಲಯ್ಯ' ಹಾಗೂ 'ಶಿವಗಂಗೆ'ಗೆ ಸಂಬಂಧಿಸಿದ ಅನೇಕ ಲಾವಣಿಗಳು

ಈಗಾಗಲೇ ದಕ್ಷಿಣ ಕರ್ಣಾಟಕದಲ್ಲಿ ಸಾಕಷ್ಟು ಪ್ರಸಿದ್ಧಿ ಪಡೆದು ಹಲವಾರು ಸಂಕಲನಗಳಲ್ಲಿ ಪ್ರಕಟಗೊಂಡಿವೆ. ಪ್ರಸ್ತುತ ಸಂಕಲನದಲ್ಲಿರುವ **ಗಿರಿಜಾಮಲ್ಲಯ್ಯ** ಮತ್ತು **ಶಿವಗಂಗೆ** ಲಾವಣಿಗಳನ್ನು ಪಾಠಾಂತರ ದೃಷ್ಟಿಯಿಂದ ಇಲ್ಲಿ ಕೊಡಲಾಗಿದೆ.

ಕೆರೆ ಹೊನ್ನಮ್ಮ

ಮತ್ತು

ಇತರ ಲಾವಣಿಗಳು

ಕೆರೆ ಹೊನ್ನಮ್ಮ

ಪ್ರಾರ್ಥನೆ

ಸರಸತಿ ಸಣ್ಣವಳೆ ನಿಜಮುಖದ ಕಣ್ಣವಳೆ
ಕರಕಡಗ ಧರಿಸೆ ಗಿರಿಜಮ್ಮ–ಪಾರವತಿ
ಕಲಿಸು ಕಲ್ಯಾಣದ ಕತೆ ನೂರಾ

ಸರಸತಿಯೆಂಬೋಳು ಸಾವಿರಕು ದೊಡ್ಡವಳು
ಲೋಕಪಾಲಕರ ಕಿರಿದಂಗೆ–ಸರಸತಿ
ನನಗೆ ಬೇಕಾದಟ್ಟು ಹಾಡ ಬರಕೊಡು

ನುಗ್ಗೆಯ ಹೂವಾ ಬಗ್ಗಿ ಮೊಗಳ ಕುಯ್ದೆ
ಉಗ್ರಣ್ಣ ಬೀರಣ್ಣನಿಗೆ ಶರಣೆಂದೆ–ನನ ಧನಿಯೆ
ಕುಗ್ಗಾದೆ ಬರಲಿ ಸಭೆ ಮುಂದೆ

ಕಣಗಳ ಹೂವಾ ಕೈ ತುಂಬಾ ನಾ ಕುಯ್ದೆ
ಕಣಿವೆಯ ಈರಣ್ಣನಿಗೆ ಶರಣೆಂದೆ–ನನ ಧನಿಯೆ
ಸಮನಾಗಿ ಬರಲಿ ಸಭೆ ಮುಂದೆ

ಎಳ್ಳು ಹೊಲದಲ್ಲಿರುವ ಡೊಳ್ಳು ಹೊಟ್ಟೆ ಬೆನವಣ್ಣ
ನಾನು ಎಳ್ಳು ಉಂಡಲಿಗೆ ನೆನಗಡ್ಲೆ–ತಂದೇನು
ಇದ್ದೂಟ ಮತಿಯ ಬರಕೊಡು

ಕಡ್ಲೆ ಹೊಲದಲ್ಲಿರುವ ಕಡಿದೊಟ್ಟೆ ಬೆನವಣ್ಣ
ನಾನೇ ಕಡ್ಲೆ ಉಂಡಲಿಗೆ ನೆನಗಡ್ಲೆ–ತಂದೇನು
ಕೆಂಡೂಟ ಮತಿಯ ಬರಕೊಡು

* * *

ಸುವ್ವಿಯೊ ಚೆನ್ನಬಸವಣ್ಣ ಸುವ್ವಿಯೊ

ಮಳಿತೆ ಮಲ್ಲೇಗೌಡರಿಗೆ ಎಲ್ಲಾಳು ಗಂಡುಮಕ್ಕಳು
ಹಿರಿಯವರು ಬೊಮ್ಮಣ್ಣ ಕಿರಿಯವರು ನಿಂಗಣ

ಹೇ ಹಿರಿಯವರು ಘಟ್ಟದಸೆಟ್ಟಿ
ಕಿರಿಯವರು ಆರಂಭಕಾರ

ಅವರು ಘಟ್ಟದ ಗೆಣೆಕಾರರೆಲ್ಲಾ
ಅವರು ಘಟ್ಟಕ್ಕೆ ಹೋಗಿ ಬಂದೊ

ಅವರು ಮಳಿತ ಬ್ಯಾರೆಯ ಮೇಲೆ
ಅವರು ಕರುಗಳಾ ಬಿಟ್ಟುಕೊಂಡು

ಅವರು ಕೂತು ಮಾತಾಡುತಾರೆ
ಇದುವೆ ಬೊಮ್ಮಣ್ಣ

ನೀನು ಮದುವೆಯಾಗಲ್ಲವಾ
ನಾವು ಜೊತೆಗಾರರೆಲ್ಲಾ

ನಾವು ಮದುವೆಯಾದವಲ್ಲ
ನಿನಗೆ ಮದುವೆಯೆಂಬ ಸೊಲ್ಲ ನಾವು ಕಾಣವಲ್ಲ

ಮದುವೆಯಾದರೆ ನಮ್ಮ ಜೊತ್ತೇಲಿ ಬರಬೇಕು
ಮದುವೆಯಾಗದಿದ್ದರೆ ನಮ್ಮ ಜೊತ್ತೇಲಿ ಬರಬ್ಯಾಡ

ಹೇ ಕೇಳಿರಿ ಗೆಣೆಕಾರರೇ
ನಮ್ಮ ತಂದೆ ಮಲ್ಲೇಗೌಡರು

ಅವರು ಸುತ್ತೇಳು ಲೋಕವಾ
ಅವರು ಸುತ್ತಿ ಸಾಕಾದರು

ಹೇ ನನಗೆ ತಕ್ಕ ಹೆಣ್ಣು ಸಿಕ್ಕಲಿಲ್ಲ ಹೆಣ್ಣು ಸಿಕ್ಕದಮೇಲೆ
ನಾ ಮದುವೆಯಾಗಿ ಫಲವೇನು

ಪ್ರತಿ ಎರಡನೆಯ ಸಾಲಿನ ಕೊನೆಯಲ್ಲಿ 'ಸುವ್ವಿಯೊ' ಎಂಬ ಸೊಲ್ಲು ಸೇರಿಸಿಕೊಳ್ಳಬೇಕು.

ನಾವು ಹೆಣ್ಣಿರುವ ಜಾಗ
ಹೇಳಿ ಕೊಟ್ಟೇವೂ

ಹೇ ಹೊಳೆಗೊಂದು ಕ್ವಾಟೆ
ಅನ್ನದಾನದ ಮನೆ

ಅವರು ಅರಸರಾಯರ ಮಕ್ಕಳು
ಅವರು ಎಲ್ಡಾಳು ಅವರಲ್ಲಾ

ಚಿಕ್ಕ ಹೊನ್ನಿ ದೊಡ್ಡ ಹೊನ್ನಿ
ಅಕ್ಕ ತಂಗೇರು

ಚಿಕ್ಕ ಹೊನ್ನಿ ಬ್ಯಾಡ
ದೊಡ್ಡ ಹೊನ್ನಿ ತಂದು

ನೀ ನಗ್ಣಾಗು ಬೊಮ್ಮಣ್ಣ
ಹೇ ಹಾಗಾದರೆ ಗೆಣೆಗಾರರೇ

ನಮ್ಮ ತಂದೆ ಕೊಟೆ ಹೇಳೀನು
ನಾ ನಗ್ಣ ಆದೇನು

ನನಗೆ ತಕ್ಕ ಹೆಣ್ಣಾದರೆ
ನಾ ನಗ್ಣ ಆಯಿತಿನಿ

ಹೇ ದೊಡ್ಡ ಹೊನ್ನಿಯೆಂಬ ಹೆಣ್ಣು
ನಿನಗೆ ತಕ್ಕ ಹೆಣ್ಣು

ಅವರು ಸಂಜೆಯಾಯಿತು ಭೋಜೆಯಾಯಿತು
ಅವರು ಮನೆಗೆ ಬಂದರಲ್ಲೊ

ಅವರು ತಂದೆ ಮಲ್ಲೇಗೌಡರು
ಅವರು ಶಿಕಾರಿ ಹೋಗವರೆ

ಹೇ ಕರುವಾ ಕಟ್ಯಾಕಾರು
ಕರುವಿಗೆ ಹುಲ್ಲಾ ಹಾಕ್ಯಾರು

ಮಂಚಾಕೆ ಹ್ವಾದರು ಬೊಮ್ಮಣ್ಣ
ಮಖಾಡೆ ಮನಗಿದರು

ಅವರು ತಾಯಿ ಮಲ್ಲವ್ವತಾಯಿ
ಚಿನ್ನಾದ ಗಿಂಡೀಲಿ

ಪನ್ನೀರು ತಂದಾರು
ಇದುವೇನೆ ಕಂದಾ ಮನಗಿದೆಯ

ನಾವು ಇದ್ದಂಗೆ ನಿನಗೆ ಬಂದ ಕಷ್ಟವೇನು
ನಿನ್ನ ಹೊಡೆದವರ್‍ಯಾರು

ನಿನ್ನ ಬಯ್ದವರ್‍ಯಾರು ಮಗನೇ
ನನ್ನ ಕಾಣದ ಮಗೂಗೆ

ಚಾಡಿ ಪೇಳಿದವರ್‍ಯಾರು ಮಗನೇ
ನನ್ನ ಯಾರು ಹೊಡೆಯನಿಲ್ಲ

ನನ್ನ ಯಾರು ಬಯ್ಯನಿಲ್ಲಾ
ಯಾರು ನನಗೆ ಅನ್ನಲಿಲ್ಲ

ನನಗೆ ಯಾರೂ ಚಾಡಿಯ ಹೇಳಲಿಲ್ಲ ತಾಯಿ
ನೀವು ಕಂಡವರ ಮಕ್ಕಳಾ

ಕಂಡಿಟ್ಟು ಬಯ್ಯ ಬ್ಯಾಡಿ
ನಾ ಮದುವೆಯ ಮಾಡದರೆ

ನಾ ಅರಮನೆಲ್ಲೇ ಇರುತ್ತೀನಿ
ನನ್ನ ಮದುವೆಯ ಮಾಡದಿದ್ದರೆ

ನಾ ದೇಸಾಂತರ ಹೋಯಿತಿನಿ
ನಿನ್ನ ಮದುವೆ ಮಾಡಕೆ

ನಿಮ್ಮ ತಂದೆ ಮಲ್ಲೇಗೌಡರು
ಸುತ್ತೇಳು ಲೋಕಾವ

ಸುತ್ತಿ ಸಾಕಾದರು
ಹೇ ನಿನಗೆ ತಕ್ಕ ಹೆಣ್ಣ

ಎಲ್ಲಿ ಸಿಕ್ಕನಿಲ್ಲ ಕಂದಾ
ನಾ ಹೆಣ್ಣಿರುವ ಜಾಗವ ತಾಯಿ:

ನಾ ಹೇಳಿ ಕೊಟ್ಟೇನು
ಹೇ ಹೊಳೆಗೊಂದು ಆನೆಕ್ವಾಟೆ

ಅದು ಅನ್ನದಾನದ ಮನೆ
ಅರಸರಾಯರ ಮಕ್ಕಳು

ಅವರು ಎಲ್ಡಾಳು ಅವರಲ್ಲಾ
ಹೇ ಚಿಕ್ಕ ಹೊನ್ನಿ ದೊಡ್ಡ ಹೊನ್ನಿ

ಅಕ್ಕತಂಗೇರು ಅವರು
ಹೇ ಚಿಕ್ಕ ಹೊನ್ನಿ ಬ್ಯಾಡ

ದೊಡ್ಡ ಹೊನ್ನಿಯ ತಂದು
ನನಗೆ ನಗ್ಣ ಮಾಡಬೇಕು

ನಿಮ್ಮ ತಂದೆ ಬರಲ್ಹೇಳು
ನಿಮ್ಮ ತಂದೆ ಕೂಟೆ ಹೇಳೇನು

ನಿನ್ನಾ ನಗ್ಣ ಮಾಡೇನು
ಸಂಜೆಯಾಯಿತು ಭೋಜೆಯಾಯಿತು

ಮಲ್ಲಯ್ಯಗೌಡರು
ಷಿಕಾರಿಗೆ ಹೋಗಿದ್ದವರು

ಮನೆಗೆ ಬಂದರಲ್ಲಾ
ಆಕೆ ಮಲ್ಲಮ್ಮ ತಾಯಿ

ಗಂಡಾನಿಗೆ ನೀರನೇ ಕೊಡುತಾರೆ
ಕಾಲ ತೊಳೆದುಕೊಂಡು ಅವರು

ಅಂಗಾಳವನೆ ಹತ್ತವರೆ
ಇದುವೇನೆ ಎಲೆ ಹೆಂಗಸೆ

ನಿನ್ನ ಮಗ ಯ್ಯಾಕ ಮನಗನನೆ
ಅವನ ಹೊಡೆದವರು ಯಾರಂತೆ

ಅವನ ಬಯ್ದವರು ಯಾರಂತೆ
ನಾನು ಇದ್ದಂಗೆ ಅವನಿಗೆ ಬಂದ ಕಷ್ಟವೇನೆ

ನಾನು ಪೇಳಿಕಾರ ಹೇಳೇನು
ನೀವು ಮಂಚಕಾದರು ಬರಬಾರದ

ಆಗ ಮಲ್ಲೇಗೌಡರು
ಅವರು ಮಂಚಕ ಹೋಗವರೆ

ಅವನ್ಯಾರು ಹೊಡೆದಿಲ್ಲ
ಅವನ್ಯಾರು ಬಯ್ದಿಲ್ಲ

ನೀವು ಇದ್ದಂಗೆ
ಅವನಿಗೇನು ಕಷ್ಟ ಬಂದಿಲ್ಲ

ಹೇ ಮದುವೆ ಮಾಡಿದರೆ
ಅವನು ಮನಲ್ಲೇ ಇರುತ್ತಾನಂತೆ

ಮದುವೆ ಮಾಡುದಿದ್ದರೆ
ಅವನು ದೇಸಾಂತರ ಹೋಯಿತಾನಂತೆ

ಅವನ ಮದುವೆ ಮಾಡಾಕೆ
ನಾನು ಏನು ಮಾಡಲಿ ಹೆಂಗಸೇ

ಸುತ್ತೇಳು ಲೋಕಾವ
ನಾನು ಸುತ್ತಿ ಸಾಕಾದೇನು

ಹೇ ಅವನಿಗೆ ತಕ್ಕನ ಹೆಣ್ಣು
ನೋಡು ಎಲ್ಲಿ ಸಿಕ್ಕಿಲ್ಲಾ

ಅವನ ಹೆಣ್ಣಿರುವ ಜಾಗವ
ಅವನು ಹೇಳಿಕೊಟ್ಟಿರುವನಲ್ಲಾ

ಹೇ ಹೊಳೆಗೊಂದು ಆನೆಕ್ವಾಟೆ
ಅನ್ನದಾನದ ಮನೆ

ಅರಸರಾಯರ ಮಕ್ಕಳು
ಅವರು ಎಲ್ಡಾಳು ಅವರಂತೆ

ಕಿರಿಯವಳು ಚಿಕ್ಕ ಹೊನ್ನಿ
ದೊಡ್ಡವಳು ದೊಡ್ಡ ಹೊನ್ನಿ

ಹೇ ದೊಡ್ಡ ಹೊನ್ನಿಯ ತಂದು
ನಾವು ನಗ್ಣ ಮಾಡಬೇಕಂತೆ

ಹೇ ಸ್ವಲ್ಪ ಕೆಲಸಾಕೆ ಯೋಚನೆಂದರೇನು
ಊಟಕ್ಕೆ ಏಳು ಮಗನೇ

ನಾವು ಊಟಾ ಮಾಡೋಣ
ಅವರಪ್ಪ ಮಕ್ಕಳು ಇಬ್ಬರು

ಅವರು ತೊಳ್ಕಂಡು ಊಟಾ ಮಾಡಿ
ಅವರು ಮಂಚಾಕೆ ಬಂದವರೆ

ಆಗ ಮಲ್ಲೇಗೌಡರು
ಅವರು ಇಳ್ಯಾವ ಮೆಲ್ಲುತಾ

ಅವರು ಕುಳವಾಡಿಯ ಕರಸವರೇ
ಕುಳವಾಡಿ ಓಡಿ ಬಂದು ಶರಣ ಸಲಾಮು ಕೊಟ್ಟಾ

ಹೇ ಒಳಗಿರುವ ಹೆಂಗಸೇ ಕುಳವಾಡಿಗೆ ಊಟಕಿಕ್ಕಿ
ಆಗಲೇ ಮಲ್ಲಮ್ಮ ಕುಳವಾಡಿಗೆ ಊಟಾಕೆ ಇಕ್ಕುತ್ತಾರೆ

ಊಟ ಮಾಡಿದವನಿಗೆ ಅವರು ಇಳ್ಯಾವ ಕೊಡುತಾರೆ
ಅವರಾಗ ಮಲ್ಲೇಗೌಡರು ಮಾರುದ್ದವಾಲೆಯ

ಅವರು ಬ್ಯಾಗನೇ ತೆಗೆದವರೇ
ಕರಕರನೇ ಅಕ್ಸರವಾ ಏನಂತ ಬರದವರೇ

ಕ್ವಾಟೆಯ ಸೂರರೇ ಭಾವರಸರೇ
ನಾ ಬುಧವಾರ ಸಾಯಂಕಾಣ ನಾ ಹೆಣ್ಣಿಗೆ ಬತ್ತೀನಿ

ನಾ ಮುಂದಕೆ ಹಾಕಿದ ಕಾಲ
ನೀವು ಹಿಂದಕೆ ಹಾಕಬ್ಯಾಡಿ

ನೀವು ಹಿಂದಕೆ ಹಾಕಿದ ಕಾಲ
ನಾ ಮುಂದಕೆ ಹಾಕದಿಲ್ಲ

ನನಗೊಂದು ಮಾತಿನಲ್ಲಿ
ನನಗೆ ಹೆಣ್ಣ ಕೊಡಬೇಕು

ಆಗಂತ ಬರೆದಾರು ಕೊಳ್ಳಪ್ಪ ಕುಳವಾಡಿ
ನೀ ಕ್ವಾಟೆಯೂರಿಗೆ ಹೋಗಿ

ನಿನ್ನ ಒಡೆಯರಸರಾಯರಿಗೆ
ಈ ವಾಲೆಯು ಕೊಡು ಹೋಗು

ಆಗ ಕುಳವಾಡಿ ವಾಲೆಯು ತಕ್ಕಂಡು
ಕ್ವಾಟೆಯೂರಿಗೆ ಅವನು

ಓಡೋಡಿ ಹೋಯಿತಾನೆ
ಚಿಕ್ಕ ಹೊನ್ನಿ ದೊಡ್ಡ ಹೊನ್ನಿ

ಹಟ್ಟೇಲಿ ಮುತ್ತಾ ಕೊಟ್ಟಾಡುತ್ತಾರೆ
ಕುಳವಾಡಿಯು ಮುಖಾ ಕಂಡು

ಅವರು ಒಳಕೆ ಓಡೋಡಿ ಹೋಯಿತಾರೆ
ಹೇ ತಾಯಿ ಹಡದವ್ವ

ಯಾವ ಊರೂವನೊ ಕಾಣೆ
ಒಬ್ಬ ಕುಳವಾಡಿ ಬರತಾನೆ

ಈ ಮಾತಾಡೊತ್ತಿಗೆ ಅವನು
ಬಾಗಿಲ ಹತ್ತರಕೆ ಹ್ವಾದನೂ

ಅವರಾಗ ಅರಸರಾಯರು ಅವರು
ಮಂಚಾದ ಮೇಲೆ ಕೂತವರೆ

ಇವನು ಬಗ್ಗಿ ಶರಣಂದೇ
ಇವನು ಭಾಗಿ ಶರಣಂದೇ

ಈ ವಾಲೆಯ ತೆಗೆದಾನು
ಅವರ ಮುಂದಾಕೆ ಮಡಗಿದಿನೊ

ಅವರಾಗ ಅರಸರಾಯರು
ವಾಲೆಯ ತಕ್ಕಂಡು ಒಳಗಿರುವ ಹೆಂಗಸೇ

ಕೆಳವಾಡಿಗೆ ಊಟ ಹಾಕೇ
ಆಗ ತಾಯಿ ಅವನಿಗೆ ಊಟಾಕೆ ಇಕ್ಕುತ್ತಾರೆ

ಊಟ ಮಾಡಿದವನಿಗೆ ಅವರು ಇಳ್ಯಾವ ಕೊಡುತಾರೆ
ಅವರಾಗ ಅರಸರಾಯರು ಹ್ವಾದಂತ ವಾಲೆಯ

ಅವರು ಓದಿ ನೋಡುತಾರೆ
ಹೇ ಒಳಗಿರುವ ಹೆಂಗಸೇ ನೀ ಈಚಿಗೇ ಬಾರೆಣೆ

ಹೇ ಮಳೆತ ಮಲ್ಲೇಗೌಡರು
ಬರದಿರುವ ವಾಲೆಯ ನೋಡು

ಅವರು ಬರೆದಿರುವ ವಾಲೆಯ
ನನಗೆ ಹೇಳಕೆ ಬಾಯೇ ಬರದು

ಈ ಬುಧವಾರ ಸಾಯಂಕಾಲ
ಅವರು ಹೆಣ್ಣಿಗೆ ಬತ್ತಾರಂತೆ

ಅವರು ಮುಂದಕೆ ಹಾಕಿದ ಕಾಲ
ನಾ ಹಿಂದಕೆ ಹಾಕಬ್ಯಾಡನಂತೆ

ನಾ ಒಂದೆ ಮಾತಿನಲ್ಲಿ
ನಾ ಹೆಣ್ಣಾ ಕೊಡಬೇಕಂತೆ

ಇದಕೇನು ಉತ್ತಾರವ
ನಾ ಹೇಳಿ ಕಳುಹಿಸಲಿ ಹೆಂಗಸೇ

ಅವರೊಂದು ಊರಿಗೆ ಅವರು
ಅಡ್ಡಿಯಾದ ಮನುಸರು

ನೀವೊಂದು ಊರಿಗೆ ನೀವು
ಅಡ್ಡಿಯಾದ ಮನುಸರು

ನಾವು ಹೆಣ್ಣು ಮಕ್ಕಳು ಹುಟ್ಟಿದರೆ
ನಾವು ಹೆರರಿಗೆ ಕೊಡಬೇಕು

ಇದೆಕೇಕೆಣೆ ನಾವು ಯಾರಿಗಾದರೇನೂ
ನಾವು ಹೆಣ್ಣಾ ಕೊಡುವಹೇಳಿ

ಅವರು ಸಕುಣ ಸಾಲಾವಳಿಯ
ಚೆಂದಾಗಿ ಕೇಳಿಸಿಕೊಂಡು

ಅವರಿಗೆ ಒಳ್ಳೆಯದು ಬಂದಾರೆ
ಅವರು ಬರಲ್ಹೇಳಿ

ಆಗ ಅರಸರಾಯರು ಮತ್ತೊಂದು ವಾಲೆಯ
ಏನಂತ ಬರೆದವರೆ

ನಿಮ್ಮ ಸಕುಣ ಸಾಲಾವಳಿಯ
ಚೆಂದೆಗೆ ಕೇಳಿಸಿಕಳ್ಳಿ

ನಿಮಗೆ ಒಳ್ಳೆಯದು ಬಂದರೆ
ನೀವು ಹೆಣ್ಣಿಗೆ ಬರಬಹುದು

ನೀವು ಮುಂದಕೆ ಹಾಕಿದಕಾಲ
ನಾ ಹಿಂದಕೆ ಹಾಕುವವನಲ್ಲಾ

ಆಗಂತ್ಹೇಳಿ ಅಕ್ಸರವಾ
ಅವರು ಕರಕರನೆ ಬರದವರೇ

ಕೊಳ್ಳಪ್ಪಾ ಕುಳವಾಡಿ
ನೀ ವಾಲೆತಕ್ಕಂಡು ಹೋಗೊ

ನಿನ್ನ ಒಡೆಯು ಮಲ್ಲೇಗೌಡರಿಗೆ
ಈ ವಾಲೆಯು ಕೊಡೂ

ಆಗ ಕುಳವಾಡಿ ವಾಲೆಯುತಕ್ಕಂಡು
ಮತ್ತೆ ಊರಿಗೆ ಓಡಿ ಬಂದನಲ್ಲಾ

ಅವರಾಗ ಮಲ್ಲೇಗೌಡರು
ಅವರು ಮಂಚಾದ ಮೇಲೆ ಕುಂತವರೇ

ಬಗ್ಗಿ ಶರಣೆಂದಾ ಬಾಗಿ ಶರಣೆಂದಾ
ಈ ವಾಲೆಯು ತಗೆದಾನೂ

ಅವರ ಮುಂದಾಕೆ ಮಡಗಿದಾನೊ
ಅವರಾಗ ಮಲ್ಲೇಗೌಡರು

ಅವರ ಹೆಂಡತಿಗೆ ಏನು ಹೇಳುತಾರೆ
ಹೇ ಒಳಗಿರುವ ಹೆಣ್ಣೇ

ಈ ಕುಳವಾಡಿಗೆ ಊಟ ಹಾಕೆ
ಆಕೆ ಮಲ್ಲಮ್ಮ ತಾಯಿ

ಅವನಿಗೆ ಊಟಾಕೆ ಇಕ್ಕುತಾರೆ
ಇಳ್ಯಾವ ಕೊಡುತಾರೆ

ಅವರಾಗ ಮಲ್ಲೇಗೌಡರು ಹ್ವಾದಂತ ವಾಲೆಯ
ಅವರು ಓದಿ ನೋಡುತಾರೆ

ಹಿಗ್ಗಿ ಹೆಗ್ಗೋಡಾಗಿ ಅವರು
ಹತ್ತು ಕಣ್ಣಾದರು

ಅವರು ಹದಿನಾರು ಭುಜವಾಗಿ
ಒಳಗಿರುವ ಎಲೆ ಹೆಂಗಸೇ

ಈಚೆಗೆ ಬಾರೆಣೆ ಭಾವ ಅರಸರಾಯರು
ಬರೆದಿರುವ ವಾಲೆ ನೋಡು

ಅವರು ಮುಂದಕೆ ಹಾಕಿದಕಾಲ
ಹಿಂದಕೆ ಹಾಕನರಲ್ಲ

ನಮ್ಮ ಸಕುಣ ಸಾಲಾವಳಿಯು
ಚೆಂದೆಗೆ ಕೇಳಿಸಿಕೊಂಡು

ನಮಗೆ ಒಳ್ಳೆಯದು ಬಂದಾರೆ
ನಾವು ಹೆಣ್ಣಿಗೆ ಹೋಗಬಹುದು

ಹೇ ಚಿನ್ನದ ಹರಿವಾಣ ನೀ
ಚೆಂದಾಗಿ ಬೆಳಗೇಣೆ

ಹೇ ಪೂಜೆಗೆ ಸಾಮಾನೂ
ಬೇಗನೇ ತುಂಬೇಣೆ

ನಾವು ದೋಸಿರ ತಾವಕೆ
ಸಾಸ್ತ್ರಕೆ ಹೋಗೋಣ

ಆಕೆ ಮಲ್ಲಮ್ಮ ತಾಯಿ
ಸಾಸ್ತ್ರದ ಸಾಮಾನಾ ತುಂಬುತಾರೆ

ಹಿಡಿಯ ತೆಂಗಿನಕಾಯಿ
ಚಿಪ್ಪು ಬಾಳೆ ಹಣ್ಣು

ಕೋಟೆಲೆ ಮಾನ ಅಡಿಕೆ
ಅಕಸ್ತುರೆ ಕಣುಕಪ್ಪು

ಒಂದೊಂದು ಹೂವಿನದಂಡೆ
ಅವರು ಗಂಧ ಚಂದ್ರನ್ನೆಲ್ಲೂ

ಬ್ಯಾಗ ತುಂಬಿಕೊಂಡು
ಅವರು ಗಂಡಾನು ಹೆಂಡ್ತಿಯು

ದೋಸಿರ ತಾವಕೆ ಸಾಸ್ತ್ರಕೆ ಹೋಯತವರೆ
ದೋಸಿ ಸುಬ್ಬಯ್ಯನವರು

ಅವರು ನೀರಾನೆ ಮೀದು
ಅವರು ಸಿವಪೂಜೆ ಮಾಡುತಾರೆ

ಇವರ ಮುಖವ ನೋಡಿ
ಸರಣ ಸಲಾಮು ಕೊಡುತಾರೆ

ಅವರಿಗೆ ಸಲಾಮು ಇವರೆಯೆ ಕೊಡುತಾರೆ
ಅವರಾಗ ಅಯ್ಯನವರು

ಮಂಚಾವ ಮದರ್‍ಯಾಸವರೆ
ಮಂಚಾದ ಮೇಲೆ ಹೋಗಿ

ಇವರು ಕೂತಿದ್ದಾರೆ
ಅವರಾಗಲಯ್ಯನವರು

ಏನಂತ ಕೇಳುತಾರೆ
ಇದುವೇನೆ ಮಲ್ಲೇಗೌಡರೇ

ನೀವು ಬಂದ ಕಾರ್ಯವೇನು
ಅಯ್ಯನವರೆ ಅಯ್ಯನವರೇ

ನಾವು ಬಂದ ಕಾರ್ಯವೊ
ನಾ ಬುಧವಾರ ಸಾಯಂಕಾಣಕೆ

ನಾ ಕ್ವಾಟೆಯೂರಿಗೆ
ನಾ ಹೆಣ್ಣಿಗೆ ಹೋಗಬೇಕು

ನಮ್ಮ ಸಕುಣ ಸಾಲಾವಳಿ
ನೀವು ಚೆಂದಾಗಿ ನೋಡಬೇಕು

ಅವರು ಪೂಜೆ ಸಾಮಾನ
ಬ್ಯಾಗನೇ ಕೊಡುತಾರೆ

ಆಗಲಯ್ಯನವರೂ ಪಂಚಾಂಗ
ಪೂಜೆ ಮಾಡುತಾರೆ

ಹೇ ಪಂಚಾಂಗ ಪೂಜೆಮಾಡಿ
ಮತ್ತೇನಂತ ಕೇಳುತಾರೆ

ಹೆಣ್ಣಿನ ಹೆಸರೇನು ಗಂಡಿನ ಹೆಸರೇನು
ಹೆಣ್ಣಿನ ಹೆಸರು ಹೊನ್ನಮ

ಗಂಡಿನ ಹೆಸರು ಬೊಮ್ಮಣ್ಣ
ಅವರಾಗಲಯ್ಯನವರು

ನೋಡಿ ಹೇಳುತಾರೆ
ಇದುವೇನೆ ಮಲ್ಲೇಗೌಡರೆ

ಗಣ ಕೂಟ ಹೊಂದಿಲ್ಲಾ
ಆ ಕೂಟ ಬ್ಯಾಡಸ್ವಾಮಿ

ನೀವು ತೆಗೆಯಿರಿ ಇನ್ನೊಂದು ಕೂಟ
ಮತ್ತೊಂದು ಕೂಟ ತೆಗೆದು ನೋಡುತಾರೆ

ಗಂಡು ಹುಲ್ಲೆಕಾರ
ಹೆಣ್ಣು ರಾಕ್ಸಸಿಯಾಗವಳೆ

ಇದುವೆನೆ ಮಲೆಗೌಡರೇ
ಗಣ ಕೂಟವೆ ಹೊಂದಿಲ್ಲ

ಆ ಕಟ್ಟು ಬ್ಯಾಡಿ ಸ್ವಾಮಿ
ನೀವು ತೆಗೆಯಿರಿ ಇನ್ನೊಂದು ಕಟ್ಟಾ

ಅವರಪ್ಪಾಜಿ ಕಾಲದ ಮುಪ್ಪಿನ ಪಂಚಾಂಗ
ಈ ಮುಪ್ಪಿನ ಪಂಚಾಂಗ

ಅವರು ತೆಗೆದು ನೋಡುತಾರೆ
ಈ ಹೆಣ್ಣಿಗೂ ಈ ಗಂಡಿಗೂ

ದೇವಗಣ ಹೊಂದಿದವೂ
ಸನಿಪೂಕೆ ನಗ್ಣ ಒದಗಿ ಬಂದಿದ್ದವೊ

ಈ ಹೊತ್ತಿಗೆಂಟು ದಿನ
ಬುಧವಾರಕೆ ಚಪ್ಪರಾ

ಬುಧುವಾರ ಚಪ್ಪರಾ
ಬೃಹಿಸ್ತವಾರ ಧಾರೆಯಲ್ಲಾ

ಬೃಹಿಸ್ತವಾರ ಏಳುಗಂಟೆಗೆ
ಧಾರೆ ಮುರ್ತಾವಾಗಬೇಕು

ಬುಧುವಾರ ನಾಕ ಗಂಟೆಗೆ
ಮನೆ ಬಿಡಬೇಕು

ಬೃಹಿಸ್ತವಾರ ನಾಕು ಗಂಟೆಗೆ
ಗಂಡು ಮನೆಬಿಡಬೇಕು

ಈ ನಗ್ಣ ಬಿಟ್ಟಾರೆ
ಇನ್ನು ಮೂರುವರುಸ ನಗ್ಣ ಇಲ್ಲಾ

ಬಂದಾ ನಗ್ಣವಾ ನೀವು ಹಿಂದಕೆ ಇಡಬೇಡಿ
ಈ ಬಂದಾ ನಗ್ಣಕೆ ನನಗೆ ಗುರುತಾ ಮಾಡಿಕೊಡಿ

ನಾ ಕ್ವಾಟೆಯ ಊರಿಗೆ
ನಾವು ಹೋಗಿ ಬತ್ತೀವಲ್ಲಾ

ಅವರು ಗುರುತು ಮಾಡಿಸಿಕೊಂಡು
ಸರಣಾ ಸಲಾಮು ಕೊಡುತಾರೆ

ಅಯ್ಯನವರೇ ಅಯ್ಯನವರೇ
ನಾವು ಹೋಗಿ ಬತ್ತೀವಿ ಸ್ವಾಮಿ

ಆಗಲಿ ಮಲ್ಲೇಗೌಡರೆ
ನೀವು ಹೋಗಿ ಬನ್ನಿ ಅಂದಾರು

ಅವರಾಗ ಮಲ್ಲೇಗೌಡರು
ತಮ್ಮರಮನೆಗೆ ಬಂದವರೆ

ತನ್ನ ಹೆಂಡಿತಿಗೆ ಏನಂತ ಹೇಳತವರೆ
ಬಾಯಿಗೆ ಬೇಕಾದ ಅಡಿಗೆಯನೇ ಮಾಡಣೆ

ನಾ ಜೊತೆಗಾರರ ಗೆಣೆಕಾರರ ಕೊಡ್ಕಂಡು
ಬತ್ತೀನಿ ಆಗ ಮಲ್ಲೇಗೌಡರು

ಅವರು ಬ್ಯಾಗನೇ ಹೋಯಿತಾರೆ
ಅವರು ಜೊತೇಗಾರ ಗೆಣೆಕಾರ

ಆಕೆ ಮಲ್ಲಮ್ಮ ತಾಯಿ
ಅವರು ಅಡಿಗೆಯ ಮಾಡಿದಾರು

ಬಂದಾ ನೆಂಟಾರಿಗೆಲ್ಲಾ
ಅವರು ಊಟಾಕೆ ಇಕ್ಕಿದರು

ಇವರು ಊಟ ಉಂಡವರಿಗೆ
ಇಳ್ಯಾವ ಕೊಡುತಾರೆ

ಹೊತ್ತಾಯಿತು ಅಂತ ಸಾಮಾನ ತುಂಬುತಾರೆ
ಅಟ್ಟಕೆ ಹತ್ತುತಾಳೆ ಎಲ್ಡು ಹೊಸ ಕುಕ್ಕೆಯ

ತಗದವರೆ ಆದರ ತುಂಬವೆ
ಸಾಮಾನಾ ತುಂಬುತವರೆ

ಹನ್ನೆಡು ತೆಂಗಿನಕಾಯಿ
ಹನ್ನೆಡು ಚಿಪ್ಪು ಹಣ್ಣು

ಹನ್ನೆಡು ಕಟ್ಟು ಎಲೆ
ಹನ್ನೆಡು ಮಾನ ಅಡಿಕೆ

ಒಂಭತ್ತು ಕೊಪ್ಪರಿಕಾಯಿ
ಹನ್ನೆಡು ತವುಟದುಂಡೆ

ಹನ್ನೆಡು ಮಾನ ಕಡ್ಲೆ ಹಾಕಿ
ಅಳದೆ ತುಂಬಿದಾರು

ಪಟ್ಟೆಯಾಣೆ ಸೀರೆ
ಕುಸಲಾಣೆ ರವಿಕೆ

ಅಕ್ಸತಿ ಕಣ ಕಪ್ಪು
ಹೊಂಗನೂಲು ಹೂವಿನದಂಡೆ

ಗಂಧ ಚಂದ್ರಾದಿಗಳನ್ನೆಲ್ಲಾ
ಆಕೆ ತುಂಬಿಕೊಂಡು

ಅಚ್ಚ ಮುತ್ತೈದೇರಾ
ಅವರಾ ಐದಾಳ ಕರ್ಕಂಡು

ಕ್ಯಾಟೆಯೂರಿಗೆ ಅವರು
ಹೆಣ್ಣಿಗೆ ಹೋಯಿತಸರೆ

ಇವರು ಹ್ವಾದ ದಿನ ಅವರು
ಅಲ್ಲೇನು ಮಾಡವರೆ

ಗೆಣಾಗಾರ ಜೊತೆಗಾರ ಅವರು
ಹೊಡೆದು ಬಂದವರೆ

ಹೇ ಬಾಯಿಗೆ ಬೇಕಾದ ಅಡಿಗೆಯ
ಅವರು ಮಾಡಿಸವರೇ

ಹೇ ಮನೆಯ ಸಾರಿಸವರೆ
ಜೋತಿಯ ಕತ್ತಿಸವರೆ

ಇವರು ಹೋಗ ದಾರಿಯ
ಅವರು ನೋಡುತ್ತವರಲ್ಲಾ

ಊರ ಬಾಗಿಲಿಗೆ ಹೋಗಿ ಇವರು
ಕುಳವಾಡಿ ಕಳುಸವರೆ

ಕುಳವಾಡಿ ಓಡಿಹೋಗಿ
ಸರಣ ಸಲಾಮು ಕೊಡುತಾನೆ

ಹೇ ಮಳೆತೆಯ ಊರವರು
ನೆಂಟಾರು ಬಂದಿದಿವಿ

ಆಗ ಅರಸರಾಯರು ಅವರು
ಹಿಗ್ಗಿ ಹೆಗ್ಗೋಡಾಗಿ

ಊರ ಬಾಗಿಲಿಗೆ ಅವರೆಲ್ಲಾ ಬಂದವರೆ
ಸರಣ ಸಲಾಮು ಅವರು ಏನಂತ

ಬಂದಿರಿ ಭಾವಯ್ಯ ನೀವು
ಬಂದಿರಾ ನೆಂಟರಗಳೆಲ್ಲಾ

ಬಂದಿವಿ ಭಾವಯ್ಯ
ನಾವು ಬಂದಿವಿ ನೆಂಟರು

ಹಿಗ್ಗಿ ಹೆಗ್ಗೋಡಾಗಿ ಒಬ್ಬರ
ಕೈ ಒಬ್ಬರು ಹಿಡಿದವರೆ

ಒಬ್ಬರ ಭುಜ ಒಬ್ಬರು ಹಿಡ್ಕಂಡು
ಹೋಗವರೆ ತಮ್ಮರಮನೆಗೆ

ಮುತ್ತಿನ ಹಸೆಯುಮಣೆ ಹಾಕಿ
ತುಪ್ಪಾದರಾತಿಯು ಬೆಳಗವರೆ

ಅವರು ಪನ್ನೀರಾನೆ ತಂದು
ಅವರ ಪಾದಾವ ತೊಳೆದಾರೂ

ಅವರೆಲ್ಲವಾ ಹೋಗಿ ಕೂತವರಲ್ಲಾ
ಹ್ವಾದ ನೆಂಟರಿಗೆಲ್ಲಾ ಅವರು

ಊಟಾಕೆ ಇಕ್ಕುತವರೆ
ಊಟವಾ ಉಂಡವರಿಗೆ

ಅವರು ಇಳ್ಯಾನ ಕೊಡುತಾರೆ
ಇಳ್ಯಾವ ಮೆಲ್ಲುತಾ

ಅವರು ಹೆಣ್ಣಿಗೆ ಮಾತು ಮುಗಿತವರೆ
ಆಗ ಮಲ್ಲೇಗೌಡರು ಏನಂತ ಹೇಳುತವರೆ

ಈ ಸಮಿಪಕೆ ನಗ್ಣ ಒದಗಿ ಬಂದಿದ್ದಾವೆ
ಈ ನಗ್ಣ ಬಿಟ್ಟಾರೆ

ಇನ್ನು ಮೂರು ವರುಸ ನಗ್ಣ ಇಲ್ಲಾ
ಇದೇ ನಗ್ಣಕೆ ಪತ್ರಿಕೆ ಮಾಡಿಕೊಟ್ಟಾರೆ

ನಗ್ಣ ಮಾಡೋಣ ನಾವು
ಆಗಲಿ ಭಾವಯ್ಯ ಪತ್ರಿಕೆಯ

ಮಾಡಿಸಿ ಕೊಡುತಿನಿ ಇದರೆ ನೀವು
ಭಾವಯ್ಯ ಬಾಸ್ಯರವ ಮಾಡಬ್ಯಾಡಿ

ಇದ್ದ ದೋಸರ ಕರೆದು
ಅವರು ಪತ್ರಿಕೆಯ ಮಾಡವರೆ

ತಂದಂತ ಇಳ್ಯಾವ ಸಭೆಗೆಲ್ಲಾ ತಿದ್ದವರೆ
ಈ ಹೆಣ್ಣ ಹಸೆಗೆ ಕೂರಿಸಿ

ಅವರು ಮಡಲಕ್ಕಿ ಹೊಯ್ದವರೆ
ನಾವು ಹೋಗಿಬತ್ತೀವಿ ಅಂತ

ಇವರು ಹೊಂಡತ್ತಾವರಲ್ಲಾ
ಆಗಲಿ ಭಾವಯ್ಯ ನೀವು ಹೋಗಿಬನ್ನಿ

ಹೆಣ್ಣಿನವರು ಗಂಡಿನವರು ಸಲಾಮು ಕೊಡುತಾರೆ
ಮಳತೆಯ ಊರಿಗೆ ಇವರಲ್ಲಾ ಬಂದವರೆ

ಆಗ ಮಲ್ಲೇಗೌಡರು ತಮ್ಮರಮನೆ ಬಂದಸರೆ
ಹ್ವಾದ ನೆಂಟರಿಗೆಲ್ಲಾ ಕೊಡ್ವ ಮರ್ಯಾದೆ ಕೊಡುತಾರೆ

ಕೊಟ್ಟಣ ಕುಟ್ಟಿಸುತ್ತಾರೆ ಅವರು
ಪಟ್ಟಣ ಸಾರಿಸುತಾರೆ

ಕಂಡವರಿಗೆ ಹೇಳುತಾರೆ
ಕಾಣದವರಿಗೆ ವಾಲೆಯ ಬರೆತಾರೆ

ಅವರಾಗ ಮಲ್ಲೇಗೌಡರು
ಮತ್ತೆಲ್ಲಿಗೆ ಹೋಗುತಾರೆ

ಕುಂಬಾರಗೇರಿಗೆ ಅವರು
ಓಡೋಡಿ ಹೋಗುತಾರೆ

ಕುಂಬಾರ ಗುಂಡಯ್ಯ ನೀವು
ಗುಂಬರಣಿ ತರಬೇಕು

ಹೇ ಬಳೆಗಾರರ ಬೀದಿಗೆ ಅವರು
ಬ್ಯಾಗನೇ ಹೋಗುತ್ತಾರೆ

ಹೇ ಬಳೆಗಾರ ಸೆಟ್ಟಾರೆ
ನೀವು ಬಳೆಯು ಮಲ್ಹಾರ ತರಬೇಕು

ಬೃಹಸ್ಪತ್ತವಾರ ಏಳುಗಂಟೆಗೆ
ಕ್ವಾಟೆಯೂರಿಗೆ ಬರಬೇಕು

ಮಡಿವಾಳ ಬೀದಿಗೆ ಅವರು
ಬ್ಯಾಗನೇ ಹೋಗುತಾರೆ

ಮಡಿವಾಳರ ಸೂಚಯ್ಯ
ನೀನು ನಡೆಮುಡಿಯ ತರಬೇಕು

ಬೆಸ್ತರ ಬೀದಿಗೆ ಬ್ಯಾಗನೆ
ಅವರು ಹೋಗವರೆ

ಅಂದಲ ಹೊರವರಿಗೆ ಐದಾಳು
ಬೊಯಿಂಗಳು ಬರಬೇಕು

ಬೊಯಿಂಗಳ ಕಾಯಂ ಮಾಡಿ
ಮತ್ತೆಲ್ಲಿಗೆ ಹೋಗುತಾರೆ

ಹೇ ಹೊಲೆಯಾರ ಬೀದಿಗೆ ಅವರು
ಬ್ಯಾಗನೇ ಹೋಗುತಾರೆ

ಹೊಲೆಯರ ಹೊನ್ನಯ್ಯ
ಹನ್ನೆಡು ಕೈವಾಡೆದವರು

ನೀವು ವಾಲಗಕೆ ಬರಬೇಕು
ಅಲ್ಲಿಂದ ಮಲ್ಲೀಗೌಡರು

ತನ್ನರಮನೆಗೆ ಬಂದವರೆ
ಸೆಂಟರಿಷ್ಟರೆಲ್ಲ

ಇವರು ಬಂದು ಸೇರಿದ್ದಾರೆ
ಬಂದ ಸೆಂಟರಿಗೆಲ್ಲ

ಅವರು ಅಡಿಗೆಯ ಮಾಡಿಸವ್ರೇ
ಊಟಾವ ಕೊಡುವವರಿಗೆ

ಅವರೆ ಊಟವ ಕೊಡುತಾರೆ
ಇಳ್ಯಾವ ಕೊಡುವವರಿಗೆ

ಅವರು ಇಳ್ಯಾವ ಕೊಟ್ಟವ್ರೇ
ಹೊತ್ತು ಆಯಿತುಂತ

ಗಂಡಿಗೆ ಸಾಸ್ತ್ರ ಮಾಡುವರೇ
ಹನ್ನೆಡು ಕೈವಾಡೆದವರು

ಅವರು ವಾಲಗಕೆ ಬಂದವ್ರೇ
ಮಡಿವಾಳರ ಮಾಚಯ್ಯ

ಅವರು ನಡೆಮುಡಿಯು ತಂದವ್ರೇ
ಕುಂಬಾರದ ಗುಂಡಯ್ಯ

ಅವರು ಗುಂಬರಣೆ ತಂದವ್ರೇ
ಅಗಸಾಲೆ ಪುಟ್ಟಪ್ಪ ಅವರು ಬಂಗಾರ ತಂದವ್ರೇ

ಹೊತ್ತಾಯಿತೂಂತ ಅವರು
ಮದುವೆ ಹೊಂಡಿಸವ್ರೆ

ಅವರು ಕ್ವಾಟೆಯಊರಿಗೆ ಹೋಗುತಾರೆ
ಊರು ಬಾಗಿಲೀಗೆ

ನೋಡು ಮದುವೆ ಹೋಗಿ ನಿಂತೈತೆ
ಅತ್ತಲಿಂದವರು

ಹೆಣ್ಣಿನವರು ಬಂದವ್ರೇ
ಹೆಣ್ಣಿನವರು ಗಂಡಿನವರು

ಸರಣು ಸಲಾಮು ಕೊಡುತವ್ರೇ
ಬಂದೀರ ಭಾವಯ್ಯ

ನೀವು ಬಂದೀರ ನೆಂಟರೇ
ಬಂದಿವಿ ಭಾವಯ್ಯ

ನಾವು ಬಂದಿವಿ ನೆಂಟರೆ
ಹಿಗ್ಗಿ ಹೆಗ್ಗಳಿಗಾಗಿ ಅವರು

ಮದುವೆ ಕರದು ಹೋಗುತಾರೆ
ಮದುವೆ ಕರ್ಕಂಡು

ಮನೆಯ ತುಂಬಿಸಿಕಂಡು
ಬಂದ ನೆಂಟರಿಗೆಲ್ಲ

ಅವರು ಊಟವ ಕೊಡುತವ್ರೇ
ಊಟವ ಉಂಡವರಿಗೆ

ಅವರು ಇಳ್ಯಾವ ಕೊಡುತವ್ರೆ
ಹೊತ್ತು ಆಯುತಂತ

ಗಂಡು ದಿಬ್ಬಣ ಹೊಂಡುತೈತೆ
ಬಳೆಗಾರ ಸೆಟ್ಟರು

ಹೊತ್ತಾಯಿತೂಂತ ಅವರು
ಮದುವೆ ಹೊಂಡಿಸಿವ್ರೆ

ಮದುವೆಯು ಕರಕೊಂಡು ಅವರು
ಕ್ಯಾಟೆಯೂರಿಗೆ ಹೋಗುತಾರೆ

ಊರು ಬಾಗಿಲೀಗೆ ನೋಡು
ಮದುವೆ ಹೋಗಿ ನಿಂತೈತೆ

ಅತ್ತಲಿಂದನವರು
ಹೆಣ್ಣಿನವರು ಬಂದವ್ರೆ

ಹೆಣ್ಣಿನವರು ಗಂಡಿನವರು
ಸರಣು ಸಲಾಮು ಕೊಡುತವ್ರೆ

ಬಂದೀರ ಭಾವಯ್ಯ ನೀವು
ಬಂದೀರ ನೆಂಟರೆ

ಬಂದಿವಿ ಭಾವಯ್ಯ ನಾವು
ಬಂದಿವಿ ನೆಂಟರೆ

ಹಿಗ್ಗಿ ಹೆಗ್ಗಳಿಗಾಗಿ ಅವರು
ಮದುವೆ ಕರದು ಹೋಗುತ್ತಾರೆ

ಮನೆಯು ತುಂಬಿಸಿಕೊಂಡು
ಬಂದ ನೆಂಟರಿಗೆಲ್ಲ

ಅವರು ಊಟವ ಕೊಡುತವ್ರೆ
ಊಟಾವ ಉಂಡವರಿಗೆ

ಅವರು ಇಳ್ಯಾವ ಕೊಡುತವ್ರೆ
ಹೊತ್ತು ಆಯಿತೂಂತ

ಗಂಡು ಡಿಬ್ಬಣ ಹೊಂಡುತೈತೆ
ಬಳಗಾರ ಸೆಟ್ಟರು

ಬಳೆ ಮಲ್ಹಾರ ತಂದವ್ರೆ
ಹೇ ಬಳೆಯ ಸಾಸ್ತ್ರವ

ಬ್ಯಾಗನೇ ತೀರಿಸವ್ರೆ
ಇತ್ತಲಿಂದ ನೋಡು

ಗೌಡಾರ್ತಿ ಹೋಗುತಾವೆ
ಅತ್ತಲಿಂದವರು

ಮೂಖದೂಪ ತರುತವ್ರೆ
ಉಂಡರುಡಿಗೆ ತರುತವ್ರೆ

ತಂದ ಬಂಗಾರವ ಅವರು
ಸಭೆಗೆಲ್ಲ ತೋರಿಸವ್ರೆ

ಆಜೆ ಹೊನ್ನಮ್ಮಾಗೆ ಅವರು
ಬಂಗಾರ ಇಕ್ಕುತಾರೆ

ಸೀರೆಯಾ ತರಿಸವ್ರೆ
ಸೀರೆ ಬಂದ ಹಣತೂಕ

ಈ ಸೀರೆ ಹೊನ್ನಮ್ಮಾಗೆ ಉಡಿಸವ್ರೆ
ಓಲೆಯು ತರಿಸವ್ರೆ

ಓಲೆಯೊಂದ ಹಣ ತೂಕ
ಈ ಓಲೆಯ ಸರವೀಗೆ ವರನಂದಿ

ವರನಂದೀ ನಿಂದವರೇ
ಹೊನ್ನಮ್ಮಾಗೆ ಧರಿಸವ್ರೆ

ಪಟ್ಟೆಯಾ ತರಿಸವ್ರೆ
ಪಟ್ಟೆಯೊಂದ ಹಣ ತೂಕ

ಈ ಪಟ್ಟೆ ಸರವೀಗೆ ಪಕ್ಷಿಯೆರಡೂ
ಪಕ್ಷಿಯೆರಡೂ ನಿಂದವೆ

ಈ ಪಟ್ಟೆ ಹೊನ್ನಮ್ಮಗೆ ಧರಿಸವ್ರೆ
ಬಾವಲಿಯ ತರಿಸವ್ರೆ

ಬಾವಲೊಂದ್ಹಣ ಈ ಬಾವಲಿ
ಮೇಲೆ ನವಿಲೆರಡೂ

ಬಾವಲಿಯ ಮೇಲೆ ನವಿಲೆರಡು ನಿಂತಾವೆ
ಈ ಬಾವಲಿ ಹೊನ್ನಮ್ಮಗೆ ಧರಿಸವ್ರೆ

ತಂದೆ ಬಂಗಾರನ ಅವರು
ಸಭೆಗೆಲ್ಲ ತೋರಿಸವ್ರೆ

ತಾಯಿ ಹೊನ್ನಮ್ಮಾಗೆ ಅವರು
ಬಂಗಾರ ಧರಿಸಾರೂ

ಹೊತ್ತುನಾಯತೂಂತ ಅವರು
ಧಾರೆಗೆ ನಿಲ್ಲಿಸುತಾರೆ

ಗಂಡ ಕರದುಕೊಂಡು
ಹನ್ನೆಡಾರತಿಯ ಬೆಳಗವ್ರೆ

ಹನ್ನೆಡಾರತಿಯ ಬೆಳಗಿ ಅವರು
ಧಾರೆಗೆ ನಿಲ್ಲಸವ್ರೆ

ಈ ಹೆಣ್ಣಿಗೂ ಗಂಡಿಗೂ
ಧಾರೆ ಮೂರ್ತವ ನಡಿತೈತೆ

ಕಲ್ಯಾಣ ಸ್ವಾಮಿ ಕಲ್ಯಾಣ
ಕಲ್ಯಾಣ ಮದುವೆ ಕಲ್ಯಾಣ

ಅತ್ತಿಮರಕಾಗಿ ಬಂದವ್ರೆ ಐನೋರು
ಮುತ್ತಿನ ಜನಿವಾರ ಹೆಗಲಲ್ಲಿ

ಕಲ್ಲಾಣ ಸ್ವಾಮಿ ಕಲ್ಲಾಣ
ಕಲ್ಲಾಣ ಮದುವೆ ಕಲ್ಲಾಣ

ಮುತ್ತಿನ ಜನಿವಾರ ಹೆಗಲಲ್ಲಿಟ್ಟುಗಂಡು
ಉಗರಲ್ಲಿ ನೂಲ ಎಳೆಯುತಾ–ಐನೋರು
ನಿತ್ರಿಗೆ ಕೈ ಧಾರೆ ಎರೆದಾರೂ

ಆಲದ ಮರಕಾಗಿ ಬಂದಾರು ಐನೋರು
ಹಾಲಿನ ಜನಿವಾರ ಹೆಗಲಲ್ಲಿಟ್ಟುಗಂಡು
ಜೆಟ್ಟುಲ್ಲಿ ನೂಲ ಎಳೆಯುತಾ–ಐನೋರು
ಬಾಲೆಗೆ ಕೈಧಾರೆ ಎರೆದಾರು

ಧಾರೆ ಎರಿವಾಗ ಧಾರೆಕೊರಳೂ ಜೋಕೆ
ಏಳಾಗ ಜೋಕೆ ಮಡಲಕ್ಕಿ–ಮುತ್ತಿನಸರ
ದಂಡೆ ಜೋಕೆ ಧಾರೆ ಎರೆಯಾಗ

ಕಲ್ಲಾಣ ಸ್ವಾಮಿ ಕಲ್ಲಾಣ
ಕಲ್ಲಾಣ ಮದುವೆ ಕಲ್ಲಾಣ

ಮುಂದಿನ ಪಾದವ ಹಿಂದಕ್ಕೂರಿಕೊಂಡು
ಮಂದಾನದ ಗಿರಿಯ ಮರಗವ್ರೆ–ಬೊಮ್ಮಣ
ದಂಡೆ ಧರಿಸಾರು ಕೊರಳೀಗೆ

ಕಲ್ಲಾಣ ಸ್ವಾಮಿ ಕಲ್ಲಾಣ
ಕಲ್ಲಾಣ ಮದುವೆ ಕಲ್ಲಾಣ

ಅತ್ತೆಮಾವ ಕೇಳಿ ಮತ್ತೆ ಪತಿಗಳ ಕೇಳಿ
ಬಂದ ಸಭೆಗಳಿರ ನೀವು ಕೇಳಿ–ಸಭೆಗಳಿರ
ದಂಡೆ ಧರಿಸೇನು ಕೊರಳೀಗೆ

ಕಲ್ಲಾಣ ಸ್ವಾಮಿ ಕಲ್ಲಾಣ
ಕಲ್ಲಾಣ ಮದುವೆ ಕಲ್ಲಾಣ

ಈಚೆ ಪಾದನ ಆಚೆಗೂರಿಕೊಂಡು
ಸಾಸನದ ಗಿರಿಯು ವರಿಗ್ಯಾರು–ಬೊಮ್ಮಣ್ಣ
ಲಿಂಗ ಧರಿಸಾರು ಕೊರಳೀಗೆ

ಅತ್ತೆಮಾವ ಕೇಳಿ ಮತ್ತೆ ಪತಿಗಳ ಕೇಳಿ
ಬಂದ ಸಭೆಗಳಿರ ನೀವು ಕೇಳಿ–ಸಭೆಗಳಿರ
ಲಿಂಗ ಧರಿಸೇನು ಕೊರಳೀಗೆ

ಕಲ್ಲಾಣ ಸ್ವಾಮಿ ಕಲ್ಲಾಣ
ಕಲ್ಲಾಣ ಮದುವೆ ಕಲ್ಲಾಣ

ಚಪ್ಪರದಟ್ಟೇಲಿ ಏಟೋತ್ತು ನಿಲ್ಲೋದು
ಅವರು ಬೆವತು ಮುಖ ಬೆವತೂ–ಮುತ್ತೈದೇರ
ಗೊಂಡೇದ ತುದಿ ಬೆವರೆದ್ದ–ಮುತ್ತೈದೆಗೆ
ಮುತ್ತಿನ ಸೆರಗ ಮರಗಳಿಯವರಿಗೆ

ಕಲ್ಲಾಣ ಸ್ವಾಮಿ ಕಲ್ಲಾಣ
ಕಲ್ಲಾಣ ಮದುವೆ ಕಲ್ಲಾಣ

ಧಾರೆಯೆರೆಯುವಾಗ ಧಾರೆಕೊರಳು ಜೋಕೆ
ಏಳಾಗ ಜೋಕೆ ಮಡಲಕ್ಕಿ–ಮುತ್ತಿನಾಸರ
ಧಣಿ ಜೋಕೆ ಧಾರೆಯೆರವಾಗ

ಕಲ್ಲಾಣ ಸ್ವಾಮಿ ಕಲ್ಲಾಣ
ಕಲ್ಲಾಣ ಮದುವೆ ಕಲ್ಲಾಣ

ಈ ಧಾರೆ ಮೂರ್ತವ ಗಂಡನು ಹೆಣ್ಣನು
ಕಂಭಾವ ಬಳಸವ್ರೆ
ಮುತ್ತಿನಾರತಿಯು ಬೆಳಗಿಸವ್ರೆ

ಕಡ ಕಡಿನ ಕೈಯನ್ವಳ
ಹಟ್ಟಿಯಂಕಕ ಸಾರಸಿ
ಕುಲಕು ಚಿತ್ತಾರದ ರಂಗೋಲೆ
ತುಂಬೀಸಿ ಕೃಷ್ಣಸ್ರೀಯುಪರು ಬತ್ತಾರೆಂದೂ
ಕಟ್ಟ ತೋರಣದ ಗುಡಿಗಳಾ
ಜಯ ಮಂಗಳಾ ನಿತ್ಯ ಸುಭ ಮಂಗಳಾ

ಸರಣೆನ್ನು ಸಿವನೀಗೆ ಸರಣೆನ್ನು ಗುರುವಿಗೆ
ಸರಣೇಳು ಲೋಕದೊಡೆಯನಿಗೆ
ಸರಣು ಮೂರುಲೋಕದೊಡೆಯನಿಗೆ ತಿಮ್ಮಪ್ಪನಿಗೆ
ನೂರೊಂದಾರತಿಯ ತಂದು ರಥವೆತ್ತಿರೊ
ಜಯ ಮಂಗಳಾ ನಿತ್ಯ ಸುಭ ಮಂಗಳಾ

ಹಾಲಗರಗಸೊಪ್ಪು ಹಾಲೋಡಗೊಡಿ
ಓರಲಿ ಬೆಳೆಯ ಕೊಡ್ದು ಬ್ಬು-ಭಾಮಾಕೆ
ಅವರ ತಂಗಿಯೊಂದಾರತಿ ತಂದು ಬೆಳಗಿದಾರೂ
ಜಯ ಮಂಗಳಾ ನಿತ್ಯ ಸುಭ ಮಂಗಳಾ

ತುಪ್ಪಗರಗಾಲ ಸೊಪ್ಪ ತುಪ್ಪದಿಂದೊಡಗೊಡಿ
ಒಪ್ಪಗಿಂದ ಬೆಳೆಯು ಕೊಡ್ದು ಬ್ಬು-ಭಾಮಾಕೆ
ನಿಮ್ಮಕ್ಕೊಂದಾರತಿ ತಂದು ಬೆಳಗಿದಾರೂ
ಜಯ ಮಂಗಳಾ ನಿತ್ಯ ಸುಭಮಂಗಳಾ

ಕೆಂಪು ಚೂರಿಯು ಪನ್ನ ಕೆಂಪೆಲವ ಜಲತಾರ
ಕೆಂಪುರಾಯರ ಮಗ ಮಣೆಮೇಲೋ-ನಿಂದವರೆ
ಕೆಂಪೊಂದಾರತಿ ತಂದು ರಥವೆತ್ತಿರೇ
ಜಯ ಮಂಗಳಾ ನಿತ್ಯ ಸುಭ ಮಂಗಳಾ

ಕರಿಯು ಚೂರಿಯು ತನ್ನ
ಕರಿಯಃರಾಯರ ಮಗಳು ಮಣೆ ಮೇಲೆ! ನಿಂದಾಳು
ಕರೆದೊಂದಾರತಿ ತಂದು ರಥವೆತ್ತಿರೋ
ಜಯ ಮಂಗಳಾ ನಿತ್ಯ ಸುಭ ಮಂಗಳಾ

ಆಲದೆಲೆಯ ಮೇಲೆ ಲೋಲಾಗಿ ಬರುವರು
ಮೇಲಾದ ಕೃಷ್ಣನಿಗೆ ಪತಿನಾಗಬೇಕೆಂದು
ನಾನೊಂದು ಆರತಿ ಬೆಳಗ್ಹೋದೆನೊ
ಈ ಗಂಡಿಗೆ ಹೆಣ್ಣಗೂ
ಮುತ್ತಿನಾರತಿ ಬೆಳಗ್ಯಾರೊ
ಅವರೊಳಗೆ ಕರೆದುಕೊಂಡ್ಹೋಗಿ

ಮಡಲಕ್ಕಿ ಹುಯ್ದಾರೂ
ಅಕ್ಕಿಯ ಮುಡಿದಾರು

ಮಡಲಕ್ಕಿ ಸಡಿಲೀಸಿ
ಈ ಹೆಣ್ಣಿಗೂ ಗಂಡಿಗೂ

ಅವರು ಊಟಕೆ ಕುಳಿತವ್ರೆ
ಬಂದಾವರಿಗೆಲ್ಲ

ಅವರು ಊಟವ ಕೊಡುತವ್ರೆ
ಊಟವನುಂಡವರಿಗೆ

ಅವರು ಇಳ್ಯಾವ ಕೊಡುತವ್ರೆ
ಅವರಾಗ ಮಲ್ಲೇಗೌಡ್ರು

ಏನಂತ ಹೇಳುತವ್ರೆ
ಭಾವಯ್ಯ ಭಾವಯ್ಯ

ನಿಮಗೆ ಹೊತ್ತಮಾಡಲು ಬೇಡ
ನಮಗೆ ಹೊತ್ತಮಾಡಲು ಬೇಡ

ತಟ್ಟನೆ ಮದುವೆ ಹೊಂಡಿಸಿ
ಆಗಲಿ ಭಾವಯ್ಯ

ನೀವು ಬೇಜಾರ ಮಾಡಬ್ಯಾಡಿ
ನಾನ್ಹೊತ್ತಿಗೆ ಸರಿಯಾಗಿ

ಮದುವೆಯ ಹೊಂಡಿಸೇನು
ನಮ್ಮ ಶಾಸ್ತ್ರವೆಲ್ಲ

ಬ್ಯಾಗನೇ ತೀರಿಸೇನು
ಅವರು ಹಂಗಂತವ್ಹೇಳಿ

ಹೊತ್ತಿಗೆ ಸರಿಯಾಗಿ ಮದುವೇನ ಹೊಂಡಿಸೋರು
ಇದಕೆ ಬೇಜಾರವ ಮಾಡಬ್ಯಾಡಿ

ಅವರ ಸಾಸ್ತ್ರವೆಲ್ಲಾ ಅವರು
ಬ್ಯಾಗನೇ ತೀರಿಸೀ

ಊಟವಾ ಕೊಡವರಿಗೆ ಅವರು
ಊಟವಾ ಕೊಡುತಾರೆ

ಇಳ್ಯಾವ ಕೊಡವರಿಗೆ ಅವರು
ಇಳ್ಯಾವ ಕೊಡುತಾರೆ

ಹೊತ್ತಾಯಿತೂಂತ ಅವರು
ಮದುವೆಯ ಹೊಂಡಿಸುತಾರೆ

ಹೇ ಮದುವೆಯ ಕರ್ಕಂಡು
ಅವರು ಊರಬಾಗಿಲಿಗೆ ಬತ್ತಾರೆ

ಹೇ ಹೆಣ್ಣಿನವರು ಗಂಡಿನವರು
ಕೈ ಕೊಟ್ಟನಾಡುತಾರೆ

ಅವರಾಗ ಅರಸರಾಯರು
ಏನಂತ ಕೇಳುತಾರೆ

ಭಾವಯ್ಯ ಭಾವಯ್ಯ
ಮದುವೆಯ ಕರೆಯಾಕೆ

ಭಾವ ನೀವೆಂದು ಬತ್ತೀರಿ
ನಾವೆಂದು ಬರೋಣ

ಆಗ ಮಲ್ಲೇಗೌಡರು ಏನಂತ ಹೇಳುತಾರೆ
ಹೇ ಭಾವಯ್ಯ ಭಾವಯ್ಯ

ನಾ ಏನು ಹೇಳಲೂ ಭಾವ
ಹೇಳುವುದಕೆ ಭಾವ ನನಗೆ

ಬಾಯಿಯು ಬರೊದಿಲ್ಲಾ ನಾವು
ಮಾಡಿದ್ದಲ್ಲಾ ಭಾವ

ನಾವು ಮಾಡಿದ್ದಲ್ಲಾ
ನಮ್ಮ ಹಿರಿಯಾರು ಮಾಡಿದ್ದ

ನಾನು ಏನ ಹೇಳಲ್ಲೊ ಭಾವ
ನಮ್ಮ ಮನೆತನದಲ್ಲಿ ಕರೆಯದ

ಕಳಸದೇ ಇಲ್ಲಾ ಭಾವ
ಹಂಗಂದ ಮಾತಿಗೆ

ಆಗ ಅರಸರಾಯರು ಪಟ್ಟೆಯವಸ್ತ್ರವ
ಮುಖ ತುಂಬಾ ಮುಚ್ಚಿಕೊಂಡು

ಹೇ ವಕ್ಕಳಾನ ದುಃಖ ಮಾಡುತಸರೆ
ಒಂದೇ ಮಾತಿನಲ್ಲಿ ನಾ ಹೇಣ್ಣುಕೊಟ್ಟು ಕೆಟ್ಟೆನಲ್ಲಾ

ಹೇ ಪಾಪಿ ಅರಮನೆಗೆ ನಾನು ಹೆಣ್ಣಕೊಡಬಹುದಾ
ಮಗಳ ಮುದ್ದಾಡುತಾರೆ

ಮುತ್ತಾನೆ ಕೊಡುತಾರೆ
ಮಗಳ ಕೊಳ್ಳಕಟ್ಟಿಕೊಂಡು

ವಕ್ಕಳಾ ದುಃಖ ಮಾಡುತಾರೆ
ಕಂದಾ ಒಂದೇ ಮಾತನಲಿ

ನಿನ್ನ ಕೊಟ್ಟೆ ಕೆಟ್ಟವಲ್ಲಾ
ಹೇ ತಾಯಿ ತಂದೆಯಿಲ್ಲಾ

ತಬ್ಬಲಿಯಾದ ಮಗಳೇ
ಹೇ ತಿರುಗಾದ ಮುರುಗಾದ

ನಾ ಕಣ್ಣಲ್ಲಿ ನೋಡನಿಲ್ಲವಲ್ಲಾ
ನನ್ನ ಕಾರಪಿರುತಾ

ನನ್ನ ಕಣ್ಣಾರೆ ಕಾಣಲಿಲವಲ್ಲಾ
ನಿನ್ನ ಹಣೆಯಬರದಲಿ

ಬರದವಳ ದಂಡೆ ಹರೀಲಿಂತ
ಹೇ ಪಾಪಿ ನನ್ನ ಹೊಟ್ಟೇಲಿ

ನೀ ಹುಟ್ಟಬಹುದೇ ಹೆಣ್ಣು ಸಣ್ಣದಲ್ಲ
ಭಂಗ ಹೆಂಗ ಮಾಡಿಯೆ

ಹೇ ಹೊಡದಾರೆ ಬಯ್ದಾರೆ
ದೂರ ಯಾರಿಗೆ ಹೇಳತಿಯೆ

ನಾ ಒಂದ ಊರಿಗೆ ಅಡ್ಡಿಯಾದ
ಮನಸಾನು ಕಂದಾ

ಹೇ ನನಗೆ ಒಂದ ಕೆಟ್ಟಹೆಸರಾ
ತತ್ತಿಯಾ ಮಗಳೇ

ಅವರು ಕರೆಯನಿಲ್ಲ ಇವರು ಕಳಸ್ಲೂ ಇಲ್ಲಾ
ಹೇ ಕದ್ದು ಬಂದ್ಯೆಮಗಳೇ

ಕಾಣದೆ ಬಂದ್ಯೆ ಹೇಳಾದೆ ಬಂದ್ಯೆ
ಕೇಳಾದೆ ಬಂದ್ಯೆ

ದಾರಿ ನೋಡುತಾ ನಮ್ಮ ಗ್ಯಾನವ ಮಾಡುತಾ
ಗ್ಯಾನವಾ ಮಾಡುತಾ ನೀ ಅತ್ತೆಯು ಕರೆದಯಾ

ಹೇ ಬಂಗಾವ ಮಾಡದೆ
ನೀ ಚಾಲುಮಾಡಲು ಬ್ಯಾಡ

ಚಾಲನೆ ಮಾಡಿದರೆ ಹೊಡೆದಾರು ಬಯ್ದಾರು
ಹೇ ನಾ ಇರುಮುಟ್ಟ ಏನಿಲ್ಲದಿದ್ದರೂ

ನಾ ಕೊಟ್ಟು ಕಳುಸೇನು ಕಂದಾ
ತಂದೆ ಹೇಳುವ ಮಾತಾ

ಕಂದಾ ತನ್ನ ಕಿವಿಯಿಂದ ಕೇಳಿದಳು
ವಕ್ಕಳ .ದುಃಖಮಾಡುತಾ

ಅಳಿಯು ಕೊಳ್ಳ ಕಟ್ಟಿಕೊಂಡು
ವಕ್ಕಳ ದುಃಖ ಮಾಡುತಾರೆ

ನಾನೊಂದೆ ಮಾತಿನಲ್ಲಿ ಹೆಣ್ಣು
ಕೊಟ್ಟು ಕೆಟ್ಟೆನಲ್ಲಾ

ಹೇ ಹೆಣ್ಣು ಸಣ್ಣದಲ್ಲ
ಭಂಗ ಗೊತ್ತಿಲ್ಲಾ

ಹೊಡದೇರಿ ಬಯ್ದೇರಿ ಅವಳ
ತಾಯಿತಂದೆಯಿಲ್ಲ

ಅವಳು ತಬ್ಬಲಿಯಾದಳಲ್ಲಾ
ನೀವೆ ತಾಯಿತಂದೆ

ನೀವು ಚೆಂದಾಗಿ ಸಾಕಿರಪ್ಪಾ
ಮಾವ ಹೇಳುವ ಮಾತ

ತನ್ನ ಕಿವಿಯಿಂದ ಕೇಳುತಾ
ವಕ್ಕಳಾ ದುಃಖವಾ ಮಾಡುತಾವರಲ್ಲಾ

ಗೆಣೆಕಾರರ ಮಾತಕೇಳಿ ನಾ
ಮದುವೆಯಾಗಬಹುದಾ

ಹೇ ಇವರವ್ವನ ಗೋಳಾ
ನನ್ನ ಕಣ್ಣಿಂದ ನೋಡನಾರಿ

ಹೇ ಗೆಣೆಕಾರರ ಮಾತಿನಿಂದ
ನಾನು ಮದುವೆಯಾಗಬಹುದೆ

ಹೇ ಮಾವಯ್ಯ ಹೇ ಮಾವಯ್ಯ
ನಾನು ನಿಮಿಗಿಂತ ಹೆಚ್ಚಾಗಿ

ಸಾಕಿಸಲುವೆನು ನಾನು ವಕ್ಕಳಾನೆ ದುಃಖ
ನೀವು ಮಾಡಬ್ಯಾಡಿ ಮಾವ

ತಾಯಿತಂದೆ ಹೇಳಿದಂಗೆ ಕೇಳಬೇಕ ನಾನು
ತಾಯಿತಂದೆ ಮಾತ ಮೀರಿ ನಡೆದರೆ

ನನ್ನ ಸರಿಸಮದನರು
ನನ್ನ ಆಡ್ಕಿಂಡು ನಗುತಾರೆ

ಹೇ ತಕ್ಕಹೆಣ್ಣೆ ಸಿಕ್ಕತ್ತಿಲ್ಲಾ
ನನ್ನ ಸರಿಸಮದಸರೆಲ್ಲಾ

ತಾಯಿ ತಂದೆ ಗುರುತಾ ಇಲ್ಲ
ನನ್ನ ಸರಿಸಮದನರು ನಗುತಾರೆ

ಏನು ಮಾಡಲಿ ಮಾನ ನೀವು ದುಃಖಮಾಡಬ್ಯಾಡಿ
ಅವನ ಗೋಳಾ ನೋಡನಾರದೆ

ಅಲ್ಲಿದ್ದ ಸಭೆಯವರೆಲ್ಲಾ
ಕೊಟ್ಟಮೇಲೆ ಎಟೂ ಸಂಕಟಮಾಡದೂ

ಸಂಕಟಮಾಡಿದರೆ ತೀರನಾರದೊ ನೀವು
ಸಂತೋಷದಿಂದ ನೀವು ಮದುವೆ ಕಳಿಸಿ

ಸುಖವಾಗಿ ಅವರು ಬದುಕಾಲಿ
ಅಲ್ಲಿಯೇ ನೆಂಟಾರು ಹಂಗಂತವ್ಹೇಳಿ

ಸಭೆಯೆಲ್ಲಾ ಏಳುತಾರೆ
ಹೇ ಮಗಳ ಮುಖಾವ ಅವರು ನೋಡುತ್ತಾರಲ್ಲಾ

ಹೇ ಕಂಕಿನಂತ ಮುಖನೋಡಿ
ಕಂದಿಕುಂದವೆ

ಕಂದಿಕುಂದವೆ ನೋಡು
ಹೊನ್ನಮ್ಮಾನ ಮುಖ

ಹೇ ತಾಯಿ ತಂದೆಯೆಲ್ಲಾ
ಕೊಳ್ಳ ಕಟ್ಟಕೊಂಡು

ಮಕ್ಕಳಾ ಸಂಕಟ ಮಾಡುತಾರೆ
ಅವಳಾರಣ್ಣದೀರು

ಅವಳಾರ ಅತ್ತಿಗೆಯರು ಅವಳ ತಂಗಿ
ಚಿಕ್ಕಹೊನ್ನಿ ಎಲ್ಲಾ

ಕೊಳ್ಳ ಕಟ್ಟಿ ಸಂಕಟವ ಮಾಡುತಾರ
ನಿನ್ನ ಕಂಕಿನಂತ ಮುಖ

ಕಂದಿಕುಂದಿದಲ್ಲಾ ಪತ್ತಿ ಬಾಡಿದವೂ
ನಿನ್ನ ನಿಜಮುಖ ತಂಗಮ್ಮಾ

ನಾವು ಒಂದೇ ಮಾತಿನಲ್ಲಿ
ನಿನ್ನ ಕೊಟ್ಟು ಕೆಟ್ಟೆವಲ್ಲಾ

ಒಂದೇ ಮಾತಲ್ಲಿ ನಿನ್ನ ಕೊಡಬಹುದಾ
ತಂಗಮ್ಮಾ ದಾರಿ ನೋಡಬ್ಯಾಡ

ನಮ್ಮ ಗ್ಯಾನನ ಮಾಡಬ್ಯಾಡ
ನಿನಗೆ ಏನಿಲ್ಲದಿದ್ದರೂ ನಾವು

ಕೊಟ್ಟು ಕಳುಸುವೆವು ಹಂಗಂತವ್ಳೇಳಿ
ಅವರು ದುಃಖಾವ ಮಾಡಿದರು

ಅವರು ದುಃಖಾವ ಮಾಡುತಾ
ಮದುವೆಯು ಹೊಂಡಿಸಿ ಕಳುಸುತಾ

ಇವರು ಮದುವೆಯ ಕಣ್ಕಂಡು
ಮಳಿತೆಗೆ ಹೋಗುತಾರೆ

ಇವರು ತೌರು ಮನೆಯುವರೆಲ್ಲಾ
ಇವರ ಕಣ್ಣಿಗೆ ಮರೆಯಾಗಿ

ಕಣ್ಣಿಗೆ ಮರೆಯಾಗಿ ಹೋಗತನಕ
ಇವರು ನಿಂತುಕೊಂಡು ನೋಡತಾರೆ

ಇವರು ಮರೆಯಾಗಿ ಹ್ವಾದರೂ
ಇವರು ದುಃಖಾವ ಮಾಡುತಾ

ಹೇ ಕ್ವಾಟೆಯ ಊರಿಗೆ ಇವರು
ಹಿಂತಿರುಗಿ ಹ್ವಾದರೂ

ಹೇ, ಮಳೆತೆಯ ಮದುವೆ ನೋಡೊ
ಇವರು ಕರ್ಕಂಡು ಹ್ವಾದರೂ

ಹೇ ಮದುವೆ ಕರ್ಕಂಡು ಹೋಗಿ
ಮುತ್ತಿನಾರತಿಯ ಬೆಳಗವರೆ

ಹೇ ಒಳಕೆ ಕರ್ಕಂಡುಹೋಗಿ
ಅಕ್ಕಿಯ ಮುಡದವರೆ

ಅಕ್ಕಿಯ ಮುಡದಾರು ಅವರು
ಮಡಲಕ್ಕಿಯ ಸಡಿಲಿಸಿ

ಊಟಾವ ಕೊಡವರಿಗೆ ಅವರು
ಊಟಾವ ಕೊಡುತಾರೆ

ಇಳ್ಯಾವ ಕೊಡುವವರಿಗೆ ಅವರು
ಇಳ್ಯಾವ ಕೊಡುತಾರೆ

ಕೊಡುವ ಬುಡುವವರಿಗೆಲ್ಲಾ ಅವರು
ಕೊಡುವ ಮರ್ಯಾದೆ ಕೊಡುತಾರೆ

ನೆಂಟರಿಷ್ಟ್ವಾರೆಲ್ಲಾ ಹೋಗಾದೆ ಇದ್ದರಲ್ಲಾ
ಮದುವೆಯಾಗಿ ಅಲ್ಲಿಗೆ ಒಂದು ತಿಂಗಳಾದಾರೆ

ಹೇ ಒಂದು ತಿಂಗಳೆಂದಾರೆ ಒಂದು ವರಸನಾದವಲ್ಲಾ
ಒಂದು ವರುಸನಾದವಲ್ಲಾ ತನ್ನ ತೌರ ಕಾಣಾಳು

ಹೇ ಒಂದು ವರುಸಾಕೆ ದೊಡ್ಡ ಹೊನ್ನಿ ಹೆಣ್ಣು
ದೊಡ್ಡ ಮನುಸೆಯಾದಳು ಹೊನ್ನಿ

ತವರ ಗ್ಯಾನ ಮಾಡಿ ಅಳಾ ಕರೆದಾಳು
ಈಗಲಾದರೂ ನನ್ನ ತವರಿಗೆ ಕಳುಸ್ಯಾರು

ಅತ್ತೆಯ ಕಾಲಕಟ್ಟಿ ಬೇಡುತವಳೆ
ಅತ್ತ್ಯಮ್ಮ ತಾಯಿ ನನಗೆ ತೌರಿಗೆ ಅಪ್ಪಣೆ ಕೊಡಿ

ಇದುವೇನೆ ದೊಡ್ಡ ಹೊನ್ನಿ ನೀ ಮಕ್ಕಳಾಟ ಆಡತಾ
ಮಕ್ಕಳಾಟ ಆಡತಾ ನಿನಗೆ ಬುದ್ಧಿಯಿಲ್ಲವೇನೆ

ನಮ್ಮ ಮನೆತನದಲಿ ಕರೆಯದೆ ಕಳಸುದೇ ಇಲ್ಲ
ನೀನು ಅಲ್ಲಿ ಉಣ್ಣ ಊಟ ಇಲ್ಲಿ ಉಣ್ಣು

ಅಲ್ಲುಡ ಸೀರೆ ರವಿಕೆ ಇಲ್ಲೇ ಉಡು
ಅಲ್ಲೆ ಇಕ್ಕ ಬಂಗಾರ ಇಲ್ಲೇ ಇಕ್ಕ್ಯೋಗು

ತವರ ಗ್ಯಾನ ಬಿಟ್ಟು ನಿನ್ನ
ಭಂಗಾವ ಮಾಡು

ಭಾಗುತಾ ಬಳಕುತಾ ಅವಳು
ಅಂಗಳಾ ಹತ್ತುತಾಳೆ

ಮಾವಾನ ಕಾಲ ಅವಳು ಕಟ್ಟಿಬೇಡುತಾಳೆ
ಹೇ ಮಾವಯ್ಯ ನನ್ನ ತಂದೆ

ನನ್ನ ತೌರಿಗೆ ಅಪ್ಪಣೆ ಕೊಡಿ
ಹೊನ್ನಿ ನಾನು ಮಾಡಿದ್ದಲ್ಲಾ

ನಮ್ಮ ಹಿರಿಯರು ಮಾಡಿದ್ದೊ
ನಾನು ಏನು ಹೇಳಲಿ

ನಮ್ಮ ಮನೆತನದಲ್ಲಿ
ಕರೆಯದು ಕಳಸದೇ ಇಲ್ಲ

ನೀ ಅಲ್ಲುಣ್ಣ ಊಟಾವ
ನೀ ಇಲ್ಲೇ ಮಾಡುಣ್ಣು

ಅಲ್ಲುಡ ಸೀರೆ ರವಿಕೆ ನೀ
ಇಲ್ಲೇ ಉಡುಹೋಗೇ

ಅಲ್ಲೆ ಇಕ್ಕ ಭಂಗಾರವ ನೀ
ಇಲ್ಲೆ ಇಕ್ಕು ಹೋಗೇ

ತವರ ಗ್ಯಾನವ ಬಿಟ್ಟು ನೀನು
ಭಂಗಮಾಡು ಹೋಗೇ

ಹೇ ಬಾಗುತಾ ಬಳಕುತಾ
ವಕ್ಕಳಾ ದುಃಖ ಮಾಡುತಾ

ಅಂಗಾಳ ಇಳಿದನಳೇ ಗಂಡಾನ ಕಾಲ ಕಟ್ಟವಳೆ
ವಕ್ಕಳಾ ದುಃಖ ಮಾಡುತಾಳೆ

ನನ್ನ ಸರಿಸಮದವರು ತೌರಿಗೆ ಹೋಗುತವರೆ
ಹೇ ಪಾಪಿನಾದೆ ನನ್ನ ತವರ ಗುರುತಾ ಅರಿಯೆ

ನನಗೆ ತಾಯಿಲ್ಲ ತಂದೆಯಿಲ್ಲ
ನಾ ತಬ್ಬಲಿಯಾದೆ

ಈಗಲಾದರೂ ನನ್ನ ತವರಿಗೆ ಕಳಿಸಿಕೊಡಿ
ಇದುವೇನೆ ಎಲೆ ಹೊನ್ನಿ ನಿನ್ನ ಗೋಳಾ ನೋಡನಾರಿ

ಹೇ ಗೆಣೆಕಾರರ ಮಾತಕೇಳಿ ಕೆಟ್ಟೆನಲ್ಲಾ ಹೊನ್ನಿ
ನಿನ್ನಯಾ ಗೋಳಾ ನಾ ಕಣ್ಣಿನಿಂದ ನೋಡನಾರಿ

ಹೇ ತಾಯಿ ತಂದೆ ಇದ್ದಾಗೆ ನನ್ನದೇನು ಮಾತಿಲ್ಲ
ಹೆತ್ತತಾಯಿ ತಂದೆ ಮಾತ ಮೀರಿ

ನಿನ್ನ ನಾ ತವರಿಗೆ ಕಳುಸಿದರೆ
ಸರಸಮದವರು ಆಡ್ಕಿಂಡು ನಗುತಾರೆ

ಮದುವೆಯಾದ ಮ್ಯಾಲೆ ತಾಯಿತಂದೆ ಗುರುತಿಲ್ಲಾ
ಹೇ ಹಂಗಾತವ್ಳೇಳಿ ಆಡ್ಕಿಂಡು ನಗುತಾರೆ

ಹೇ ತವರು ಗ್ಯಾನಮಾಡಿ ಹೊನ್ನಿ ನೀ ಅತ್ತಾರೆ ಕರೆದಾರೆ
ನಿನ್ನ ಕಣ್ಣಿಗೆ ಕಾಣದಂಗೆ ನಾ ದೇಸಾಂತರ ಹೋಯತಿನಿ

ಹಂಗಂತಾಪ್ಲೇಳಿ ವಕ್ಕಳಾ ದುಃಖ ಮಾಡುತ್ತಾರೆ
ಅವಳಾಗಲೇ ಹೊನ್ನಮ್ಮ

ಗಂಡನ ಕೊಳ್ಳ ಕಟ್ಟಿಕೊಂಡು
ನೀವು ದೇಸಾಂತರ ಹ್ವಾದರೆ

ನಾ ಇನ್ನೂ ತಬ್ಬಲಿಯಾದೆ ನನ್ನ ಬಿಟ್ಟು
ನೀವು ದೇಸಾಂತರ ಹ್ವಾಗಬ್ಯಾಡಿ

ನಾ ತವರಿಗೆ ಹೋಗೋದಿಲ್ಲ ನೀವು
ದೇಸಾಂತರ ಹ್ವಾಗಬ್ಯಾಡಿ

ಆಗ ಎಲೆ ಹೊನ್ನಿ ನಿನಗೇನುಬೇಕು
ನೀ ನನ್ನ ಕುಟೆ ಹೇಳು ಹೊನ್ನಿ

ನಾ ತಂದು ಕೊಡತಿನಿ ಅವರು ಗಂಡಾನು
ಹೆಂಡತಿಯು ದುಃಖಾವ ಮಾಡುತಾರೆ

ಅವರತ್ತೆ ಮಲ್ಲವ್ವತಾಯಿ
ಅವರು ಕಣ್ಣಿಂದ ನೋಡಿಯಾರು

ಹೇ ಗಂಡಯಾನ ಕೂಟ ಅವರು
ಏನಂತ ಹೇಳುತಾರೆ

ಇದುವೆ ಎಲೆ ಗಂಡಸೆ ನಿನಗೆ
ಮಂಕು ಬಂದಿತಾ

ಹೇ ದೊಡ್ಡ ಹೊನ್ನಿ ಹೆಣ್ಣು
ದೊಡ್ಡ ಮನುಸೆಯಾಗವಳೆ

ಹೇ ತವರ ಗ್ಯಾನಮಾಡಿ ಅತ್ತಾಳು ಕರದಾಳು
ನಿನುಗೆ ಬುದ್ಧಿಯಿಲ್ಲನೇನೆ

ಅದಕೆ ನಾನೇನು ಮಾಡಲಿ
ನಿನಗೇನು ಬೇಕಾದರೂ

ಹೆಂಗಸೇ ನಾ ತಂದು ಕೊಡುತಿನಿ
ನೀ ಮಾಡೊ ಕೆಲಸ ನೀ ಮಾಡು

ನಾವು ಬೃಹಿಸ್ತವಾರ ಏಳು ಗಂಟೆಗೆ
ಈಜೆಗೆ ಕೂರಿಸೋಣ

ಹನ್ನೆಡು ದಿನಾಕೆ ನಾವು
ಸೂತಕಾವ ತೆಗೆಯೋಣ

ತಿಂಗಳಿಗೆ ಮೂರುದಿನ ಕಮ್ಮಿಯಾಗಿ
ಗಂಗೆಯ ಮೆಟ್ಟಿಸಾಣ

ಇವರು ಮಾತಾನಾಡಿದಾ ಇವಳು
ಕಿವಿಯಿಂದ ಕೇಳಿದಳು

ಹೇ ಕುಳವಾಡಿಯ ಕರೆಸ್ಯಾಳೂ
ಊಟಾಕೆ ಇಕ್ಕ್ಯಾಳು

ಊಟಾವ ಉಂಡವನಿಗೆ ಇಳ್ಯಾವ ಕೊಡುತಾಳೆ
ಹೇ ಮಾರುದ್ದವಾಲೆಯ ಅವಳು

ತೆಗೆದವಳೆ ಹೊನ್ನಮ್ಮ ಕರಕರನೆ ಅಕ್ಸರವಾ
ಏನೆಂತಾ ಬರೆದಾಳು

ಹೇ ತಾಯಿ ಹಡೆದವ್ವಗೆ ವಾಲೆಯ ಬರೆತಾಳೆ
ಹೇ ತಾಯಿ ಹಡೆದವ್ವ

ನಾನು ತಾಯಿ ತಂದಿಲ್ಲದ
ತಬ್ಬಲಿಯಾದನೆಲ್ಲಾ

ಹೇ ಯಾರು ಇಲ್ಲದವರಂಗೆ ಇಲ್ಲೇ
ದೊಡ್ಡ ಮನುಸೆ ಮಾಡುತಾರೆ

ಎಟೊ ಬಿದ್ದು ಬೇಡಿದಾರು ನನ್ನ
ತೌರಿಗೆ ಕಳುಸ್ಯಾರು

ಇದೆಕೇನು ಸಾಮಾನಾ ನೀವು
ಕೊಟ್ಟು ಕಳುಸಲೇಬೇಕು

ನಾನಿಲ್ಲಿ ಸಾಮಾನಿಲ್ಲದೆ ನಾ ಈಚೀಗೆ ಕುಳ್ಳವಳಲ್ಲಾ
ಹಂಗಂತವ್ಳೇಳಿ ಅವಳು ಅಕ್ಷರವಾ ಕರಕರನೆ ಬರೆದವಳೆ

ಹೇ ಕೊಳ್ಳಪ್ಪಾ ಕುಳವಾಡಿ
ನೀ ಕ್ವಾಟೆಯೂರಿಗೆ ಹೋಗು

ನಮ್ಮ ತಾಯಿ ಹಡದವ್ವಗೆ
ನೀನು ಈ ವಾಲೆ ಕೊಡುಹೋಗು

ಅಗ ಕುಳವಾಡಿ ಕ್ವಾಟೆಯೂರಿಗೆ ಹೋತಾನೆ
ಚಿಕ್ಕಹೊನ್ನಿ ಕುಳವಾಡಿಯ ಮುಖವಾ ಕಂಡಾಳು

ವಳಕೆ ಓಡೋಡಿ ಹೋಯಿತಾಳೆ
ತಾಯಿ ಹಡದವ್ವಗೆ ಏನಂತ ಹೇಳುತಾಳೆ

ಹೇ ತಾಯಿ ಹಡದವ್ವ ನಮ್ಮಕ್ಕನ ಕೊಟ್ಟ ಪಟ್ಟಣದ
ನಮಕ್ಕಾನ ಪಟ್ಟಣದ ಕುಳವಾಡಿ ಬತ್ತಾನೆ

ಸುಮ್ಮನಿರೆ ಕಂದಾ ನನ್ನ ಹೊಟ್ಟೆಉರಿಸಲು ಬ್ಯಾಡ
ವರುಸಾ ಒಂದಾದರೂ ನಿನ್ನಕ್ಕನ ಗುರುತಾ ನಾ ಕಾಣೆನಲ್ಲಾ

ಹೊಟ್ಟೆಉರಿಸಬ್ಯಾಡ ನೀ ಸುಮ್ಮನಿರೇ ಕಂದಾ
ಈ ಮಾತಾಡೂತ್ತಿಗೆ ಕುಳವಾಡಿ ಬಾಗಲಹತ್ತಿರ ಹ್ವಾದನೂ

ಅವರಾಗ ಅರಸರಾಯರು ಮಂಚಾದ ಮ್ಯಾಲೆ ಕುಂತವರೆ
ಬಗ್ಗಿ ಸರಣೆಂದಾ ಭಾಗಿ ಸರಣೆಂದಾ

ಅವರ ತಾಯಿ ಹಡೆದವ್ವ ಈಚೆಗೆ ಬರುತಾರೆ
ಬಂದಪ್ಪಾ ಕುಳಪಾಡಿ ನೀನು ಚೆಂದಾಗಿ ಇದ್ದಿಯಾ

ಬಂದೆ ನನ ತಾಯಿ ನಾನು ಚೆಂದಾಗಿ ಇದ್ದೇನವ್ವಾ
ನಿನ್ನ ಒಡತಿ ಹೊನ್ನಮ್ಮ ಚೆಂದಾಗವಳೇನೂ

ನಿನ್ನ ಒಡೆಯು ಬೊಮ್ಮಣಸೆಟ್ಟರು ಚೆಂದಾಗಸರೇನೂ
ಅವರೆಲ್ಲಾ ತಾಯಿ ಚೆಂದಾಗನರವ್ವಾ

ನಮ್ಮ ತಾಯಿ ಹೊನ್ನಮ್ಮ ನಿಮಗೆ
ವಾಲೆಯು ಕೊಟ್ಟವರೆ

ವಾಲೆಯು ತಗದವನೆ ಅವರ ಕೈಲೆ ಕೊಟ್ಟವನೆ
ಚಿಕ್ಕಹೊನ್ನಿ ನನ್ನ ಕಂದಾ

ಕುಳವಾಡಿಗೆ ಊಟಕ್ಕಿಕ್ಕೆ
ಆಗಲೆ ಚಿಕ್ಕಹೊನ್ನಿ ಊಟಕಿಕ್ಕಿದಳು

ಊಟ ಮಾಡಿದವನಿಗೆ ಕೈಗೆ ನೀರಾ ಕೊಟ್ಟು
ಅವನಿಗೆ ಇಳ್ಯಾವ ಕೊಡುತಾಳೆ

ಅವರ ತಾಯಿ ಹಡೆದವ್ವ ಹ್ವಾದಂತ ವಾಲೆಯು
ಆಕೆ ಓದಿ ನೋಡಿದಾರು

ವಕ್ಕಳ ದುಃಖವಾ ಮಾಡುತಾ
ಗಂಡನಿಗೆ ಏನು ಹೇಳುತಾರೆ

ಕೇಳಲಾ ಗಂಡಸೇ ನಿಮ್ಮ ಮಗಳು ಹೊನ್ನಮ್ಮ
ಬರೆದಿರುವ ವಾಲೆಯು

ನನಗೆ ಹೇಳಾಕೆ ಬಾಯಿಯು ಬರದು
ಹೇ ದೊಡ್ಡಹೊನ್ನಿ ನನ್ನ ಕಂದಾ

ದೊಡ್ಡ ಮನುಸೆಯಾಗವಳೆ
ಏಟೂ ಬಿದ್ದರೂ ಬೇಡಿದರೂ

ಅವರು ತೌರಿಗೆ ಕಳುಸದೇ
ಹೇ ಯಾರು ಇಲ್ಲದವರಂಗೆ ಅಲ್ಲೇ

ದೊಡ್ಡ ಮನುಸಿ ಮಾಡುತಾರೆ
ನಾವು ಯಾರು ಇದ್ದರೇನು

ದೊಡ್ಡಹೊನ್ನಿ ತಬ್ಬಲಿಯಾದಳಲ್ಲಾ
ಆಗಲಾಗ ಅರಸರಾಯರು ಮಾತನ್ನು ಕೇಳುತಾ

ನಕ್ಕಳಾ ದುಃಖವಾ ಮಾಡುತಾ
ಪಟ್ಟೆ ನುಂಚಾದ ಮ್ಯಾಲೆ

ಅವರು ಮಕಾಡೆ ಮನಗವರೆ
ನನ್ನ ಹಾಳ ಕಿವಿಯಿಂದ

ನಾ ಕೇಳನಾರಲ್ಲೂ ನಾ ಒಂದ ಮಾತಿನಲ್ಲಿ
ನಾ ಹೆಣ್ಣು ಕೊಟ್ಟಿನಲ್ಲಾ

ಹೇ ಪಾಪಿಯಾನೆ ಮನೆಗೆ ಹೆಣ್ಣ ಕೊಡಬಹುದೆ
ನೀ ಹೇಳಬ್ಯಾಡ ಹೆಂಗಸೇ ನಾ ಕೇಳನಾರನಲ್ಲೇ

ಏನು ಬೇಕಾದರೂ ಹೆಂಗಸೇ
ಕೊಟ್ಟು ಕಳುಸಲ್ಲೇ

ಅವರ ತಾಯಿ ಹಡೆದವ್ವ
ಮಗಳಿಗೆ ಏನು ಹೇಳುತಾರೆ

ಹೇ ಚಿಕ್ಕಹೊನ್ನಿ ಕಂದ
ನೀ ಇಟ್ಟಾಗಿ ಹೋಗವ್ವ

ಒಂದೆಡಿಗೆ ಹೂವಾತಂದು
ಸಿಗಿದು ಮಾಲೆಯಕಟ್ಟಿ

ಅಕ್ಕ ದೊಡ್ಡಹೊನ್ನಿಗೆ ಕೊಟ್ಟಾರು ಕಳುಸೇನು
ಅವಳೊಂದು ಹೆಡಿಗೆಯು

ಹೂವತಂದು ಸಿಗದು ಮಾಲೆಯ ಕಟ್ಟಿ
ಅವರ ತಾಯಿ ಹಡದವ್ವ

ಮಡಿವಾಳಿಯು ಕರಸ್ಯಾಳೂ
ಮಡಿವಾಳಿಗೆ ಊಟಕಿಕ್ಕಿ

ಇಳ್ಯಾವ ಕೊಟ್ಟ್ಯಾಳು ವಕ್ಕಳ ದುಃಖ ಮಾಡತಾ
ನನ್ನ ಕಂದವ್ವಗೆ ಮಡಿವಾಳಿ ನೀನೇ ತಾಯಿತಂದೆ

ಮಳಿತೆಯ ಊರಿಗೆ ನೀ ಹೋಗಿ ಬರಹೋಗು
ನನ್ನ ಕಂದಾನ ಹೊನ್ನಮ್ಮಾನ

ನೀ ನೋಡಿಯಾರು ಬರಹೋಗು
ಅಟ್ಟ ಹತ್ತುತಾಳೆ

ಒಂದು ಹೊಸಹೆಡಿಗೆ ತಗೆದವಳೆ
ಅವಳು ಸಾಮಾನವ ತುಂಬುತಾಳೆ

ಪಟ್ಟೆಯಾನೆ ಸೀರೆ ಕುಸಲಯಾನೆ ರವಿಕೆ
ಹೇ ಬೇಕಾದ ಬಂಗಾರವ

ಬೇಗಾನೆ ತುಂಬಿದಾಳೊ ಇಡಿಯು ತೆಂಗಿನಕಾಯಿ
ಚಿಪ್ಪು ಬಾಳೆಹಣ್ಣು

ಮುತ್ತಿನ ಮಡಲಕ್ಕಿಯ ಅವಳು
ಬ್ಯಾಗನೇ ತುಂಬಿದಳೊ

ಹೆಡಿಗೆ ಬಂಗಾರವ ಅವಳು
ಮಡಿವಾಳಿಗೆ ಕೊಡುತಾಳೆ

ಈ ಮಡಿವಾಳಿ ಮಳಿತೆಗೆ
ಮಳಿತೆಯ ಊರಿಗೆ

ಅವನು ಬ್ಯಾಗನೆ ಹೋಗುತಾನೆ
ಆಗಲೆ ಹೊನ್ನಮ್ಮ

ಮಡಿವಾಳಿ ಮುಖವನ್ನೇ ಕಂಡಳೂ
ಹೆಡಿಗೆ ಬಂಗಾರ ಇಸ್ಗಂಡು

ಅವಳು ಅಂಗಳಕೆ ಮಡಗಿದಳು
ಬಂದ್ಯಪ್ಪ ಮಡಿವಾಳಿ

ನೀನು ಚಂದಾಗಿ ಇದಿಯಪ್ಪ
ಬಂದೆ ನನ್ನ ತಾಯಿ

ನೀನು ಚಂದಾಗಿ ಇದಿನವ್ವಾ
ನೀ ಬರಲಾಗಿ

ನಮ್ಮ ತಾಯಿ ಬಂದಂಗಾಯ್ತು
ನೀನು ಬರಲಾಗಿ

ನಮ್ಮ ತಂದೆ ಬಂದಂಗಾಯ್ತು
ನನ್ನಾರಳು ಅಣ್ಣದೀರು

ನನ್ನಾರಳು ಅತ್ತಿಗೆರೂ
ನನ್ನ ತಂಗಿ ಚಿಕ್ಕಹೊನ್ನಿ

ಬಂದ್ಹಂಗೆ ಆಯಿತಲ್ಲಾ ಅವರೆಲ್ಲ
ಮಡಿವಾಳಿ ಚಂದಾಗಿ ಅವರಪ್ಪ

ಎಲ್ಲ ನನ್ನ ತಾಯಿ
ಚಂದಾಗಿ ಅವರವ್ವಾ

ನೀರ ಕೊಡುತಾಳೆ ಅವನಿಗೆ
ಊಟಕಿಕ್ಕುತಾಳೆ

ಊಟ ಉಂಡವನಿಗೆ ಅವಳು
ಇಳ್ಯಾವ ಕೊಡುತಾಳೆ

ಹೇ ಮೊರ ಹೊನ್ನ ಮರ್ವ್ಯಾದಿ ಕೊಡುತಾಳೆ
ನಾನು ಹೋಗಿ ಬತ್ತೀನಂತ

ಅವನು ಹೊಂಡುತ್ತನವನಲ್ಲ
ಆಗಲೆ ಹೊನ್ನಮ್ಮ

ದುಃಖವಾ ಮಾಡುತಾಳೆ
ಹೋಗೋನು ಹೋಯ್ತಿಯೊ

ನೀ ಬರುವುದೇಸು ದಿನ
ಅವನು ಹೋಗುತ್ತವನಲ್ಲ

ಇವನು ಹಿಂದಕೆ ಹೋಗುತಾನೆ
ಅವನಾಗ ಮಡಿವಾಳಿ

ಹಿಂತಿರುಗಿ ನಿಂತುಗಂಡೂ
ಇದುವೇನೆ ನನ್ನ ತಾಯಿ

ತಂದೆಯು ಜೊತೇಲಿ
ತಾಯಿಮಕ್ಕಳು ಬಂದಂತೆ

ನೀವು ಹಿಂದಕೆ ಬತ್ತೀರಿ ನಾ
ಮುಂದಕೆ ಹೋಗನಂದ್ರೆ

ನಂಗೆ ಕಾಲೆಂಡು ಬರುವಲ್ಲ ನಿಮ್ಮ
ತಾಯಿ ತಂದೆಗೆ ಹೆಚ್ಚಾಗಿ

ನಾನಿರೋ ಮುಂದೆವಾ ನಾ ಬಂದು ಹೋತಿನಿ
ಹಿಂದಕೆ ಹೋಗು

ನಾನು ಅರಮನೆಗೆ ಹೋಗುತಿನಿ
ಅವಳಾಗಲೇ ಹೊನ್ನಮ್ಮ

ಮಕ್ಕಳ ದುಃಖನ ಮಾಡುತಾ
ಅವಳು ಹಿಂತಿರುಗಿ ಬತ್ತಾಳೆ

ಕ್ಯಾಟೆಯೂರಿಗೆ ಮಡಿವಾಳಿ ಹೋಗನನೆ
ಅವರತ್ತೆ ಮಲ್ಲವ್ವತಾಯಿ

ಅವರು ಮತ್ತೇನ ಮಾಡವರೆ
ನೀರು ಕಾಸುತವರೆ

ಅಂಗಳಕ್ಕಿಡದವರೆ ಅತ್ತೆ
ಮುತ್ತೈದೆಯವರ

ಕರ್‍ಕಂಡು ಬಂದವ್ರೇ
ಇವಳಿಗೆ ನೀರು ಮೀಸುತಾರೆ

ಇವಳಿಗೆ ಬಟ್ಟೆಯು ಕೊಡುತವಳೆ
ಅವರತ್ತೆ ಸೀರೆಯು ಕೊಟ್ಟರೆ

ಅವಳು ಹರಿದು ಬಿಸಾಕುತಾಳೆ
ಬಂಗಾರ ಕೊಟ್ಟಾರೆ

ಅವಳು ಕೆಚ್ಚಿ ಬಿಸಾಕುತವಳೆ
ತಲೆಗೆ ತುಪ್ಪವಕೊಟ್ಟರೆ

ಅವಳು ಗ್ವಾಡೆಗೆಸೆಯುತಾಳೆ
ಮುತ್ತಿನ ಮಡಿಲಕ್ಕಿ ಕೊಟ್ಟರೆ

ಅವಳು ಹಟ್ಟೇಗೆ ಉಗ್ಗುತಾಳೆ
ಅವರ ತಾಯಿ ಕೊಟ್ಟಂತ

ಸೀರೆ ಉಡುತಾಳೆ ಅವಳು
ಬಂಗಾರವ ಇಕ್ಕ್ಯತಾಳೆ

ಅವಳ ತಾಯಿ ಕೊಟ್ಟಂತ ಮುತ್ತಿನ
ಮಡಲಕ್ಕಿ ಹೊಯ್ಸಿಕೊಂಡು

ಈಚೇಲಿ ಕುಳಿತವಳೆ ನೋಡು
ಹನ್ನೆಡು ದಿನವಾದೊ

ಹನ್ನೆಡು ದಿನಕೆ ಅವರು
ಸೂತಕವ ತಗದವ್ರೇ

ಇವಳಿಗೆ ಮೂರುದಿನ ಕಮ್ಮಿಯಾಗಿ
ಅವರು ಉದ್ದಾಗ ಸೈವಾಗಿ

ಉದ್ದಾಗ ಸೈವಾಗಿ ಅವರು
ಗಂಗೆ ಮೆಟ್ಟಿಸುತಾರೆ

ಗಂಗೆ ಪೂಜೆಗೆ ಸಾಮಾನ ಅವರ ತಾಯಿ ಹಡದವ್ವ
ಕೊಟ್ಟು ಕಳುಸತಲವ್ರೆ

ಮಡಿವಾಳಿ ಕರೆಸ್ಯಾರು ಅವನಿಗೆ
ಊಟಕೆ ಇಕ್ಕಿಸವ್ರೇ

ಒಂದು ಹೊಸಹೆಡಿಗೆ ತುಂಬಾಲು
ಅವರು ಸಾಮಾನು ತುಂಬುತಾರೆ

ನೀನು ಮಳೆತೆ ಊರಿಗೆ ನೀನು
ಹೋಗ್ಯಾರೂ ಬಾರಾಲೋ

ನನ್ನ ಕಂದ ಹೊನ್ನಮ್ಮಾಗೆ ಹೆಡಿಗೆ
ಬಂಗಾರ ಕೊಡುಹೋಗೋ

ಬಂಗಾರವ ತಕ್ಕಂಡು ಅವನು
ಮಳತೆಗೆ ಹೋದಾನು

ಹೇ ತಾಯಿ ಹೊನ್ನಮ್ಮಾಗೆ
ಬಂಗಾರವ ಕೊಡುತಾರೆ

ಬಂಗಾರವ ಇಸ್ಗೊಂಡು ಆಕೆ
ಅಂಗಳಕೆ ಮಡಿಗವ್ರೇ

ನೀರ ಕೊಡುತಾರೆ ಅವನಿಗೆ
ಊಟಾಕೆ ಇಕ್ಕುತಾರೆ

ಊಟ ಉಂಡವನಿಗೆ ನೋಡು
ಇಳ್ಯಾವ ಕೊಡುತಾರೆ

ಅವರು ಉದ್ದಾಗ ಸೈವಾಗಿ
ಇವಳ ಗಂಗೆ ಮೆಟ್ಟಿಸುತಾರೆ

ಅವಳಲ್ಲಿ ಸಮೂದಲ್ಲಿ ಗಂಗೆ ಪೂಜನಳಲ್ಲಾ
ಅವರ ತಾಯಿಕೊಟ್ಟಂತ

ಸಾಮಾನ ತಕ್ಕಂಡು ಅವಳು
ಗಂಗೆ ಪೂಜುತಾಳೆ

ಗಂಗೆಯಾನೆ ಪೂಜಿ ಅವಳು
ನೀರ ತಂದಾಳಲ್ಲಾ

ಬಂದ ನೆಂಟರಿಗೆಲ್ಲ ಊಟವಾ ಕೊಡುತಾರೆ
ಊಟವ ಉಂಡವರಿಗೆ

ಇಳ್ಯಾವ ಕೊಡುತಾರೆ ಅವರು
ಕ್ವಾಟೆಯೂರ ಮಡಿವಾಳಿ

ಹೊಯ್ತ್ತಿನಿ ಅಂತಾನೆ ಮಡಿವಾಳಿ
ಅವರು ಮರ್ವಾದೆ ಕೊಡುತಾರೆ

ಅವನು ಹೋಯ್ತಿನಂದಾರೆ ಇವಳು
ದುಃಖವ ಮಾಡುತಾಳೆ

ನೀ ಹೋಗೋನು ಹೋಯ್ತ್ತಿಯೆ
ನೀನು ಬರುವುದೇಸು ದಿನವೋ

ನಾನು ತಂದೆ ತಾಯಿಲ್ಲಾದ ತಬ್ಬಲಾಡೆನಲ್ಲಾ
ನನಗೆ ತಾಯಿ ತಂದೆ ನೀನೆಯೆ ಮಡಿವಾಳಿ

ನಾ ತಿಂಗಳಿಗೊಂದು ಸಲಾ
ನಾ ಬಂದು ಹೋಯ್ತೀನಿ

ನಾ ಹೋಗಿ ಬತ್ತೀನಂತ ಅವನು
ಹೋಗುತ್ತನವನಲ್ಲಾ

ನಾ ಹೋಯ್ತಿನಂತ ಹೋದಾರೆ
ಇವಳು ಹಿಂದಕೆ ಹೋಯ್ತಾಳೆ

ಅವನಾಗ ಮಡಿವಾಳಿ ಹಿಂತಿರುಗಿ ನಿಂತು
ಕಂದಾ ತಂದೆಯ ಜೊತೇಲಿ

ತಾಯಿ ಮಕ್ಕಳು ಬಂದ್ಹಂಗೆ
ನನ್ನಾವ ಹಿಂದೆಟ್ಟಿ

ತಾಯಿ ನೀವೆಯ ಬತ್ತೀರಿ
ನಂಗೆ ಮುಂದಕೆ ಹೋಗನಂದ್ರೆ

ನನಗೆ ಕಾಲೆಂಡು ಬರುವಲ್ಲಾ
ನಿಮ್ಮ ಹಣೇಲಿ ಬರದದ್ದು

ತಾಯಿ ಯಾರೇನ ಮಾಡಿಯಾರು
ಇದ್ದಾರೆ ನೋಡಲುಬ್ಯಾಡ

ತವರ ಗ್ಯಾನ ಮಾಡಬ್ಯಾಡ
ಭಂಗಾವ ಮಾಡದೆ

ತಾಯಿ ಚಾಲ ಮಾಡಬ್ಯಾಡಾ
ಅವರು ಕರೆಯನಿಲ್ಲವೆಂದು

ಇನರು ಕಳಿಸಿನಿಲ್ಲವಲ್ಲಾ ಹೇಳಾದೆ ಬರಬ್ಯಾಡ
ತಾಯಿ ಕೇಳಾದೆ ಬರಬೇಡೊ

ನಿಮ್ಮ ತಂದೆ ಅರಸರಾಯರಿಗೆ
ಒಂದು ಕೆಟ್ಟೆಸರ ತರಬ್ಯಾಡ

ಮಡಿವಾಳಿ ಹೇಳೊ ಮಾತ
ತನ್ನ ಕಿವಿಯಿಂದ ಕೇಳಿದಳೂ

ಆಗಲೇ ಹೊನ್ನಮ್ಮ ಹಿಂತಿರುಗಿ ಬರುತಾಳೆ
ಅವನಾಗಲೆ ಮಡಿವಾಳಿ

ಕ್ವಾಟೆಯೂರಿಗೆ ಹೋದಾನೂ
ಗಂಗೆ ಮಿಡಿಸಲೀಗೆ

ಒಂದು ತಿಂಗಳಾದಾ ಒಂದು ತಿಂಗಳೆಂದರೆ
ವರುಸವೇನಾದಾ

ಎಲ್ಡು ತಿಂಗಳಿಗೆ ಅವಳು ದೊಡ್ಡಹೊನ್ನಿ
ಅವಳು ಗರ್ಭಾಕೆ ನಿಂತವಳೆ

ಒಂದು ದಿನವದು ಅವಳಿಗೆ ಒಂದು ತಿಂಗಳಾದ
ಒಂದು ತಿಂಗಳ ಅಂದಾರೆ

ಅವಳಿಗೆ ಎಲ್ಡು ತಿಂಗಳಾ
ಎಲ್ಡು ತಿಂಗಳು ಅಂದಾರೆ

ಅವಳಿಗೆ ಮೂರು ತಿಂಗಳು
ಮೂರು ತಿಂಗಳು ಅಂದಾರೆ

ಅವಳಿಗೆ ನಾಕು ತಿಂಗಳಲ್ಲಾ
ನಾಕು ತಿಂಗಳು ಅಂದಾರೆ

ಆರು ತಿಂಗಳಲ್ಲಾ
ಆರತಿಂಗಳು ಅಂದಾರೆ

ನಾನು ಆಚೆ ಅಂದಾರೆ ಈಚೆ
ಆಚೆಯಿಂದ ಈಚೆಗೆ ನಾನು ತಿರುಗನಾರಲ್ಲಾ

ಆರು ತಿಂಗಳ ಅಂದಾರೆ ಅವಳಿಗೆ ಏಳು ತಿಂಗಳಲ್ಲಾ
ಏಳು ತಿಂಗಳಿಗೆ ನಾನು ಎದ್ದು ಕೂರನಾರೆ

ಈಗಲಾದರೂ ನನ್ನ ತೌರಿಗೆ ಕಳುಸ್ಯಾರು
ಏಳು ತಿಂಗಳಿಗೆ ನನ್ನ ತೌರಿಗೆ ಹೋತಿನಿ

ಅತ್ತ್ಯಾ ಕಾಲಕಟ್ಟೆ ಬೇಡುತವಳೆ
ಅತ್ತೆಮ್ಮ ನನ ತಾಯಿ ಈಗಲಾದರೂ ನನ

ಈಗಲಾದರೂ ನನ್ನ ತೌರಿಗೆ ಅಪ್ಪಣೆಕೊಡಿ
ಇದುವೇನೆ ಎಲೆಹೆಣ್ಣೆ

ಮಕ್ಕಳಾಟ ಆಡುತ್ತೀಯಾ
ನಿನಗೆ ಬುದ್ಧಿ ಇಲ್ಲವೇನೆ

ನಮ್ಮ ಮನೆತನದಲ್ಲಿ ಹೊನ್ನಿ
ಕರೆಯುದೆ ಕಳಿಸದೇ ಇಲ್ಲಾ

ಅಲ್ಲುಣ್ಣ ಊಟಾವ ನೀನು ಇಲ್ಲೆ ಮಾಡುಣ್ಣೆ
ಅಲ್ಲಿ ಇಕ್ಕ ಬಂಗಾರವ ನೀ ಇಲ್ಲೆ ಇಕ್ಕೆಣ್ಣೆ

ನೀ ಅಲ್ಲಿ ಉಡುಸೀರೆ ನೀ ಇಲ್ಲೇ ಉಡು
ತವರ ಗ್ಯಾನವಬಿಟ್ಟು

ನಿನ್ನ ಭಂಗಾವ ಮಾಡ್ಹೋಗು
ಮಕ್ಕಳ ದುಃಖಾವ ಮಾಡುತಾ

ಅವಳು ಅಂಗಳಾವ ಹತ್ತುತ್ತಾಳೆ
ಮಾವನ ಕಾಲ ಅವಳು ಕಟ್ಟಿ ಬೇಡುತಾಳೆ

ಹೇ ಮಾವಯ್ಯ ನನ ತಂದೆ
ನನ ತೌರಿಗೆ ಅಪ್ಪಣೆ ಕೊಡಿ

ನಾನೇನು ಮಾಡಲಿ ಹೊನ್ನಿ
ನಾನು ಮಾಡಿದ್ದಲ್ಲಾ

ನಮ್ಮ ಹಿರಿಯುವರು ಮಾಡಿದ್ದ
ನಾನೇನು ಹೇಳಲಿ ಹೊನ್ನಿ

ನಮು ಮನೆತನದಲ್ಲಿ ಕರೆದೆ
ಕಳುಸದೇ ಇಲ್ಲಾ

ಅಲ್ಲುಣ್ಣ ಊಟಾವ ನೀನೇ ಇಲ್ಲೇಉಣ್ಣು
ಅಲ್ಲಿ ಉಡುವ ಸೀರೆರವಿಕೆ ನೀ ಇಲ್ಲೆ ಉಡು

ಅಲ್ಲಿಕ್ಕ ಬಂಗಾರ ನೀ ಇಲ್ಲೇ ಇಕ್ಕು ಹೋಗೆ
ನೀ ತವರ ಗ್ಯಾನ ಬಿಟ್ಟು

ನಿನ್ನ ಭಂಗಾವ ಮಾಡ್ಲೋಗೆ
ಮಕ್ಕಳ ದುಃಖವಾ ಮಾಡುತಾ

ಅವಳು ಅಂಗಾಳ ಇಳಿದಾಳು
ಗಂಡನ ಕಾಲುಕಟ್ಟಿ ಬೇಡುತಾಳೆ

ಏಳು ತಿಂಗಳಿಗೆ ನೋಡಿ ನನ್ನ ಸರಿಸಮುದವರು
ತವರಿಗೆ ಹೋಯಿತಾರೆ

ನಾ ತಾಯಿತಂದೆಯಿಲ್ಲಾದ
ತಬ್ಬಲಿಯಾದನಲ್ಲಾ

ನಾ ತವರಿಗೆ ಹೋಯಿತಿನಿ
ನನಗೆ ತವರಿಗೆ ಅಪ್ಪಣೆಕೊಡಿ

ಹೆಂಡತಿ ಹೇಳುವ ಮಾತ ಕಿವಿಯಿಂದ ಕೇಳುತಾ
ಮಕ್ಕಳ ದುಃಖ ಅವರು

ಏನಂತ ಮಾಡುತಾರೆ ಅವರು
ಗೆಣೆಗಾರರ ಮಾತಕೇಳಿ ಹೊನ್ನಿ

ಮದುವೆಯಾಗಿ ಕೆಟ್ಟನಲ್ಲಾ
ತಾಯಿ ತಂದೆ ಇದ್ದಾಗ

ನನ್ನ ಮಾತೇನ ಹೊನ್ನಿ
ಅವರ ಮಾತ ಮೀರಿ ನಿನ್ನ

ತೌರಿಗೆ ಕಳುಸಿದರೆ ಜನ ಕುಳಗಳೆಲ್ಲಾ
ಆಡ್ಕಂಡು ನಗುತಾರೆ

ನಿನ್ನಯಾ ಗೋಳಾ ನಾ ಕಣ್ಣಿಂದ ನೋಡನಾರೆ
ನೀ ತವರ ಗ್ಯಾನ ಮಾಡಿ ಅತ್ತಾರೆ ಕರೆದಾರೆ

ನಿನ್ನ ಕಣ್ಣಿಗೆ ಕಾಣದಂಗೆ
ನಾ ದೇಸಾಂತರ ಹೋಯಿತಿನಿ

ಗಂಡನ ಕೊಳ್ಳ ಕಟ್ಟ್ಕಂಡು ಇವಳು
ದುಃಖನಾ ಮಾಡುತಾಳೆ

ನೀವು ದೇಸಾಂತರ ಹ್ವಾದರೆ ನಾ
ಇನ್ನೂ ತಬ್ಬಲಿಯಾದೆ

ತಾ ತವರಿಗೆ ಹೋಗುದಿಲ್ಲ ನೀವು
ದೇಸಾಂತರ ಹೋಗದು ಬ್ಯಾಡ

ನಿನಗೇನು ಬೇಕಾದರೆ ನನ ಕುಟೆ ಹೇಳೆ ಹೊನ್ನಿ
ಏನು ಬೇಕಾದರೆ ನಾ ತಂದು ಕೊಡುತಿನಿ

ನೀ ತವರ ಗ್ಯಾನ ಮಾಡಿ ನೀ
ಅತ್ತಾರೆ ಕರೆದಾರೆ

ನಿನ್ನ ಕಣ್ಣಲ್ಲಿ ನೋಡುವರು ನಿಮ್ಮ
ತಾಯಿ ತಂದೆ ಅವರೇನೆ

ಹಂಗಂತವ್ಳೇಳಿ ಅವರು
ಹೆಂಡತಿಗೆ ಹೇಳಿದರು

ಅವಳು ತವರು ಗ್ಯಾನ ಬಿಟ್ಟು
ಭಂಗಾವ ಮಾಡುತಾಳೆ

ಅವಳಿಗೆ ಎಂಟು ತಿಂಗಳು ತುಂಬಿ ಬಂದವಲ್ಲಾ
ಎಂಟು ತಿಂಗಳಿಗೆ ನನಗೆ

ಸೊಂಟ ಹೊಡತ ಅಂತಾಳೆ
ನಮ್ಮ ತಾಯಿಗೆ ಹೇಳಲಾಸ್ವಾಮಿ

ನಮ್ಮ ತಂದೆಗೆ ಹೇಳಲಾ ನನ ತಂಗೆಗೆ
ಹೇಳಲೆಂದು ಅವಳು ದುಃಖವ ಮಾಡುತಾಳೆ

ಒಂಭತ್ತು ತಿಂಗಳು ಅವಳಿಗೆ
ತುಂಬಿ ಬಂದವಲ್ಲಾ

ಹೇ ಒಂಬತ್ತು ತಿಂಗಳಿಗೆ ಅವಳು
ಏನಂತ ಹೇಳುತಾಳೆ

ಹೊತ್ತ್ಹೊತ್ತಿಗೆ ನನಗೆ ಬ್ಯಾನೆ ಬರುತವೆ
ಹೊತ್ತ್ಹೊತ್ತಿಗೆ ನನಗೆ ಕತ್ತೀಲಿ ಕಡಿದ್ಹಂಗೆ

ನಮ್ಮ ತಾಯಿಗೇಳಲಾ ನನ ತಂಗಿಗೆಳಲಾ
ಗಂಟೆಗಂಟೆಗೂ ಬ್ಯಾನೆ ಚೂರೀಲಿ ಇರಿದ್ಹಂಗೆ

ನಾ ಹಿಂದೆ ಕಂಡವಳಲ್ಲಾ ನಾ ಮುಂದೆ ಕಂಡವಳಲ್ಲ
ನನ್ನಯ ಕಷ್ಟವಾ ನಾ ಯಾರಿಗೆ ಹೇಳಲಿ

ಹಂಗಂತಪ್ಹೇಳಿ ಅವಳು ದುಃಖನಾ ಮಾಡುತಾಳೆ
ಅವರತ್ತೆ ಮಲ್ಲಮ್ಮ ತಾಯಿ ಕಿವಿಯಿಂದ ಕೇಳಿದರು

ಆಕೆ ಮಲ್ಲಮ್ಮ ತಾಯಿ ಗಂಡಗೆ ಏನಂತ ಹೇಳುತಾರೆ
ಹೇ ಎಲೆ ದೊಡ್ಡಹೊನ್ನಿ ನೋವುಂತ ಮಲಗಿವಾಳೆ

ಮೂಲೆಯ ಸೇರುತಾಳೆ ಮಕ್ಕಳ ದುಃಖಮಾಡುತಾಳೆ
ಹೇ ಸೂಲಗಿತ್ತಿ ಸಂಗಮ್ಮನ ನೀವು ಕರ್ಕಂಡು ಬರ್ಹೋಗಿ

ಅವರಾಗ ಓಡ್ಹೋಗಿ ಸೂಲಗಿತ್ತಿ ಕರ್ಕಂಡು
ಸೂಲಗಿತ್ತಿ ಸಂಗಮ್ಮ ಓಡಿಬಂದವಳಲ್ಲಾ

ಸೂಲಗಿತ್ತಿ ಸಂಗಮ್ಮನ ಕಾಲ ಕಟ್ಟುತಾಳೆ
ನಾನು ತಾಯಿ ತಂದೆ ಇಲ್ಲಾದ ತಬ್ಬಲಿ

ನನ್ನಾವ ಕಷ್ಟವ ಯಾರಿಗೇಳಲಿ
ನನಗೆ ತಾಯಿತಂದೆ ನೀನೆಯೆ

ಹೇ ಸೂಲಗಿತ್ತಿ ಸಂಗಮ್ಮ
ನೀ ಅಳಬ್ಯಾಡ ನನ ಕಂದಾ

ನನ ಮಗೂನ್ಹಂಗೆ ನಿನ್ನ ಕಷ್ಟ ನೋಡುವೆ
ನಿಮ್ಮ ಹಣೇಲಿ ಬರದಕೆ ಯಾರೇನ ತಾಯಿ ಮಾಡರು

ಎಟೊ ಗ್ಯಾನಮಾಡಿದರೂ ನಿಮ್ಮ ಕಷ್ಟ ನೋಡುವೆ
ನಿಮ್ಮ ಹಣೇಲಿ ಬರೆದರೆ ಯಾರೇನ ತಾಯಿ ಮಾಡರು

ಎಟೊ ಗ್ಯಾನ ಮಾಡಿದರೂ ನಿಮ್ಮ ಕಷ್ಟ ತೀರಾದು
ಅವಳು ಎಂಣೆ ಮಂತ್ರಿಸಿದಳು ಸೊಂಟಾಕೆ ತಿಕ್ಕುತಾಳೆ

ಗಂಡು ಮಗವೊಂದು ಸೂರ್ಯನಾಗೆ
ಜರಣವಾಯಿತ್ತಲ್ಲಾ

ಸಕ್ಕಳು ಕಟ್ವ್ಯಾರು ನೀರಾ ಮಿಾಯಿಸ್ಯಾರು
ಅವಳಿಗೆ ಅಡಕವ ಮಾಡುತಾರೆ

ಸೂಲಗಿತ್ತಿ ಸಂಗಮ್ಮಗೆ
ಮೊರ ಹೊನ್ನು ಮರ್ರ್ವಾದೆ

ಅವಳಿಗೆ ಕೊಟ್ಟು ಕಳುಸುತಾರೆ ಇವಳಿಗೆ
ಹನ್ನೆಡು ದಿನಾಕೆ ಸೂತಕವಾ ತೆಗೆದಾರೂ

ತಿಂಗಳಿಗೊ ಮೂರು ದಿನ ಕಮ್ಮಿಯಾಗಿ
ಉದ್ದಾಗ ಸೈವಾಗಿ

ನಾವು ಗಂಗೆಯ ಮೆಡಿಸಾಣ ಅವರು
ಮಾತಾನಾಡದ ಇವಳು ಕಿವಿಯಿಂದ ಕೇಳೀಳು

ಅವಳಾಗ ಹೊನ್ನಮ್ಮ ಕುಳವಾಡಿಯ ಕರೆಸ್ಯಾಳು
ಹೇ ಕುಳವಾಡಿಗಿ ಊಟಕಿಕ್ಕಿ ಇಳ್ಯಾವ ಕೊಡುತಾಳೆ

ಮಾರುದ್ದವಾಲೆಯ ಬ್ಯಾಗನೆ ತಗದವಳೆ
ಅವರ ತಾಯಿ ಹಡದವ್ವಗೆ ಏನಂತ ಸುದ್ದಿ ಬರದವಳೆ

ಹೇ ತಾಯಿ ಹಡವವ್ವ ನನಗೆ ಯಾರಿದ್ದರೇನು
ನಾನು ತಬ್ಬಲಿಯಲ್ಲಾ

ಏಳು ತಿಂಗಳಿಗೆ ಏಟೊ ಬಿದ್ದು ಬೇಡಿದರುವೆ
ನನ್ನ ತೌರಿಗೆ ಕಳುಸ್ಯಾರು

ಗಂಡು ಮಗುವು ನನಗೆ ತಾಯಿ ಜನಣವಾಗದೆ
ಹನ್ನೆಡು ದಿನಾಕೆ ನನ್ನ ಸೂತಕವಾ ತಗದವರೆ

ತಿಂಗಳಿಗೆ ಮೂರು ದಿನ ಕಮ್ಮಿಯಾಗಿ
ನನ್ನ ಗಂಗೆ ಮೆಟ್ಟಿಸುತಾರೆ

ನಾನಿಲ್ಲಿ ಸಾಮಾನಿಲ್ಲದೇ ಗಂಗೆಪೂಜೆ ಮಾಡುದಿಲ್ಲ
ಇದಕೇನು ಸಾಮಾನು ತಾಯಿ ಕೊಟ್ಟು ಕಳುಸಬೇಕು

ಹೆಂಗಂತಾವ್ಹೇಳಿ ಅವಳು ಕರಕರನೆ ಬರೆದವಳೆ
ಕೊಳ್ಳಪ್ಪ ಕುಳವಾಡಿ ನೀ ಕ್ವಾಟೆಯೂರಿಗೆ ಹೋಗು

ಹೇ ಕ್ವಾಟೆಯೂರಿಗೆ ಹೋಗಿ ನಮ್ಮ ತಾಯಿ ಹಡದವ್ವಗೆ
ನೀ ಈ ವಾಲೆ ಕೊಡುಹೋಗು

ವಾಲೆಯ ತಕ್ಕಂಡು ಅವನು
ಓಡಿಹೋದನಲ್ಲಾ

ಚಿಕ್ಕಹೊನ್ನಿ ಕುಳವಾಡಿ ಮುಖವನೆ ಕಂಡು
ವಳಗೆ ಅವಳು ಓಡೋಡಿ ಹೋಯಿತವಳೆ

ಹೇ ತಾಯಿ ಹಡದವ್ವ ನಮ್ಮಕ್ಕನ ಪಟ್ಟಣದ
ಕುಳವಾಡಿ ಬತ್ತಾವನೆ

ಹೇ ಸುಮ್ಮನಿರೆ ನನ್ನ ಕಂದಾ
ನನ್ನ ಹೊಟ್ಟೆ ಉರಿಸಲುಬ್ಯಾಡ

ನಿಮ್ಮಕ್ಕನಾ ಸುದ್ದಿ ನಾ
ಕಿವಿಯಿಂದ ಕೇಳನಾರಿ

ಹೇ ಮಾತುಮಾತಿಗೆ ಕುಳವಾಡಿ
ಬಾಗಿಲಿಗೆ ಹೋದಾನೊ

ಅವರಾಗ ಅರಸರಾಯರು ಅವರು
ಮಂಚದ ಮ್ಯಾಲೆ ಕುಂತವರೆ

ಇವನು ಬಗ್ಗಿ ಸರಣೆಂದಾ
ಇವನು ಬಾಗಿ ಸರಣೆಂದಾ

ಅವರ ತಾಯಿ ಹಡದವ್ವಾ
ಅವರು ಈಚೆಗೆ ಬರುತಾರೆ

ಬಂದೆಪ್ಪಾ ಕುಳವಾಡಿ ನೀ
ಚೆಂದಾಗಿದ್ದೆನಪ್ಪಾ

ಹೇ ಬಂದೆ ನನ ತಾಯಿ
ಚೆಂದಾಗಿದ್ದೆನವ್ವಾ

ನಿನ್ನ ಒಡತಿ ಹೊನ್ನಮ್ಮತಾಯಿ
ಚೆಂದಾಗಿದ್ದಾಳೇನೊ

ನಿನ್ನ ಒಡೆಯ ಬೊಮ್ಮಸೆಟ್ಟರು
ಚೆಂದಾಗನರೇನೊ

ಅವರೆಲ್ಲಾ ಚೆಂದಾಗಿ ಅವರಲ್ಲಾ
ನನ್ನ ತಾಯಿ ಹೊನ್ನಮ್ಮ

ಒಂದು ವಾಲೆಯು ಕೊಟ್ಟವರೆ
ಹೇ ವಾಲೆಯು ತೆಗೆದಾನು

ಅವರ ಕೈಲೆ ಕೊಡುತಾನೆ
ಹೇ ಚಿಕ್ಕಹೊನ್ನಿ ನನಕಂದಾ

ಈ ಕುಳವಾಡಿಗೆ ಊಟಕಿಕ್ಕಿ
ಹೇ ಊಟಉಂಡವನಿಗೆ

ಅವನಿಗೆ ಇಳ್ಯಾವ ಕೊಡುತಾರೆ
ಹೇ ಇಳ್ಯಾವ ಕೊಟ್ಟು

ಅವರು ತಾಯಿ ಹಡದವ್ವಾ
ಹೋದಂತಾ ವಾಲೆಯು

ಅವರು ಓದಿ ನೋಡುತಾರೆ
ಕೇಳಿಲೆ ಗಂಡಸೆ ನಾನೇನೆಂದು ಹೇಳಲಿ

ನಿಮ್ಮ ಕಂದವ್ವ ಬರೆದಿರುವ ವಾಲೆಯು
ನನಗೆ ಹೇಳಕೆ ಬಾಯಿಬರದು

ಏಳು ತಿಂಗಳಿಗೆ ಎಟೊ ಬಿದ್ದು ಬೇಡಿದರುವೆ
ಅವಳ ತವರಿಗೆ ಕಳುಸದೆ

ಗಂಡು ಮಗುವಿಗೆ ಜರಣವಾಗ್ಯತಲ್ಲಾ
ಆಗ ಅರಸರಾಯರು ತನ್ನ ಕಿವಿಯಿಂದ ಕೇಳುತಾ

ಅವಳ ಸುದ್ದಿ ನಾ ಕಿವಿಯಿಂದ ಕೇಳನಾರಿ
ಆ ಪಾಪಿಯಾನ ಮನೆಗೆ ನಾ ಹೆಣ್ಣು ಕೊಡಬಹುದಾ

ಮಾತ ಕೇಳುತ ಅವರು ಮಕಾಡೆ ಮನಗಿದರು
ತವರ ಗ್ಯಾನ ಮಾಡಿ ಅವಳು ಅತ್ತಾಳ ಕರದಾಳ

ತಾಯಿ ತಂದೆ ಅಂತೆ ನಮ್ಮ ಗ್ಯಾನ
ಎಟೊ ಮಾಡವಳೆ

ನನ್ನ ಹಾಳು ಕಿವಿಯಿಂದ ನಾ ಕೇಳಲಾರೆನಲ್ಲೆ
ಏನು ಬೇಕಾದರೂ ಕೊಟ್ಟು ಕಳುಸೇ

ದುಃಖವಾ ಮಾಡುತಾರೆ
ಮಕಾಡೆ ಮನಗಿದರು

ಈ ಹೊಸ ಸುದ್ದಿಯು ಕೇಳಿದರು
ಅವಳಾರಣ್ಣದೀರು

ಅವಳಾರವಂದಿ ಅತ್ತಿಗೇರು
ಅವಳ ತಂಗಿ ಚಿಕ್ಕಹೊನ್ನಿಯಲ್ಲಾ

ವಕ್ಕಳ ದುಃಖವಾ ಮಾಡುತಾರೆ
ನಮ್ಮ ಮಾವನ ನೋಡಲಿಕೆ

ಹೊನ್ನಮ್ಮನಿಗೆ ರುಣವಿಲ್ಲಾ
ಅವಳಾವ ನೋಡಲಿಕೆ

ನಮಗೆ ರುಣವಿಲ್ಲಾ
ಈ ಪಾಪಿಯಾನೆ ಮನೆಗೆ ನಾವು

ಹೆಣ್ಣು ಕೊಡಲುಬಹುದೇ
ದುಃಖವಾ ಮಾಡುತಾ

ಅವರು ಮಡಿವಾಳಿಯ ಕರಸ್ಯಾರು
ಅವನಾಗ ಮಡಿವಾಳಿ

ಓಡಿ ಬಂದನಲ್ಲಾ ಬಂದ ಮಡಿವಾಳಿಗೆ
ಊಟಿಕಿಕ್ಕವರೆ ಊಟ ಉಂಡವನಿಗೆ

ಇಳ್ಯಾವ ಕೊಡುತಾರೆ ಅವರು
ಒಂದು ಹೊಸ ಹೆಡಿಗೆ ತೆಗೆದವರೆ

ಅದಕೆ ಸಾಮಾನು ತುಂಬುತನರೆ
ಹೇ ಪಟ್ಟೆಯಾನೆ ಸೀರೆ

ಕುಸುಲೆಯಾನೆ ರವಿಕೆ ಒಂದು
ತುಡುವಿನೊಡವೆ

ಮುತ್ತಿನವಲಕ್ಕಿ ಎಲ್ಲಾನು
ತುಂಬಿದರು ನೋಡು

ಪೂಜೆಯು ಸಾಮಾನಾ ಬ್ಯಾಗನೆ
ತುಂಬವರೆ ಮಗಿಗೆ ತಕ್ಕಬೇಕೊಂತ

ಅಂಗಿ ಕುಂಚಿಗೆ ತೆಗೆದವರೆ
ಕೊರಳಿಗೆ ತಕ್ಕಾದ

ಪದಕಾವ ತಗದವರೆ ಅದರ
ಸೊಂಟಕೆ ತಕ್ಕಾದ

ವಜ್ರಾದ ಉಡುದಾರ ಮಡ್ಗವರೆ
ಕೈಗೆ ತಕ್ಕಾದ

ಜಿಲಕೆಯು ಮಡಗವರೆ
ಚಿನ್ನದಾನೆಯು ತೊಟ್ಟಿಲು

ನೋಡು ರನ್ನದಾನೆಯು ನ್ಯಾಕೆ
ಹಾಸಾಕೆ ಹೊದುಸೋಕೆ

ಅದಕೆ ಪಟ್ಟೆಯ ಮಡ್ಗವ್ರೇ
ಅವರೆಲ್ಲಾ ಮಡಿಕೊಂಡು

ತಾಯಿ ಹಡದವ್ವಾ ಆಕೆ
ಹಾಡಿಕೊಂಡೆ ಅಳುತವರೆ

ಕಂದಾ ನಮಗೆ ರುಣವಿಲ್ಲ
ನಮ್ಮಾವ ನೋಡೋಕೆ

ನಿನಗೆ ರುಣವಿಲ್ಲ ನಾನೆಲ್ಲವ
ಇಕ್ಕಂಡು ಎತ್ತಿಕೊಂಡು

ಮುದ್ದಾಡೋ ರುಣವಿಲ್ಲ
ಅವಳು ಬ್ಯಾಡಕನೊ ಮಗನೆ

ನೀನು ಸುಮ್ಮಾನೆ ಮಲಗಪ್ಪಾ
ನಿನ್ನೆತ್ತಿ ಮುದ್ದಾಡಿದರೆ

ನಿಮ್ಮವ್ವಗೆ ಭಂಗ ದೊಡ್ಡವಲ್ಲಾ
ಭಂಗ ಮಾಡಲಿಲ್ಲಾಂತ

ಅವಳ ಹೊಡೆದಾರೆ ಬೈದಾರೆ
ಕಂದಾ ದೊರ್ಯಾರಿಗೆ ಹೇಳುತಾಳೆ

ಅಳಬೇಡೊ ಕಂದಾ ನೀನು
ಸುಮ್ಮಾನೆ ಮಲಗಪ್ಪ

ನಿನ್ನ ಅಜ್ಜ ಅಮ್ಮನ ಗುರುತ
ನೀನು ಕಣ್ಣಲ್ಲಿ ಕಾಣಲೊ

ಇವು ಎಲ್ಲ ಮಡಿಕಂಡು
ಅವಳು ಬಿಕ್ಕಿ ಅಳುತಾಳೆ

ಹೆಡಿಗಿಗೆ ತುಂಬುವಳೇ ತಂದು
ಮಡಿವಾಳಿಗೆ ಕೊಡುತಾಳೆ

ಮಡಿವಾಳಿಗೆ ಬಂಗಾರ ಕೊಟ್ಟವಳೆ
ಮಡಿವಾಳಿ ಕೊಳ್ಳಿಗೆ ಕಟ್ಟಿಕೊಂಡು

ನನ ಮೊಮ್ಮಗನ ನೋಡಕೆ
ನಮಗೆ ರುಣವಿಲ್ಲಾ

ಅದರ ಅಂದ ಚಂದವ
ನೀನು ನೋಡಿಬಾರೋ

ನಿಮಗಿಂತ ತಾಯಿ ನಾನೆ
ಹೋಗಿಬತ್ತೀನಿ

ದುಃಖಮಾಡಬ್ಯಾಡ ತಾಯಿ
ಸುಮ್ಮನಿರಿ ತಾಯಿ

ಹಂಗಂತಾವ್ಳೇಳಿ ಹೆಡಿಗೆ
ಬಂಗಾರ ತಕ್ಕಂಡು

ಮಳೆತೆಯಊರಿಗೆ ಮಡಿವಾಳಿ
ಹೋಗವನೆ

ಈ ಮಡಿವಾಳಿ ಮುಖಾವ
ಕಂಡವಳೆ ಹೊನ್ನಮ್ಮಾ

ಹೆಡಿಗೆ ಬಂಗಾರ ಇಸ್ಗಂಡು
ಅವಳು ಅಂಗಾಲ ತಟ್ಟುತ್ತಾಳೆ

ಬಂದ್ಯಪ್ಪ ಮಡಿವಾಳಿ ನೀನು
ಚಂದಾಗಿ ಇದಿಯೇನೂ

ನನ್ನ ತಂದೆ ಅರಸರಾಯರು
ನನ್ನ ಹಡದವ್ವ ತಾಯಿ

ನನ ಆರಾಳ ಅಣ್ಣದೀರು
ನನ ಆರಾಳ ಅತ್ತಿಗೇರು

ನನ ಚಿಕ್ಕಿಹೊನ್ನೆಲ್ಲಾ
ಚಂದಾಗಿ ಅವರೇನಪ್ಪಾ

ಅವರೆಲ್ಲಾ ಹೊನ್ನಮ್ಮಾ ಬಹಳ
ಚೆಂದಾಗಿ ಅವರಲ್ಲಾ

ನೀರಕೊಡುತಾಳೆ ಅವನಿಗೆ
ಊಟಕಿಕ್ಕುತಾಳೆ

ಊಟಮಾಡಿದವನಿಗೆ ಅವಳು
ಇಳ್ಯಾವ ಕೊಡುತಾಳೆ

ಈ ಬಂಗಾರ ತಗೊಂಡು
ಮಗಿಗೆ ಬಂಗಾರ ಇಕ್ಕುತಾಳೆ

ಅಂಗಿ ಕುಂಚಿಗೆ ಇಕ್ಕುತಾಳೆ
ಕೊಳ್ಳಿಗೆ ಪದಕಾವ ಇಕ್ಕುತಾಳೆ

ಸೊಂಟಕೆ ಉಡುದಾರ ಕಟ್ಟುತಾಳೆ
ಅವಳು ಎತ್ತಿ ಮುದ್ದಾಡುತಾಳೆ

ಇವೆಲ್ಲಾ ಇಕ್ಕಿಕೊಂಡು ಕಂದಾ
ನಿಮ್ಮಮ್ಮ ಅಜ್ಜ ಎಲ್ಲಾರು

ಎತ್ತಿ ಎಟೊ ಮುದ್ದಾಡರೋ
ಅಪರಾವ ನೋಡೋಕೆ ಕಂದಾ ನಿನಗೆ ರುಣವಿಲ್ಲಾ

ನಿನ್ನಾವ ನೋಡೋಕೆ ಕಂದಾ
ಅವರೀಗೆ ರುಣವಿಲ್ಲಾ

ತೊಟ್ಟೀಲಿಗೆ ಮಲಗಿಸವಳೆ
ಪಟ್ಟೆಯ ಹೊದಿಸವಳೆ

ಚಿನ್ನದ ಜಾಲಿಗೆ ಹಾಕಿ
ಅವಳು ತೂಗಿ ಮಲಗಿಸ್ಯಾಳು

ಅವರ ತಾಯಿ ಕೊಟ್ಟಂತ
ಗಂಗೆ ಪೂಜೆ ಸಾಮಾನ ತಕ್ಕಂಡು

ನಾಲಗ ಸೈತಾ ಗಂಗೆಯಾನೆ ಮೆಟ್ಟ
ನೀರ ತಂದವಳಲ್ಲಾ ಬಂದ ನೆಂಟರಿಗೆ

ಊಟಾವ ಕೊಡುವವರಿಗೆ
ಊಟಾವ ಕೊಡುತಾರೆ

ಇಳ್ಯಾವ ಕೊಡುವವರಿಗೆ
ಇಳ್ಯಾವ ಕೊಡುತವರೆ

ಕ್ವಾಟೆಯುೂರ ಮಡಿವಾಳ
ನಾನು ಹೋತೀನಿ ಅಂತಾನೆ

ಅಂದಾಗ ಹೊನ್ನಮ್ಮ ದುಃಖಾವ ಮಾಡುತಾಳೆ
ಹೋಗೋರು ಹೋತಿಯೆ

ನೀನು ಬರುವುದೇಸು ದಿನಾ
ನಾನಿಲ್ಲಿಗೆ ತಿಂಗಳಿಗೆ

ನಾ ಬಂದು ತಾಯಿ ಹೋತೀನಿ
ಈ ಭಂಗ ದೊಡ್ಡದೆಂದು

ಗಂಡನೊಳಗೆ ಸಲಗೆ ಬ್ಯಾಡ
ನಾ ನೀರ ಮುಟ್ಟಸೊತ್ತಿಗೆ

ನಾ ಬಂದು ಹೋತೀನಿ
ಹಂಗಾಂತವ್ನೇಳಿ ಅವನು

ಕ್ವಾಟೆಯೂರಿಗೆ ಹೋದಾನು ಮಡಿವಾಳಿ
ನೀರು ತಂದಿಲ್ಲಿಗೆ ತಿಂಗಳೆಂಡಾದೊ

ಮೂರು ತಿಂಗಳಾದು ನೋಡು
ತಾಯಿ ಹೊನ್ನಮ್ಮಾಗೆ

ಮೂರು ತಿಂಗಳಿಗೇ ಘಟ್ಟಾದ ಗೆಣೆಕಾತರೂ
ಘಟ್ಟಕ್ಕೆ ಹೊಂಟವರಲ್ಲೋ

ಇದುವೇನು ಬೊಮ್ಮಣ
ನೀನು ಘಟ್ಟಕೆ ಬರುವುದಿಲ್ಲವೋ

ಈ ಬಾರಿ ನೋಡು ಅಗ್ಗೇನು ತಗ್ಗೇನು
ನೋಡಿ ಬರುವೋಣ

ಏಳಲೋ ಬೊಮ್ಮಣ್ಣಾ
ಕೇಳಿರೆ ಗೆಣೆಕಾರರೆ

ನಾನು ಏನೂಂತ ಹೇಳಲಿ
ಅವಳು ಮೂರು ತಿಂಗಳ ಬಾಣಂತಿ

ನಾ ಬಟ್ಹಂಗೆ ಬರಲೀ
ಇದು ಒಂದು ಸಲಕೆ

ನಾನು ತಮ್ಮಾನ ಕಳುಸೇನು
ಗೆಣೆಕಾರರೆಲ್ಲಾ

ಕಿಕಕಿಲನೆ ನಗುತಾರೆ ನಿನಗೆ
ಇರುವರು ಹೆಂಡರು

ನಮುಗಿಲ್ಲವೇನೊ ನಿನಗೆ
ಇರುವ ಮಕ್ಕಳು

ನನುಗಿಲ್ಲವೇನೊ ನೀ
ಮದುವೆಯಾದಮ್ಯಾಲೆ

ನಮ್ಮ ಗೆಣೆತನವ ಬಿಟ್ಟೇನೂ
ಗೆಣೆಕಾರರೇ ಗೆಣೆಕಾರರೇ

ನೀವು ಸಿಟ್ಟಮಾಡಬ್ಯಾಡಿ
ನಾನೂವೆ ಬತ್ತೀನಿ

ಅಲ್ಲಿಂದ ಬೊಮ್ಮಣ್ಣ
ಅರಮನೆಗೆ ಬರುತಾರೆ

ದೊಡ್ಡಹೊನ್ನಿ ಎಲೆ ಹೆಣ್ಣೆ
ನೀನು ರೊಟ್ಟಯಾನೆ ಸುಡೆ

ನೀನು ಬುತ್ತೀಯಾನೆ ಕಟ್ಟೇ
ನನ್ನ ಘಟ್ಟದ ಗೆಣೆಕಾರು

ಅವರು ಘಟ್ಟಾಕೆ ಹೊಂಟವರಲ್ಲ
ನಾನು ಹೋಗಿ ಬತ್ತೀನಿ

ನನ್ನ ಪಟ್ಟಣ ಬಲು ಜೋಕೆ
ಗಂಡನ ಕೊಳ್ಳ ಕಟ್ಟಗಂಡು

ಇವಳು ದುಃಖವ ಮಾಡುತಾಳೆ
ನಾ ಮೂರು ತಿಂಗಳ ಬಾಣಂತಿ

ನೀವು ಬುಟ್ಟುಂಗೆ ಹೋಯ್ತಿರಿ
ನೀವು ಘಟ್ಟಕೆ ಹೋದಾರೆ

ನನ್ನ ತೌರೀಗೆ ಕಳುಸ್ಹೋಗಿ
ಗಂಡ ಘಟ್ಟಕ್ಹೋದ

ಹೆಂಡತಿ ತೌರೀಗೆ ಹೋದಳೂ
ಹಂಗುಂತವ್ಹೇಳಿ

ಜನರು ಆಡ್ಕಂಡು ನಗುತಾರೆ
ಇದೊಂದು ಸಲಕೆ

ನಿಮ್ಮ ತಮ್ಮನ ಕಳುಸ್ಹೋಗೀ
ಅವರು ಹೇರು ಕೆಡಗಿದುತಾವ

ಇವನಿಗೆ ಹೇರು ಕೆಡುಗಾಲು ಬರದು
ಅವರು ಘಟ್ಟ ತಿರುಗಿದಂಗೆ

ಇವನಿಗೆ ಘಟ್ಟ ತಿರುಗಾಗೆ ಬರದೂ
ಇದೊಂಡು ಸಲಕೆ

ನಾನ್ಹೋಗಿ ಬತ್ತೀನಿ ಅವಳು
ದುಃಖಾವ ಮಾಡುತಾಳೆ

ಅವಳು ರೊಟ್ಟೀಯ ಸುಡುತಾಳೆ
ರೊಟ್ಟಿಯ ಸುಟ್ಟಾರೆ ನೋಡು

ರೊಟ್ಟಿಲ್ದ ಬಾಗಾದೂ
ಇದುವೇನೆ ಎಲೆಗಂಡಸೆ

ನೋಡಿ ಮುಂದಲ ಕಿರುಚಿಣುಕೆ
ಹಸಿಟ್ಟ ತರಿಯಾಗಿ

ರೊಟ್ಟಿಯೆಡಾದಾವೂ
ಇದಕ್ಕೊಂದು ಏಚನೆಯಾ

ಮಾಡಲುಬ್ಯಾಡ ಹೊನ್ನಿ
ನಾ ಬುತ್ತಿಯ ಕಟ್ಟಿದೇನು

ಬುತ್ತಿಲ್ದ ಭಾಗಾದ
ಕಲ್ಲು ಸಿಕ್ಕೀತು ಕಾಣೆ

ಇದಕ್ಕೊಂದು ಏಚನೆಯಾ
ನೀನು ಮಾಡಲುಬ್ಯಾಡ

ಅಡಿಗೆ ಮಾಡಿದಾಳು
ಗಂಡಾಗೆ ಊಟಕಿಕ್ಕತಾಳೆ

ನಾ ಘಟ್ಟಕೆ ಹೋಗುವವನು
ನಾ ಒಬ್ಬ ಊಟನ ಮಾಡುದಿಲ್ಲ

ನಾವು ಇಬ್ಬರೂ ಎಲೆ ಹೊನ್ನಿ
ಊಟ ಮಾಡುವನೂ ಬಾರೆ

ಅವರಿಬ್ಬರು ಕುತ್ಕಿಂಡು ಊಟಾಮಾಡುತಾರೆ
ಅವರು ಇಳ್ಯಾವ ಮೆಲುತಾರೆ

ಇಳ್ಯಾವ ಮೆಲುತಾ ಅವರು
ಮಾತಾಡುತಾರೆ

ನಾನು ಘಟ್ಟಕೆ ಹೋಗಿ ನಿನಗೆ
ಸೀರೆ ರವಿಕೆಯ ತತ್ತ್ರೇನಿ

ಹೇ ಬುಟ್ಟುಹ್ವಾದರಂತ
ನೀ ಸಿಟ್ಟ ಮಾಡಬ್ಯಾಡ

ಹೇ ಭಂಗ ದೊಡ್ಡದೊಂತ
ಕಂದಾನ ಅಳಸಿಯೇ

ದಾರಿ ನೋಡಬ್ಯಾಡ ನೀ
ನನ್ನಗ್ಯಾನ ಮಾಡಬೇಡ

ನನ್ನ ಕಂದಾಗೆ ತಕ್ಕಂತ
ಅಂಗಿ ಕುಂಚಿಗೆ ತಂದೇನು

ಹೇಳಾದೆ ಕೇಳಾದೆ ನೀ
ತವರಿಗೆ ಹ್ವಾದಯೆ

ನಿಮ್ಮ ತಂಪಿಗೆ ಕೆಟ್ಟ ಹೆಸರ
ತರಬ್ಯಾಡ ಎಲೆ ಹೊನ್ನಿ

ಗಂಡ ಹೇಳುವ ಮಾತ ಹೊನ್ನಿ
ತನ್ನ ಕಿವಿಯಿಂದ ಕೇಳಿದಳು

ರೊಟ್ಟೆಯ ಬುತ್ತಿತಗೊಂಡು
ಅವರು ಎತ್ತಿನ ಮ್ಯಾಲೆ ಹೇರ್‍ಯಾರು

ಕುದುರೆಯ ಹಿಡಿದವರೆ ಅದಕೆ
ಸುಂಗಾರವ ಮಾಡವರೆ

ಅದಕೆ ಜೀನಾನೆ ಬಿಗಿದವರೆ
ಅದಕೆ ಕಡಿವಾಣನೆ ಹಾಕವರೆ

ಮುತ್ತಿನ ಸಬರಾವ ಹಾಕವರೆ
ಮತ್ತೀನ ಗ್ಯಾನ ಮಾಡುತವರೆ

ನಾ ಹೋಗವನು ಹೋಯಿತಿನಿ
ನನ ಕಂದಾನ ಮುದ್ದಾಡನಿಲ್ಲ

ಕಂದನ್ನೆತ್ತಿಕೊಂಡು ಅವರು
ಮುದ್ದಾನಾಡುತ್ತವರೆ

ಅವಳು ಬ್ಯಾಡಕಣೂ ಮಗನೆ
ಸುಮ್ಮನಾಡೂ ಮಗನೆ

ನಿಮ್ಮ ತಾಯಿಗೆ ಭಂಗ
ಬಲುದೊಡ್ಡದು ಮಗನೆ

ನಾನು ಘಟ್ಟಕೆ ಹೋಗಿ ನಿನಗೆ
ಅಂಗಿ ಕುಂಚಿಗೆ ತತ್ತೀನಿ

ಮಗನ ಮುದ್ದಾಡಿದಾರು
ತೊಟ್ಟಿಲಿಗೆ ಮನಗಿಸಿದಾರು

ಹೋಗಿ ಬರ್‍ತೀನಿ ನನ ಹೊನ್ನಿ
ಪಟ್ಟಣ ಬಲುಜೋಕೆ

ಹಂಗಂತೆವ್ಳೇಳಿ ಅವರು
ಕುದುರೆಯ ಹೇರವರೆ

ಗಂಡಾನ ಕಾಲಿಗೆ ಇವಳು
ಸರಣು ಮಾಡುತ್ತಾಳೆ

ಹೋಗವರು ಹೋಯಿತಿರಿ ನೀವು
ಸುಖವಾಗಿ ಬನ್ನಿರಪ್ಪಾ

ಹೊನ್ನಿ ಸುಖವಾಗಿ ಬತ್ತೀನಿ ನೀ
ನನಗ್ಯಾನ ಮಾಡಲು ಬ್ಯಾಡ

ಹಂಗಂತವ್ಳೇಳಿ ಒಂದು ಮೆಟ್ಟಿಗಿಯು
ಇಳಿದವರೆ ಅವರ ಬಲಗಾಲು ಯಡಗೀತು

ಎಲ್ಡ ಮೆಟ್ಟಿಗಿಯು ಇಳಿದವರೆ
ಅವರ ಎಡಗಾಲ ಯಡಗೀತು

ಮೂರು ಮೆಟ್ಟಿಗಿಯು ಇಳಿದವರೆ
ಅವರ ಕುದುರೆ ಮುಂದಕೆ ಮುಗ್ಗರಸ್ತೈತೆ

ಇದುವೇನೆ ಎಲಿತೇಜಿ ನಿನಗೆ ಬಲವೆ ಇಲ್ಲವಾ
ಯಡ್ಗಾತ ಮುಗ್ಗುತಾ ನೀನು

ದಾರಿಯ ನಡೆದೆಯಾ ಹಂಗಂತವ್ಳೇಳಿ
ಅವರು ಊರಬಾಗಿಲಿಗೆ ಹೋಗುತಾರೆ

ಹಿಂತಿರುಗಿ ನೋಡಿದರೆ ಹೊನ್ನಮ್ಮ
ಹಿಂದಟ್ಟ ಹೋಗುತಾಳೆ

ಇದುವೇನೆ ಹೊನ್ನಿ ನಿನಗೆ
ಬುದ್ಧಿ ಇಲ್ಲವೇನೆ

ಗೆಣೆಕಾರರೆಲ್ಲಾ ಬುಟ್ಟುಹೋತಾರೆ
ನಾನೊಬ್ಬನಾಗುತೇನೆ

ನನಗೆ ಹೆದರಿಕೆಲ್ಲೇನೆ
ನಾ ಇಲ್ಲಿಗೆ ತಿಂಗಳಿಗೆ

ಒಂದು ಸಾರಿ ಬಂದು ಹೋತಿನಿ
ನೀ ಪಟ್ಟಣಕೆ ಹಿಂದಕ್ಹೋಗು

ಅವಳಾಗ ಹೊನ್ನಮ್ಮ ಹಿಂದಿರುಗಿ ಬತ್ತಾಳೆ
ಅವಳು ಭಂಗ ಮಾಡುತವಳೆ

ಗಂಡ ಘಟ್ಟಕೋಗಿ ಮೂರುದಿನವಾದವಲ್ಲೊ
ಮೂರುದಿನಕೆ ಮೂಡಲದೇಸ

ಮೂರು ಸಾವಿರ ಒಡ್ಡಾರು
ಈ ಮಳೆತೆ ಬ್ಯಾರೆಯಮ್ಯಾಲೆ

ಗುಡಾರ ಹೊಡುತವರೆ
ಇವಳಾಗಲೆ ಹೊನ್ನಮ್ಮ

ನೀರಿಗೆ ಹೋಯಿತವಳೆ ಒಬ್ಬ
ಒಡ್ಡಗೌಡ ಬಂದು ಸರಣು ಕೊಡುತಾನೆ

ಅವ್ವ ಅವ್ವ ನನ ತಾಯಿ
ನೀ ಯಾರ ಮಗಳವ್ವಾ

ನೀ ಯಾರ ಸೊಸೆಯವ್ವಾ
ಯಾವ ಪಟ್ಟಣ ನಿಮ್ಮದು

ಹೇಳೆ ನನ್ನ ತಾಯಿ ಅವ್ವ ಯಾರು
ನೀವು ಚೆಂದಾಗಿ ಹೇಳಿರಿ

ನಾನು ಕ್ವಾಟೆಯೂರ ಅರಸರಾಯರಿಗೆ
ಹಿರಿಯ ಮಗಳು ಕಾಣೂ

ನನ್ನ ಹೆಸರು ಹೊನ್ನಮ್ಮ ಹಂಗಂತಾವ ಕರೆಯಾದು
ಮಳೆತೆ ಮಲ್ಲೇಗೌಡರು ಹಿರಿಸೊಸಿ ಕಾಣೂ

ನನ್ನ ಗಂಡನ ಹೆಸರು ಬೊಮ್ಮಣ್ಣ ಸೆಟ್ಟರು
ಅವ್ವ ನನ್ನ ತಾಯಿ ನನ ಒಡೆಯನೆಲ್ಲಿ ಹ್ವಾದರೂ

ಅವರು ಘಟ್ಟಕ್ಕೋಗಿ ನೋಡು ಮೂರುದಿನಾ .
ಅವ್ವವ್ವ ನನ್ನ ತಾಯಿ ಇಲ್ಲಿ ಗದ್ದೆಗೋರಿಸರಲ್ಲವ್ವಾ

ಗದ್ದೆಗೋರಿಸಲ್ಲವ್ವಾ ಒಂದು ಕೆರೆಯು ತೆಗಸಿರಲ್ಲವ್ವಾ
ಕಾಣೆಕಾನೂ ಒಡ್ಡಾ ನನಗೆ ಗೊತ್ತಿಲ್ಲಾ

ಅವ್ವ ನನ ತಾಯಿ ನೀವು ಪುಣ್ಯವಂತರ ಮಗಳು
ಹೇ ಪುಣ್ಯವಂತರ ಮಗಳು

ಹೇ ದಾನಗಾರರ ಸೊಸಿಯೆ
ಹೇ ಮಜ್ಜಿಗೆ ಕೊಡುತ್ತೀರೊ

ನಾವು ಬಳಲಿ ಬಾಯಾರಿದ್ದಿವಿ
ನಾನು ಅತ್ತೆಮನೆ ಸೊಸೆ

ನಾನೇನು ಮಾಡಲೂ ಒಡ್ಡಾ
ಆಕೆ ನೀರಾ ಹೊತ್ತುಕೊಂಡು

ಮನೆಗೆ ಬಂದವರಲ್ಲಾ
ನೀರಾನೆ ಹೊಯ್ದಾರು

ಕೊಡವಾನೆ ಮಡಗಿದರು
ಒಂದು ಹಂಡೆ ಮಜ್ಜಿಗೆಯು

ಕೊಡಪಾನಕೆ ಬಗ್ಗಿಸವರೆ
ಒಂದಾಮಾನ ಈರುಳ್ಳಿಯು

ಅದಕೆ ಕತ್ತರಿಸಿ ಹಾಕವರೆ
ಒಂದು ಮಾನುಪ್ಪ ಆದಕೆ

ಅಳದು ಹಾಕುತಾರೆ ಈ ಹಂಡೆಯ
ಹೊತ್ತುಕಂಡು ಹೋಯಿತಾರೆ

ಭಾವಿಯು ತಾವಕೆ
ಒಬ್ಬ ದೊಡ್ಡಗೌಡ ನೀ

ಒಂದು ಬಾನಿಯು ತತ್ತಾರೊ
ಅವನು ಬಾನಿಯು ತಗೊಂಡು

ಅವನು ಓಡಿಬಂದವನಲ್ಲಾ
ಅದಕೆ ಮಜ್ಜಿಗೆ ಬಗ್ಗಿಸಿ ಕೊಟ್ಟಾಳು

ಅಲ್ಲಿದ್ದವರೆಲ್ಲಾ ಹಣ್ಣು ಅಕ್ಕಿ
ಊಟವ ಮಾಡಿರಿ

ಆಕೆ ನೀರಾ ಹೊತ್ತುಕೊಂಡು
ಆಕೆ ಮನೆಗೆ ಬರುತಾರೆ

ದೊಡ್ಡಗೌಡ ಮತ್ತೆ ಏನಂತ ಕೇಳುತಾನೆ
ಹೇ ಅವ್ವ ನನ ತಾಯಿ ನಿಮ್ಮ

ಮಾವ ಮಲ್ಲೇಗೌಡರು
ಮನೆಯಲ್ಲವರಾ

ಅವರು ಮನೆಯಲ್ಲವರಲ್ಲಾ
ಅವರೆಲ್ಲಿಗೂ ಹೋಗಿಲ್ಲಾ

ಅವರ ಜೊತೇಲಿ ಬಂದಾ ಒಡ್ಡಗೌಡ
ಈ ಮಳಿತೆ ಮಲ್ಲೇಗೌಡರು

ಮಂಚಾದ ಮೇಲೆ ಕುಂತವರೆ
ಇವನು ಬಗ್ಗಿ ಸರಣೆಂದಾ

ಇವನು ಭಾಗಿ ಸರಣೆಂದಾ
ಅವರೆದುರಿಗೆ ನಿಂತವನೆ

ಆಗ ಒಡ್ಡಾಗೆ ಎಲೆಡಿಕೆ ಕೊಡಿಸವರೆ
ಯಾವ ದೇಸ ನಿಮ್ಮದು

ನೀವು ಬಂದು ಎಟೂ ದಿವಸವಾಯ್ತು
ನಾವು ಮೂಡಲಾ ದೇಸ

ನಾವು ಬಂದು ಮೂರು ದಿನಸವಾಯ್ತು
ಏಸು ಮಂದಿ ಬಂದಿದ್ದೀರಿ

ಹೇಳಾಲೂ ಹೇಳೂ ಒಡ್ಡಾ
ನಾವು ಮೂರು ಸಾವಿರ ಒಡ್ಡಾರು

ನಾವು ಬಂದಿವಿ ನಮ್ಮೊಡೆಯ
ಏನುಗೆ ಅನ್ನ ಸಾಲದೆ ನಾವು ಈ ದೇಸ ಹತ್ತೀವಿ

ಇಲ್ಲಿಯಾ ಕೆರೆಯು ಗೋರಿಸವರಿಲ್ಲವ್ವಾ
ಇಲ್ಲಿ ಭಾವಿಯು ತೆಗೆಸಿವರಿಲ್ಲವ್ವಾ

ಏನು ಕೆಲಸವೂ ಇಲ್ಲಾ ಒಡ್ಡಗೌಡ
ಮತ್ತೇನು ಗ್ಯಾನವ ಮಾಡುತಾರೆ

ಮಳಿತೆದ ಮಲ್ಲೇಗೌಡರು ನಾನು
ಹುಟ್ಟಿದಾಗಿನಿಂದ ನನಗೇನು ಹೆಸರಿಲ್ಲಾ

ನನ್ನ ಘಟ್ಟಾ ತಿರುಗುವ ಬೊಮ್ಮಣ್ಣ ಸೆಟ್ಟಗೆ
ಒಂದು ಕೆರೆಯನಾದರೂ ಗೋರಿಸಿ

ಪುಣ್ಯಾವಾ ಪಡೆಯುವೇನು
ಒಂದು ಕೆರೆಯ ಗೋರುವುದಕೆ

ಬೆಲೆಯೇನೂ ಒಡ್ಡಾ
ಅಡ್ಡ ಆರು ಮಾರು ಅದು

ಉದ್ದ ಒಂಭತ್ತು ಮಾರು
ಹನ್ನೆಲ್ಡು ಆಳುದ್ದ

ನೀನು ಕೆರೆಯ ಗೋರಬೇಕು
ನನ್ನಿಂದಲಾವ ಮಾತು

ಒಡೆಯ ನಿಮ್ಮ ಮಾತು
ಇಲ್ಲಾ ಕಾಣೆ ಒಡ್ಡಾ

ನಿನ್ನಿಂದಲೇ ಮಾತಾ
ನನ್ನಂದಿಲಾ ಮಾತು ಒಡೆಯ

ತಮ್ಮದೆಲ್ಲಾ ಮಾತು
ಎಲ್ಡು ವರ ಕೊಡುತಿನಿ ಕೆರೆಕಟ್ಟು ಗೌಡ

ಎಲ್ಡು ವರ ಸ್ವಾಮಿ
ನನ್ನ ಮಂಕರಿ ಬೆಲೆ ಇಲ್ಲಾ

ನಾಕು ವರ ಕೊಡುತಿನಿ
ನೀ ಕೆರೆ ಕಟ್ಟು ಒಡ್ಡಗೌಡ

ನಾಕು ವರಕ ಸ್ವಾಮಿ
ನನ್ನ ನಾಯಿಯ ಬೆಲೆಯಿಲ್ಲಾ

ಆರು ವರ ಕೊಡುತಿನಿ
ನೀ ಕೆರೆ ಕಟ್ಟು ಗೌಡ

ಆರು ವರ ಸ್ವಾಮಿ
ನನ್ನ ಹಾರೆಯ ಬೆಲೆ ಇಲ್ಲಾ

ಎಂಟು ವರಕ ಸ್ವಾಮಿ
ನೀ ಕೆರೆ ಕಟ್ಟು ಗೌಡ

ನನ ಗಂಟಗೆ ಬೆಲೆ ಇಲ್ಲಾ
ಹತ್ತು ವರ ಕೊಡುತಿನಿ

ನೀ ಕೆರೆ ಕಟ್ಟು ಒಡ್ಡ ಗೌಡ
ಹತ್ತು ವರ ನಾ ಹೇಳಿದ ಬೆಲೆ ಇಲ್ಲಾ

ಹನ್ನೆಲ್ಡು ವರ ಕೊಡುತಿನಿ
ನೀ ಕೆರೆ ಕಟ್ಟು ಗೌಡ

ಹನ್ನೆಲ್ಡು ವರ್ಕ ಇವನು ಒಪ್ಪಂದ ಹಿಡಿದವನೆ
ಪೂಜೆಯ ಸಾಮಾನು ಕೊಟ್ವಾರೆ

ನಾನು ಆಯಾವ ಹಿಡಿದೇನು
ಪೂಜೆಗೆ ಸಾಮಾನು

ನೀನು ಹೇಳೂ ಒಡ್ಡ ಗೌಡ
ನಾಕು ಮೂಲೆಗೆ ನಾಕು ಕಾಯಿ

ನಾಕು ಮೂಲೆಗೆ ನಾಕು ಚಿಪ್ಪು ಹಣ್ಣು
ನಾಕು ಮೂಲೆಗೆ ನಾಕು ಕೊಟ್ಟಣ ಅಕ್ಕಿ

ನಾಕು ಮೂಲೆಗೆ ನಾಕು ಕುರಿಯನು ಆಗಬೇಕು
ನಾಕು ಮೂಲೆಗೆ ನಾಕು ಮಾನ ಅಡಿಕೆ

ಪೂಜೆಯ ಸಾಮಾನ ಎಲ್ಲಾ ಕೊಡುತಾರೆ
ಸಾಮಾನು ತಗೊಂಡಹೋಗಿ

ಆಯಾ ಕಳೆತಾರೆ ಅಳತೆ ಹಿಡಿದವರೆ
ಎಲ್ಲಾನು ಕಳದವರೆ

ಪೂಜೆಯ ಮಾಡುತಾರೆ
ಅವರ ಕೆಲಸಾವ ಹಿಡಿದವರೆ

ಎಲ್ಡೂ ಗುದ್ದಲಿ ಬಂದೂ
ಎಲ್ಡೂ ಮಂಕರಿ ಬಂದೂ

ಎಲ್ಡು ಆಳುದ್ದ ತಗದ ಕಲ್ಲು ಒಡ್ಡಾ
ಸುತ್ತಾಲ ಸುತ್ತಿ

ಹುಡುಗನ ದಟ್ಟಿಲ್ಲಾ ಮುತ್ತು
ತಿರುಗಲೇ ಬಾಲೆ

ಹುಡುಗಿಯ ತುರುಬೆಲ್ಲಾ
ಮಲ್ಲಿಗೆ

ನಾಕು ಗುದ್ದಲಿ ಬಂದೂ
ನಾಕು ಮಂಕರಿ ಬಂದೂ

ನಾಕಾಳುದ್ದ ತಗದ ಕಲ್ಲ ಒಡ್ಡಾ
ಸುತ್ತಾಲ ಸುತ್ತಿ

ಹುಡುಗನ ದಟ್ಟಿಲ್ಲಾ ಮುತ್ತು
ತಿರುಗಲೇ ಬಾಲೆ

ಹುಡುಗಿಯು ತುರುಬೆಲ್ಲಾ
ಮಲ್ಲಿಗೆ

ಆರು ಗುದ್ದಲಿ ಬಂದೂ
ಆರು ಮಂಕರಿ ಬಂದೂ

ಆರಾಳುದ್ದ ತಗೆದ ಕಲ್ಲ ಒಡ್ಡಾ
ಸುತ್ತಾಲ ಸುತ್ತಿ

ಹುಡುಗ ದಟ್ಟಿಲ್ಲಾ ಮುತ್ತು
ತಿರುಗಲೇ ಬಾಲೆ

ಹುಡುಗಿಯು ತುರುಬೆಲ್ಲಾ
ಮಲ್ಲಿಗೆ

ಎಂಟು ಗುದ್ದಲಿ ಬಂದೂ
ಎಂಟು ಮಂಕರಿ ಬಂದೂ

ಎಂಟಾಳುದ್ದ ತಗೆದ ಕಲ್ಲು ಒಡ್ಡಾ
ಸುತ್ತಾಲ ಸುತ್ತಿ

ಹುಡುಗನ ದಟ್ಟಿಲ್ಲಾ ಮುತ್ತು
ತಿರುಗಲೇ ಬಾಲೆ

ಹುಡುಗಿಯು ತುರುಬೆಲ್ಲಾ
ಮಲ್ಲಿಗೆ

ಹತ್ತು ಗುದ್ದಲಿ ಬಂದೂ
ಹತ್ತು ಮಂಕರಿ ಬಂದೂ

ಹತ್ತಾಳುದ್ದ ತಗೆದ ಕಲ್ಲು ಒಡ್ಡಾ
ಸುತ್ತಾಲ ಸುತ್ತಿ

ಹುಡುಗನ ದಟ್ಟೆಲ್ಲಾ ಮುತ್ತು
ತಿರುಗಲೇ ಬಾಲೆ

ಹುಡುಗಿಯು ತುರುಬೆಲ್ಲಾ
ಮಲ್ಲಿಗೆ

ಹನ್ನೆಲ್ಡು ಗುದ್ದಲಿ ಬಂದೂ
ಹನ್ನೆಲ್ಡು ಮಂಕರಿ ಬಂದೂ

ಹನ್ನೆಲ್ಡಾಳುದ್ದ ತಗೆದ ಕಲ್ಲು ಒಡ್ಡಾ
ಸುತ್ತಾಲ ಸುತ್ತಿ

ಹುಡುಗನ ದಟ್ಟೆಲ್ಲಾ ಮುತ್ತು
ತಿರುಗಲೇ ಬಾಲೆ

ಹುಡುಗಿಯು ತುರುಬೆಲ್ಲಾ
ಮಲ್ಲಿಗೆ

ಹನ್ನೆಲ್ಡಾಳುದ್ದ ಆವರು
ಕೆರೆಯಾನೆ ಗೋರಿಯಾರು

ಜಲವಾನೆ ಬರನಿಲ್ಲಾ
ಬುದ್ಧಿವಂತ ಒಡ್ಡ ಗೌಡ

ಚಿಂತಿಕ್ರಾಂತನಾಗಿ ಇಂಥ
ಕೆರಿಯೆಟೆ ಗೋರಿದೇನೂ

ಅಂಥ ಭಾವೇಟ ತೆಗಿದೇನೊ
ಈ ಹಾಳಾದ ಮುಂಡೆಯು

ನಾನು ಕೆರಿಯಾನೆ ಗೋರಿಸಿದಕೆ
ಜಲವೆ ಬರಲಿಲ್ಲಾಂತ

ಇವರು ಚಿಂತಾಕಾಂತರಾಗಿ
ಏರಿಯಾನೆ ಮ್ಯಾಲೆ

ಮಕಾಡೆ ಮಲಗಿದರೂ
ಒಡ್ಡಗೌಡನ ಹೆಂಡತಿ

ಒಂಭತ್ತು ತಿಂಗಳೂ
ತುಂಬಿದ ಬಿಮ್ಮನಸೆ

ಸಪ್ಪತ್ತು ಸರುವತ್ತು
ಮೂರು ಕೂಗುತೈತೆ

ಬುದ್ಧಿವಂತ ಒಡ್ಡಗೌಡ
ನಿನ್ನ ಹೆಂಡತಿಯ ನನಗೆ

ಆಹುತೀಯ ಕೊಡೊ
ದಡಕ್ಕನೆ ಎದ್ದಾನು

ಅವನು ಏನಂತ ಹೇಳುತಾನೆ
ಈ ಹಾಳಾದ ಮುಂಡೇದು

ಇದು ನನ್ನ ಹೆಂಡತಿ ಕೇಳತೈತೆ
ಗುಟ್ಟು ಕೊಡಲಿಲ್ಲ

ಇವನು ಒಪ್ಪಾದ ಹಣವನೆ ಇಸ್ಗಂಡು
ಮೂಡಲದೇಸಾಕೆ ಅವರೆಲ್ಲ ಹೋದಾರೂ

ಒಡ್ಡರು ಹೋಗಿ ದಿನವು ಮೂರುನಾದವಲ್ಲಾ
ಮೂರು ದಿನದ ಮ್ಯಾಲೆ

ಮಳಿತೆ ಮಲ್ಲೇಗೌಡರು
ಕೆರೆಯ ತಾಕೆ ಹೋಗಿ

ಅವರು ನಿಂತೆ ನೋಡುತಾರೆ
ಜಲವೆ ಬಂದಿಲ್ಲವಲ್ಲ

ಅವರು ಚಿಂತಾಕಾಂತರಾಗಿ
ಕೆರೆಯ ಏರಿಯ ಮ್ಯಾಲೆ

ಅವರು ಮಕಾಡೆ ಮಲಗವ್ರೇ
ಇದು ಸಪ್ಪತ್ತು ಸರವತ್ತು

ಇದು ನಟ್ಟಾನೆ ಮಧ್ಯಾಹ್ನ
ಇದು ಮೂರಾನೆ ಕೂಗು

ಏನಂತ ಕೂಗುತೈತೆ
ನಿನ್ನ ಎಡದ ಕಿರುಬೆಟ್ಟು ನನಗೆ

ಆಹುತಿಯ ಕೊಡೊ
ನನ್ನ ಕಿರುಬೆಟ್ಟ ಕೊಟ್ಟರೆ

ನನ್ನ ಮೋಟ ಎನ್ನುತ್ತಾರೆ
ನಾ ಸರಕಾರ ಸಭೆಯ

ತಿರುಗೋನು ನಾನೂ
ನಿನ್ನ ಹೆಂಡತಿಯಾನೆ

ನನಗೆ ಆಹುತಿಯಾನೆ ಕೊಡೋ
ನನ್ನ ಹೆಂಡತಿಯ ಕೊಟ್ಟರೆ

ಮನೇಲಿ ಯಜಮಾನಕೆ ಮಾಡೋರಿಲ್ಲ
ನಿನ್ನ ಕಿರಿಯ ಮಗನ ನನಗೆ

ಆಹುತಿಯಾ ಕೊಡೋ
ಕಿರಿಯ ಮಹನ ಕೊಟ್ಟರೆ

ನನ್ನ ಆರಂಭ ಮಾಡೋರಿಲ್ಲಾ
ನಿನ್ನ ಹಿರಿಯ ಮಗನ

ನನಗೆ ಆಹುತಿಯು ಕೊಡೋ
ನನ್ನ ಹಿರಿಯು ಮಗನ ಕೊಟ್ಟರೆ

ಘಟ್ಟ ತಿರುಗೋರಿಲ್ಲಾ
ನಿನ್ನ ಹಿರಿಯು ಸೊಸೆಯು

ನನಗೆ ಆಹುತಿಯು ಕೊಡೋ
ಹಂಗಂತ ಸೊಲ್ಲಿಗೆ

ಅವರು ಉಸಿರಾನೆ ಬಿಟ್ಟವರೆ
ಹೇ ಮನೆಗೆ ಬಂದವರಲ್ಲಾ

ಪಟ್ಟೆಮಂಚದ ಮ್ಯಾಲೆ
ಮಕಾಡೆ ಮನಗಿದರೂ

ಅವಳಾಗಲೇ ಹೊನ್ನಮ್ಮ
ಅಡಿಗೆಲ್ಲ ಆಯಿತಲ್ಲಾ

ನೀರಾನೆ ತಂದಾಳು
ನೀವು ಏಳೇಳಿ ಮಾವಯ್ಯ

ಇದುವೇನು ಮಾವಯ್ಯ
ನೀವೇಕೆ ಮನಗಿದ್ದೀರಿ

ನಿಮಗೇನು ಕಷ್ಟವು ಬಂತು
ನೀವು ಏಳೇಳಿ ಮಾವಯ್ಯ

ನನ್ನ ಕಷ್ಟವ ಹೊನ್ನಿ
ನಿನ್ನ ಕುಟೆ ಹೇಳಿದರೆ

ನೀ ಹಾರಿಸಿ ತೀರಿಸಿಯಾ
ನಾ ಏನ ಹೇಳಲೆ ಹೊನ್ನಿ

ನಾ ಹಾರಿಸುವುದಾದರೆ ಹಾರಿಸೇನು
ನೀವು ನನ ಕುಟೆ ಹೇಳಿ ಮಾವಯ್ಯ

ಈ ಹಾಳಾದ ಮುಂಡೆಯ
ಕೆರೆಯಾನೆ ಗೋರಿಸಿದೆ

ಕ್ವಾಣನ ಕೇಳಿದರೆ
ಸಾಲ ಹೊಡಿಸೇನೂ

ಕುರಿಯಾನೆ ಕೇಳಿದರೆ
ಸಾಲ ಕುರಿಯಾನೆ ಹೊಡಿಸೇನೂ

ಅದು ನನ್ನಾನೆ ಕೇಳಿದರೆ
ನಾನೇನೆ ಹೋಗುತಿನಿ

ನನಗೆ ಹೇಳಕೆ ಬಾಯಿ ಬರದು
ಅದು ನನ್ನ ಕೇಳನಿಲ್ಲ

ಅದು ನಿನ್ನಾನೆ ಕೇಳುತೈತೆ
ಇಷ್ಟಕೆ ಮಾವಯ್ಯ

ನಿಮಗೆ ಏಚನೆಂದರೇನು
ನಾನು ಹೋದಾರೆ ಮಾವಯ್ಯ

ನಿಮ್ಮ ಕೊಟ್ಟಗೆ ಹೊಲತಿ ಹೋದಂತೆ
ನಾನು ಹೋದಾರೆ ಮಾವಯ್ಯ

ನಿಮ್ಮ ಗೌಡಿ ಹೋದಂಗಲ್ಲವಾ
ಇದಕೆ ಬ್ಯಾಜರೇನು

ನೀವು ಊಟವ ಮಾಡ್ದೇಳಿ
ಅವರಾಗ ಮಲ್ಲೇಗೌಡರು

ತೊಳಕಂಡೂಟವ ಮಾಡಿ
ಇವಳು ಅತ್ತೆಮಾವಾಗೆ ಇಕ್ಕಿ

ಇವಳು ಮೈದುನಾಗೆ ಇಕ್ಕುತಾಳೆ
ಊಟವಾನೆ ಮಾಡಿ

ಆಗ ನಿಂಗಣ್ಣ ಸೆಟ್ರೊ ಹೊನ್ನಾರ ಕಟ್ಟಿಪ್ರೇ
ಇವಳಾಗ ಹೊನ್ನಮ್ಮ

ಏನು ಮಾಡುತಾಳೆ
ಸಣ್ಣಕ್ಕಿ ಹಾಕವಳೆ

ಬೊನವ ಬಸಿದವಳೆ
ನಾನೀಗ ಬಸಿದ ಬ್ವಾನ

ಘಟ್ಟಾಕೆ ಹೋಗಿರುವಾ
ಬೊಮ್ಮಣ್ಣ ಸೆಟ್ಟಾರು ಬಂದಾರೆ

ಇದು ಆಗ ಬಸಿದಂಗಿರಲಿ
ನಾನೀಗ ಮಾಡಿದ ಸಾರೂ

ಆಗ ಮಾಡಿದಂಗಿರಲಿ
ಈ ಮಗುವ ಎತ್ತಿಗಂಡು

ಅವಳು ಹಿಟ್ಟ ಉಣಿಸುತಾಳೆ
ಅವಳು ಎಣ್ಣೆ ಒತ್ತುತಾಳೆ

ಅದಕೆ ಅಂಗಿ ಕುಂಚಿಗೆ ಇಕ್ಕುತಾಳೆ
ಅದಕೆ ಕಪ್ಪಾನೆ ಇಕ್ಕುತಾಳೆ

ಎದೆಯಾಲ ಕೊಡುತಾಳೆ
ಅದನು ಎತ್ತಿ ಮುದ್ದಾಡುತಾಳೆ

ದುಃಖಾವ ಮಾಡುತಾಳೆ
ನೀನು ಕೇಳೂ ನನ್ನ ಕಂದಾ

ನಾನು ಏಟ ಹೇಳಿದರೂ
ಕೇಳಾದೆ ನಿಮ್ಮ ತಂದೆ

ನನ್ನ ಮೂರ ತಿಂಗಳ ಕಂದನ
ಬಿಟ್ಟು ಘಟ್ಟಕೆ ಹೋದರೂ

ನಿಮ್ಮ ಅಜ್ಜಾನ ಮನೆ
ಹಾಳು ಬಿದ್ದೋಯಿತು ಮಗನೆ

ಕೆರೆಯಾನೆ ಗೋರಿಸಿ
ನನ್ನ ಆಹುತಿ ಹಿಡಿದವನೆ

ನನ್ನ ಮೂರು ತಿಂಗಳ ಕಂದ
ಅವನು ತಬ್ಬಲಿಯ ಮಾಡನನೆ

ನಾ ಹಿಟ್ಟು ಉಣಿಸಿದಂಗೆ
ನಿನಗೆ ಹಿಟ್ಟು ಉಣಿಸುವರ್‍ಯಾರು

ನಾನು ಎಣ್ಣೆ ಒತ್ತಿದಂಗೆ
ನಿನಗೆ ಎಣ್ಣೆ ಒತ್ತುವರ್‍ಯಾರೂ

ನಾನು ಅಂಗಿ ಕುಂಚಿಗೆ ಇಕ್ಕಿದಂಗೆ
ನಿನಗೆ ಇಕ್ಕುವರ್‍ಯಾರೂ

ನಾನೆದೆಯಾಲ ಕೊಟ್ಟಂಗೆ
ನಿಂಗೆ ಎದೆಯಾಲ ಕೊಡುವವರ್‍ಯಾರೂ

ನಾನೆತ್ತಿ ಮುದ್ದಾಡಿದಂಗೆ
ನಿನ್ನನೆತ್ತಿ ಮುದ್ದಾಡುವರ್‍ಯಾರೂ

ಅಳಬ್ಯಾಡ ನನ್ನ ಕಂದಾ
ನೀನು ಸುಮ್ಮನಾಡೋ ಮಗನೆ

ತಬ್ಬಲಿಯಂತಾರೆ
ನಿನ ತಲಿಗೆ ಹೆಟ್ಟುತ್ತಾರೆ

ನಾನಿಯೆ ಒಂದು ಕೆಟ್ಟ ಹೆಸರ ಕೇಳನಾರೆ ಮಗನೆ
ನಿನಗೀಗ ಬಡಿಸಿದ ಹಿಟ್ಟ ಆಗ ಬಡಿಸಿದಂಗಿರಲಿ

ನಿಮ್ಮ ತಂಪೆ ಬರ್ಗಂಟ ಊಟಾ ಉರಗಲು ಬ್ಯಾಡ
ಯಾರೂ ಬಂದರೂ ನೀನು ಗರಗರ ಅಳಬ್ಯಾಡ

ನಿಮ್ಮ ತಂದೆ ಬಂದರೆ ಮಗನೆ ನೀನು ಗನಗರ ಅಳಪ್ಪಾ
ತೊಟ್ಟಿಲಿಗೆ ಹಾಕುತಾಳೆ ತೂಗಿ ಮನಗಿಸುತಾಳೆ

ನಾ ಹಾಡಿ ತೂಗಿದಂತೆ ನಿನ್ನ ತೂಗಿ ಮನಗಿಸವರ್‍ಯಾರು
ನನ್ನ ಮೂರು ತಿಂಗಳ ಕಂದಾ ನೀ ತಬ್ಬಲಿಯಾದಲ್ಲೊ

ಅಲ್ಲಿಂದ ಪೊನ್ನಮ್ಮ ಈಚೆಗೆ ಬರುತಾಳೆ
ಬಾಗಿಲ ಹಾಕುತಾಳೆ

ಯಾರು ಬಂದರೂ ಬಾಗಿಲೇ ಗರ್ ಅನ್ನೊಬ್ಯಾಡ
ಘಟ್ಟಕೆ ಹೋಗಿರುವ ಬೊಮ್ಮಣ್ಣಸೆಟ್ಟರು ಬಂದಾರೆ

ಕಂದಾ ಗರ್‌ನೆ ಅಳಲಿ ಬಾಗಿಲು ಗರ‍್ರನೆ ಹೋಗಲಿ
ನಾ ಈಗ ಬಸಿದ ಅನ್ನ ಆಗ ಬಸಿದಂಗಿರಲಿ

ಹೆಂಗಾಂತಪ್ಹೇಳಿ ಅವಳು ಶಾಪಾಳ ಹಾಕುತಾಳೆ
ಬಾಗಲ ಹಾಕತಾ ಬಹಳ ಶಾಪಾಳ ಕೊಡುತಾಳೆ

ಯಾರು ಬಂದರೂ ಬಾಗಲು ಗರನ್ ಹೋಗಬ್ಯಾಡ
ಘಟ್ಟಕೋಗಿರುವ ಬೊಮ್ಮಣ್ಣಸೆಟ್ಟಾರು ಬಂದಾರೆ

ಬಾಗಿಲು ಗರ‍್ರಾನೆ ಹೋಗಾಲಿ
ಕಂದಾ ಗರಗರಾನೆ ಅಳಲಿ

ಒಂದು ಮೆಟ್ಟಿಗಿ ಇಳಿದವಳೆ
ಹಿಂತಿರುಗಿ ನೋಡುತಾಳೆ

ಕಂದಾನ ಬಿಟ್ಟು ಹೋಗಾಕೆ
ನನಗೆ ಕೈಕಾಲೆ ಬರಲ್ಲೊ

ಮಳಿತೆ ಮಲ್ಲೇಗೌಡರ ಮನೆ
ಅದು ಹಾಳುಬಿದ್ದು ಹೋಗಾಲಿ

ಕೆರೆಯಾನು ಗೋರಿಸಿ
ನನ್ನ ಆಹುತಿ ಹಿಡಿದವನೆ

ನನ್ನ ಮೂರು ತಿಂಗಳ ಕಂದಾನ
ಅವನು ತಬ್ಬಲಿಯು ಮಾಡಿದನು

ಹೇ ಮಾವ ಮಲ್ಲೇಗೌಡ
ನೀ ಕಂಬಳಿಹುಳಾಗು

ಅತ್ತೆ ಮಲ್ಲಮ್ಮ ತಾಯಿ
ನೀ ಗೊಣ್ಣೆಯಹುಳಾಗು

ಹೇ ಜನರ ಕೂಟವಾಗಿ
ನೀವು ಕೆಟ್ಟ ಮಾತ ಕೇಳರಿ

ನಾನು ಹೋಗಿ ಬತ್ತೀನಂತಾ
ಅವಳು ಹೋಗುತವಳಲ್ಲೂ

ಹೇ ಕ್ವಾಟೆಯೂರಿಗೆ ಅವಳು
ತೌರಿಗೆ ಹ್ವಾದಳು

ಹೇ ಕೊನೆಹೆಣ್ಣು ಅಕ್ಕಾನ
ಮುಖವನೆ ಕಂಡಾಳು

ಹೇ ತಾಯಿ ಹಡದವ್ವ
ನಮ್ಮಕ್ಕಯ್ಯ ಬತ್ತಾರೆ

ಹೇ ಸುಮ್ಮನಿರೆ ಕಂದಾ
ನನ್ನ ಹೊಟ್ಟೆಯುರಿಸಲು ಬ್ಯಾಡ

ಅವಳು ಮೂರು ತಿಂಗಳು ಕಂದಾನ
ಅವಳು ಬಿಟ್ಟು ಹೆಂಗೆ ಬತ್ತಾಳೆ

ಹೇ ಮಾತುಮಾತಿಗೆ ಅವಳು
ಬಾಗಿಲಿಗೆ ಹೋಗವಳೆ

ಮಃತ್ತಿನಸೆಯ ಮಣೆಯಾಕಿ
ತುಪ್ಪದಾರತಿಯ ಬೆಳಗನರೆ

ಹೇ ಪನ್ನೀರಾನೆ ತಂದು ಅವರು
ಅವಳ ಪಾದವನೆ ತೊಳೆದವರೆ

ಹೇ ಪಟ್ಟೆಮಂಚಕೆ ಅವಳ
ಎತ್ತಿ ಕೂರಿಸುತಾರೆ

ಎತ್ತಿ ಕೂರಿಸ್ಯಾರು ಅವರ
ತಂದೆ ಅರಸರಾಯರು

ಅವರ ತಾಯಿ ಹಡದವ್ವ
ಅವಳ ಆರಾಳ ಅಣ್ಣದೀರು

ಅವಳ ಆರಾಳ ಅತ್ತೀಗೇರು
ಅವಳ ಕೊಳ್ಳಕಟ್ಟಿ ಅಳುತಾರೆ

ಅವರ ತಂದೆ ಅರಸರಾಯರು
ಕಂದಾ ಮೂರು ತಿಂಗಳ ಕಂದಾನ

ಯಾರ ತಾವು ಬಿಟ್ಟು ಬಂದೇ
ನಿನ ಕಂಕಿನಂತ ಮುಖ

ಕಂದಿಕುಂದವಲ್ಲಾ
ಹೇ ಬತ್ತಿಬಾಡಿದಾವು

ನಿನ ನಿಜಮುಖಾ
ನಿನ ಪತಿ ಬೊಮ್ಮಣ್ಣಸೆಟ್ಟರು

ಚೆಂದಾಗಿ ಅವರವ್ವಾ
ಹೇ ಕದ್ದು ಬಂದ್ಯವ್ವಾ

ಹೇ ನೀ ಕಾಣದೆ ಬಂದ್ಯವ್ವಾ
ನೀ ಕೇಳಾದೆ ಬಂದೇನೇ

ನನ್ನ ಸರಿ ಸಮದವರು
ಆಡ್ಕಿಂಡು ನಗುತಾರೆ

ಇವರು ಕರೆಯನಿಲ್ಲವೆಂದು
ಅವರು ಕಳುಸನಿಲ್ಲವೆಂದು

ಜನರು ಆಡ್ಕಂಡು ನಗುತಾರೆ
ನನ ಕಿವಿಯಿಂದ ಕೇಳನಾರೆ

ನಾ ಹೇಳಿ ಬಂದಿದ್ದೀನಿ ತಂದೆ
ನೀ ಬೇಜಾರವ ಮಾಡಬ್ಯಾಡ

ನಿಮ್ಮನ್ನು ನೋಡಬೇಕಂತ
ನನ್ನ ಎದೆಯಾಗಿ ಹೋಗಿದ್ದಾ

ನಾ ಹೇಳಿ ಬಂದಿದ್ದೀನಿ
ನೀವು ಬೇಜಾರವ ಮಾಡಬ್ಯಾಡಿ

ಆ ಮಾತ ಕೇಳುತನರೆ
ಬಾಯಿಗೆ ಬೇಕಾದ ಅಡಿಗೆ

ಅಡಿಗೆ ಮಾಡಿದರೂ
ಊಟಾಕೆ ಇಕ್ಕುತಾರೆ

ತಾಯಿ ಹಡದವ್ವಾ ನಾ ಬ್ಯಾರೆ ಉಣ್ಣವಳಲ್ಲಾ
ನಾವು ಬಳಗೆಲ್ಲಾ ಸೇರ್ಕಂಡು

ಒಂದಿಗೆ ಊಟಾವ ಮಾಡಾಣ
ಊಟಕೆ ಕೂತುಕೊಂಡು

ತಂದೆಯು ಏನಂತ ಕೇಳವಳೆ
ತಂದೆ ನಾ ಕೇಳಿದ್ದ ಕೊಟ್ಟಾರೆ

ನಾ ಊಟಾವ ಮಾಡುತೀನಿ
ನಾ ಕೇಳಿದ್ದ ಕೊಡದೆ ಹೋದರೆ

ನನಗೆ ಊಟಾವೆ ಬೇಕಿಲ್ಲಾ
ನೀನೇನೆ ಕೇಳುತ್ತೀಯಾ

ನೀ ಕೇಳಿದ್ದ ಕೊಡುತಿನಿ
ನನಗೇನು ಕೊಟ್ಟರು

ನನಗೆ ಬ್ಯಾಡವಲ್ಲ ತಂದೆ
ಈ ಚಿಕ್ಕಹೊನ್ನಿಯು

ನನಗೆ ಮಾತು ಕೊಡಬೇಕು
ಅವರ ತಂದೆ ಅರಸರಾಯರು

ದುಃಖಾವ ಮಾಡುತಾರೆ
ನಿನ್ನ ಕೊಟ್ಟು ನಾನು ತಂದೆ

ನನ್ನ ಕಣ್ಣಿಂದ ನೋಡನಿಲ್ಲೊ
ಹೇ ಇದನ್ನೊಂದ ಮಾತಾ

ನೀ ಕೇಳಬ್ಯಾಡವೇ ಕಂದಾ
ಕೊಡದೆ ಹೋದಾರೆ

ನನಗೆ ಊಟಾವೇ ಬೇಡನಲ್ಲೂ
ನಾನು ಹಸಿದ ಮಗುವಿನ ತಾಯಲ್ಲವ್ವಾ

ಅವರ ಭಂಗಾ ಬಲು ದೊಡ್ಡದು
ಹೇ ಭಂಗ ಮಾಡನಾರೆ

ಚಿಕ್ಕಹೊನ್ನಿ ಕೊಡಬೇಕು
ಆದಾರು ಸಿಂತಿಲ್ಲ ನಾ ಕೊಡುತಿನಿ

ಹೇ ಕೊಡುತಿನಿ ನನ್ನ ಕಂದಾ
ನೀ ಊಟ ಮಾಡವ್ವಾ

ಕೊಡುತೀನಿ ಅಂತ ನನಗೆ
ಇಳ್ಯಾವ ಕೊಡಿ ತಂದೆ

ಹೇ ಚಿಕ್ಕಹೊನ್ನಿ ಕೊಡುತೀನಂತ
ಅವರು ಇಳ್ಯಾವ ಕೊಡುತಾರೆ

ಹೇ ಚಿಕ್ಕಹೊನ್ನಿ ನಾನು ತಂದಿದ್ದ ತಂದಾಗೆ
ಇಳ್ಯಾವ ಹಿಡಿದವಳೇ

ಅವಳು ಊಟಾವ ಮಾಡವಳೆ
ಊಟಾವನೇ ಮಾಡಿ

ಅವಳ ಮಂಡೆ ಬಾಚುತಾರೆ
ಅವಳಿಗೆ ಮಲ್ಲಿಗೆ ಮುಡಿದವರೆ

ಬೇಕಾದ ಬಂಗಾರ
ಬ್ಯಾಗನೆ ಇಕ್ಕುತಾರೆ

ಎಲ್ಲಾ ಬಂದಾತ್ತಲ್ಲಾ
ಮತ್ತೆ ಏನಂತ ಹೇಳುತಾಳೆ

ನಾ ಹೋಗುವ ದಾರಿಯಲ್ಲಿ
ಯಾರೂ ಪುಣ್ಯಾತ್ಮರೂ

ಒಂದು ಹೊಸ ಕೆರೆ ಗೋರಿಸವರೆ
ನಾನು ನೋಡಿ ಹೋಗವಳಲ್ಲಾ

ಅದಕೆ ಪೂಜೆಯ ಸಾಮಾನ ನೀವು
ಕೊಡಬೇಕು ನನ ತಾಯಿ

ಒಂದು ಹೊಸ ಮೊರವಾ ತೆಗೆದವರೆ
ಅದಕೆ ಸಾಮಾನಾ ತುಂಬತವರೆ

ಹಿಡಿಯ ತೆಂಗಿನಕಾಯಿ
ಚಿಪ್ಪು ಬಾಳೆಹಣ್ಣು

ಕಟ್ಟಿಲೆ ಮಾನಡಿಕೆ
ಅಕ್ಸತೆ ಕಣಕಪ್ಪು

ಗಂಧ ಚಂದ್ರಾದಿಗಳ
ಎಲ್ಲಾನು ತುಂಬಿದಾರು ಕಂದಾ

ನಿನಗೆ ಹೊತ್ತುವಾಯಿತಲ್ಲಾ
ನಿನ್ನ ಮೂರು ತಿಂಗಳ ಕಂದಾ

ಎಟೂ ಅಳುತ್ತೈತ್ತಲ್ಲೂ
ಹೇ ಹೋಗವ್ವಾ ಅಂತ

ಅವಳ ಹೊಂಡುಸ್ತಾರಲ್ಲೂ
ನಾ ಹೋಗವಳು ಹೋಯಿತಿನಿ

ನನ್ನ ಬಳಗೆಲ್ಲಾ ನನ್ನ ತಂದೆ
ಕೆರೆ ಏರಿಗುಂಟೆ ನನ್ನ ಕಳುಸ್ಯಾರ ಬನ್ನಿ

ಅವಳಿಗೆ ಮುತ್ತಿನ ಮಡಲಕ್ಕಿ ಹುಯ್ಯತವರೆ
ಅವಳ ಎಲ್ಲಾ ಕರ್ಕಂಡು ಬತ್ತವರೆ

ಕೆರೆಯು ತಾವಕೆ ಬಂದು
ಎಲ್ಲಾರು ನಿಂತವರೆ

ಅವರ ತಂದೆ ಅರಸರಾಯರು
ಇದುವೇನೆ ಮಗಳೆ

ಕೆರೆಯು ಜಲವೇ ಬಂದಿಲ್ಲವಲ್ಲಾ
ಇದುವೇನೆ ಹೊನ್ನಮ್ಮ

ತಂದೆ ನಾ ಪೂಜೆ ಮಾಡಿದರೆ
ಜಲನೆ ಬತ್ತೈತೆ

ಅವಳಾಗಲೇ ಹೊನ್ನಮ್ಮ
ಪೂಜೆಗೆ ನಿಂತವಳೆ

ಪೂಜೆಯುಲ್ಲಾ ಆಯಿತಲ್ಲಾ
ಇವಳು ದುಃಖವನೆ ಮಾಡುತಾಳೆ

ಅವರ ಕಾಲ ಕಟ್ಟುತಾಳೆ
ಅವರಿಗೆ ಕೈ ಮುಗಿತಾಳೆ

ನನ್ನ ಗಂಡ ಘಟ್ಟಕ್ಕೆ ಹೋಗಿ
ನಮ್ಮ ಮಾವ ಕೆರೆ ಗೋರಿಸಿ

ನನ್ನ ಆಹುತಿಯು ಹಿಡಿಸವರೆ
ನನ್ನ ಮೂರು ತಿಂಗಳು ಕಂದಾನ

ನೋಡಿ ತಬ್ಬಲಿ ಮಾಡವರೆ
ನಾ ಹೋಗಿ ಬತ್ತೀನಂತಾ

ಅವರ ಕೈಕಾಲು ಕಟ್ಟುತಾಳೆ
ಅವರ ತಂದೆ ಅರಸರಾಯರು

ಅವರ ತಾಯಿ ಹಡದವ್ವ
ನಾ ಒಂದೇ ಮಾತಿನಲ್ಲಿ ಕಂದಾ

ನಿನ್ನ ಕೊಟ್ಟು ಕೆಟ್ಟೆನಲ್ಲಾ
ಹೇ ಮಳಿತೆಗೌಡನ ಮನೆ

ಹಾಳುಬಿದ್ದು ಹೋಯಿತೇನೆ
ನಿನ್ನ ಬದ್ದಲ ಕಂದಾ

ನಾವೇ ಹೋಯಿತಿವಿ
ಅದು ನಿಮ್ಮಾನೆ ಕೇಳಿಲ್ಲಾ

ಅದು ನನ್ನಾನೆ ಕೇಳೈತೆ
ಅವಳ ತಂಗಿ ಚಿಕ್ಕವಳು

ಅಕ್ಕ ನನ್ನ ಹೆಸರು ಹೊನ್ನಮ್ಮ
ನಾನೇ ಹೋಯಿತಿನಿ

ಹೇ ಕಂದಾನ ಸಾಕಂಡು ನೀ
ಚೆನ್ನಾಗಿ ಬದುಕೋಗೇ

ಚಿಕ್ಕಹೊನ್ನಿ ನಿನ್ನ ಕೇಳಿಲ್ಲಾ
ಅದು ನನ್ನಾನೆ ಕೇಳೈತೆ

ನನ್ನ ಕಂದಾನ ಅಳಿಸಬ್ಯಾಡ
ನೀನು ಚೆಂದಾಗಿ ಸಾಕವ್ವ

ಹೇ ತಬ್ಬಲಿ ಅನ್ನಬ್ಯಾಡ
ಅದರ ತಲೆಗೆ ಹೆಟ್ಟಲು ಬ್ಯಾಡ

ಹೇ ನನಗಿಂತ ಹೆಚ್ಚಾಗಿ
ಸಾಕಿ ಸಲವು ಕಂದಾ

ಅವಳ ಆರಾಳ ಅಣ್ಣದೀರು
ತಂಗಿ ನಾವೇ ಹೋಯಿತಿವಿ

ಅವಳ ಆರಾಳ ಅತ್ತಿಗೇರು
ನಾವೇ ಹೋಯಿತಿವಿ

ಅದು ನಿಮ್ಮನ್ಯಾರ ಕೇಳಿಲ್ಲಾ
ಅದು ನನ್ನ ಕೇಳೈತೆ

ನನಗೆ ಹೊತ್ತುನಾಯ್ತು
ನಾ ಹೋಗ್ಯಾರು ಬತ್ತೀನಿ

ಹೇ ಹೋಗಿ ಬತ್ತೀನಂತ
ಅವಳು ಕೈನಾ ಮುಗಿದವಳೆ

ಒಂದು ಮೆಟ್ಟಿಗಿಯು ಅವಳು
ಇಳಿದು ಹೋಯಿತವಳೆ

ಹಜ್ಜೆ ಭಾಮುಕೆ ಬಂತೊಂದು ಹರುಳೆ
ಚೆಂದುರಳೆ
ಚಿಕ್ಕವಳೆ ಕಿರುದಂಗೆ ಗಾಗಿನ ತಿಮ್ಮಣ್ಣಾ
ಕಂದಾನ ಅಳಸದಿರೇ
ಜೋ ಜೋ ಕಂದಯ್ಯ ಹೊಡಲುರಿದೊ
ನೀ ಜೋ ಜೋ ಕಂದಯ್ಯ
ಮಣಿ ಜಾರಿದೊ

ಹಿಮ್ಮಡಿ ಭಾಮಕೆ ಬಂತೊಂದು ಹರುಳೆ
ಚೆಂದುರಳೆ
ಇಂಥ ಮಾವನ ತರುಳು ಸೇರ ಹೋಯಿತಿನಿ
ಜೋ ಜೋ ಕಂದಯ್ಯ ಹೊಡಲುರಿದೊ
ನೀ ಜೋ ಜೋ ಕಂದಯ್ಯ
ಮಣಿ ಜಾರಿದೊ

ಮಂಡಿ ಭಾಮಕೆ ಬಂತೊಂದು ಹರುಳೆ
ಚೆಂದುರಳೆ
ಚಿಕ್ಕವಳೆ ಕಿರಿದಂಗೆ ಗಾಗಿನ ತಿಮ್ಮಣ್ಣಾ
ಕಂದಾನ ಅಳಸದಿರೇ
ಜೋ ಜೋ ಕಂದಯ್ಯ ಹೊಡಲುರಿದೊ
ನೀ ಜೋ ಜೋ ಕಂದಯ್ಯ
ಮಣಿ ಜಾರಿದೊ

ತೊಡೆಯ ಭಾಮಕೆ ಬಂತೊಂದು ಹರುಳೆ
ಚೆಂದುರಳೆ
ಇಂಥ ಮಾವನ ತರುಳು ಸೇರ ಹೋಯಿತಿನಿ
ಜೋ ಜೋ ಕಂದಯ್ಯ ಹೊಡಲುರಿನೊ
ನೀ ಜೋ ಜೋ ಕಂದಯ್ಯ
ಮಣಿ ಜಾಳಿದೊ

ಸೊಂಟದ ಭಾಮಕೆ ಬಂತೊಂದು ಹರುಳೆ
ಚೆಂದುರಳೆ
ಚಿಕ್ಕವಳೆ ಕಿರುದಂಗೆ ಗಾಗಿನ ತಿಮ್ಮಣ್ಣಾ
ಕಂದಾನ ಅಳುಸದಿರೇ
ಜೋ ಜೋ ಕಂದಯ್ಯ ಹೊಡಲುರಿದೊ
ನೀ ಜೋ ಜೋ ಕಂದಯ್ಯ
ಮಣಿ ಜಾರಿದೊ

ಹೊಟ್ಟೆ ಭಾಮಕೆ ಬಂತೊಂದು ಹರುಳೆ
ಚೆಂದುರಳೆ
ಚಿಕ್ಕವಳೆ ಕಿರಿದಂಗೆ ಗಾಗಿನ ತಿಮ್ಮಣ್ಣಾ

ಕಂದಾನ ಅಳಸದಿರೇ
ಜೋ ಜೋ ಕಂದಯ್ಯ ಹೊಡಲುರಿದೊ
ನೀ ಜೋ ಜೋ ಕಂದಯ್ಯ
ಮಣಿ ಜಾರಿದೊ

ಎದೆಯ ಭಾವುಕೆ ಬಂತೊಂದು ಹರುಳೆ
ಚೆಂದುರಳೆ
ಇಂಥ ಮಾವನ ತರುಳ ಸೇರ ಹೋಯಿತಿನಿ
ಜೋ ಜೋ ಕಂದಯ್ಯ ಹೊಡಲುರಿದೊ
ನೀ ಜೋ ಜೋ ಕಂದಯ್ಯ
ಮಣಿ ಜಾರಿದೊ

ಕುತ್ತಿಗೆಯ ಭಾವುಕೆ ಬಂತೊಂದು ಹರುಳೆ
ಚೆಂದುರಳೆ
ಚಿಕ್ಕವಳೆ ಕಿರುದಂಗೆ ಗಾಗಿನ ತಿಮ್ಮಣ್ಣಾ
ಜೋ ಜೋ ಕಂದಯ್ಯ ಹೊಡಲುರಿದೊ
ಜೋ ಜೋ ಜೋ ಕಂದಯ್ಯ
ಮಣಿ ಜಾರಿದೊ

ಬಾಯಿ ಭಾವುಕೆ ಬಂತೊಂದು ಹರುಳೆ
ಚೆಂದುರಳೆ
ಇಂಥ ಮಾವನ ತರುಳ ಸೇರ ಹೋಯಿತಿನಿ
ಜೋ ಜೋ ಕಂದಯ್ಯ ಹೊಡಲುರಿದೊ
ಮಣಿ ಜಾರಿದೊ

ಉಬ್ಬಿನ ಭಾವುಕೆ ಬಂತೊಂದು ಹರುಳೆ
ಚೆಂದುರಳೆ
ಇಂಥ ಮಾವನ ತರುಳ ಸೇರ ಹೋಯಿತಿನಿ
ಜೋ ಜೋ ಕಂದಯ್ಯ ಹೊಡಲುರಿದೊ
ನೀ ಜೋ ಜೋ ಕಂದಯ್ಯ
ಮಣಿ ಜಾರಿದೊ

ಹನ್ನೆಡಾನೆಯ ಮೆಟ್ಟಿಗೆಯ
ಇಳಿದು ಹೋತಾಳೆ ಜೋ ಜೋ

ಅದು ಹನ್ನೆಡಾಳುದ್ದ ನೀರು ಬಂದಿತ್ತಲ್ಲೊ
ಅವರ ಬಳಗವೆಲ್ಲಾ ನಿಂದು ನೋಡುತವರೆ

ಎಲ್ಲಿ ನೋಡಿದರೂ ಅಲ್ಲಿ ಅವಳ ಸುಳಿವಿಲ್ಲಾ
ಕುಟ್ಟೆ ಬಾಯಿ ಬಡಿಯುತಾ

ಮಕ್ಕಳ ಶಾಪ ಹಾಕುತಾ
ಅವರೆಲ್ಲಾ ಹಿಂತಿರುಗಿ

ಅವರು ಕ್ವಾಟೆಯೂರಿಗೆ ಹೋಯಿತಾರೆ
ಹೊನ್ನಮ್ಮ ಕೆರೆಗಿಳಿದು

ಇಲ್ಲಿಗೆ ಮೂರು ದಿನವಾದೊ
ಹೇ ಗಂಡಾನ ಸಪ್ನಾಕೆ

ಅವಳು ಏನಂಥ ಹೋಯಿತವಳೆ
ಅವರಾಗ ಬೊಮ್ಮಣ್ಣ ಸೆಟ್ಟರು

ಅವರು ಘಟ್ಟಾವನೆ ತಿರುಗಿ
ಅವರು ನಿದ್ದೇಲಿ ಮನಗವರೆ

ಇವಳು ಸಪ್ನಾಕೆ ಏನಂಥ ಹೋಯಿತಾಳೆ
ಎಟೂ ಹೇಳಿದಾರು ನೀವು ಕೇಳಾದೆ ಬಂದಿರಲ್ಲೊ

ನೀವು ಅರಮನೆಗೆ ಹೋಗಾಕೆ
ನಿಮಗೆ ಗ್ಯಾನ ಇಲ್ಲವೇನೊ

ನಿಮ್ಮ ಹೊನ್ನಿ ಏನಾದಳೂ
ನಿಮ್ಮ ಕಂದಾ ಏನಾಯಿತೂ

ಹೋಗಿ ನೋಡಿ ಬರುದಾ
ನಿಮ್ಮ ನಿದ್ದೆ ಆರಗಿಲ್ಲವಾ

ಅವರಾಗ ಬೊಮ್ಮಣ್ಣ ಸೆಟ್ಟಾರು
ಅವರು ದಡಕನೆದ್ದು ಕೂತು

ಕಣ್ಣು ತಿಕ್ಕುತಾರೆ
ಅವರು ಸುತ್ತಾ ನೋಡುತಾರೆ

ಇದುವೇನೆ ಗೆಣೆಕಾರರೇ
ನಾನು ಕೆಟ್ಟ ಸಪ್ನ ಕಂಡೆ

ನಾ ಕೀಳ ಸಪ್ನ ಕಂಡೆ
ನಾ ಹೋಗಿ ಬತ್ತೀನಿ

ಕೇಳಿ ಗೆಣೆಕಾರರೇ
ನಾ ತಿರುಗಿ ಘಟ್ಟಾವ ನೋಡಿ

ನೀವು ತಿರುಗಿ ನೋಡಿ
ನಾ ಮಾಡ ಯಾಪಾರ ನೋಡಿ

ನೀವೆ ಮಾಡಿಯಪ್ಪಾ
ನಾ ಮುಂದಾಗಿ ಹೋತಿನಿ

ನೀವು ಹಿಂದೆಂದೆ ಬನ್ನಿರಪ್ಪಾ
ಹಂಗಂತವ್ನೇಳಿ ಅವರು

ಕುದುರೆಯ ಹೇರವರೆ
ಅವರು ಮೂರು ತಿಂಗಳಾದಿಯ

ಅವರು ಮೂರು ದಿವಸಕೆ ಬಂದರು
ಅವರು ಮೂರು ದಿವಸದಾದಿಯ

ಅವರು ಒಂದು ದಿವಸಕೆ ಬಂದರೊ
ಒಂದು ದಿನದಾದಿಯ ಒಂದು ಗಂಟೆಗೆ ಬಂದರಲ್ಲಾ

ಮಳೆತೆಯ ಬ್ಯಾರೆಯ ಮ್ಯಾಲೆ
ಅವರು ನಿಂದು ನೋಡುತಾರೆ

ಈ ಕೆರೆಯ ನೀರು ಚೆಂದಾಗಿ ಕಾಣುತದೆ
ನಾನು ಬರುವಾಗ ಹೊಸಕೆರೆ ಇತ್ತಿಲ್ಲಾ

ಯಾರ ಪುಣ್ಯವಂತಾರು ಬಂದು
ಕೆರೆಯ ಗೋರಿಸವರೆ

ಕೆರೆಯ ಏರಿಯ ಮ್ಯಾಕೆ
ನನ್ನ ಕುದುರೆಯ ನೆಗೆಸೇನು

ಅವರಂಗತನ್ದೇಳಿ ಅವರು
ಬಿಮ್ಮನೆ ಕಡಿವಾಣ ಹಿಡಿದವರೆ

ಅಲ್ಲಿಂದ ಕುದುರೆಯ ನೋಡು
ಏರಿಯ ಮ್ಯಾಕೆ ನೆಗೆಸವರೆ

ಕುದುರೆಯಾನೆ ಎಳೆದು
ಕುದುರೆ ನೀರಿಗೆ ಬುಡುತಾರೆ

ನೀರಿಗೆ ಬಿಟ್ಟಾರೆ ಅದು
ನೀರಾ ಕುಡಿಯುನಿಲ್ಲಾ

ಕಣ್ಣೀರು ಸುರಿಸುತಾ ಅದು
ಹಿಮ್ಮುಖಕೆ ನಿಂತೂ

ಇದುವೇನೆ ಕಾಣನಲ್ಲ
ಕುದುರೆ ನೀರಾ ಕುಡಿನಿಲ್ಲಾ

ಕಣ್ಣೀರು ಸುರಿಸುತ್ತೈತೆ
ಮುಂದಾಲ ಕಿವಿಕಿಣಕೆ

ಹೇ ಮನೆಗೆ ಹೋಗಬೇಕಂತ
ಕುದರೆಯ ಹೇರವರೆ

ಅರಮನೆಗೆ ಬಂದಾರೆ
ಒಬ್ಬಾರು ಇಲ್ಲವಲ್ಲಾ

ಕುದುರೆಯ ಇಳಿದವರೆ ಅವರು
ಬಾಗಿಲಿಗೆ ಹೋಗುತವರೆ

ಬಾಗಿಲು ಗರ್‍ರನೆ ಹೋಗುತದೆ
ಕಂದಾ ಗರಗರಾನೆ ಅಳುತ್ತೈತೆ

ಒಳಗೆ ಹೋಯಿತವರೆ ಅವರು
ಮಗಾವನೇ ತೂಗುತಾರೆ

ಇದುವೇನೆ ನನ್ನ ಕಂದಾ
ನಿಮ್ಮ ತಾಯಿ ಎಲ್ಲಿ ಹ್ವಾದಳು

ಬಿಟ್ಟು ಘಟ್ಟಕ್ಕೆ ಹ್ವಾದರುಂತಾ
ಹೊನ್ನಿ ಸಿಟ್ಟುಗೊಂಡು ಹೋಗವಳೇನೂ

ಹೇ ಸಿಟ್ಟನಿಂದ ಹೊನ್ನಿ
ತೌರಿಗೆ ಹೋಗವಳಾ

ಹೇ ನಾ ಹೋಗಿ ನನ್ನ ಮಗನೆ
ಕರ್‍ಕಂಡು ಬತ್ತೀನಿ

ಅಳಬ್ಯಾಡ ನನ್ನ ಕಂದಮ್ಮ
ಸುಮ್ಮನೆ ಮನಗಪ್ಪಾ

ಹಂಗಾಂತವ್ನೇಳಿ ಮಗುವಾ
ತೂಗಿ ಮನಗಿಸುತ್ತಾರೆ

ಅವರು ಈಚೆಗೆ ಬರುತಾರೆ
ಬಾಗಿಲ ಹಾಕಂಡು ಅವರು

ಕುದುರೆಯ ಹೇರಿಕೊಂಡು
ಅವರು ಕ್ವಾಟೆಯೂರಿಗೆ

ಅವರು ಹೋಗುತಾರೆ
ಕ್ವಾಟೆಯೂರಿಗೆ ಬಂದುದಾ

ಚಿಕ್ಕಹೊನ್ನಿ ಕಂಡಾಳು
ತಾಯಿ ಹಡದವ್ವ ನಮ್ಮ

ಭಾವಯ್ಯ ಬತ್ತಾರೆ
ಚಿಕ್ಕಹೊನ್ನಿ ಓಡೋಗಿ

ನೀರಾನೆ ತತ್ತಾಳೆ
ಇದುವೇನೆ ಅತ್ತಿಗ್ಯಮ್ಮ

ನೀವು ನೀರು ತತ್ತೀರಿ
ನಿಮ್ಮಕ್ಕ ಎಲ್ಲಿ ಹ್ವಾದಳೂ

ನಮ್ಮಕ್ಕಾನ ಕೈಲಿ ನೋಡಿ
ಬಳೆಯು ಇತ್ತಿಲವಲ್ಲಾ

ಹೇ ಬಳೆಗಾರ ಬೀದಿಗೆ ನೋಡಿ
ಅಕ್ಕಯ್ಯ ಹೋಗವಳೆ

ಬಳೆಗಾರರ ಬೀದಿಗೆ ನೋಡಿ
ಹೋಗವರೆ ಬೊಮ್ಮಣ್ಣ

ಹೇ ಬಳೆಗಾರರ ಹೆಣ್ಣು ಮಕ್ಕಳೆ
ನಮ್ಮ ಹೊನ್ನಿ ಬಂದಿದ್ದಳಾ

ನಾವು ಹೊನ್ನಮ್ಮನ ಮುಖನೋಡಿ
ಇಲ್ಲಿಗೆ ಮೂರು ದಿನ

ಅಲ್ಲಿಂದ ಬೊಮ್ಮಣ್ಣ ಹಿಂತಿರುಗಿ ಬತ್ತಾರೆ
ಚಿಕ್ಕಹೊನ್ನಿ ಎಲೆ ಹೆಣ್ಣೇ

ಅವಳು ನೀರಾನೆ ತತ್ತಾಳೆ
ಇದುವೇನೆ ಅತ್ತಿಗ್ಯಮ್ಮ

ನೀವು ನೀರು ತತ್ತೀರಿ
ನಿಮ್ಮಕ್ಕ ಎಲ್ಲಿ ಹ್ವಾದಳು

ಕುಂಬಾರರ ಬೀದಿಗೆ ಅವಳು
ಗುಂಬಾಕೆ ಹೋಗವಳೆ

ಅವರು ಕುಂಬಾರರ ಬೀದಿಗೆ
ಓಡೋಡಿ ಹೋಯಿತವರೆ

ಕುಂಬಾರರ ಬೀದಿಯ
ಒಂಭತ್ತು ಹೆಣ್ಣುಮಕ್ಕಳಿರಾ

ನಮ್ಮ ಹೊನ್ನಿ ಬಂದಿದ್ದಾಳ
ನಾವು ಹೊನ್ನಮ್ಮನ ಮುಖಾ ನೋಡಿ

ಇಲ್ಲಿಗೆ ಮೂರು ದಿನಾ
ಅಲ್ಲಿಂದ ಬೊಮ್ಮಣ್ಣ

ಹಿಂತಿರುಗಿ ಬರುತಾರೆ
ಚಿಕ್ಕಹೊನ್ನಿ ಎಲೆ ಹೆಣ್ಣೇ

ನೀರಾ ತತ್ತಾಳೆ
ಇದುವೇನೆ ಅತ್ತಿಗ್ಯಮ್ಮ

ನೀವು ನೀರು ತತ್ತೀರಿ
ನಿಮ್ಮಕ್ಕ ಎಲ್ಲಿ ಹ್ವಾದಳು

ಅವಳು ಮುಂಡೆ ನೋವಂತಾ
ಅವಳು ಮನಗವಳೆ ಅಕ್ಕಯ್ಯ

ಇದುವೇನೆ ಚಿಕ್ಕಹೊನ್ನಿ
ಮಕ್ಕಳಾಟ ಆಡುತೀಯಾ

ಬಿಟ್ಟು ಹ್ವಾದರಂತ ನಿನಗೆ
ಸಿಟ್ಟು ಬಂದೀತಾ

ನಾ ಘಟ್ಟ್ಯಾವನೆ ತಿರುಗಿ
ನಾ ಹಸಿದು ಬಂದಿಲ್ಲವಾ

ಮಾತಾಡಿಯೆ ಇಲ್ಲವೊ ಹೊನ್ನಿ
ನೀ ಮಾತಾಡದಿದ್ದರೆ ನಾ ಇಲ್ಲವಾದೆನು

ನಿನ್ನ ಮುಖಾವ ನೋಡದೆ
ನನ್ನ ಮನಸು ಸೈರಿಸದಲ್ಲಾ

ನೀ ಮಾತಾಡದಿದ್ದರೂ
ನಿನ್ನ ಕೈನಾದರು ತೋರಿಸೇ

ನಿನ್ನ ಕೈನಾದರು ನೋಡಿ
ನಾ ಸಂತೋಸಪಟ್ಟೇನು

ಅವನು ಹಂಗಂತವ್ನೇಳಾಗ
ಅವರತ್ತಿಗೆ ಹೊಟ್ಟೆ ಉರಿದಿರೊ

ಆಕೆ ದುಃಖಾವ ಮಾಡುತಾರೆ
ಯಾವ ಕುಟಿ ನೀವು ಮಾತಾಡತಿರಿ

ನಾ ಹೇಳಿಕಾರು ಹೇಳೇನು
ನೀವು ಮಂಚಕಾದರೂ ಬರಬಾರದೇನು

ಆಗ ಬೊಮ್ಮಣ್ಣ ಸೆಟ್ಟರು
ಮಂಚಕೆ ಹ್ವಾದರೂ

ಅವರ ತಾಯಿ ಹಡದವ್ವಾ
ಏನಂತ ಹೇಳತಾರೆ

ನೀವು ಬಿಟ್ಟು ಘಟ್ಟಕೆ ಹೋಗಿ
ನಿಮ್ಮಪ್ಪ ಕೆರೆ ಗೋಲಿಸಿ

ಹೊನ್ನಮ್ಮನ ಆಹುತಿ ಹಿಡಿದವರೆ
ಕಂದಾನ ತಬ್ಬಲಿ ಮಾಡವರೆ

ನಿಮ್ಮಪ್ಪನ ಮನೆ ನೋಡಿ
ಹಾಳುಬಿದ್ದು ಹೋಯಿತಲ್ಲಾ

ಹೊನ್ನಿ ಎಲ್ಲಿ ಬಂದಾಳು
ನೀವು ದುಃಖ ಯಾಕೆ ಮಾಡುತೀರಿ

ಆ ಮಾತು ಕೇಳುತಾ ಅವರು
ಪಟ್ಟೆಯ ವಸ್ತ್ರವಾ

ಮುಖ ತುಂಬಾ ಮುಚ್ಚಿಕೊಂಡು
ಅವರು ವಕ್ಕುಳಾ ದುಃಖವ ಮಾಡುತಾರೆ

ಅವರ ತಮ್ಮನವರೆಲ್ಲಾ
ಏನಂತ ಹೇಳುತಾರೆ

ಚಿಕ್ಕಹೊನ್ನಿ ನನ್ನ ಕಂದಾನ
ಮಾತು ಮಾಡನಳೆ

ಚಿಕ್ಕಹೊನ್ನಿ ಕೊಡುತಿವಿ
ನಗ್ಣವಾಗಿರಪ್ಪಾ

ಕಂದಾನ ಸಾಕಿಕೊಂಡು
ಚೆಂದಾಗಿ ಬದುಕೋಗಿ

ದೊಡ್ಡಹೊನ್ನಿ ಗ್ಯಾನ ಮಾಡಿ
ನೀವು ಅತ್ತೀರಿ ಕರೆದೀರಿ

ಹಂಗಂತವ್ಹೇಳಿ ಅವರು
ಇವರು ದಡಾರನೆ ಎದ್ದಾರು

ಕುದುರೆ ಹೇರಿಕಂಡು
ತನ್ನ ಅರಮನೆಗೆ ಬಂದವರೆ

ಬಾಗಿಲಾ ತಕ್ಕಂಡು ಅವರು
ಮಗಿನಾ ತೊಟ್ಟಿಲ ತಕ್ಕಂಡು

ಕುದುರೆಯ ಮ್ಯಾಲೆ ಮಡ್ಕಂಡು
ಕೆರೆಯ ತಾವಕೆ ಹೋಗುತಾರೆ

ತೊಟ್ಟಿಲು ಇಳಕವರೆ
ಕೆಳಗೆ ಮಡ್ಗವರೆ

ಕೆರೆಯ ಏರೀಲಿ ನಿಂತ್ಕಂಡು
ಅವರು ಮಕ್ಕಳ ದುಃಖ ಮಾಡುತಾರೆ

ನಿನ್ನ ಅಂದ ಚೆಂದವೂ ಹೊನ್ನಿ
ನನ್ನ ಕಣ್ಣಿಗೆ ಕಾಣುದಿಲ್ಲ

ನಿನ್ನ ಮುಖಾ ನೋಡದೇ
ನನ್ನ ಜೀವಾ ಬೆಂಡಾಗುವುದು

ಹೆಂಗಾಂತವ್ಹೇಳಿ ಅವರು
ದುಃಖವಾ ಮಾಡುತಾ

ಹೊನ್ನಿ ಹೊನ್ನಿ ಅಂತಾ ಅವರು
ಮೂರು ಸೊಲ್ಲು ಕರೆಯುತಾರೆ

ಮೂರು ಸೊಲ್ಲಿನ ಮ್ಯಾಲೆ ಅವಳು
ಹೊ ಅಂತ ಹೋಯ್ಕಂಡಳಲ್ಲ

ನೀ ಯಾರಿಗೆ ಹೇಳಿಬಂದೇ ಹೊನ್ನಿ
ನಾ ಇತ್ತಿಲ್ಲವಲ್ಲೇ

ನಿನ್ನ ಮೂರು ತಿಂಗಳು ಕಂದಾನ
ನೀನು ಯಾರ ತಾವು ಬಿಟ್ಟುಬಂದೇ

ನೀನು ಹಿಮ್ಮುಕನಾಗಿರಪ್ಪಾ
ನಾ ಮ್ಯಾಕೆ ಹತ್ತಿಬತ್ತೀವಿನಿ

ಅವರಾಗ ಬೊಮ್ಮಣ್ಣ ಸೆಟ್ಟರು
ಅವರು ಹಿಮ್ಮುಕಕೆ ನಿಂತವರೆ

ಇವಳು ಬಾಗುತಾ ಬಳುಕುತಾ
ಮ್ಯಾಕೆ ಹತ್ತಿ ಬತ್ತನಳೆ

ಗಂಡಾನ ಕೊಳ್ಳ ಕಟ್ಟಿಕೊಂಡು
ಅವರು ಒಬ್ಬರ ಕೊಳ್ಳಾ ಒಬ್ಬರು

ಕಟ್ಟಿಕೊಂಡು ಅವರು
ದುಃಖವ ಮಾಡುತಾರೆ

ಗೆಣೆಗಾರ ಮಾತ ಕೇಳ್ಕಂಡು
ನಾ ಘಟ್ಟಕೋಗಿ ಕೆಟ್ಟನಲ್ಲ

ನಾನು ಎಟ್ಟೊ ಹೇಳಿದರೂ ನೀವು
ಕೇಳಾದೆ ಹ್ವಾದಿರಿ

ನಿಮ್ಮಪ್ಪ ಕೆರೆ ಗೋರಿಸಿ
ನನ್ನ ಆಹುತಿಯ ಹಿಡಿದಾರು

ನನ್ನ ಹಣೆಯಲ್ಲಿ ಬರೆದಿದ್ದು
ಅದಕೆ ಯಾರೇನಾ ಮಾಡೀರು

ಚಿಕ್ಕಹೊನ್ನಿ ನನ್ನ ತಂಗಿಯ
ನಾನು ಮಾತು ಮಾಡಿದ್ದೀನಿ

ಚಿಕ್ಕಹೊನ್ನಿ ಮದುವೆಯಾಗಿ
ನನ್ನ ಕಂದಾನ ಸಾಕಂಡು

ನೀವು ಚೆಂದಾಗಿ ಬದುಕ್ಕೋಗಿ
ನಾ ಬಂದು ಹೊತ್ತಾಯಿತು

ಕೆರೇಲಿ ನೀರೇ ಇಲ್ಲವಲ್ಲಾ
ನನ್ನ ಸರಿಸಮದವರು ನೋಡಿ

ನನ್ನ ಆಡ್ಕಂಡು ನಗುತಾರೆ
ಗಂಡನಾಸೆಗೆ ಅವಳು ಮ್ಯಾಕೆ

ಹತ್ತಿ ಬಂದಾಳು ಕೆರೇಲಿ ನೀರೆ ಇಲ್ಲಾ
ಜನ ನಗುತ್ತಾರಲ್ಲಾ

ನಾ ಹೋಗಿ ಬತ್ತೀನಿ
ನೀವು ಹೋಗಿ ಬದಿಕೀರಪ್ಪಾ

ಅವರು ಗಂಡಾನು ಹೆಂಡತುವೇ
ಇಳ್ಯಾವ ಮೆಲ್ಲುತಾರೆ

ಹೇ ಕಂದಾನ ಕರ್‍ಕಂಡು ಅವಳು
ಎದೆಹಾಲ ಕೊಡುತಾಳೆ

ಅವರಾಗಲೇ ಬೊಮ್ಮಣ್ಣ
ಏನಂತ ಹೇಳುತಾರೆ

ಹೋಗುವಳು ಹೋಯಿತಿಯೆ
ನಿನ್ನ ಕಂದಾನ ಕರ್‍ಕಂಡು ಹೋಗೆ

ಹೇ ತಬ್ಬಲಿ ಅಂತಾರೆ ಅದರ ತಲೆಗೆ ಹೆಟ್ಟುತಾರೆ
ಇದೊಂದು ಕಣ್ಣಲ್ಲಿ ನೋಡನಾರೆ

ಮಗುವನು ಕರ್‍ಕಂಡು ಮಡಲೀಗೆ ಹಾಕಂಡು
ಹೋಯಿತಿನಂತ ಅವಳು ಹೊಂಡುತ್ತವಳಲ್ಲಾ

ಅವರಾಗ ಬೊಮಣ್ಣ ಸೆಟ್ಟರು
ಅವರು ವಕ್ಕಳ ದುಃಖ ಮಾಡುತಾರೆ

ಒಂದು ಮೆಟ್ಟಗೆಯು ಅವಳು
ಇಳಿದು ಹೋಗುತಾಳೆ

ಎಲ್ಡು ಮೆಟ್ಟಗೆಯು ಅವಳು
ಇಳಿದು ಹೋಗುತಾಳೆ

ಎಲ್ಡು ಮೆಟ್ಟಗೆಯು ಇಳಿಯಾಗ
ಇವರಿಗೆ ಸಂಕಟ ಬರುತೈತೆ

ಇವಳು ಹೋಗಾಗ ನೋಡು
ನಾನಿದ್ದು ಫಲವೇನು

ಸಿಕ್ಕಿದ ಬಂಗಾರ
ನಾ ಕಣ್ಣಿಂದ ಕಳ್ಕಂಡೇ

ಹಂಗಂತವ್ನೇಳಿ ಮುತ್ತಿನಾ ಸೆರಗಾ ಹಿಡ್ಕಂಡು ಅವಳ
ಹಿಂದ್ಗುಂಟೇ ತಾವು ಇಳಿದು ಹೋಯತಾರೆ

ಅವರ ಗಂಡ ಹೆಂಡತಿ ಮಗು ಕೂಡಿ ಮೂರು ಜನಾ
ಕೆರೆಯುವಳಗೆ ಅವರು ಸುಖವಾಗಿ ಬದಕವರೆ

ಅವಳಾಗಲೆ ಹೊನ್ನಮ್ಮ
ದೇವ ಮನುಸೆಯಾದಳು

ವರಸಕ್ಕೊಂದು ಸಲ
ಪೂಜೆಯನಾಗುತಾವೆ

ಹೇ ವರುಸಕ್ಕೊಂದು ಸಲ
ಬಾಗಣಾವ ಬಿಡುತಾರೆ

ಅಣ್ಣ ಹ್ವಾದ್ದ ಕೇಳಿ
ವೈದ ನಿಂಗಣ್ಣ ಸೆಟ್ಟಿ

ಇವರು ಹ್ವಾದಮ್ಯಾಲೆ
ನೋಡು ನಾನಿದ್ದು ಫಲವೇನು

ಅತ್ತಿಗ್ಯಮ್ಮ ನನ್ನ ತಾಯಿ
ನಾ ಇಳಿದು ಬತ್ತೀನಿ

ಅಪ್ಪಾ ಇದೊಂದು ಪಾಪಾಕೆ
ನನ್ನ ಈಡು ಮಾಡಬ್ಯಾಡ

ನೀನು ಅಲ್ಲೇ ಒಡದು ಮೂಡು
ನಿನಗೆ ವರುಸಕ್ಕೊಂದು ಪೂಜೆ ನಡದು ಬರಲಪ್ಪಾ

ನನಗಿಂತ ಹೆಚ್ಚಾಗಿ ನಿನಗೆ
ಹಣ್ಣು ಹೂವು ಸಿಕ್ಕಾಲಿ

ಹಂಗಾಂತವ್ನೇಳಿ ಅವಳು
ಶಾಪಾಳ ಕೊಡುತಾಳೆ

ಅವನು ವೈದ ಬಸವಣ್ಣನಾಗಿ
ಅಲ್ಲಿ ಒಡದು ಮೂಡಿದ್ದಾರೆ

ವರುಸಕ್ಕೊಂದು ಪೂಜೆ
ಅವರಿಗೂ ನಡೆದಾವೆ

ಅವರಿಗಿಂತ ಹೆಚ್ಚಾಗಿ ಇವರಿಗೆ
ಹಣ್ಣು ಹೂವು ಬರುತಾವೆ

ಆಗ ಸುಖವಾಗಿ ಅವರೆಲ್ಲಾ ಬದಕವರೆ
ಅವರು ನಾಕು ಮಂದಿ ದೇವ ಮನುಸರಾದರೊ

ಹೇ ಮಲ್ಲೇಗೌಡರ ಮನೆ ನೋಡಿ
ಹಾಳುಬಿದ್ದು ಹೋಯಿತಲ್ಲಾ

ಸುವ್ವಿಯೊ ಚೆನ್ನಬಸವಣ್ಣ ಸುವ್ವಿಯೊ
ಸುವ್ವಿಯೊ ಸುವ್ವಿ ಸುವ್ವಿಯೊ

ಬಾಣಾವತಿ ದೊರೆ

ಹರನ ಹರನ ದೇವಾ
ಹರನಾ ಹರನಾ ಎನ್ನದೇವ್ರೋ

ಬಾಣಾವತಿ ದೇಸ ಭಾಳ ಹೆಸರಿಗೆ ದೊಡ್ಡದೊ
ಬಾಣಾವತಿ ದೊರೆಗೆ ಅವನು ಇರುವನೊಬ್ಬ ಮಗ
ನಂದಗೋಮಾರ ಅವನ ಹೆಸರು
ಪದುಮಾವತಿ ರಾಜನ ಮಗಳು
ಅವಳ ಹೆಸರು ಪದುಮಾವತಿ ಹೆಣ್ಣು
ಮಗಳ ಕೇಳಿದಾರು ಅವರು ಮದುವೆ ಮಾಡವರೆ
ವರುಸ ಮೂರು ಆದೊ
ಮೂರು ವರುಸಕೆ ಪದುಮಾವತಿ ಆರು ತಿಂಗಳು
ಅವಳಾರ ತಿಂಗಳು ಗರ್ಭದಲ್ಲಿ ಅವಳೆ ಪದುಮಾವತಿ ಹೆಣ್ಣು
ಬಾಣಾವತಿ ದೊರೆಗೆ ಸಿರಿಸ್ತನ ಹೋಗಿ ಬಡಸ್ತನ ಬಂತು
ಉಣ್ಣಕನ್ನ ಇಲ್ಲ ಉಡಕೆ ಬಟ್ಟೆಯಿಲ್ಲ
ಹಿಡಿಯಾಕೆ ಚತ್ರಿಯಿಲ್ಲ ಅವರಿಗೆ ಭಾರಿ ಬಡಸ್ತನ

ಹೇ ಶಿವನೆ ಪಾರ್ವತಿ ಊಟಾವನೆ ಮಾಡಿ
ಅವರು ಮಂಚದಮ್ಯಾಲೆ ಇಳ್ಯಾ ಮೆಲ್ಲುತ್ತವರೆ
ಮಾಶಿವನೆ ಪಾರ್ವತಿ ಕುಟೆ ಏನಂಥ ಹೇಳುತಾರೆ
ನೋಡು ನೋಡು ಪಾರ್ವತಿ ದೇವಿ ಬಾಣಾವತಿ ದೇಸ
ಹೆಸರಿಗೆ ದೊಡ್ಡದು ಏನಿದ್ದರೇನು ಅವರಿಗೊಬ್ಬ ಮಗ
ಒಬ್ಬ ಮಗನಿಗೆ ನಂದಗೋಮಾರ ಹೆಸರೆ ಇರುವುದು
ಪದುಮಾವತಿ ರಾಜನ ಮಗಳ ಕೇಳಿರುವರು ಮದುವೆ ಮಾಡಲು
ಪದುಮಾವತೀನ ಮದುವೆ ಮಾಡಿ
ವರಸ ಮೂರು ಆದವಲ್ಲೇ
ಈ ಮೂರು ವರುಸಕೆ ಪದುಮಾವತಿಗೆ ಆರು ತಿಂಗಾಳು

ಅವಳಾರು ತಿಂಗಳು ಅವಳು ಗರ್ಭದಲ್ಲವಳೆ
ಅವಳು ಬಾಣಾವತಿ ದೊರೆಗೆ
ಬಾಣಾವತಿ ದೊರೆಗೆ ಭಾಳ ಬಡಸ್ತನ ಬಂದಿತು ಉಣ್ಣಾಕೆ ಅನ್ನ ಇಲ್ಲ
ಕೂರಕೆ ಕುದುರೆಯಿಲ್ಲ ಹಿಡಿಯಾಕೆ ಚತ್ರಿಯಿಲ್ಲ ಊಟಾಕೆ ಅನ್ನಿಲ್ಲ
ಉಡಕೆ ಬಟ್ಟೆಯಿಲ್ಲ ಅವರ ಬಡಸ್ತನ ನೋಡಬಾರದು
ಅಂಥ ಬಡಸ್ತನ ಕೊಟ್ಟು ನೀವು ಕಣ್ಣಿಂದ ನೋಡುತಿರಲ್ಲ
ಏನಾದರೂ ವಚನವ ನೀವು ಕೊಡಬಾರದ ಸ್ವಾಮಿ ಅಂಥ ದೊರೆಗಳಿಗೆ
ನಾನಲ್ಲಿ ಹೋಗಿ ಸಿರಸ್ತನ ಕೊಡವನಲ್ಲ ನಾ ಇಲ್ಲೇ ಕೊಡುವೆ
ಇಲ್ಲೇ ಕುತ್ಕಂಡು ಮೂರು ಮಂತ್ರ ಜಪಿಸಿ ಸಿರಸ್ತನ ಕೊಟ್ಟಾರು
ಅವರು ಅಲ್ಲೇ ಕುತ್ಕಂಡು ಮೂರು ಮಂತ್ರ ಜಪಿಸ್ಯಾರೆ
ಬಾಣಾವತಿ ದೊರೆಗೆ ಬಡಸ್ತನ ಹೋದೀತು ಸಿರಸ್ತನ ಬಂದೀತು
ಅವರ ಆನೆಸಾಲೆ ನೋಡಿರೊ ಅವರ ಒಂಟೆ ಸಾಲ ನೋಡಿರೊ
ಅವರ ದಂಡು ನೋಡಿರೊ
ಬೇಕಾದಂತವ ಸಕಲ ಭಾಗ್ಯವ ಕೈಗೊಡಿತೊ
ಭಾಗ್ಯವನು ಕೊಟ್ಟು ತಿಂಗಳೊಂದುನಾದೂ

ಒಂದು ತಿಂಗಳಿಗೆ ಏನು ಹೇಳುತಾರೆ ಪಾರ್ವತಿಗೆ
ನಾ ಕೊಟ್ಟ ಭಾಗ್ಯವ ನಾ ನೋಡಿ ಬರುತೀನಿ
ನನ್ನ ಮಡದಿ ಪಾರ್ವತಿ
ಬ್ಯಾಡ ಸ್ವಾಮಿ ನೀವು ಹೋಗಬಾರದು ಕಣ್ಣಲ್ಲಿ ನೋಡಬಾರದು
ಕಣ್ಣಲ್ಲಿ ನೋಡಿದರ ಸ್ವಾಮಿ ಅದಕೊಂದು ಆಲೋಚನೆ ಹುಡುಕುತಿರಿ
ಇಲ್ಲಕಣೆ ನಾನು ಹೋಗಿ ಬರುತೇನೆ ಇನ್ನಷ್ಟು ಭಾಗ್ಯ ಕೊಟ್ಟು ಬರುತಿನಿ
ನಾ ಕೊಟ್ಟು ಬರುತೇನೆ ನಾ ಹೋಗಿ ಬರುತೇನೆ ಮಡದಿ ಪಾರ್ವತಿ
ಸ್ವಾಮಿ ನೀವು ಹ್ವಾದರೆ ನಾನು ನಿಮ್ಮ ಜೊತೇಲಿ ಬರುತೇನೆ
ಒಡ್ಡನ ಕುಟೆ ಒಡ್ಡತಿ ಬಂದವಳೆ ಅಂತ ಜನರೆಲ್ಲಾ ಆಡಕೊತಾರೆ
ನಾ ನಾಸನವತಾರ ನಾ ಜೋಗಿ ಅವತಾರ ತಾಳಿತಿನಿ
ನಾನು ಅಂಗೈಲಾನೆ ಬೆತ್ತ ಮುಂಗೈನಾಗೆ ಜೋಳಿಗೆ
ದಾಸನಾಗುತೇನೆ ನನ್ನ ಮಡದಿ ಪಾರ್ವತಿ
ಇನ್ನಷ್ಟು ಭಾಗ್ಯ ಕೊಟ್ಟು ಬನ್ನಿ ನೀವು ಹೋಗಿ ಬನ್ನಿ
ಆಗಲೇ ಸ್ವಾಮಿ ಬಾಣಾವತಿ ಪಟ್ಟಣಕೆ ಹೋಗುತಾರೆ
ನಂದಗೊಮಾರ ದೊರೆ ಮನೆಯಲ್ಲಿ ಇಲ್ಲವಲ್ಲ ಶಿಕಾರಿಗೆ ಹೋಗನರೆ
ಅವರು ಬಾಣಾವತಿ ದೊರೆ ತೂಗು ಮಂಚದ ಮ್ಯಾಲೆ ತೂಗಾಡುತವರೆ

ಇವರ ಬಾಗಿಲಿಗೆ ಹೋಗಿ ಸ್ವಾಮಿ ಏನು ಹೇಳುತಾರೆ
ನಾ ತಿರಿಯುವನು ನಾ ದಾಸ ಬಂದಿವಿನ್ನೆಲ್ಲಾ ನಾ ಜೋಗಿ ಬಂದಿವಿನ್ನೆಲ್ಲಾ
ಹೇ ನಿನ್ನಂಥ ಜೋಗಿಗೆ ದಾನವಿಲ್ಲಾ ದಕ್ಷಿಣೆಯಿಲ್ಲಾ
ಇವರು ನೀಡಿದ್ದ ಕಾಲ ತೆಗೆಯನಿಲ್ಲ ಇವರು ಏನು ಹೇಳುತಾರೆ
ಕೇಳಿವರೆ ಕೇಳಿರೆ ನೀವು ಗೌಡ್ನಮಕ್ಕಳೇ ನಾ ತಿರಿಯ ದಾಸ
ಒಬ್ಬ ದಾಸ ಬಂದವನೆ ಒಬ್ಬ ಜೋಗಿ ಬಂದವನೆ ಅವನಿಗೆ ದಾನ ಕೊಡಿರೆ
ತರುನುಚ್ಚು ಗುರುಕಣ್ಣು ದಾನ ಕೊಡಿರೊ ಅವನಿಗೆ
ನಾ ಕೊಟ್ಟ ಭಾಗ್ಯವ ನಾ ನೋಡಾಕೆ ಬಂದಾರೆ
ತರುನುಚ್ಚು ಗುರುಕಣ್ಣು ನನಗೆ ದಾನ ಕೊಟ್ಟವರೆ
ದಕ್ಷಿಣೆ ಕೊಡಿಸವರೆ

ನಾ ಇದಕೊಂದು ಉಪಾಯ ಹುಡಕಬೇಕಂತ ಸ್ವಾಮಿ ಏನ ಹೇಳವರೆ
ಕೇಳಿ, ಕೇಳಿ ಸ್ವಾಮಿ ನೀವು ದೊರೆಯೆ ಕೇಳಿ ನೀವು ಕೊಟ್ಟಂತ ದಾನ
ನೀವು ಕೊಟ್ಟಂತ ದಾನ ಜೋಳಿಗೆ ತುಂಬೀತು
ಆದರೇನು ಸ್ವಾಮಿ ನಾ ಹೋಗಿ ಬತ್ತೀನಿ ನಾ ಏನೆಂದು ಹೇಳಲಿ
ಹೇ ದೇಸ ದೇಸವ ನಾ ಸುತ್ತಿ ಬಂದೇನು ನಾ ತಿರುಗಿ ಬಂದೇನು
ಎಲ್ಲಿ ನೋಡಿವರೆ ನಿಮ್ಮ ಹೆಸರೇ ದೊಡ್ಡಾದು
ಏನಾದರು ಮಾಡಿ ಲೋಕದ ಜನರು
ಒಂದೇ ಒಂದು ನುಡಿಯ ನುಡಿಯುವರು
ಈ ಲೋಕದ ಜನರೆಲ್ಲಾ ಏನೆಂದು ಹೇಳಾರು
ಬಾಣಾವತಿ ದೇಸ ಭಾಳ ದೊಡ್ಡದೇಸ
ಅವರಿಗಿರುವುದು ಒಬ್ಬ ಮಗ ನಂದಗೊಮಾರ
ನಂದಗೊಮಾರಗೆ ದೊಡ್ಡ ಹೆಸರ ಪಡೆನಿಲ್ಲ
ಒಂದು ಭಾವಿ ತೆಗಿಸಿನಿಲ್ಲ ಒಂದು ರುಕ್ಷ ಹಾಕನಿಲ್ಲ ಬಂದ ಜನರಿಲ್ಲಾ
ಅವರು ಬಂದ ಜನರು ನೀರಾ ಕುಡಿಯನಿಲ್ಲ ನೆರಳಾ ಸೇರನಿಲ್ಲ
ಇವರು ಪುಣ್ಯ ಪಡೆಯನಿಲ್ಲಂತ
ಕೆಟ್ಟ ನುಡಿಯ ನುಡಿಯುವರಲ್ಲಾ ದೊರೆಯೆ
ನಾ ಕೇಳಪಾ ನುಡಿಯು ನಿಮ್ಮ ಜೊತೆಯಲ್ಲಿ ಹೇಳಿದೆ ಗುರುವೆ
ನಾ ಹೋಗಿ ಬತ್ತೀನಿ ತಾವು ಸಿಟ್ಟು ಮಾಡಬ್ಯಾಡಿ
ಸ್ವಾಮಿ ಹೋಗಾಗ ಬಾಣಾವತಿ ದೊರೆ
ಪಟ್ಟಿ ಮಂಚದ ಮ್ಯಾಲೆ ಮಖಾಡೆ ಮನಗವರೆ
ಸೊಸೆ ಪದುಮಾವತಿ ಚಿನ್ನಾದ ಗಿಂಡೀಲಿ ಪನ್ನೀರು ತಂದಾಳು

ಏಳಿ ಮಾವಯ್ಯ ನೀವು ಮುಖ ತೊಳೀರಿ ನೀವು ಊಟ ಮಾಡ್ಹೇಳಿ
ನಾನು ಊಟಮಾಡೊದಿಲ್ಲ ನಾ ಉದ್ದ ಕೇಳುದಿಲ್ಲ ಪದುಮಾವತಿ

ಇವರು ಮಾತಾನಾಡೊತ್ತಿಗೆ ಅವರು ನಂದಗೊಮಾರ ಮನೆಗೆ ಬಂದಾರು
ಪದುಮಾವತಿ ಗಂಡಗೆ ನೀರಾ ಕೊಡುತಾಳೆ
ಕಾಲ ತೊಳೆದುಕೊಂಡು ಅವರು ಅಂಗಳ ಹತ್ತುತ್ತಾರೆ
ಮತ್ತೆ ಏನು ಕೇಳುತಾರೆ
ಇದುವೇನೆ ಪದುಮಾವತಿ ನನ್ನ ತಂದೆ ಯಾಕೆ ಮನಗವರೆ
ಏನ ಕಾಣೆ ನೋಡಿ ನಾ ನೀರಾ ಕೊಟ್ಟಾರೆ ಅವರು ಊಟ ಮಾಡನಿಲ್ಲ
ಅವರು ಉದ್ದಕ್ಕಿದ್ದಿಲ್ಲ ಅವರು ಊಟಮಾಡಿಲ್ಲ
ಅವರು ಮಖಾಡೆ ಮನಗವರೆ
ಏಳಿ ಏಳಿ ತಂದೆ ನಿಮಗೆ ಬಂದ ಕಷ್ಟವೇನು ನಾ ಇರಾಗ
ನಿಮಗೆ ಇರುವನು ನಾನೊಬ್ಬ ಮಗ
ನಿಮಗೇನು ಕಷ್ಟ ನಾನಿದ್ದಂಗೆಯು
ಏನು ಕಷ್ಟವೊ ಹೇಳಿ ತಂದೆ ಹೇಳಿ ನನ್ನ ತಂದೆ
ಮಗನೆ ನಾ ಏನು ಹೇಳಲಿ ಒಬ್ಬ ದಾಸ ಬಂದಾನೊ
ಬಂದ ದಾಸನೀಗೆ ನಾ ದಾನ ಕೊಡಿಸಿದೆ ದಕ್ಷಿಣೆ ಕೊಡಿಸಿದೆ
ದಾನ ಇಸ್ಕೊಂಡು ಹಿಂತಿರುಗಿ ಹೋಗನಿಲ್ಲ
ಒಂದು ನುಡಿಯಾ ನುಡಿದಾನು
ದೇಸ ದೇಸಾವ ಸುತ್ತಿ ಬಂದನಂತೆ ತಿರುಗಿ ಬಂದನಂತೆ
ಎಲ್ಲಿ ಸೋಡಿದರೆ ನನ್ನ ಹೆಸರು ದೊಡ್ಡದಂತೆ
ಏನಾದರೂ ಏನು ನಮಗೆ ಕೆಟ್ಟದೊಂದು ನುಡಿಯ ನುಡಿಯುವನಂತೆ ಮಗನೆ
ಒಂದಾ ಭಾವಿ ತೆಗಿಸಿನಿಲ್ಲ ಒಂದು ರುಕ್ಷ ಹಾಕಿಸನಿಲ್ಲ
ಬಂದಾ ಜನರೆಲ್ಲಾ ಅವರು ನೀರು ಕುಡಿಯನಿಲ್ಲ
ಅವರು ನೆರಳಾ ಸೇರನಿಲ್ಲಾ
ನೀರಾ ಕುಡಿಯನಿಲ್ಲಾ ಅವರು ನೆರಳಾ ಸೇರನಿಲ್ಲ
ನಾ ಪುಣ್ಯ ಪಡೆಯನಿಲ್ಲಾ
ಇಂಥದೊಂದು ನುಡಿಯ ನಮ್ಮ ಕಿವಿಯು ಕೇಳಿ ನಮಗೆ ಊಟಬ್ಯಾಡ
ಈ ಸ್ವಲ್ಪ ಕೆಲಸಕೆ ಚಿಂತೇನು
ನಾ ಭಾವಿ ತೆಗಿಸೇನೂ ನಾ ರುಕ್ಷ ಹಾಕಿಸೇನು ಊಟಕ್ಹೇಳಿ ತಂದೆ
ಅಪ್ಪಾ ಮಕ್ಕಳು ಕೂತ್ಕಂಡು ಊಟಮಾಡಿ
ಅವರು ಮೂಡಲ ದೇಸಕೆ ಮೂರು ಸಾವಿರ ಒಡ್ಡರು

ಬುದ್ಧಿವಂತ ಒಡ್ಡಾಗೆ ವಾಲೆ ಕೊಟ್ಟ
ನೀವು ಬ್ಯಾಗ ಬರಬೇಕು
ಒಡ್ಡರ ಗೌಡ ವಾಲೆ ಓದಿ
ಅವರು ಮೂರು ಸಾವಿರ ಒಡ್ಡಾರು
ಸೀದಾ ಬರುತಾರೆ ಅವರು ಬಾಣಾವತಿ ಪಟ್ಟಣಕೆ
ಸರಣು ಸರಣು ಕೊಟ್ಟು ಮಾತಾನಾಡುತಾರೆ
ಇಷ್ಟು ತುರತದಿಂದ ನನ್ನು ಕರಿಸಿದ್ದ್ಯಾಕೆ ಹೇಳು ದೊರೆ
ಬಂದ ಒಡ್ಡರಿಗೆ ಅವರು ಹಣ್ಣಾ ಕೊಡಿಸವರೆ
ಹಾಲ ಕೊಡಿಸವರೆ
ಹಣ್ಣ ಹಾಲು ಕೊಡಿಸಿ ಮೂರು ಮಾತಾನಾಡುತಾರೆ ಕೇಳೊ ಒಡ್ಡಗೌಡ
ಅಡ್ಡ ಮೂರು ಮಾರು ಉದ್ದ ಆರು ಮಾರು ಆಳ ಹನ್ನೆಲ್ಡಾಳ್ಳುದ್ದ
ಹನ್ನೆಲ್ಡಾಳುದ್ದ ಭಾವಿ ತೆಗೆಬೇಕು ಹೇ ರುಕ್ಷ ಹಾಕಬೇಕು
ಬೆಲೆ ಏನೂ ಕೇಳುತ್ತೀಯೊ ಹೇ ಒಡ್ಡಗೌಡ
ನಾ ಕೇಳಿದ್ದಾ ಕೊಡುತೇನಿ
ಸ್ವಾಮಿ ನನ್ನಂದಲ್ಲ ಮಾತು ನೀವ್ಹೇಳಿ ನಾ ಕೆಲಸಮಾಡುತೇನಿ
ನಾನು ಹನ್ನೆಲ್ಡು ಸಾವಿರ ಹಣ ಕೊಡುತೇನೆ
ನೀನು ಭಾವಿ ತೆಗೆತೀಯಾ
ಆಗಲಿ ಸ್ವಾಮಿ ನೀವು ಹೇಳಿದಂಗೆ ಹಣವಿಗೆ ನಾ ಭಾವಿ ತೆಗೆತೀನಿ
ಈ ಹನ್ನೆಲ್ಡ್ ಸಾವಿರಕೆ ಒಪ್ಪಂದ ಹಿಡದವನೆ ಇಳ್ಯಾವ ಕೊಟ್ಟವರೆ
ಅವರು ಬ್ವಾರೆಯ ಮ್ಯಾಲಕ್ಹೋಗಿ ಅವರು ಅಳತೆಯ ಹಿಡಿತಾರೆ
ಅವರು ಆಯಾವ ಹಿಡಿತಾರೆ
ಆಯಾವನ್ನು ಹಿಡಿದು ಪೂಜೆಯು ಸಾಮಾನ ಬ್ಯಾಗನೆ ಕೇಳುತಾರೆ
ಪೂಜೆಗೆ ಸಾಮಾನ ಬ್ಯಾಗ ಕೊಡುತಾರೆ ಅವರು ಕೇಳಿದ್ದೆಲ್ಲಾ
ಪೂಜೆಯು ಮಾಡಿ ಅವರು ಕೆಲಸವನೆ ಹಿಡಿದಾರೆ

ಅವರು ಕೆಲಸ ಮಾಡಾಗ ಅವರು
ಮಾಸ್ವಾಮಿ ಇಲ್ಲಿ ಏನು ಮಾಡುತಾರೆ
ಅವರು ಮಡದಿ ಪಾರ್ವತಿಗೆ ಗೊತ್ತಿಲ್ಲದಂತೆ
ಅವರು ತಂಗಿಯರ ಕರಿತಾರೆ
ಬನ್ನಿರಿ ಬನ್ನಿರಿ ಅಚ್ಚಗನ್ನೆ ದೇವಗನ್ನೆ
ಅಚ್ಚಗನ್ನೆ, ದೇವಗನ್ನೆ, ಸಾಮುಗನ್ನೆ, ರತ್ನಗನ್ನೆ ನೀಬಾರೇ
ನೀವು ಸೀದಾ ಹೋಗಬೇಕು ಬಾಣಾವತಿ ಪಟ್ಟಣಕೆ

ಬಾಣಾವತಿ ದೊರೆ ಭಾವಿ ತೆಗೆಸುತಾನೆ ರುಕ್ಷ ಹಾಕುತಾನೆ
ಅವನ ಭಾಗ್ಯವ ನಾನು ಕಣ್ಣಿಂದ ನೋಡಬೇಕಲ್ಲಾ
ಕಲ್ಲು ಕೊಡವ ಮಾಡಬೇಕು ಮಳ್ಳ ಸಿಂಬಿ ಮಾಡಬೇಕು
ಜಲದ ಕಣ್ಣ ಕಟ್ಟಬೇಕು
ಭಾವಿ ಜಲ ಬರಬಾರದು ರುಕ್ಷ ಚಿಗರಬಾರದು
ರುಕ್ಷ ಚಿಗುರಬಾರದು ನೀವು ನೋಡಿ ಮೂರು ದಿವಸ
ಮೂರು ದಿವಸದ ಮ್ಯಾಲೆ ನೀವು ಬಾಣಾವತಿಯು ಸಪ್ನಕೆ ಹೋಗಬೇಕು
ನಂದಗೊಮಾರನ ಆವತಿ ಕೇಳಬೇಕು
ಪದುಮಾಪತಿ ಹೆಣ್ಣು ಎಂಟು ತಿಂಗಳ ಗರ್ಭದಲ್ಲವಳೆ
ಆವುತಿ ಕೊಟ್ಟಮ್ಯಾಲೆ ಅವನ ಸಕಲ ಭಾಗ್ಯವು ಯಾರಿಗೇನಬೇಕು
ನಾ ಕಣ್ಣಿಂದ ನೋಡೆನು ನೀವು ಸೀದಾ ಹೋಗಿ

ಆಗಲಣ್ಣಯ್ಯ ನಾವು ಹೋಗಿ ಬತ್ತೀವಿಂತ ಅವರು ಸೀದಾ ಬತ್ತಾರೆ
ಮಳ್ಳ ಸಿಂಬಿ ಮಾಡುತಾರೆ ಕಲ್ಲು ಕೊಡವ ಮಾಡುತಾರೆ
ಜಲದ ಕಣ್ಣು ಕಟ್ಟುತಾರೆ
ಇವರು ಹನ್ನೆಲ್ಡಾಳುದ್ದ ಭಾವಿ ತಗೆದಾರು ಜಲವೇ ಬರನಿಲ್ಲ
ಜಲವೇ ಬರನಿಲ್ಲ ರುಕ್ಷ ಚಿಗುರೇ ಬರನಿಲ್ಲಾ
ಭಾವಿ ಕೆಲಸವಾಯಿತು ಅವರು ಹಣವ ಇಸ್ಕಂಡು
ಅವರು ಮೂಡಲ ದೇಸಕೆ ಒಡ್ಡರೆಲ್ಲಾ ಹ್ವಾದರು

ನಂದಗೊಮಾರ ಮನೆಯಲ್ಲಿ ಇಲವಲ್ಲ ಅವರು ಬಾಣಾವತಿ ದೊರೆಯು
ಬಾಣಾವತಿ ದೊರೆಯು ಭಾವಿಯ ಹತ್ತಿರಾಕೆ ಹೋಗಿ ನೋಡುತಾರೆ
ಭಾವಿ ಜಲವೇ ಬಂದಿಲ್ಲ ರುಕ್ಷ ಚಿಗರಿಲ್ಲ ಅವರು ಚಿಂತಾಕಾಂತರಾಗಿ
ಅವರು ಏರಿಯ ಮ್ಯಾಲೆ ಮಕಾಡೆ ಮನಗಿ
ಭಾವಿ ಜಲವೇ ಬಂದಿಲ್ಲ ರುಕ್ಷ ಚಿಗುರೇ ಬಂದಿಲ್ಲ ಜನರೇ ನಗುತಾರೆ
ಜನರು ನಗುತಾರಂತೆ ಏರಿಯ ಮ್ಯಾಲೆ ಮಕಾಡೆ ಮನಗರಿ
ನಿದ್ದೆ ಕವಿವಾವೆ ಅವರಿಗೆ ಅಜ್ಜಗನ್ನಿ ದೇವಗನ್ನೆ ಬರುತಾರೆ
ಸಾಮಗನ್ನೆ ಹೇ ರತ್ನಗನ್ನೆ ನಾಕಾಳು ಬಂದಾರು
ಏನಂಥ ಬಂದು ಕೇಳುತಾರೆ ಅವರು ಹುಚ್ಚು ನನ್ನ ದೊರೆಯೆ
ಹುಚ್ಚು ದೊರೆಗಳೆ ನಿಮಗೆ ನಿದ್ದೆಯ್ಯಾಕ ಬೇಕು
ಈ ಸ್ವಲ್ಪ ಕೆಲಸಾಕೆ ಚಿಂತೆಯೆಂದರೇನು
ನಾಳೆ ಏಳು ಗಂಟೆಗೆ ನಿನ್ನ ನಂದಗೊಮಾರನ ಸೊಸೆಗೆ ಆವ್ರತಿ ಕೊಡೊ

ಭಾವಿ ಜಲವೇ ಬತ್ತ್ಯೈತೆ ರುಕ್ಷ ಚಿಗುರುತ್ತ್ಯೈತೆ
ಬಂದ ಜನರೆಲ್ಲಾ ನೀರಾ ಕುಡಿಯುತಾರೆ ನೆಳ್ಳಾ ಸೇರುತಾರೆ
ನೀವು ಪುಣ್ಯವಾ ಪಡೆಯುತೀರಾ ಏಳು, ಏಳು ದೊರೆಯೆ
ಮೂರು ಮಾತಾನಾಡಿ ಮಾಯವಾದರಲ್ಲ
ಇಂಪ ದಡಕನೆದ್ದು ಕೂತು ಕಣ್ಣು ಬಿಚ್ಚಿ ಇವರು ಸುತ್ತಾ ನೋಡುತಾರೆ

ನಾಕಾಳು ನೀರೆಯಾರು ನನ್ನ ಕಣ್ಣಿಗೆ ಕಂಡಾರು ಅವರೆಲ್ಲಿಗೆ ಹ್ವಾದಾರು
ಅವರು ಹೇಳಿದ ಮಾತು ಏನಾಂದರೆ ನಾಳೆ ಏಳು ಗಂಟೆಗೆ
ನನ್ನ ನಂದಗೋಪಾರನ ಆವುತಿ ಕೊಟ್ಟಾರೆ ಜಲವೇ ಬತ್ತ್ಯೈತೆ ಚಿಗುರು ಬರುತ್ತ್ಯೈತೆ
ಬಂದ ಜನರಲ್ಲಾ ಅವರು ನೀರು ಕುಡಿತಾರೆ ಅವರು ನೆಳ್ಳಾ ಸೇರುತಾರೆ
ನಾನು ಪುಣ್ಯಾ ಪಡೆಯಬೇಕು ನಾನು ಬ್ಯಾಗನೆ ಅವರು ಹೇಳಪರೆ
ಈ ಮಾತ ನನ್ನ ಮಡದೀಗೆ ಹೇಳಿದರೆ ಅವಳು ಆವುತಿ ಕೊಟ್ಟಾಳ
ಮೋಸದಿಂದ ಬಾಸೆ ತಗದುಕೊಂಡು ನಾನು ಮಗನ ಆವುತಿ ಕೊಡಬೇಕು
ಹಂಗಂತಪ್ಪೇಳಿ ಅವರು ಸೀದಾ ಮನೆಗೆ ಬರುತಾರೆ
ಮಂಚಕತ್ತುತಾರೆ ಮಕಾಡೆ ಮನಗುತಾರೆ
ಪದುಮಾವತಿ ಹೆಣ್ಣು ಚಿನ್ನಾದ ಗಿಂಡೀಲಿ ಪನ್ನೀರು ತರುತಾಳೆ
ಉದ್ದುಕೆ ಏಳಿ ಮಾವ ನೀವು ಊಟಕೇಳಿ ಮಾವ ಬಂದಂತದ್ದೇನು
ನನ್ನ ಚಿಂತೆಯ ನಾ ಯಾರಿಗೆ ಹೇಳಾಲಿ
ನಾ ಉದ್ದುಕೆ ಏಳುದಿಲ್ಲ ನಾ ಊಟಮಾಡುದಿಲ್ಲ
ಹೋಗೇ ಪದುಮಾವತಿ
ಅವಳು ಸೀದಾ ಹೋಗಿ ಅತ್ತ್ಯೆಮ್ಮಗೆ ಹೇಳುತಾಳೆ
ಅತ್ತ್ಯೆಮ್ಮ ಅತ್ತ್ಯೆಮ್ಮ ಮಾವಯ್ಯನವರು
ಉದ್ದಕ್ಕೆದ್ದಿಲ್ಲ ಅವರು ಊಟಮಾಡಿಲ್ಲ
ಚಿಂತಕಾಂತರಾಗಿ ಅವರು ಮಕಾಡೆ ಮನಗವರೆ
ಅತ್ತ್ಯೆಮ್ಮನವರೆ

ಅವರ ಹೆಂಡತಿ ಅವರು ಗಂಡನಿಗೆ ನೀರಾ ತರುತಾರೆ
ಏಳಿ ಏಳಿ ದೊರೆಯೆ ಬಂದ ಕಷ್ಟವೇನು ಬಂದ ಏಚನೇನು
ಉದ್ದಕ್ಕೇಳಿ ದೊರೆಯೆ ಊಟಕ್ಕೇಳಿ ಊಟ ಮಾಡ್ಡೇಳಿ
ನನ್ನ ಕಷ್ಟಾವ ನಾ ಯಾರಿಗೆ ಹೇಳಲಿ ನನಗೆ ಊಟಬ್ಯಾಡ
ನನ್ನ ಕಷ್ಟಾವ ನಾ ನಿನ್ನ ಜೊತೇಲಿ ಹೇಳಿವರೆ ಕೇಳಿ
ನನ್ನ ಕಷ್ಟಾವ ಹರಿಸಿಯೆ ಹೆಂಗಸೆ ನೀ ತೀರಿಸಿಯೆ ಹೆಂಗಸೆ

ನನಗೆ ಊಟಾವ ಬ್ಯಾಡ ನೀ ಹೋಗು ಹೆಂಗಸೆ
ಗಂಡಾನ ಕಷ್ಟಾವ ಹೆಂಡತಿ ನೋಡಿ
ಗಂಡನ ಕಷ್ಟಾ ಹೆಂಡರಿಗಿಲ್ಲೇನೊ
ಹೆಂಡತಿಯು ಜೊತೇಲಿ ಹೇಳೂ
ನನ್ನ ಜೊತೇಲಿ ಹೇಳಿದರೆ ಹಾರಿಸದಾದರೆ ಹಾರಿಸೇನು
ತೀರಿಸದಾದರೆ ತೀರಿಸೇನೊ
ನನಗೆ ಬಾಸೆ ಕೊಟ್ಟಾರೆ ನಿನ್ನ ಕುಟಿ ಹೇಳೇನು
ನಮ್ಮ ಗಂಡ ಹೆಂಡರಿಗೆ ಬಾಸೆ ಅಂದರೇನು ಏಳಿ ದೊರೆಯೆ
ಬಾಸೆ ಕೊಡದಿದ್ದರೆ ನಾ ಹೇಳೂದಿಲ್ಲವಲ್ಲ ನಿನ್ನ ಜೊತೇಲಿ
ಏನು ಕಷ್ಟ ಬಂದರೂ ನಾನು ತೀರಿಸೇನು ಅಂತ ಬಾಸೆ ಕೊಟ್ಟಾಳು
ಬಾಸೆ ಇಸ್ಕಂಡು ದೊರೆ ಎದ್ದು ಕೂರುತಾರೆ ಮೂರು ಮಾತನಾಡುತಾರೆ
ಎಂದೂ ಬರದವನು ಒಬ್ಬದಾಸ ಬಂದನಲ್ಲಾ ಒಬ್ಬ ಜೋಗಿ ಬಂದನಲ್ಲಾ
ಜೋಗಿಯು ನುಡಿಯು ಕೇಳಿ ನಾ ಭಾವಿ ತೆಗಿಸಿದೆ ನಾ ರುಕ್ಷ ಹಾಕಿಸಿದೆ
ಭಾವಿ ಜಲವೇ ಬಂದಿಲ್ಲ ರುಕ್ಷದ ಚಿಗುರೇ ಬಂದಿಲ್ಲ ನೀ ಕೇಳು ನನ್ನ ಮಡದಿ
ಮಡದಿ ಜನರು ನಗುತಾರೆ ನಾ ಏನೆಂದು ಹೇಳಲಿ
ನಾಳೆ ಏಳುಗಂಟೆಗೆ ನಂದಗೊಮಾರ ಆವುತಿ ಕೇಳುತ್ತೈತೆ
ನಂದಗೊಮಾರ ನಾವು ಆವುತಿ ಕೊಡೋನ ಜಲವೇ ಬರಲ್ಲೇಳೆ
ಭಾವಿ ಜಲವೇ ಬರಲಿ ರುಕ್ಷ ಚಿಗುರಾಲಿ ನಾವು ಪುಣ್ಯ ಪಡೆಯಾನ

ಅವನು ಹೇಳುತ್ತಿದ್ದಂಗೆ ಅವಳು ಕೈ ಬಿಟ್ಟಾಳು ನಿಂತಾಗೆ ನಿಂತಾಳು
ಕೆಟ್ಟೆ ಕೆಟ್ಟೆ ದೊರೆಯೆ ನಿನಗೆ ಬಾಸೆಯು ಕೊಟ್ಟು
ನಿನ್ನ ಮನೆಯ ಹಾಳಾಗ
ಇರುವ ಒಬ್ಬ ಮಗನಾ ಆವುತಿಯು ಕೊಟ್ಟು
ನಿನ್ನ ಪುಣ್ಯ ಯಾರಿಗೆ ಬೇಕು
ಪದುಮಾವತಿ ಹೆಣ್ಣು ಒಂಭತ್ತುತಿಂಗಳ ತುಂಬಿದ ಬೆಮ್ಮನಸೆ
ನಿನ್ನ ಮಾತ ಕೇಳಿ ಬಾಸೆಕೊಟ್ಟು ಕೆಟ್ಟನಲ್ಲಾ ಅಂತ ಬಾಯಿಕುಟ್ಟಿಬಡೀತಾಳೆ
ತಾ ಕುಟ್ಟಿ ಬಾಯಿಬಡಿದು ಗ್ಯಾನ ಮಾಡುತಾಳೆ
ಇದಕ್ಕೊಂದು ಉಪಾಯ ನಾ ಹುಡುಕಬೇಕಂತ
ಅವಳು ಗುಡಕೆ ಹೋಗುತಾಳೆ
ನಂದಗೊಮಾರ ದೊರೆ ಮನೆಗೆ ಬಂದಾನು
ಪದುಮಾವತಿ ಹೆಣ್ಣು ಗಂಡನಿಗೆ ನೀರು ಕೊಡುತಾಳೆ
ಊಟಕಿಕ್ಕುತಾಳೆ

ನಂದಗೊಮಾರ ಊಟಮಾಡಿ ಇಳ್ಯಾವ ಮೆಲ್ಲುತಾರೆ
ಮದುವೆಯಾಗಿ ಅವರು ವರುಸ ಮೂರು ಆಗಿದ್ದವೊ
ಅವರು ತಾಯಿ ಮಕ್ಕಳು ಒಂದು ತಾವು ಕುತ್ಕಂಡು ಮಾತಾಡಿಲ್ಲ
ಆ ಹೊತ್ತಿನ ದಿನದಲ್ಲಿ ತಾಯಿ ಮಗನ ಕರೆತಾಳೂ ಬಾರೊ ನನ ಕಂದಾ
ಬಾರೊ ನನ ಕಂದ ನಾ ನಿನ್ನ ಜೊತೇಲಿ ಮೂರ ಮಾತಾಡೇನು
ಇದುವೇನೆ ಕಾಣೆ ಅಂತ ಎದ್ದು ಕುಂತ
ಅಂಜುತ ಅಳಕುತ ತಾಯಿ ಹತ್ತರ ಹೋಗುತಾನೆ
ಪದುಮಾವತಿ ಹೆಣ್ಣು ಅವಳು ಕಿಂಡಿಯಾಣೆ ನಿಂತು
ಅವರು ತಾಯಿ ಮಕ್ಕಳಾಡ ಮಾತ
ಆಲೈಸಿ ಕೇಳುತಾಳೆ ಈ ಪದುಮಾವತಿ ಹೆಣ್ಣು

ಮಗನ ಜೊತೇಲಿ ಏನು ಹೇಳುತಾಳೆ ತಾಯಿ ದೊರಸಾನಿ
ನಾ ಹೇಳಿದ ಮಾತ ಮೀರುದಿಲ್ಲವೆಂದು
ನೀ ಬಾಸೆ ಕೊಡು ಮಗನೇ
ಇದುವೇನೆ ತಾಯಿ ನಾ ಮಾಡಿದ ತಪ್ಪೇನು
ನಾ ಮಾಡಿದ ತಾಗೇನು
ನಾ ಇಲ್ಲಿಗಂಟ ನಿಮ್ಮ ಮಾತ ಮೀರನಿಲ್ಲ
ನಾ ಮುಂದೆ ಮೀರೂವನಲ್ಲ
ನಮ್ಮ ತಾಯಿಯು ಮಕ್ಕಳಿಗೆ ಬಾಸೆ ಅಂದರೇನು ಹೇಳಿ
ಯಾವ ಕಷ್ಟಾವು ನಿಮಗೆ ಒದಗಿ ಬಂದರೆ ನಾ ಇದಿನಿ
ಕಂದಾ ಮಗನೆ ನನಗೆ ಬಾಸೆ ಕೊಡೊ
ಬಾಸೆಕೊಟ್ಟರೆ ಕೊಡಬಹುದು ಕೊಡದಿದ್ದರೆ
ನೀ ಕೊಡದಿದ್ದರೆ ಕಂದಾ ನಾ ಪ್ರಾಣ ಬಿಡುತೀನಿ
ನಮ್ಮ ತಾಯಿಗೀಗ ಅಂತ ಕಷ್ಟವೇನಂತ ಬಾಸೆ ಕೊಡುತಾನೆ
ನೀವು ಹೇಳಿದ ಮಾತ ನಾ ಮೀರನಿಲ್ಲನಲ್ಲಾ ಕೊಳ್ಳಿ ಬಾಸೆಯ
ಬಾಸೆ ಇಸ್ಕಂಡು ಅವಳು ದೊರಸಾನಿ ಎದ್ದು ಕೂರುತಾಳೆ
ಎದ್ದು ಕುತ್ಕಂಡು ಮುದ್ದುಮಾಡುತಾಳೆ ಮುತ್ತಾಕೊಡುತಾಳೆ
ನನ್ನ ಹೊಟ್ಟೇಲಿ ಹುಟ್ಟಬೈದಾ ನೀ ಬೆಳೆಯಬೈದಾ ಮಗನೆ
ನಿನ್ನ ಮುಖವಾ ನಾ ಕಣ್ಣಿಂದ ನೋಡನಾರೆ
ನಾಳೆ ಏಳು ಗಂಟೆಗೆ ನೀನು ಕಾಡಾರಣ್ಯ ಸೇರ ಹೋಗಬೇಕು
ಊರ ಸೇರಬ್ಯಾಡ, ಪಟ್ಟಣ ಸೇರಬ್ಯಾಡ ಒಂದ್ಹಳ್ಳಿ ಸೇರಬ್ಯಾಡ
ನೀ ಒಂದಾ ಕಾಡಾರಣ್ಯ ಸೇರ್ಹೊಗೂ ಮಗನೇ

ನಾ ಕೆಟ್ಟೆ ಕೆಟ್ಟೆ ತಾಯಿ ನಾ ನಿನಗೆ ಬಾಸೆ ಕೊಟ್ಟು ಕೆಟ್ಟೆನಲ್ಲಾ
ಹೇ ಮಡದಿ ಪದುಮಾವತಿ ಒಂಭತ್ತುತಿಂಗಳ ಬೆನ್ನುನಸೆ
ನಾ ಕಾಡಾರಣ್ಯಕೆ ಅಪ್ಪಣೆ ಕೊಟ್ಟರಲ್ಲಾ ನಾ ಹೆಂಗೆ ಹೋಗಲಿ
ನನ್ನ ಮಡದಿ ಪದುಮಾವತಿ ಹೆಂಗೆ ಬಿಟ್ಟು ಹೋಗಲಿ
ನನಗೆ ಕಾಲೇ ಬರವಲ್ಲ
ನನ್ನ ಹೊಟ್ಟೇಲಿ ಹುಟ್ಟಿದು ಗಂಡು ಮಗುವಾ ಕಾಣೆ
ಹೆಣ್ಣುಮಗುವಾ ಕಾಣೆ
ನಾ ಕಣ್ಣಲ್ಲಿ ನೋಡದಂಗೆ ನನ್ನ ಅಡವಿ ಸೇರಿಸುತ್ತೀರಿ
ನಾ ಮಾಡಿದ ತಪ್ಪೇನ

ನಿನ್ನ ಮಡದಿ ಪದುಮಾವತಿಗೆ ಏನೇ ಕಷ್ಟಾನ ಬಂದಾರು
ನಾ ನಿನಗಿಂತ ಹೆಚ್ಚಾಗಿ ಕಷ್ಟಾನ ನೋಡೇನು ಸುಖಾವ ನೋಡೇನು
ನೀ ಅಡವಿ ಸೇರಬೇಕು ಮಗನೆ ಖಂಡಿತ ಇರನೇ ಬ್ಯಾಡ
ಇವರಿಬ್ಬರೂ ಮಾತನಾಡುವುದ
ಅವಳು ಆಲೈಸಿ ಕೇಳುತಾಳೆ
ನನ್ನ ಗಂಡಾನ ಅತ್ತೆಮ್ಮ ಅಡವಿಗಟ್ಟುತ್ತಾರೆ
ಅವರು ತಪ್ಪೇನ ಮಾಡವರೆ
ಅವರು ಹ್ವಾದಮೇಲೆ ನಾನಿದ್ದು ಫಲವೇನು
ನಾನು ಹ್ವಾಗಬೇಕು
ಅವರ ಜೊತೇಲಿ ನಾನು ಹ್ವಾಗಬೇಕೊಂತ
ಅವಳು ಗ್ಯಾನ ಮಾಡುತಾಳೆ
ನಂದಗೊಮಾರ ಅವರು ಗ್ಯಾನ ಮಾಡುತಾರೆ
ಅವರು ದುಃಖ ಮಾಡುತಾರೆ
ಕೊಟ್ಟ ಬಾಸೆ ತಪ್ಪಲಾರನಲ್ಲಾ
ನಾ ಕೆಟ್ಟ ಏಚನೆ ಮಾಡಲಾರೆ
ನಾ ಹೋಗುತೇನೆ ತಾಯಿ ಆಧಾರಕಿಲ್ಲ ಮಡದಿ ಪದುಮಾವತಿ
ನನ್ನ ಮಡದಿ ಪದುಮಾವತಿ ಭಾರಿ ಜ್ವಾಕೇಲಿ ಸಾಕಿ

ಈಜೆಗೆ ಬರುತಾರೆ ದೊರೆ ಕೇಳುತಾರೆ ನನ್ನ ಮಡದಿ
ತಾಯಿ ಅಪ್ಪಣೆಯಿಂದ ನಾ ಜ್ಯಾಟ ಹೋಗುತೀನಿ
ನಾ ಜ್ಯಾಟ ಹ್ವಾದರೆ ನಾ ಬರುವುದು ತಿಂಗಾಳು
ಬರುವುದು ಜ್ವಾಕೆ ಕಾಣೆ ಪದುಮಾವತಿ ನನ್ನ ಮಡದಿ

ಇದುವೇನ ದೊರೆಯೆ ನಿಮಗೆ ಬುದ್ಧಿಯಿಲ್ಲವೇನು
ನನಗೆ ಒಂಭತ್ತು ತಿಂಗಳು ತುಂಬಿ ಬಂದವಲ್ಲೊ ಬಿಟ್ಟು ಹೋಗುತೀರಿ
ನನ್ನ ಕಷ್ಟವ ಸುಖಾವ ಯಾರಿಗೆ ಹೇಳಲಿ
ನೀವು ಬಿಟ್ಟು ಹೋಗದು ತರವಲ್ಲ ದೊರೆಯೆ
ಬಿಟ್ಟು ಹೋಗದು ಬ್ಯಾಡ
ನನಗಿಂತ ಹೆಚ್ಚಾಗಿ ನನ್ನ ತಾಯಿ ಅವರಲ್ಲೆ
ನನ್ನ ತಂದೆ ಅವರಲ್ಲೆ
ನನ್ನ ತಾಯಿಗೆ ಇರವನೊಬ್ಬ ಮಗಾ
ಅವರ ಕಷ್ಟಾವ ನಾನೇ ನೋಡಬೇಕು
ನಾ ಬರುವ ತನಕ ಪಟ್ಟಣ ಜ್ವಾಕೆ ಅಂತ ಹೆಂಡತಿಗೆ ಹೇಳುತಾರೆ

ಪದುಮಾವತಿ ಹೆಣ್ಣು ಅಡಿಗೆ ಮಾಡುತಾಳೆ ಊಟಕಿಕ್ಕುತಾಗ
ನಾ ಬ್ಯಾಟಿ ಹೋಗವನೊಬ್ಬ ಊಟ ಮಾಡುದಿಲ್ಲ ನೀ ಊಟಮಾಡೆ
ಅವರು ಗಂಡಾ ಹೆಂಡತಿ ಊಟವನೆ ಮಾಡಿ ಇಳ್ಯಾವನೆ ಮೆಲ್ಲುತಾರೆ
ಇಳ್ಯಾವ ಮೆಲ್ಲುತ ಅವರು ಹೆಂಡ್ತಿಯ ಮುಖ ನೋಡುತಾರೆ
ಅವರಿಗೆ ದುಃಖವೆ ಬರುತ್ತೈತೆ
ನಾ ದುಃಖವ ಮಾಡಿದರೆ ಅವಳು ಹಿಂದಟ್ಟಿ ಬರುತಾಳೆ
ಅವಳಿಗೆ ಗೊತ್ತಿಲ್ಲದಂತೆ ನಾ ಹೋಗಬೇಕಂತ
ಅವರು ದುಃಖ ತಿನ್ನುತ್ತಾರೆ
ನಾ ಹೋಗಿ ಬರುತೇನಂತ ಅವರು ಗುಡಕೋಗಿ ಬಟ್ಟೆಯ ಇಕ್ಕುತಾರೆ
ತಲೆಗ ಸುತ್ತುತ್ತಾರೆ ಹದಿನಾರು ಮೊಳದ ಪಾಗು
ಪಾಗು ಸುತ್ತಿಕೊಂಡು ಅವರು ಈಚೆಗೆ ಬರುತಾರೆ
ಏನಂಥ ಹೇಳುತಾರೆ
ನಾ ಹೋಗಿ ಬರುತೀನಿ ಪದುಮಾವತಿ ಪಟ್ಟಣ ಜ್ವಾಕೆ
ಸೂರ್ಯದೇವನಿಗೆ ಅವರು ಕೈಮುಗಿತಾರೆ
ತಾಯಿ ಮಾತಿನಿಂದ ನಾ ಅಡವಿ ಸೇರುತಿನಿ
ನನ್ನ ಮಡದಿ ಪದುಮಾವತಿಗೆ ಯಾವ ಕಷ್ಟ ಬಂದಾರು ನೀವೇ ಕಾವಲು
ಕೈಮುಗಿದು ಅವರು ಹೋಗುತಾರೆ ಸುದ್ದಮೂಡಲಾಗಿ

ಅವರ ಹಿಂದಟ್ಟಿ ಪದುಮಾವತಿ ಹೆಣ್ಣು ಹೋಗುತಾಳೆ
ನಂದಗೊಮಾರ ಹನ್ನೆಲ್ಡು ಏಜನ ದಾರಿ ನಡದಾರು
ಅವರಿಗೆ ಧಣಿವೇ ಆಗಿತ್ತು

ಅಲ್ಲಿ ನೋಡಿದರೆ ಅದ ದೊಡ್ಡ ಅರಣ್ಯ 'ಕಾ' ಅನ್ನ ಕಾಗಿಲ್ಲ
ಹಕ್ಕಿ ಪಕ್ಷಿ ಸುಳಿವಿಲ್ಲ ಅಲ್ಲಿಗೆ ಹ್ವಾದರು
ಅಲ್ಲಿ ನೋಡಿದರೆ ಅಲ್ಲೊಂದು ಹತ್ತಿ ಆಲದ ಮರ
ಮತ್ತಿ ಹಣ್ಣಿನ ಮರ
ಸಿರಿಹೊನ್ನೆಮರ ಆ ಮೂರ ಮರಾದ ನೆಳ್ಳೆ
ಅಲ್ಲೇ ಕೂತ್ಕಂಡು ದೊರೆ ಹಿಂತಿರುಗಿ ನೋಡುತಾರೆ
ಇವಳು ಪದುಮಾವತಿ ಹೆಣ್ಣು ಹಿಂದಟ್ಟಿ ಹೋಗುತಾಳೆ
ನಾ ಬರಾಗ ನಾನೊಬ್ಬ ಬಂದನ್ನೆಲ್ಲಾ ನನ್ನ ಜೊತೇಲಿ
ಒಬ್ಬಳು ಸಿರಿಯಾಳು ಬರುತಾಳೆ ಯಾರೆ ಕಾಣನೆಲ್ಲಾ
ಅವರ್ದ್ಹಂಗಂತ ಗ್ಯಾನ ಮಾಡುತಾರೆ
ಇವಳು ಬಾಗುತಾ ಬಳಕುತಾ ಹೋಗುತವಳೆ
ಇವಳು ಬಾಗುತಾ ಬಳುಕುತಾ ಹತ್ತಿರಕೆ ಹೋಗುತಾಳೆ
ಅವರು ದುಃಖ ಮಾಡುತಾರೆ
ಹೆಂಡತಿ ಕೊಳ್ಳ ಹಿಡ್ಕಂಡು ಪಕ್ಕಳ ದುಃಖ ಮಾಡುತಾರೆ
ಯಾರೇ ನಿನಗೆ ಹೇಳಿದರು
ನಮ್ಮ ತಾಯಿ ಮಾತಿಂದ ನಾ ಅಡವಿ ಸೇರಿದೆ ನೀನು ಯಾಕೆ ಬಂದೆ
ತಪ್ಪು ಮಾಡಿದ್ದಕ್ಕೆ ನನ್ನ ಅಡವಿ ಸೇರಿಸಿದಾರು
ನಿನ್ನ ಕರ್ಕಂಡು ನಾ ಎಲ್ಲಿ ಹೋಗಲಿ ನೀ ಯಾಕೆ ಬಂದೆ
ಇಲ್ಲಿ ಉಣ್ಣಾಕ್ಕೆ ಅನ್ನಿಲ್ಲ ಕುಡಿಯಾಕೆ ನೀರಿಲ್ಲ
ಇದು ಕಾಡಾರಣ್ಯ
ಅವರು ಹಂಗಂತವ್ಹೇಳಿ ದುಃಖ ಮಾಡುತಾರೆ ನಂದಗೊಮಾರ

ನಿಮ್ಮಯ ಕಷ್ಟ ನನಗಲ್ಲವೇನು
ನೀವು ಅಡವಿಯಾನೆ ಸೇರಿ ನಾ ಅರಮನೇಲಿರದು ಯಾವ ಧರ್ಮ
ನಿಮ್ಮ ಜೊತೇಲಿ ನಾನು ಅಡವಿಯಲಿರುತೇನೆ
ಆದಾರುಂಕಿಲ್ಲ ನೀನು ಧಣಿವಾರಿಸಿಕೊಳ್ಳೆ ಮುಂದಕೆ ಹೋಗೋಣ
ಅವರಿಬ್ಬರೂ ಕುಂತು ಧಣಿವಾರಿಸಿಕೊಂಡು ಹೋಗೋಣ ನಡೆಯೆಂದು
ಮುಂದಲಡವಿಯ ಸೇರಣ ನಡೆ ನನ್ನ ಮಡದಿ
ನಾನೇ ಹನ್ನೆಲ್ಡು ಜಿನ ನಾನು ನಿಮ್ಮ ಜೊತೇಲಿ ದಾರಿ ನಡೆದೇನು
ನಾ ದಾರಿಯ ನಡೆದು ನಾ ನೀರಾ ಕುಡಿಯಬೇಕು ಧಣಿವಾಗಿ
ನನಗೆ ನೀರಾ ತಂದುಕೊಡಿ ನನಗೆ ಇನ್ನೊಂದು ಜಿನಾ
ನಾ ಇನ್ನೊಂದೆ ಜಿನಾ ನಡೆದೇ ಬರುತೀನಿ ನಿಮ್ಮ ಜೊತೇಲಿ

ನಂದೆಗೊಮಾರ ದುಃಖ ಮಾಡುತಾರೆ
ನಮ್ಮ ತಾಯಿ ದೊರಸಾನಿ ಒಂದು ಊರ ಸೇರಬ್ಯಾಡ
ಒಂದಾ ಪಟ್ಟಣ ಸೇರಬ್ಯಾಡ ಅಂತ ಕೊಟ್ಟರಲ್ಲೆ ಅಪ್ಪಣೆ
ನಾ ಹನ್ನೆಲ್ಡು ಜಿನಾ ದಾರಿ ನಡೆದರೆ ನನಗೆ ನೀರೆ ಸಿಕ್ಕನಿಲ್ಲಾ
ನೀರನೆಲ್ಲಿ ತರಲೇ ಎಲ್ಲಿಂದೆ ಕೊಡಲೇ ಕುಡಿಯಾಕೆ ನೀರಾ
ಈ ಅಡವಿಲಿ ನಾ ಹೆಂಗೆ ಬಿಟ್ಟು ಹೋಗಲಿ ಅಂತಾ ದುಃಖ ಮಾಡುತಾರೆ
ಇವರು ಗ್ಯಾನವ ಮಾಡುತಾರೆ ದಾರೀಲಿ ನಡದು
ಇವಳು ದಾರಿಯಾನೆ ನಡದು ಧಣಿವಿಷ್ಟಾಗಿತ್ತೊ
ಇವಳ ಕೆಳಗೆ ಬಿಟ್ಟು ನಾ ನೀರಿಗೆ ಹ್ವಾದರೆ ಹುಲಿ ಕಲ್ಡಿ ಬತ್ತಾವೆ
ಇವಳು ಗಾಬರಿ ಮಾಡತಾಳೆ ನಾನೇನು ಮಾಡಲಿ
ತಲೆಗೆ ಸುತ್ತಿದಂತ ಪಾಗು ಬಿಚ್ಚುತಾರೆ ಮತ್ತೇನ ಹೇಳುತಾರೆ
ನಾ ಕಂಕುಳ ತುದಿಗೆ ಮರನ ಹತ್ತುತೇನೆ
ಮೂರು ಮರದ್ದ ಕುಡಿಗೆ ನಿನ್ನ ಸೇರಿ ಬಿಗಿದು
ನಾ ನೀರಿಗೆ ಹೋಗುತ್ತೇನೆ

ಮತ್ತಿಯ ಮರ, ಮುತ್ತುಗದ ಮರ, ಸಿರಿಹೊನ್ನೆಮರ
ಕಂಕುಳ ಕಟ್ಟಿಕೊಂಡು ಅವರು ಮ್ಯಾಲಕೆ ಹತ್ತುತಾರೆ
ಅವರು ಸೇರಿಸಿ ಬಿಗಿತಾರೆ
ನೀ ಕೆಳಕೆ ನೋಡಬ್ಯಾಡ ಹೆಂಗಸೆ
ನೀ ಹೆದರುತ್ತೀಯಾ ನಾ ನೀರ ತರುತೇನೆ
ನೀರನೆ ತಂದು ನಿನಗೆ ಕುಡಿಯಾಕೆ ಕೊಟ್ಟು
ನಾವು ಮುಂದಕೆ ಹೋಗೋಣ
ಹಂಗಂತವ್ಳೇಳಿ ಮರದಿಂದ ಕೆಳಗೆ ಇಳಿದಾನು
ಸುದ್ದ ಮಾಡಲಾಗಿ ದೊರೆಯೆ ನೀರಿಗೋಗುತಾನೆ
ಅಚ್ಚಗನ್ನೆ ದೇವಗನ್ನೆ ಆಡುವಂತ ಕೊಣವೆ ಸಿಕ್ಕಿತು
ಆ ಕೊಣಕೆ ಇರುವುದು ಮೂರು ಮೆಟ್ಟಲು
ಹತ್ತರಕ್ಹೋಗುತ್ತಾನೆ
ನನ್ನ ಮಡದಿ ಪದುಮಾವತಿ ಸತುವಂತೆ ನೋಡು
ನಾನವಳ ಗ್ಯಾನದಿಂದ ನಾ ನೀರಿಗೆ ಬಂದೆ ನನಗೆ ನೀರೆ ಸಿಕ್ಕಿತು
ನಾ ನೀರಾವ ತಗಂಡು ಹೆಂಗೆ ಹೋಗಲಿ
ಕೈ ಬೊಗಸೆಯಿಂದ ನೀರೇ ತಂಗಂಡು ಹ್ವಾದರೆ ನೀರೆ ನಿಂತಾವ
ಸುತ್ತಾಲು ನೋಡುತಾರೆ ನೋಡಿ ಗ್ಯಾನವ ಮಾಡುತಾರೆ ನಂದಗೊಮಾರ

ಅಚ್ಚಗನ್ನೆ, ದೇವಗನ್ನೆ ಅವರು ರತ್ನಗನ್ನೆ ಸಾಮುಗನ್ನೆ
ಕೋಣವನಾಡುವಂತ ಗಿಂಡಿಯುಬಿಟ್ಟು ಹೋಗುತಾರೆ
ಆ ಗಿಂಡಿ ಸಿಕ್ಕೀತು ಆ ಗಿಂಡಿ ತಗೊಂಡು ಮತ್ತೆ ಹೇಳುತಾರೆ
ನನ್ನ ಮಡದಿ ಸತುವಂತೆ ಒಂದು ಗಿಂಡಿ ಸಿಕ್ಕೀತು
ಈ ಗಿಂಡೀಲಿ ನಾನು ನೀರಾ ತಗೊಂಡೋಗಿ ಕುಡಿಯಾಕೆ ನೀರಾಕೊಟ್ಟು
ಮತ್ತೆ ಗಿಂಡಿಯಾನೆ ತಂದು ಇಲ್ಲೆ ಮಡ್ಗಿ ಹೋಗಬೇಕಂತ
ಗಿಡಿಯಾನೆ ತಕ್ಕಂಡು ಡೊರೆಯು ಬಗ್ಗಿ ಬೆಳುಗುತಾರೆ

ಆ ಕೋಣದಲ್ಲಿರುವ ಒಂದು ಗಂಡಾಳು ರಕ್ಕಸ
ಒಂದ ಹೆಣ್ಣಾಳು ರಕ್ಕಸ
ಗಂಡಾಳು ರಕ್ಕಸ ಹೆಂಡ್ತಿಗೆ ಏನು ಹೇಳತ್ತೈತೆ ಹೆಂಗಸೇ
ನಮ್ಮ ಹಸಿವಿಗೆ ಸಿಕ್ಕಿದೆ ಸಿಗಿದು ತಿನ್ನಾನ
ಆ ಹೆಣ್ಣಾಳು ರಕ್ಕಸ ಬ್ಯಾಡ ಬ್ಯಾಡ
ಅವರು ಸಣ್ಣ ಮಗುವಿನ್ಹಂಗೆ
ಸಣ್ಣ ಮಕ್ಕಳ್ಹಂಗೆ ಅವರು ಕಾಣುವರು
ಅವರ ತಿನ್ನಬಾರದು ನೀರಾ ಕುಡಿದು ಅವರು
ಮುಂದಕ ಹೋಗಲಿ ಅವರು ಸುಖವಾಗಿ ಬಾಳಲಿ
ನಿನ್ನ ಮಾತ ಕೇಳಿವರೆ ಅವನು ಈಗ್ಲೇ ಹೋಗುತಾನೆ
ನಂಗೆ ಹಸವಾಗ್ತ್ಯೆತಲ್ಲಾ ಹಂಗಂತನ್ಹೇಳಿ
ಅವನು ನಿಂತಿದ್ದ ಮೆಟ್ಟಿಗೆ ಕಲ್ಲ ಕೀಳುತ್ತೈತೆ
ಮೆಟ್ಟಿಗೆಯು ಕಲ್ಲ ಕೀಳುತ್ತೈತೆ ಗಂಡಾಳು ರಕ್ಕಸ
ಮೆಟ್ಟಿಗೆಯು ತಲೆಕೆಳಕ್ಕಾಗಿ ಅಂವ ಭಾವಿಗೆ ಬಿದ್ದಾನು
ರಕ್ಕಸ ಎಲ್ರುಸೇರಿ ಅವನ ಕಿತ್ತು ತಿಂದವಲ್ಲಾ

ಇವಳು ನೋಡಿ ಸ್ವಾಕ ಮಾಡುತಾಳೆ ಇನ್ನೂ ದೊರೆ ಬರನಿಲ್ಲಾ
ಪದುಮಾವತಿ ಹೆಣ್ಣು ಕುಟ್ಟಿ ಬಾಯಿ ಬಡೀತಾಳೆ
ನಾ ಸಾಯುತಿನಿ ದೊರೆಯೆ, ಸಾಯುತಿನಿ ದೊರೆಯೆ
ನೀ ಹೊಳ್ಳಿ ಬಾರೊ ದೊರೆಯೆ
ನನ್ನ ಕಟ್ಟು ಬಿಚ್ಚಿರಪ್ಪ ನನ್ನ ಕೆಳಗೆ ಇಳಿಸಿರಪ್ಪ
ನಾ ತಡೆಯುಲಾರೆ ಒಂಭತ್ತ ತಿಂಗಳು ನನಗೆ ತುಂಬಿ ಬಂದವಲ್ಲೊ
ಹೊತ್ತು ಹೊತ್ತಿಗೆ ನನಗೆ ನೋವು ಬರುತ್ತದಲ್ಲಾ
ಕತ್ತೀಲಿ ಕಡಿದ್ಹಂಗೆ

ನನಗೆ ಗಂಟೆ ಗಂಟೆಗೆ ಬ್ಯಾನೆ ಬರುತದೆ
ಚೂರೀಲಿ ಇರಿದ್ಹಂಗೆ
ತಡೆಲಾರನೆ ದೊರೆಯೆ ಓಡಿ ಬನ್ನಿರಪ್ಪ
ನನ್ನ ಕಟ್ಟು ಬಿಚ್ಚಿ
ಸಾಯಿತಿನಂತ ಅವಳು ಬಾಯಿ ಬಡಿತಾಳೆ
ಯಾರು ಇಲ್ಲನಲ್ಲಂತ
ಮರದ ಮೇಲೆಯೆ ಮಗುವು ಜರಣವಾಗಿ ಕೆಳ್ಗೆ ಬಿದ್ದಿತು
ಇವಳಿಗೆ ಮರದ ಮ್ಯಾಲೆ ಸ್ಪಯವಿಲ್ಲ
ಅಚ್ಚಗನ್ನೆ, ದೇವಗನ್ನೆ, ಸಾಮಗನ್ನೆ, ರತ್ನಗನ್ನೆ
ಪುನಃ ನಾಳಕೆ ಬರುತಾರೆ
ಸಣ್ಣ ಮಗುವಿನಂಗೆ ಈ ಸಾಮಗನ್ನೆಗೆ ಅಳುದು ಕೇಳುತ್ತೈತೆ
ಇದುವೇನೆ ಅಕ್ಕಯ್ಯ ಇದುವೇನೆ ತಂಗಮ್ಮ ಸಣ್ಣಮಗುವಿನಂಗೆ
ಅಳದು ಕೇಳಿ ಬರುತ್ತೈತೆ ಹುಡುಕಿ ನೋಡಿ
ಇಲ್ಲಿ 'ಕಾ' ಅನ್ನ ಕಾಗಿಲ್ಲ 'ಗೂ' ಅನ್ನ ಗೂಗಿಲ್ಲ ಹಕ್ಕಿ ಸುಳಿವಿಲ್ಲಾ
ಇಂಥ ಅಡವೀಲಿ ಮಗುವೇ ಅಳತ್ತೈತೆ ಹುಡುಕಿ ನೋಡಿ
ಇವರು ನಾಕಾಳು ಹುಡುಕಿ ಬರುವಾಗ ಸಾಮಗನ್ನೆಗೆ
ಈ ಮಗುವೇ ಸಿಕ್ಕೀತು
ಬಂದಾರು ಬನ್ನಿರೇ ನನಗೆ ಮಗುವೆ ಸಿಕ್ಕೀತು
ಹೆಡಿಗೆ ಹೊನ್ನಲ್ಲ ಗಡಿಗೆ ಬಂಗಾರವಲ್ಲ
ನನಗೆ ಮಗುವೇ ಸಿಕ್ಕೀತು
ಅವರು ನಾಕಾಳು ಬಂದು ಮಗುವ ನೋಡುತಾರೆ
ಅದು ಆಗ್ಲೇ ಹುಟ್ಟ್ಯತೆ
ಇದುವೇನೆ ಅಕ್ಕಯ್ಯ ಮಗುವೆ ಈಗ್ಲೇ ಹುಟ್ಟ್ಯತೆ
ಹೊಕ್ಕಳಾ ಹರಿಸಿಲ್ಲಾ ಅದಕೆ ನೀರಾ ಮಿಯಿಸಿಲ್ಲಾ
ಮಗುವೇ ಇರದು ಮಗುವಿನ ತಾಯಿ ಹುಡುಕಿ ನೋಡಿರೆ
ಹುಡುಕಿ ನೋಡಾಗ ಇವಳು ಸ್ವಾಯದಲ್ಲೆ ಮನಗವಳೆ
ಮೇಲಿಕ್ಕೆತ್ತಾರೆ ಕಟ್ಟುಬಿಚ್ಚಿರೆ ಮೆಲ್ಲಗೆ ಕೆಳ್ಗೆ ಇಳಿಸಿರೆ
ಕೆಳ್ಗೆ ಇಳುಸುತಾರೆ ಇವಳು ಗ್ಯಾನವಾದಳಲ್ಲಾ

ಇವರ ಕಾಲು ಕಟ್ಟ್ಯತಾಳೆ ಕೈ ಮುಗಿತಾಳೆ
ತಾಯಿ ನೀವೇ ಕೇಳಿರಿ
ನೀವು ಯಾರಪ್ಪ ನೀವು ನನ್ನ ತಾಯಿರಪ್ಪ ನಾನು ಬತ್ತೀನಿ

ಅಮ್ಮ ದೊರಸಾನಿ ನೀನು ಮಾತಾಡಬ್ಯಾಡ ನೀನು ಸದ್ದು
ಅವರು ಅಚ್ಚಗನ್ನೆ ದೇವಗನ್ನೆ ಏನು ಮಾಡುತಾರೆ
ನೀರಾ ತಂದು ಹುಯ್ಯುತಾರೆ ನೀರಾ ಕಾಸುತಾರೆ
ಅವಳಿಗೆ ನೀರಾ ಮೀಯಿಸುತಾರೆ
ಮಗುವಿನ ಹೊಕ್ಕಳ ಕುಯ್ಯುತಾರೆ
ಅವಳಿಗೆ ನೀರಾ ಮೀಯುಸುತಾರೆ
ಅವರು ಮಕ್ಕಳುಳ್ಳವಳ ಏನಂಥ ಕೇಳುತಾರೆ
ಕೇಳು ದೊರಸಾನಿ ನೀನು ಯಾರ ಮಗಳಮ್ಮ
ನೀನು ಯಾರ ಸೊಸೆಯಮ್ಮ
ನೀನು ಯಾರ ಮಡದಿಯಮ್ಮ
ನೀನು ಇಲ್ಲಿಗ್ಯಾಕೆ ಬಂದ್ದೇಳು ದೊರಸಾನಿ
ಏನು ಹೇಳಲಿ ತಾಯಿ ನೀವು ಕೇಳಿರಿ ಚೆಂದಾಗಿ ಹೇಳೆನು
ನಾ ಪದುಮಾವತಿ ರಾಜನ ಮಗಳು
ನಾನು ಪದುಮಾವತಿ ಹೆಣ್ಣು
ಬಾಣಾವತಿ ದೊರೆಯ ಸೊಸೆ ಈಗ ನಾನು
ಸೊಸೆ ನಾನೀಗ ನನ್ನ ಗಂಡಾನ ಹೆಸರು ನಂದಗೊಮಾರ
ಅತ್ತೆಮ್ಮ ಬಾಸೆ ತಗಂಡು ಇವರು ಅಡವಿ ಸೇರಿದಾರು
ಅವರು ಅಡವಿ ಸೇರಾಗ ನಾ ಒಂಭತ್ತು ತಿಂಗಳ ಬೆಮ್ಮನಸೆ
ಅವರ ಜೊತೇಲಿ ನಾನು ಸೇರಿ ಬಂದೇನು
ಈ ಹನ್ನೆಲ್ಡು ಜಿನಾ ನಾ ದಾರೀಲಿ ನಡದು ಧಣಿವಾಗಿತ್ತು
ನಾ ನೀರು ಕುಡಿಯಬೇಕಂತ ಹೇಳಿದೆನು ತಾಯಿ
ಈ ಕೆಳ್ಗೆ ಬಿಟ್ಟು ಹ್ವಾದರೆ ಹುರಿ ಕಲ್ಡಿ ಬರದುಂತ
ಮೂರು ಕೊಡಿದ ಮರೀಗೆ
ಮೂರು ಮರದ ಕುಡೀಗೆ ನನ್ನ ಬಿಗಿದು ಹ್ವಾದರು
ನೀರಿಗೆ ಹ್ವಾದರು ನೀರ ತರನಿಲ್ಲ
ಹ್ವಾದವರು ನಿನ್ನ ಬಂದಿಲ್ಲ

ನೀವು ಕೇಳಿ ಅಕ್ಕಯ್ಯ
ನೀವು ಕೇಳಿ ತಂಗಮ್ಮ
ನಮ್ಮ ಅಣ್ಣಾನಿಂದ ಇವಳಿಗೆ ಈ ಕಷ್ಟ ಬಂದೊ
ಇವಳ ಕಷ್ಟನಾವೆ ನೋಡಾವ ಅಂತ ಅವರೆ ಮಾತಾನಾಡವರೆ
ನೀವು ಕೇಳಿರಿ ತಾಯೀರ ನಿಮ್ಮ ಜೊತೇಲಿ ನಾನು ಬತ್ತೀನಿ

ನಿಮ್ಮಟ್ಟೆ ಗುಡಿಸೇನು, ನಿಮ್ಮ ಸೀರೆ ಸೆಣೆಪೇನು
ನಿಮಗೆ ಅಡಿಗೆ ಮಾಡೇನು

ಅಮ್ಮ ನೀ ನರಮನಸೆ ನೋಡು ನಾವು ದೇವ ಮನುಸರು
ನಾವು ನೋಡಿದರೆ ದೇವಗನ್ನೇರು ನಿನ್ನಾ ಕಣ್ಕಂಡು
ನಾವು ಹ್ವಾದರೆ ಅಣ್ಣ ಸುಮ್ಮನಿರಿದಿಲ್ಲಾ
ದಿನಕ್ಕೊಂದು ಸಲ ನಾವು ಬಂದು ನಿಮ್ಮ ನೋಡಿ ಹೋಯಿತಿವಿ
ನೀನು ಹಣ್ಣು ತಿನ್ನಮ್ಮಾ ಚೆಂದಾಗಿ ಸಾಕಮ್ಮ
ನೀನು ಚೆಂದಾಗಿ ಬದುಕಮ್ಮ
ನಾವು ಬಂದಾಗ ನಿಮ್ಮ ಮಗುವಿಗೆ ಹೆಸರಿಡಾಣ
ಹೆಸರೇ ಇಲ್ಲನಲ್ಲಾ
ನಂದಗೊಮಾರನ ಮಗನ ಹೆಸರು ಅರಣ್ಯಾಕುಮಾರ
ಅರಣ್ಯಾದ ಕುಮಾರ ಅಂತ ಹೆಸರ ಇಡುತಾರೆ
ಹೋಗಿ ಬತ್ತೀನಂತ ಹೇಳುತಾರಲ್ಲ
ಹುಲಿ ಕಲ್ಡಿ ಬರುವಲ್ಲಾ ನನಗೆ ಹೆದರಿಕೆ ತಾಯಿ ನಾ ಬತ್ತೀನಿ
ಅಮ್ಮಾ ನೀ ಬ್ಯಾಡಮ್ಮ ನಿನಗೆ ಕಾವಲಾಗಿ ನಾವಿರುತೀವಿ
ನೀ ಹಣ್ಣು ತಿನ್ನಮ್ಮ ನೀ ಬದುಕಿ ಮಗನಾ ಚೆಂದಾಗಿ ಸಾಕಮ್ಮ
ನಿನ್ನ ಮಗಾನು ಸೂರನಾಗುತಾನೆ ಧೀರನಾಗುತಾನೆ
ಅವರು ಅಂತ್ರಮಂತ್ರದಲಿ ಬಿಲ್ಲ ಮಾಡುತಾರೆ
ಬಾಣ ಮಾಡುತಾರೆ
ಅಮ್ಮ ಕೊಳ್ಳಿ ದೊರಸಾನಿ ಬಿಲ್ಲುಬಾಣ
ನೀನೇ ಮಡ್ಗಮ್ಮ ನಿನ್ನ ಮಗನಿಗೆ
ಹನ್ನೆಲ್ಡು ವರುಸ ತುಂಬಿ ಬರಲಮ್ಮಾ
ಹನ್ನೆಲ್ಡುವರುಸ ಮೂರು ದಿನಗಳು ಕಳದು ಬರಲಮ್ಮಾ
ಮೂರು ದಿನಗಳು ಕಳದ ಮ್ಯಾಲೆ ಈ ಬಿಲ್ಲು ಬಾಣವ ಮಗನಿಗೆ ಕೊಡಮ್ಮಾ
ಈ ಬಿಲ್ಲು ಬಾಣವ ಮಗನ ಕೈಲಿ ಕೊಡು ಅವನು ಸೂರನಾಗುತಾನೆ
ನಾವು ಬಂದು ಹೊತ್ತಾಯಿತು ನಾವು ಹೋಗುತೀವಿ ಅಂತಾರೆ
ಇವಳು ಹಣ್ಣು ತಿಂದಾಳೆ ಚೆಂದಾಗಿ ಬದುಕುತಾಳೆ
ಚೆಂದಾಗಿ ಸಾಕುತಾಳೆ

ಒಂದು ದಿನ ಅಂದರೆ ಒಂದ ತಿಂಗಳಾದರೆ
ಒಂದು ತಿಂಗಳಾದರೆ ವರುಸ ಒಂದಾನಾಗುತ್ತವೆ

ವರುಸಾ ಎಲ್ಡಾನಾಗುತ್ತಾವೆ
ಎಲ್ಡು ವರುಸ ಅಂದಾರೆ ನಾಕಾಗುತ್ತವೆ
ನಾಕಾಗುತ್ತಾವೆ ಅಂದಾರೆ ಎಂಟು ವರುಸಾ ಆಗುತಾವೆ
ಅವನು ಏನು ಕೇಳಿದ ಅಂದಾರೆ
ಕೇಳಿ ನನ್ನ ತಾಯಿ ನಾವಿಬ್ಬರೇ ಇದ್ದೀವಲ್ಲಾ
ನಾವು ಇರದು ಈ ಮರದ ನೆಳಲ್ಲಾ
ನಮಗೆ ಅರಮನೆ ಇಲ್ಲವೇನೂ
ನಮ್ಮದು ಯಾವ ಪಟ್ಟಣ
ನೀವು ಯಾರ ಸೊಸೆಯಮ್ಮ
ನೀವು ಯಾರ ಮಡದಿಯಮ್ಮ
ತಂದೆಯೆಲ್ಲಿ ಹ್ವಾದರೂ ತಾಯಿ ತಂದೆ ಮುಖವಿಲ್ಲವಲ್ಲ

ತಂದೆ ಗುರುತಾ ಕಾಣೆಯಿ ಅತ್ತೆಮಾವನ ಕಾಣೆ ಮಗನೆ
ನಮಗೆ ಪಟ್ಟಣವಿಲ್ಲ ಪಟ್ಟೆಮಂಚಾ ಇಲ್ಲ
ನಮಗೆ ಹಳ್ಳಿ ಕೊಳ್ಳ ಇಲ್ಲ ಮಗನೇ
ನಮಗೆ ಪ್ಯಾಟೆ ಊರಂತ ಗುರುತೇ ಇಲ್ಲ ಕೇಳೂ ಕಂದಾ
ನಿಮ್ಮಪ್ಪ ನಾವು ತಿರಿಯುವಂತ ದಾಸರಲ್ಲವೇನೂ
ದೇಸ ದೇಸವಾ ಬೇಡಿಕೊಂಡು ನಾವು ಬಂದೇವು
ಈ ಮರದ ನೆಳ್ಳಲ್ಲಿ ನಾವು ಊಟ ಮಾಡ್ಕಿಂಡು
ಒಂಭತ್ತು ತಿಂಗಳು ತುಂಬಿದ ಬೆಮ್ಮನಸೆ
ನಿಮ್ಮ ತಂದೆಗೆ ಕಾಯಲಾಗಿತ್ತು ಮಗನೇ
ನಿಮ್ಮ ತಂದೆಯ ಕೊಂಡ ಕೊಡಿಸಿ ನಿನ್ನ ಸಾಕಿದ್ದೇನೆ

ನೀವು ಆದಾರುಸಂಕಿಲ್ಲ ನಾ ಆಡಿಬತ್ತೀನಿ
ಹಣ್ಣು ತಿನ್ನುತಾನೆ ಆಡಿಬತ್ತಾನೆ
ಎಂಟು ವರುಸ ಅಂದಾರೆ ಹತ್ತು ವರುಸನಾದ
ಹತ್ತು ವರುಸ ಅಂದಾರೆ ಹನ್ನೆಲ್ಡು ವರುಸವಾದ
ಹನ್ನೆಲ್ಡು ವರುಸಾಕೆ ಅರಣ್ಯಕುಮಾರ ಏನಂತ ಕೇಳುತಾನೆ
ಮರದ ಸುತ್ತಲೂ ಆಡಿ ಆಡಿ ನನಗೆ ಬೇಜರವ ಆಗುವಾ
ನನ್ನ ಜೊತೇಲಿ ಹುಡುಗರಿಲ್ಲಾ ನನಗೆ ಬೇಜರವ ಆಗುವಾ
ಬಿಲ್ಲ ಹಿಡಿಯಾಕೆ ನೀನು ರಾಜ ಮಗನಲ್ಲ
ದೊರೆಯ ಮಗನಲ್ಲಾ ಮಗನೇ

ಬಿಲ್ಲು ಕೊಡುತಾಯಿ ನನಗೆ ಬಾಣಾ ಕೊಡುತಾಯಿ
ನಾನಾಡಿ ಬತ್ತೀನಿ
ಬಿಲ್ಲು ಹಿಡಿಯಾಕೆ ನೀನು ರಾಜ ಮಗನಲ್ಲ
ದೊರೆಯ ಮಗನಲ್ಲಾ ಮಗನೇ
ನಿನಗೆ ಬಿಲ್ಲು ಎಲ್ಲಿ ಕೊಡಲೊ
ನಿನಗೆ ಬಾಣ ಎಲ್ಲಿ ಕೊಡಲೊ
ಪದುಮಾವತಿ ಹೆಣ್ಣು ದುಃಖ ಮಾಡುತಾಳೆ
ತಾಯಿ ದುಃಖ ಮ್ಯಾಡಬ್ಯಾಡ ನಾ ಆಡಿಬತ್ತೀನಿ
ನನಗೆ ಬಿಲ್ಲು ಬಾಣ ಕೊಡುತಾಯಿ
ಪಟ್ಟೆಕಂಬಿ ಸೀರೆ ರಾಣಿ ಬಿದಿರ ಕಡೀತಾಳೆ
ಅವಳು ಬಿಲ್ಲು ಮಾಡುತಾಳೆ
ಅವಳು ಮಗನ ಕೈಲಿ ಕೊಡುತಾಳೆ
ಬಿಲ್ಲು ಹಿಡ್ಕಂಡು ಹೋಗುತಾನೆ ದೊರೆ ತೆಂಕಲಾಗಿ
ಹ್ವಾದ ಕಡೆಯೆಲ್ಲಾ ಸೂರನಾಗುತಾನೆ ಮನೆಗೆ ಬರುತಾನೆ
ತಾಯಿ ಹಣ್ಣು ಫಲಹಾರ ಊಟ ಇಕ್ಕುತಾಳೆ
ಅವನು ಊಟ ಮಾಡುತಾನೆ
ಮತ್ತೆ ಬಿಲ್ಲು ಕೊಡುತಾಳೆ ಮತ್ತೆ ಬಾಣ ಕೊಡು ಅಂತ ಕೇಳುತಾನೆ
ಮತ್ತೆ ಪಟ್ಟೆಕಂಬಿ ಸೀರೆ ಜಡೀತಾಳೆ ಬಿದಿರು ಕಡೀತಾಳೆ
ಬಿಲ್ಲುಮಾಡಿ ಮಗನ ಕೈಲಿ ಕೊಡುತಾಳೆ
ಬಿಲ್ಲು ಹಿಡ್ಕಂಡು ತೆಂಕಲಾಗಿ ಹೋಗುತಾನೆ ದೊರೆಯೆ
ಅವನು ಹ್ವಾದ ಕಡೆಯೆಲ್ಲಾ ಹೆಣಸೂರೆ ರಣಸೂರೆ ಮಾಡುತಾನೆ
ಬಿಲ್ಲು ಮುರಿತಾನೆ ಬೀದಿಗೆ ಎಸೆತಾನೆ

ತಾಯಿ ಹತ್ತಿರ ಬತ್ತಾನೆ
ತಾಯಿ ಹಡದವ್ವ ಹಣ್ಣುಫಲಹಾರ ಊಟಕಿಕ್ಕುತಾಳೆ
ಊಟವಮಾಡಿ ಮತ್ತೆ ಕೇಳುತಾನೆ ಬಿಲ್ಲು ಕೊಡುತಾಯಿ
ಮತ್ತೆ ಅವಳು ಪಟ್ಟೆಕಂಬಿ ಸೀರೆ ಎಳೀತಾಳೆ
ಬಿದಿರು ಕಡೀತಾಳೆ ಬಿಲ್ಲು ಮಾಡುತಾಳೆ
ಮಗನ ಕೈಲಿ ಕೊಡುತಾಳೆ ಅವನು ಹೋಗುತಾನೆ
ಅವನು ಬಡಗಲ ದಿಕ್ಕಿಗೆ ಹೋಗುತಾನೆ
ಅವನು ಸೂರನಾಗುತಾನೆ
ಬಿಲ್ಲು ಮುರೀತಾನೆ ಬೀದಿಗಿಡುತಾನೆ

ಅವನು ತಾಯಿ ಹತ್ತಿರಕೆ ಬತ್ತಾನೆ
ತಾಯಿ ದೊರಸಾನಿ ಅವಳು ಮಗನಿಗೆ ಊಟಕೆ ಇಕ್ಕವಳೆ
ಊಟ ಮಾಡಿದವನು ಅರಣ್ಯಕುಮಾರ
ಅವನು ನಿದ್ದೇಲಿ ಮನಗವನೆ
ಅವನ ಸಪ್ನನಾಕೆ ಹೋಯಿತವೆ ಬಿಲ್ಲು ಬಾಣಗಳು
ಅವು ಏನಂಥ ಹೇಳುತಾವೆ
ದಿವಸ ನೋಡಿದಾರು ನಿಮ್ಮ ತಾಯಿ ಪಟ್ಟೆಸೀರೆ ಜಡಿದು
ಬಿದಿರು ಕಡೀತಾಳೆ ಬಿಲ್ಲುಮಾಡಿ ನಿಮ್ಮ ಕೈಲಿಕೊಡುತಾಳೆ
ನೀನು ಸೂರನಲ್ಲೊ ನೀನು ಧೀರನಲ್ಲೊ
ನಮ್ಮ ಹಿಡ್ಕಂಡು ತಿರಗು
ನಮ್ಮ ಹಿಡದು ರಾಜಬೀದಲ್ಲಿ ನೀ ಸೂರನಾಗು

ನಿದ್ದೆಯಿಂದ ಅವನು ದಡಕನೆದ್ದು ತಾಯಿ ಕೇಳುತಾನೆ
ದಿವಸ ನೋಡಿದರೆ ನೀ ಪಟ್ಟೆಕಂಬಿ ಸೀರೆ
ಯಾಕೆ ಎಳತೀಯಾ ತಾಯಿ
ಬಿದಿರು ಕಡಿದು ಬಿಲ್ಲಮಾಡಿ
ನಮ್ಮ ಕೈಯಾಗೆ ಕೊಡುತೀಯಾ
ನಿನ್ನ ಹತ್ತಿರ ಇರೂ ಬಿಲ್ಲು ಬಾಣಾ
ನನ್ನ ಕೈಲಿ ಕೊಡುತಾಯಿ
ಆಗ ದೊರಸಾನಿ ದುಃಖ ಮಾಡುತಾಳೆ
ಏನಂಥ ಹೇಳುತಾಳೆ
ಈ ಬಿಲ್ಲುಬಾಣ ನಿನ್ನ ಕೈಲಿಕೊಟ್ಟರೆ
ನೀನು ಹೋಗುತೀಯೆ ಮಗನೆ
ಈ ಅರಣ್ಯ ಅಡವೀಲಿ ನಾನೊಬ್ಬಳಾಗುತೀನಿ
ಇಲ್ಲಕಾಣೆ ತಾಯಿ ನಾನೀಗ ಬತ್ತೀನಿ
ನಾನು ಇರಾಗ ನಿಮಗೆ ಕಷ್ಟವೇನು
ಬಿಲ್ಲು ಬಾಣ ತಗದು ಮಗನಿಗೆ ಕೊಡುತಾಳೆ
ಮಗನಿಗೆ ಮುತ್ತುಕೊಡುತಾಳೆ
ಮಗನಿಗೆ ಮುದ್ದು ನಾಡುತಾಳೆ
ಜ್ವಾಕೆ ನನ್ನ ಕಂದಾ
ನಾನೊಬ್ಬಳೇ ಆಗುತೇನೆ
ನೀ ದೂರ ಹ್ವಾಗಬ್ಯಾಡ

ಇಲ್ಲ ತಾಯಿ ನಾ ಸೀದಾ ಹೋಗಿ ಸೀದಾ ಬತ್ತೀನಿ
ಬಿಲ್ಲುಬಾಣವ ಅರಣ್ಯಕುಮಾರ ಕೈಲಿ ಹಿಡಿದಾನು
ಕೈಲಿಡಿದ ಮಾತ್ರಕೆ ಅವನ ಸರೀರವೆಲ್ಲಾ
ಗಡಗಡನೆ ನಡಗುತಿರುವುದು
ಜ್ಯಾಕೆ ನಮ್ಮ ತಾಯಿ ನಾ ಹೋಗಿ ಬರುತೀನಂತ
ಸುದ್ದ ಮೂಡಲಾಗಿ ಅವನು ಹೋಗುತಾನೆ

ದೊರೆಯೆ ಅರಣ್ಯಕುಮಾರ
ಗಗನ ಮಾರಗದಲ್ಲಿ ಅವರು ಹಾರುತವರೆ
ಅವರು ಏನಂಥ ಹೇಳುತಾರೆ
ಬತ್ತ ಬತ್ತ ನನಗೆ ಸಂಕಟ ಜ್ವಾಲೆ ಬರದು
ಆಲಿಕೆ ಬರದು ಬಳಲಿಕೆ ಬರುದು ನಾ ತಡೆಲಾರೆನಲ್ಲಾ
ಈ ಬಿಲ್ಲು ಬಾಣ ಹಿಡಿದು ತಾಯಿ ನಾ ಮೋಸಹೋದನೆಲ್ಲಾ
ಹೇ ಓಡಿ ಬನ್ನಿ ನನಗೆ ಎದೆಯಹಾಲನು ಕೊಡಿ
ನಾ ತಡೆಯಲಾರೆನು ಅಂತ ದುಃಖ ಮಾಡುವುದಾ
ಮತ್ತೇನ ಹೇಳುತಾನೆ
ಹೆಣ್ಣ ಹೆಂಗಸಿನಂಗೆ ದುಃಖಮಾಡುತಾನೆ
ಎಲ್ಲಿಗಾದರ್ಹೋಗಿ ನೀರಾ ಕುಡಿದು
ತಾಯಿ ಹತ್ತಿರ ಹೋಗಬೇಕು
ಹಂಗಂತವ್ನೇಳಿ ನೀರಾ ಹುಡುಕಿಕಂಡು
ಹೋಗುತಾನೆ ದೊರೆಯೆ
ಅಚ್ಚಗನ್ನೆ ದೇವಗನ್ನೆ ಕೊಣವೆ ಸಿಕ್ಕೀತು
ನೀರಾ ಸಿಕ್ಕೀತು
ನಮ್ಮ ತಾಯಿ ಹಡದವ್ವ ಸತುವಂತೆ
ಆಕೆ ನನಗೆ ನೀರಾ ಸಿಕ್ಕೀತು
ನೀರಾ ಕುಡ್ಕಂಡು ನಾ ಹೋಗಬೇಕಂತ
ಭಾವಿ ಹತ್ತಿರಕ್ಹೋಗುತಾನೆ
ಭಾವಿ ಹೋದಾರೆ ಹನ್ನೆಲ್ಡಾನೆ ಮೆಟ್ಟಗೆ ಕೊಣವೆ ಆಗಾಲ್ಲ
ಹನ್ನೆಲ್ಡಾನೆ ಮೆಟ್ಟಗೆ ನಾ ಇಳಿಯಾದ ಯಾವಾಗ
ನಾ ಕುಡಿಯಾದು ಯಾವಾಗ
ನಾನು ಕೊಣಕೆ ನೆಗೆಯಬೇಕು
ನೀರಾ ಕುಡಿಯಬೇಕು ಮ್ಯಾಲಕೆ ಹತ್ತಬೇಕು

ಹನ್ನೆಲ್ಡಾನೆ ಪೆಟ್ಟಿಗೆ ನೆಗೆದೋಯಿತಾನೆ
ಅರಣ್ಯಾದ ಕುಮಾರ
ನೀರಾ ಮಾಯವಾದೂ ಅಲ್ಲದೆ
ಅಲ್ಲೊಂದು ಅರಮನೆ ಐತ್ತೈಲ್ಲಾ
ಅರಮನೆ ಒಳಗೆ ಯಾರ ಇರಬೇಕು
ನೀರಾ ಕುಡಿಯಬೇಕಂತ
ಅಂಕಣ ಅಂಕಣ ಸುತ್ತಿಬತ್ತಾನೆ
ಈ ಹೆಣ್ಣಾಳು ರಕ್ಕಸ ಈ ಗಂಡಾಳು ರಕ್ಕಸ
ಚಿನ್ನದ ಹಲ್ಲಿಯಾಗಿ ಅವು ಗೋಡೆಗೆ ಹತ್ತಿ
ಇವನ ಕಣ್ಣಿಗೆ ಕಾಣನಿಲ್ಲಾ

ಯಾರಮ್ಮ ತಾಯಿ ಈ ಅರಮನೇಲಿರವರು
ನನಗೆ ನೀರಾ ಕೊಡಿಯಮ್ಮಾ
ಅಮ್ಮಾ ನೀರಾ ಕುಡಿಯಬೇಕು
ದಾವ ತಡೆಯಲಾರೆ ನನಗೆ ನೀರಾ ಕೊಡಿಯಮ್ಮ
ಇವನ ರೂಪನೆ ನೋಡನಾರದೆ ಹೆಣ್ಣಾಳು ರಕ್ಕಸ
ಹನ್ನೆಲ್ಡು ವರುಸದ ಹೆಣ್ಣಿನರೂಪ ತಾಳುತ್ತವಳಲ್ಲಾ
ಹೆಗ್ಗಾಣಿಗರ ಹೆಣ್ಣಾಗಿ ಬರುತಾಳೆ
ನೀರಾ ತಗೊಂಡು
ಕೊಳ್ಳಿ ಕೊಳ್ಳಿ ದೊರೆಯೆ ನೀರಾ ಕುಡಿರಿ
ಹಣ್ಣಾ ತಿನ್ನಿರಿ
ನೀವು ಕೊಡಬೇಕೆಂದು ನಿಮ್ಮ ಜೊತೇಲಿ
ಬಾಳಬೇಕಂದು ತಪಸ್ಸ ಇದ್ದಸಲ್ಲಾ
ಹನ್ನೆಲ್ಡು ವರುಸದಿಂದ ತಪಸ್ಸಿಡ್ಡೆ ಬಂದನಲ್ಲಾ

ಅಮ್ಮ ಕೇಳಿರಿ ತಾಯಿ ನಾನು ಹನ್ನೆಲ್ಡು ವರುಸದ ಸಣ್ಣಬಾಲಕ
ಸಣ್ಣಬಾಲಕ ಅಂದರೆ ಸಿರಿಯಲ್ಲಿನೇನೊ
ಹೋಗುತ್ತೇನೆಂದಾರೆ ನಿಮ್ಮ ನಾ ಬಿಟ್ಟೇನು
ನೀವು ಹಣ್ಣ ತಿನ್ನಿ ಬನ್ನಿ ಹಾಲುಕುಡಿ ಬನ್ನಿ
ನಾವು ಕೂಡಿ ಬಾಳೋಣ

ಈ ಹೆಣ್ಣೀನ ಬಣಕ ನಾನು ಜಿಗಾದರೆ
ತಾಯಿಗೇನ ಕಷ್ಟಾವೂ ಸಿಕ್ಕಬೈದು

ಹೇಳುತಾನೆ ದೊರೆ ಮತ್ತೆ ಏನು ಮಾಡುತಾನೆ
ನೀರು ಬ್ಯಾಡವಲ್ಲಮ್ಮ ನಾ ಈಗ್ಲೇ ಹೋಗುತೀನಿ
ನಾ ಹೋಗುತೀನಂತ ಮುಂದಕೆ ಬಂದಾರೆ ಇವಳು ಹಿಂದಟ್ಟೆ ಬರುತಾಳೆ
ಎಟೂ ಹೇಳಿದರೂ ಇವಳು ಹಿಂದಟ್ಟೆ ಬರುತಾಳೆ
ನನಗೆ ಸಿರಿ ಯ್ಯಾಕಬೇಕಂತ ಅವಳ ಕೊಂದು ಹಾಕುತಾನೆ
ಇವಳು ರಕ್ಕಸಿ ಹಾವಾಚಿಂಗೆ ಹರಿದುಬಿಟ್ಟಳು
ಅವಳು ಹರಿದು ಹೋಗಾಗ ನಾನು ಹೆಣ್ಣು ಅಂತಾವ
ಹೆಣ್ಣು ಅಂತಾವ ಕೂಡಿ ಬಾಳಿದ್ದರೆ ನನ್ನ ತಿಂದುಹಾಕ್ಳು
ಮತ್ತೆ ಏಳಂಕಣ ಹುಡುಕಿ ಬಂದಾನು
ಬಂದರುವೇ ಯಾರು ಕಾಣನಿಲ್ಲಾ
ಇಂವ ನೀರು ಕುಡಿಯನಿಲ್ಲ ಮ್ಯಾಕೆ ಹಾರಿಬಂದಾ
ಅಲ್ಲಿ ನಿಂತ್ಕಂಡು ಹೋಗಿ ಗ್ಯಾನ ಮಾಡುತಾನೊ
ತಾಯಿ ನಾನು ಬಂದು ಇಲ್ಲೆನಾಸ ಮಾಡಬೇಕೆಂದು
ತಾಯಿ ತಾವಕೆ ಸೀದಾ ಬತ್ತಾನೆ

ತಾಯಿ ಹಣ್ಣು ಫಲಹಾರ ಅವನಿಗೆ ಊಟಕಿಕ್ಕುತಾಳೆ
ಅವನು ಊಟ ಮಾಡುತಾನೆ
ಊಟವನೆ ಮಾಡಿ ತಾಯಿಗೇನ ಹೇಳುತಾನೆ
ಕೇಳು ನನ್ನ ತಾಯಿ ನಾವಿಲ್ಲಿರದು ಯಾವ ಧರ್ಮವೊ
ಬಂದು ಐತೈಲ್ಲಾ ಆ ಅರಮನೆಗೋಗಿ ನಾವು ಬಾಳೋಣ
ಕಂಡವರ ಮನೆಗೋಗಿ ನಾವು ಕಂಡಿತ ಹೋಗದು ಬ್ಯಾಡ
ಯಾರು ಇಲ್ಲವಲ್ಲ ತಾಯಿ ಒಂದೇ ಅರಮನೆ
ತಾಯಿ ಕರ್‍ಕಂಡು ಅವನು ಸೀದಾ ಬರುತಾನೆ
ಈ ತಾಯಿ ಕರ್‍ಕಂಡು ಅವನು ಕೋಣದತ್ತರ ಬರುತಾನೆ
ಏನೆಂಥ ಹೇಳುತಾಳೆ
ಇದು ಅರಮನೆಯಲ್ಲಾ ಇದು ಕೋಣವೆ ಹೆಂಗೆ ಇರೋನ
ಇಲ್ಲ ಕಾಣೆ ತಾಯಿ ಇಲ್ಲೆ ಅರಮನೆ ಐತೈಲ್ಲಾ
ನಿಮ್ಮ ಕಂಕಳಿಗೆ ಎತ್ತಿಕೊಂಡು ಹಾರುತೇನೆ
ನೀವು ಹೆದರಬ್ಯಾಡಿ ತಾಯಿ
ತಾಯಿ ಕರ್‍ಕಂಡು ಕೋಣಕೆ ಹಾರಿ ಅರಮನೆಗೋಗುತಾನೆ

ಈ ಗಂಡಾಳು ರಕ್ಕಸ ಇವನ ಕಣ್ಣಿಗೆ ಕಾಣನಿಲ್ಲ
ಅದು ಗ್ವಾಡೆಗೆ ಹತ್ತ್ಯೀತು ಹಲ್ಲಿಯಾಗಿ
ಅಂಕಣ ಅಂಕಣ ಸುತ್ತಿ ಬರುತಾನೆ
ಅವನು ಬಳಸಿ ಬರುತಾನೆ
ಯಾರು ಕಾಣನಿಲ್ಲ ತಾಯಿಗೆ ಹೇಳುತಾನೆ
ತಾಯಿ ಅಡಿಗೆ ಮಾಡವ್ವ
ತಾಯಿ ಅಡಿಗೆ ಮಾಡಿದಾಳು
ಅವನು ಊಟಮಾಡಿ ಮತ್ತೆ ಏನು ಹೇಳುತಾನೆ
ಕೊರಕೆ ನನಗೆ ಬ್ಯಾಸರಿಕೆ ಆಗುದು ನಾ ಪೋಗಿ ಬತ್ತೇನೆ
ಬಿಟ್ಟು ಹೋಗದು ಬ್ಯಾಡ ಮಗನೇ
ನನಗೆ ಹೆದರಿಕೆ ಆಗದು
ನೀ ಹೆದರಬ್ಯಾಡ ತಾಯಿ ಯಾರು ಕರದರೂ
ನೀ ಮಾತಾಡಬ್ಯಾಡ
ನಾ ಬರುತೇನೆ ತಾಯಿ ನಿನ್ಮ ಕರೀತೇನೆ
ಕೊಣಕೆ ನೆಗೆತೇನೆ ಆಗಂತವ್ದೇಳಿ
ಅಂವ ಹಾರಿ ಹೋಗುತಾನೆ ಸಿಕಾರಿಗೆ ಹೋಗುತಾನೆ

ಅವನು ಹ್ವಾದಮ್ಯಾಲೆ ಈ ಗಂಡಾಳು ರಕ್ಕಸ ಏನು ಮಾಡುತ್ತೈತೆ
ಯಾವ ರೂಪಿನಲಿ ಇವನ ಕೊಂದು ಹಾಕಿ ಇವಳ ಕೂಡಿ ಬಾಳಬೇಕು
ಅಂತ ಏನು ಮಾಡುತ್ತೈತೆ
ಹದಿನಾರು ವರುಸದ ರೂಪು ತಾಳುತಾನೆ
ಏನಂತ ಬರುತಾನೆ ಅಮ್ಮ ದೊರಸಾನಿ
ನಾನು ಹನ್ನೆಲ್ಡು ವರುಸದಲಿ ನೀರಿಗೆ ಬಂದೆನು
ನೀರಿಗೆ ಬಂದೆನೊ ನನಗೆ ಮ್ಯಾಲೆ ಹತ್ತಲೂ ಸಗುತಿ ಬರನಿಲ್ಲ
ಅರಮನೇಲಿ ನಾ ವಾಸಮಾಡುತೀನಿ
ಅಮ್ಮ ನೀನು ಯಾರ ಮಗಳೇ
ನಿನ್ನ ಮಗ್ನ ನೋಡಿದರೆ ಭಾಳ ಸೂರನಲ್ಲಮ್ಮಾ
ನಿನ್ನ ಮಗ ಭಾಳ ಧೀರ ಮಾತಾನಾಡಮ್ಮ
ಮಾತಾಡುವತ್ತಿಗೆ ಮಗನೇ ಬಂದನು
ತಾಯೆ ತಾಯೆಂದೂ ಹೇ ತಾಯಂತ ಮೂರು ಸೊಲ್ಲ
ಕರೀತಾನೆ ಕೊಣಕೆ ಹಾರುತಾನೆ

ಇಂವ ಕೋಣಕೆ ನೆಗೆಯಾಗ ಅವನು ಮೂರು ಸೊಲ್ಲ
ತಾಯಿ ಹೇಳಿನಿಲ್ಲನಲ್ಲಾ

ಮಗನಿಗೆ ಊಟಿಕ್ಕಿಕಿದ ಮಗನು ಊಟಮಾಡಿದ
ಮತ್ತೆ ಹೋಗುತಾನೆ ಅರಣ್ಯಕುಮಾರ
ಈ ರಕ್ಕಸ ಬರುತ್ತೈತೆ ಮತ್ತೆ ಏನಂತ ಹೇಳುತ್ತೈತೆ
ಅಮ್ಮ ರಾಣಿ ಕೇಳೇ ಸೀರೇನ ಸೆಣೆದೇನೊ
ಉಂಡ ಎಂಜಲ ಚೆಲ್ಲೇನು ನಿಮಗೆ ನೆರವಾಗಿರೇನು
ನನ್ನ ಜೊತೇಲಿ ಮೂರು ಮಾತಾಡಮ್ಮ
ಮಾತಾನಾಡೂತ್ತಿಗೆ ಮಗನೇ ಬಂದಾನು
ತಾಯೀನ ಕರದಾನು ಇವನು
ಕೋಣಕೆ ಹಾರಿದಾನು ರಕ್ಕಸ ಮಾಯವಾಯಿತೊ
ಮಗನ ಜೊತೇಲಿ ಇವಳು ಹೇಳನಿಲ್ಲನಲ್ಲಾ
ಇವನು ಊಟ ಮಾಡಿದಾನೊ ಮತ್ತೆ ಹೇಳಿ ಹೊಂಟನೊ

ಗಂಡಾಳ ರಕ್ಕಸ ಮತ್ತೆ ಬರುತ್ತೈತೆ ಏನಂತ ಹೇಳುತ್ತೈತೆ
ಅಮ್ಮ ದೊರಸಾನಿ ಒಂದು ಮಾತಾಡು ನನ್ನ ಜೊತೇಲಿ
ಪದುಮಾವತಿ ಹೆಣ್ಣು ಏನು ಹೇಳುತಾಳೆ
ದಿವಸ ದಿವಸಲೂ ಯ್ಯಾತಕೆ ಬತ್ತೀರಿ
ನೀವು ಮಾತನಾಡೂತ್ತಿಗೆ ನನ್ನ ಮಗನೇ ಬತ್ತಾನೆ
ಅಮ್ಮ ಇದಕ್ಕೊಂದುಪಾಯ ತಾಳೆ ದೊರಸಾನಿ
ನೀನು ಹೊಟ್ಟೆ ಕಚ್ಚೂತೂಂತ ಮಕಾಡೆ ಮನಗಮ್ಮ
ಕುಟ್ಟೆ ಬಾಯಿ ಬಡಿಯಮ್ಮಾ
ಮಗನೇ ಬತ್ತಾನೆ ನೀ ಮಾತಾನ್ಯಾಡಬ್ಯಾಡ
ನಾ ಸಾಯುತಿನಿ ಅನ್ನು
ಏನು ತಾಯಿ ಅಂತ ನಿನ್ನ ಮಗನು ಕೇಳುತಾನೆ
ನನಗೆ ಹೊಟ್ಟೆ ಕಚ್ಚೂತೂಂತ ಹೇಳೆ
ನಿಮ್ಮಪ್ಪ ಇದ್ದಾಗ ನನಗೆ ಮದ್ದಾ ತಂದು ಕೊಟ್ಟಿದ್ರು
ಯಾವ ಮದ್ದಾ ನೀ ತಂದು ಕೊಡುತ್ತಿಯಾ
ನನ್ನ ಜೀವ ಉಳಿಸುತ್ತೀಯಾ
ಹಂಗಂತ ನೀನು ಕೇಳೆ ದೊರಸಾನಿ
ಆದರೆ ಅವನು ಕೇಳುತಾನೆ

ತಂದೆ ಮದ್ದೆಲ್ಲಿ ತಂದಿದಾರೂ ಹೇಳಿ ನನ್ನ ತಾಯಿ
ನಾನ್ಹೋಗಿ ತರುತೀನಿ
ಹಂಗಂತ ಅವನು ಕೇಳುತಾನೆ ನೋಡೇ
ಅದಕೆ ನೀನು ಹೇಳಬೇಕು ನೋಡೇ
ಏಳೇಳು ಸಮುದ್ರ ಏಳು ಸಮುದ್ರಾಚೆ ನೋಡು
ಕಡೆಯೇಳು ಸಮುದ್ರ ಆಚೊಂದು ಸೂಲೆಮರ
ಸೂಲೆಮರದಲಿ ಒಂದು ಸೂಲೆಕಾಯಿ ತಂದು ಕೊಟ್ಟಿದ್ದರು
ಆಗಿಂದ ನನಗೆ ಹೊಟ್ಟೆಕಚ್ಚು ಬಂದಿತ್ತಿಲ್ಲ
ನೀನು ತಂದು ಕೊಡುತ್ತೀಯಾ
ಹಂಗಂತ ಕೇಳಮ್ಮ ಅವನು ಹೋಗುತಾನೆ
ಅವನು ಹ್ವಾದಮ್ಯಾಲೆ ನಾವು ಮಾತನಾಡೋಣ

ಆಗ ದೊರಸಾನಿ ಅವಳು ಏನಂತ ಗ್ಯಾನ ಮಾಡುತಾಳೆ
ನನ್ನಯಾ ಗಂಡನಂಗೆ ಬರದಿದ್ದರೂ ಅವರೆ ಇರಬೈದು
ಮಗನಿಗೆ ಹೇಳಿದರೆ ಕೊಂದು ಹಾಕುತಾನೆ
ನಾನು ಮುಂಡೆಯಾಗುತೀನಿ
ಮಾತಾಡನೊತ್ತಿಗೆ ಮಗನೇ ಬಂದನು
ತಾಯಿ ಅಂತ ಕರದನೂ
ತಾಯಿಯಂತ ಕರದು ಕೋಣೆಕೆ ಹ್ವಾದಾನ
ಇವನು ಮಾಯವಾದನು

ಇವಳು ಮಕಾಡೆ ಮನಗವಳೆ ಕುಟ್ಟೆ ಬಾಯಬಡೀತಾಳೆ
ಕಂದಾ ನಾನು ಸಾಯುತೀನಿ
ನನ್ನ ಜೀವ ಉಳಿಯಂಗಿಲ್ಲ ಮಗನೇ
ಇದುವೇನ ತಾಯಿ ನಿನ್ನ ಕಷ್ಟ ಹೇಳೆ ನನ್ನ ತಾಯಿ
ನಿಮ್ಮಪ್ಪ ಇದ್ದಾಗ ನನಗೆ ಹೊಟ್ಟೆಕಚ್ಚು ಬಂದಿತ್ತು
ನಂಗೆ ಮದ್ದೇ ತಂದು ಕೊಟ್ಟಿದ್ರು
ನೀ ತಂದು ಕೊಡ್ತಿಯಾ ಜೀವ ಉಳಿಸುತ್ತೀಯಾ
ಸಾಯುತ್ತೀನಿ ಮಗನೇ
ತಂದು ಕೊಡುತೀನಿ ತಾಯಿ ತಂದೆ ತಂದುಕೊಟ್ಟಿದ್ದ
ಹೇಳೆ ನನ್ನ ತಾಯಿ

ಏಳೇಳು ಸಮುದ್ರ ಕಂದ
ಏಳು ಸಮುದ್ರದಾಜೆ ಒಂದು ಕಡೆಯ ಕೀಳುಸಮುದ್ರ
ಕಡೆಯ ಕೀಳು ಸಮುದ್ರದಾಜೆ ಒಂದು ಸೂಲೆ ಮರವಂತೆ
ಅಲ್ಲಿಗೋಗಿ ಮಗನೆ ಕಾಯ ತಂದು
ನನ್ನ ಜೀವ ಉಳಿಸದ್ರೆ ಉಳಿಸು
ಆಗಲಾಗಲೀ ತಾಯಿ ನಾನು ಹೋಗಿ ಮದ್ದ ತರುತೀನಿ
ನಾನೋಗಿ ಬರುತೀನಂತ ಅವನು ಹೋಗುತಾನೆ

ಏಳು ಸಮುದ್ರ ಅವನು ದಾಟಿಹೋದಾನೂ
ಕಡೆಯಕೀಳು ಸಮುದ್ರ ಅವನು ದಾಟನಾರನಲ್ಲ
ನಮ್ಮ ತಾಯಿ ಸಾಯುತಾರೆ ಅಂತ ಗ್ಯಾನ ಮಾಡುತಾನೆ
ಬಿಲ್ಲ ಹಿಡ್ಕಂಡು ನಮ್ಮ ತಾಯಿ ಸತುವಂತೆ ಆದ ಮಾತ್ರಕ್ಕೆ
ನಾ ಹಿಡಿದ ಬಿಲ್ಲುಬಾಣ ಈ ಸಮುದ್ರಕೆ ಸೇತುವೆಯಾಗಲೆಂದಾ
ಅವನು ಹಿಡಿದ ಬಿಲ್ಲುಬಾಣ ಸಮುದ್ರಕೆ ಸೇತುವೇ ಆದಾವೂ
ಸೇತುವೆ ಮ್ಯಾಲೆ ಅವನು ಆಜೆ ಹೋಗುತಾನೆ
ಸೂಲೆ ಕಾಯ ಕುಯುತಾನೆ

ಅಲ್ಲಿರದೊಂದು ಗಾಳಿಯಾನೆ ದೇಸ
ಗಾಳಿರಾಯನ ಮಗಳು ಈಕೆ ಗಜಗನ್ನೆ ಎಂಬ ಹೆಣ್ಣು
ಒಬ್ಬ ತಂದೆಗೆ ಒಬ್ಬಳು ಮಗಳು
ಅವಳು ಭಾಳಾ ಚಂದುಳಿ ಚೆಲುವೆಲ್ಲೊ
ಏಳು ಮೂಳಿಗೇಲಿ ತಪಸ್ಸ ನಿಲ್ಲುತಾಳೆ
ಅವನು ಹಿಡಿದ ಬಿಲ್ಲುಬಾಣ ಸೇತುವೆ ಮಾಡ್ಕಂಡು
ದಾಟಿ ಬಂದವರ ನಾನು ಕೂಡಬೇಕಂತ ನಿಂತವಳೆ
ಇವಳು ಅವನ ಹಿಂದುಗುಂಟೆ ಆಳ ಕಳುಸವಳೆ
ಇವನ ಕರದುಕೊಂಡೋಗಿ ಅಲ್ಲಿ ಊಟ ಕೊಡುತಾರೆ
ಗಾಳಿರಾಯರಾಜ ಏನು ಹೇಳುತಾರೆ
ನನ್ನ ಮಗಳು ಗಜಗನ್ನೇ
ದೊರೆಯೆ ನಾ ಲಗ್ನ ಮಾಡಿಯೇನು
ನಾ ಹನ್ನೊಂದು ವರುಸದ ಸಣ್ಣ ಬಾಲಕ
ನನಗೆ ಲಗ್ನವೆಂದರೇನೊ
ನಾ ಹೆಣ್ಣಿನಾಸೆಗೆ ಇಲ್ಲಿ ಕೂತರೆ
ನಮ್ಮ ತಾಯಿ ಸಾಯುತಾರೆ

ತಾಯಿಗೆ ಮುದ್ದು ಕೊಡುತೀನಿ
ನಾ ಹೋಗಿ ಬರುತೇನೆ
ನಂಗೆ ಕಂಡಿತಾಲು ಬ್ಯಾಡ

ಈ ಗಜಗನ್ನೆ ಎಂಬ ಹೆಣ್ಣು
ಏಳು ಮಾಳಿಗೆಯಿಂದ ಇಳಿದು ಬತ್ತಾಳೆ
ಅಮ್ಮ ತಾಯಿ ಸಾಯುತಾರೆ
ಅಮ್ಮಗೆ ಮುದ್ದ ಕೊಟ್ಟು ಮತ್ತೆ ಬರುತೀನಿ
ನಿಮ್ಮ ನಗ್ಣವಾಗುತೀನಿ ನಾ ಕರ್ಕಂಡು ಹೋಯಿತಿನಿ
ನಾ ಹೋಗಿ ಬತ್ತೀನಂತ ಇವನು ಪೊಂಟುತಾನಲ್ಲ
ಇವಳು ಏನು ಹೇಳುತಾಳೆ
ನೀವು ಹೋಗೋರು ಹೋಯಿತಿರಿ
ನನಗೆ ಬಿಲ್ಲುಬಾಣ ಕೊಟ್ಟು ಹೋಗಿ ದೊರೆಯೆ
ಹಿಡಿದ ಬಿಲ್ಲು ಬಾಣ ಕೊಟ್ಟು ಹೋದರೆ ನಾ ಹೆಂಗೆ ಹೋಗಾಲಿ
ಅವರ ಕೈಲಿ ಹಿಡಿವಂತ ಕರಿಯವಸ್ತ್ರವ ಗುರುತು ಕೊಡುತಾರೆ
ತಾಯಿ ಚಿಂತೆಯಿಂದ ಅವನು ಮುದ್ದು ತಕೊಂಡು ಸೀದಾ ಬರುತಾನೆ

ಅಲ್ಲಿಗೆ ನೋಡು ದಿನವು ನಾಕುನಾದವಲ್ಲಾ
ಗಂಡಾಳು ರಕ್ಕಸ ಮಗನು ಬರನಿಲ್ಲವೆಂದು ಏನು ಮಾಡುತ್ತೈತೆ
ಅವಳ ಜೊತೇಲಿ ಅದು ಕೂಡಿ ಬಾಳುತ್ತೈತೆ
ಅದು ಸೇರಿ ಬಾಳತ್ತೈತೆ
ಅರಣ್ಯಕುಮಾರ ಅವನು ಕೊಣಾದತ್ತಿರ ಬಂದು
ಗ್ಯಾನವ ಮಾಡುತಾನೆ
ಹೆಂಗಸರ ಮಾಯುವಾ ನಾ ತಿಳಿಯಲುಬೇಕು
ಈಸರಿ ಅವನು ಕರೆಯುನಿಲ್ಲನಲ್ಲಾ
ತಾಯಿ ಕರೆಯುನಿಲ್ಲ ಹಂಗೆ ಕೊಣಕೆ ನೆಗೆತಾನೆ

ಆ ತಾಯಿ ಜೊತೇಲಿ ಆ ಗಂಡಾಳ ರಕ್ಕಸ ಮಂಚದಮ್ಯಾಲೆ
ನಿದ್ದೇಲಿ ಮನಗವರೆ
ಇವನು ಮನಗವರ ನಿಂತು ನೋಡುತಾನೆ
ಏನಂಥ ಹೇಳುತಾನೆ ನಾನೇನ ಮಾಡಲಿ
ನನ್ನ ತಾಯಿ ದೊರಸಾನಿ ನಂಗೆ ಮಾಡಿದ ಮೋಸವ

ನಾ ಏನೆಂದು ತಿಳಿಯಲೀ
ಅವಳ ಎಚ್ಚರ ಮಾಡನಿಲ್ಲ
ಗಂಡಾಳ ರಕ್ಕಸನ ಕೊಂದುಹಾಕುತಾನೆ
ಅವನ ಕೊಂದಮ್ಯಾಲೆ ಮತ್ತೆ ಗ್ಯಾನ ಮಾಡುತಾನೆ
ನಾನು ತಾಯಿ ಕೊಲ್ಲಬೇಕು
ತಾಯಿ ಕೊಂದಾರೆ ನಾ ತಬ್ಬಲಿಯಾಗುತೀನಿ
ಈಗ ನಾನೇನ ಮಾಡಲೀ
ತಾಯಿ ಕೊಂದ ಪಾಪ ನಾ ಎಲ್ಲಿ ಕಳೆಯಲಿ
ಹೀಗಂತ ಗ್ಯಾನಮಾಡಿ ಸುಮ್ಮನೆ ಇರುತಾನೆ
ಇವನು ಕೊಂದ ಗಂಡಾಳು ರಕ್ಕಸ ಹಾವಚಿಗೆ ಹಂಗೆ
ಹರಿದು ಹೋಗುತೈತೆ ಅವನು ನಿಂತು ನೋಡುತಾನೆ
ನಮ್ಮ ತಾಯಿಗೆ ಮೋಸವ ನಾನೆ ಮಾಡಿದೆ
ನಾ ತಾಯಿ ಕೊಂದಿದ್ದರೆ ನಾ ಎಲ್ಲಿ ಪಡೆಯಲಿ
ಹೀಗಂತ ಅವನು ಏಚನೆ ಮಾಡುತ ತಾಯಿ ಕರದಾನು
ದಡಕ್ಕನೆದ್ದು ಕೈಯ ಮುಗೀತಾಳೆ ಕಾಲ ಕಟ್ಟುತಾಳೆ
ನಿನಗೇಳಿದೆ ಮೋಸಮಾಡಿದೆ ಕಂದಾ ನೀ ತಾಳುಬೇಕು
ಎಟೊ ಹೇಳಿದಾರೂ ನಾ ಕೇಳನಿಲ್ಲ ತಾಯಿ
ನೀನ್ಯಾರ ಮಗಳಮ್ಮ ನೀನ್ಯಾರ ಸೊಸೆಯಮ್ಮಾ
ನೀನ್ಯಾರ ಮಡದಿಯಮ್ಮ ನಿನ್ನದ್ಯಾವ ಪಟ್ಟಣ
ಹೇಳಿಪ್ರೇಳಬೇಕು ಇಲ್ಲದಿದ್ದರೆ ನಿಮ್ಮ ಕೊಲ್ಲುತೀನಿ

ಸಿಟ್ಟು ಮಾಡಬ್ಯಾಡ ಕಂದ ಕೋಪ ಮಾಡಬ್ಯಾಡ
ಪೇಳುತೀನಿ ಕೇಳು ಮಗನೇ
ಪದುಮಾವತಿ ಪಟ್ಟಣ ನಮ್ಮದು
ಪದುಮಾವತಿ ರಾಜನ ಮಗಳು ನಾನು
ನಿಮ್ಮಪ್ಪನ ಪಟ್ಟಣ ಬಾಣಾವತಿ
ನಿಮ್ಮಜ್ಜನ ಹೆಸರು ಬಾಣಾಪತಿದೊರೆ
ನಿಮ್ಮಪ್ಪನ ಹೆಸರು ನಂದಗೊಮಾರ
ನಿನ್ನ ಒಂಭತ್ತುತಿಂಗಳು ಬೆಮ್ಮನಸೆ
ನಿಮ್ಮಮ್ಮನಿಂದ ನಾವು ಅಡವಿಗೆ ಬಂದವರು
ನಿಮ್ಮಪ್ಪನ ಜೊತೇಲಿ ನಾ ಹಿಂದಟ್ಟೆ ಬಂದೇನು
ಹನ್ನೆಲ್ಡು ದಿನ ದಾರಿಯಾನೆ ನಡದು ನಂಗೆ ಧಣಿವೆ

ಈ ಮೂರು ಮರಸೇರಿದ ಕುಡಿ ಸೇರಿಸಿ ಬಿಗಿದು
ನಿಮ್ಮಪ್ಪ ನೀರಿಗೆ ಹೋದಾರು
ನೀರ ತರನಿಲ್ಲ ಹಿಂದೆ ಬರನಿಲ್ಲಾ
ಮರದ ಮ್ಯಾಲೆ ನೀ ಹುಟ್ಟಿ ಅಜ್ಜಗನ್ನೆ ದೇವಗನ್ನೆ
ನಮ್ಮ ಕಷ್ಟಾವ ನೋಡ್ಯಾರೂ
ಕಂದ ನಿಂಗೆ ಹೆಸರನ್ನಿಟ್ಟವರೆ ಅರಣ್ಯಕುಮಾರ

ಹಂಗಂತ ಹೇಳಲು ಅವನು ಅರಣ್ಯಾದಕುಮಾರ
ಗಡಗಡಾ ನಡಿಗ್ಯಾನೊ
ತಂದೆಯಿಲ್ಲದ ನಾ ತಬ್ಬಲಿಯಾದನಲ್ಲಾ
ನಾ ತಂದೆ ಪಡಿಬೇಕೂಂತ ಗ್ಯಾನ ಮಾಡುತಾನೆ
ಮತ್ತೆ ಏನು ಮಾಡುತಾನೆ ಅವನು
ಅಂಕಣಂಕಣ ಹುಡುಕಿ ನೋಡುತಾನೆ
ಅವನು ಅರಸಿ ನೋಡುತಾನೇ
ಏಳು ಅಂಕಣ ಕಣ್ಣಿಗೆ ಕಂಡದ್ದ ಒಂದು ಅಂಕಣ
ಅದರಲಿ ಮತ್ತೊಂದು ಅಂಕಣ ಅವನು ನೊಡ:ತ್ತಿಲ್ಲವಲ್ಲಾ
ಅವನು ಈಗ ನೋಡುತಾನೆ
ಅದರ ತುಂಬಲೂ ಮೂಳೆ ರಾಶಿದ್ದೊ
ಗೋಣಿ ತುಂಬುತಾನೆ ಹೊತ್ತುಗೊಂಡು ಹೋಗುತಾನೆ
ಜಲದೀಗೆ ಬಿಡುತಾನೆ ಮತ್ತೆ ಹೇಳುತಾನೆ
ನಾನೇ ಪುಣ್ಯವಂತಾ ಆದ ಮಾತ್ರಕೆ ನಮ್ಮ ತಂದೆ ಮೂಳೆಲ್ಲಾ
ನನ್ನ ಕಾಲ ಬಳಿಗೆ ಬೀಳಿಲೆನ್ನುತಾನೆ
ಸೂರ್ಯದೇವರೀಗೆ ಸಿವನು ಪಾರ್ವತೀಗೆ ಕೈಮುಗೀತಾನೆ
ಎಲ್ಲರ ಮೂಳೆ ಕೊಚ್ಚಿತಾವೆ ತೇಲಿ ಹೋಗುತಾವೆ
ಅವರಪ್ಪನ ಮೂಳೆ ಅವನ ಹತ್ತಿರಕೆ ಬೀಳುತಾವೆ

ಅವನಲ್ಲವ ತಗದು ದಿಡ್ಡ ಮಡಗುತಾನೆ
ಮತ್ತಿವನು ಏನು ಮಾಡುತಾನೇ
ಅಲ್ಲೆ ನಿಂತುಗೊಂಡು ಸಿವನು ಪಾರ್ವತೀಗೆ ವಾಲೆ ಬರೆತಾನೆ
ವಾಲೆ ತಂದುಕೊಟ್ಟೆ ನೀವು ಸೀವಾ ಬರಬೇಕು ತಂದೆ
ಜೀವ ಕೊಡಬೇಕು
ಬರದ ವಾಲೆಗೆ ನೀವು ಬರದಿದ್ರೆ ನಾನೇ ಬತ್ತೀನಿ

ಹಂಗಯುದ್ಧೇಳಿ ಬಾಣದ ತುದಿಗೆ ವಾಲೆ ಕಟ್ಟಿದಾ
ಸುರಲೋಕಕೆ ಬಾಣವ ಹೊಡೆತಾನೆ ಅರಣ್ಯಕುಮಾರ
ಸಿವನ ತಾವಕೆ ವಾಲೆ ಹೋಗಿತು ಸಿವನು ವಾಲೆ ಓದುತಾನೆ
ತಂಗೀರಾನೆ ಮ್ಯಾಲೆ ಸಿಟ್ಟು ಮಾಡುತಾನೆ
ತಂದೆ ಹಿಡಿದಂತ ಬಿಲ್ಲುಬಾಣವ ಅವನು ಕೈಲಿ ಹಿಡಿದವನೆ
ಅವನು ಬಂದರೆ ನಾವು ಉಳಿಯುಂಗಿಲ್ಲ
ನಾವು ಏನು ಮಾಡಬೇಕಂತ ಗ್ಯಾನ ಮಾಡುತಾರೆ

ಸ್ವಾಮಿ ಸೀಪಾ ಬರುತಾರೆ ಮತ್ತೇನ ಹೇಳುತಾರೆ
ಹಿಂದೆ ತಿರುಗಿದರೆ ನಾ ಜೀವ ಕೊಡುತೀನಿ
ಆಗ ಸಿವನೀಗೆ ಮೂರು ಮಂತ್ರ ಜಪಿಸವರೆ
ನಾಗಬೆತ್ತ ಹಿಡಿದು ಅವರು ಜೀವಳಕಡ್ಡೀಲಿ ಉಂಗವ್ರೇ
ಅಸ್ಯಂತ ನೋಡು ನಂದಗೊಮಾರ ಎದ್ದು ಕುಳಿತವನೆ
ಅವನು ಎದ್ದು ಕೂರುತಾನೆ ಸಿವನು ಮಾಯವಾದನಲ್ಲಾ
ನಂದಗೊಮಾರ ದುಃಖ ಮಾಡುತಾನೆ
ಅವನು ಏನಂತ ಹೇಳುತಾನೆ ನನ್ನ ಪದುಮಾವತಿ ಏನಾದಳೂ
ನನ್ನ ಪ್ರಾಣ ಪಡೆದವರು ಯಾರು ನನ್ನ ತಂದೆ
ಅರಣ್ಯಕುಮಾರ ತಂದೆಗೆ ನಮಸ್ಕಾರ ಮಾಡಲೇಳುತ್ತಾನೆ
ನಂದಗೊಮಾರ ಮಗನ ಕಾಲುಕಟ್ಟುತ್ತಾನೆ ಕೈಮುಗಿಯುತ್ತಾನೆ
ಕೇಳಿಕೇಳಿ ತಂದೆ ನಾನು ನಿಮ್ಮ ಮಗನಲ್ಲವೇ
ನನಗ್ಯಾಕೆ ನಮಸ್ಕಾರವೂ
ಇಂತಹ ಮಗನಿದ್ದಿದರೆ ನನಗ್ಯಾಕೆ ಕಷ್ಟಬರುತ್ತಿತ್ತು
ನಿಮ್ಮಂತ ಮಗನ ನಾನು ಕಣ್ಣಲ್ಲಿ ಕಾಣನಿಲ್ಲ
ಎಟೊ ಹೇಳಿದರೂ ಕೇಳನಿಲ್ಲವಲ್ಲ ನಂದಗೊಮಾರ

ನಾ ಹೇಳುವೆನು ತಂದೆ ಚೆಂದಾಗಿ ಕೇಳಿ ತಂದೆ
ತಂದೆ ನಿಮ್ಮಯಾನ ಪಟ್ಟಣ ಬಾಣಾವತಿ ದೇಸವಲ್ಲವೆ
ಅಜ್ಜನ ಹೆಸರು ಬಾಣಾವತಿ ದೊರೆಯಲ್ಲವಾ
ನಿಮ್ಮ ಹೆಸರು ನಂದಗೊಮಾರ ದೊರೆಯಲ್ಲವೆ
ನಮ್ಮ ತಾಯಿ ಹೆಸರು ಪದುಮಾವತಿ ರಾಣಿಯಲ್ಲವಾ
ತಂದೆ ಒಂಭತ್ತು ತಿಂಗಳು ಬೆಮ್ಮನಸೆ ಅಲ್ಲವೆ ನಮ್ಮ ತಾಯಿ
ನಮ್ಮನ್ಮನಿಂದ ತಂದೆ ನೀವು ಅಡವಿಗೆ ಬಂದರಲ್ಲವೇ

ನಿಮ್ಮ ಜೊತೇಲಿ ನಮ್ಮ ತಾಯ ಬರನಿಲ್ಲವೇ
ತಾಯಿ ನೀರ ಕುಡಿಬೇಕಂತ ಹೇಳನಿಲ್ಲವಾ
ತಂದೆ ಮೂರು ಮರದ ಕುಡಿಗೆ ಸೇರಿಸಿ ಬಿಗಿದು
ನೀವು ನೀರಿಗೆ ಹೋಗನಿಲ್ಲವೇ
ತಂದೆ ನಾ ಅಲ್ಲೆ ಹುಟ್ಟಿ ಅಚ್ಚಗನ್ನೆ ದೇವಗನ್ನೆಯರು
ನನ್ನ ನೋಡಲಿಲ್ಲವೇ ಗುರುತು ಹೇಳಲು ಅವನು
ನಂದಗೊಮಾರ ಮಗನ ಮುದ್ದಾಡುತಾನೆ
ಕೇಳು ನನ್ನ ಕಂದ ನಿನ್ನ ತಾಯಲ್ಲಿ ಹೋದಾರು
ಇಟೂ ದಿವಸ ನಿನ್ನ ಸಾಕಿದವರ್‍ಯಾರು ಸಲಗಿದವರ್‍ಯಾರು
ಈ ಹೊಟ್ಟೇಲಿ ನೀನು ಹುಟ್ಟಬೈದೇನೂ ಬೆಳೆಯಬೈದೇನೂ
ನಮಗೇನು ಇಲ್ಲವಂತೆ ಕಾಡಡವೀಲಿ ವಾಸಮಾಡಬೇಕು
ತಂದೆ ನಾನಿರಾಗ ನಿಮಗೆ ದುಃಖವೆಂದರೇನು
ಹೋಗೇನೆಳಿತಂದೆ ಅಂದು ತಂದೆ ಕರ್‍ಕಂಡು ಕೊಣದತ್ತರಕೆ ಬರುತಾರೆ

ಏನು ಹೇಳುತಾರೆ ಕಂದ ಇದೇ ಕೊಣಕೆ ನಾ ನೀರಿಗೆ ಬಂದಿದ್ದೆ
ಇದೇ ಕೊಣದಲ್ಲಿ ಗಂಡು ರಕ್ಕಸ ನನ್ನ ತಿಂದು ಹಾಕಿದ್ದು
ಆದಾದಗಲಿ ತಂದೆ ಹೆದರಬ್ಯಾಡಿ ನೀವು
ನಾನು ಕೊಣಕೆ ಇಳಿಯುತೀನಿ
ಅವನು ತಂದೆಯೆತ್ತಿಕೊಂಡು
ಅವನು ಕೊಣಕೆ ನೆಗೆಯುತಾನೆ
ಅವನ ಮಡದಿ ದೊರಸಾನಿ
ಗಂಡನ ಕಾಲ ಕಟ್ಟುತಾಳೆ ದುಃಖ ಮಾಡುತಾಳೆ
ಅವರು ಹೆಂಡತಿ ಗಂಡ ದುಃಖ ಮಾಡಾಗ
ಇವನು ನಿಂದು ನೋಡುತಾನೆ
ನಾನು ಇರಾಗ ತಂದೆ ದುಃಖವೆಂದರೇನೊ
ತಾಯಿ ದುಃಖವೆಂದರೇನು
ನಾವೀಗಲೇ ಹೋಗೋಣ ಅರಮನೆ ಸೇರೋಣ
ನಿಮಗೆ ದುಃಖ ಬ್ಯಾಡ ತಂದೆ
ತಾಯಿ ನೀವೂವೆ ಅರಮನೇಲಿರಿ
ನಾ ಹೋಗಿ ಬತ್ತೀನಿ ಪಟ್ಟಣಕೆ
ಮೂರು ದಿನಕೆ ನಾ ಬತ್ತೀನಿ ಪಟ್ಟಣ ಸೇರೋಣ
ಅವನಾಗಲೇ ಅರಣ್ಯಕುಮಾರ ಹೋಗುತಾನೆ

ಏಳೇಳು ಸಮುದ್ರ ದಾಟಿ ಹೋಗುತಾನೆ
ಕಡೆಯೇಳು ಸಮುದ್ರ ದಾಟಿ ಹೋದನಲ್ಲಾ
ಗಾಳಿರಾಯನ ಅರಮನೆಗೋದಾನು
ಗಾಳಿರಾಯ ಸರಣ ಸರಣ ಕೊಡುತಾರೆ
ಊಟಕಿಕ್ಕುತ್ತಾರೆ ಇಳ್ಯಾವ ಮೆಲ್ಲುತಾರೆ
ಏನು ಹೇಳುತಾನೆ ಅರಣ್ಯಕುಮಾರ
ನಾ ಹೋಗಿ ಬರುತೀನಿ ನೀವು ಗಜಗನ್ನೆ ಕಳುಸಿ
ಅವರು ಸಂತೋಸದಿಂದೆ ಕಳುಸಿಕೊಡುತಾರೆ
ಅವಳ ಕರ್ಕಂಡು ಅರಣ್ಯಕುಮಾರ ಹಿಂದಿರುಗಿ ಬರುತಾನೆ
ಕೊಣದ ಹತ್ತಿರಕೆ ಮತ್ತೆ ಬರುತಾನೆ ದಿನವೂ ಆದವೂ
ಅವಳನ್ನಿಳಿಸಿ ಕೊಣಕೆ ಇಳೀತಾನೆ
ತಂದೆ ತಾಯಿಯ ಕಂಕಳಲ್ಲೆತ್ತಿಕೊಂಡು
ತಾನು ಮ್ಯಾಲೆ ಹಾರುತಾನೆ

ಅಲ್ಲಿಗೆ ನಾಕಾಳಾದರೂ ಈ ಗಜಗನ್ನೆ ನಮುಸ್ಕಾರಮಾಡುತಾಳೆ
ನಮ್ಮ ದೇಸಕೆ ಹೋಗನೇಳಿ ತಂದೆ ಪಟ್ಟಣ ಸೇರಣ
ನಿಮ್ಮಮ್ಮಾಗೆ ಬಾಸೆ ಕೊಟ್ಟಿದ್ದೀನಿ
ನಾ ಬರದಿಲ್ಲ ಮಗನೇ
ನಾನು ಇರಾಗ ಏಚನೆಂದರೇನು ಹೋಗನೇಳಿ ತಂದೆ
ಅಲ್ಲಿಂದ ಹಿಂತಿರುಗಿ ಇವರು ಬರುತಾರೆ
ಬಾಣಾವತಿ ಪಟ್ಟಣಕೆ

ಅವನು ಬಂದನೊತ್ತಿಗೆ ಇವರೇನು ಮಾಡುವರೆ
ಅಚ್ಚಗನ್ನೆ ದೇವಗನ್ನೆ ರತ್ನಗನ್ನೆ ಸಾಮುಗನ್ನೆ
ಕಲ್ಲ ಕೊಡವ ತೆಗೆದಾರು ಮಳ್ಳಸಿಂಬಿಯ ತೆಗೆದಾರು
ಜಲದ ಕಣ್ಣ ಬಿಡುತಾರೆ
ಭಾವಿ ತುಂಬಿ ಹರಿತೈತೆ ರುಕ್ಷ ಚಿಗುರು ಬಂದವು
ಅವರು ಅಲ್ಲಿಗೆ ಬಂದಾರೂ ನಾಕಾಳು
ಕೈಕಾಲ ಮುಖಾವ ತೊಳೆದಾರು ನೀರ ಕುಡಿದಾರು
ನೀರನೆ ಕುಡಿದು ನೆಳ್ಳಲ್ಲಿ ಕುಳಿತು ಅರಣ್ಯಕುಮಾರ
ತಂದೆ ನೀರ ಕುಡಿದು ನೆರ್ಳಲ್ಲಿ ಕುಂತು ಎಟೂ ಸಂತೋಸವಾತು
ಸಂತೋಸನೇಟು ತಂದೆ ಈ ಕೊಣವ ಮಾಡಿದವರ್ಯಾರು ತಂದೇ

ನಾನೆ ತೆಗಿಸಿದೆ ಮಗನೆ ನಾ ನೀರ ಕುಡಿಯನಿಲ್ಲ ನೆಳ್ಳಾ ಸೇರನಿಲ್ಲ
ನನ್ನ ಅಡವೀಗಟ್ಟಿದರೂ ಕಂದಾ
ಅಲ್ಲೇ ಕುಳಿತುಕೊಂಡು ಅರಣ್ಯಕುಮಾರ ಅಜ್ಜಗೋಲೆ ಬರೆದಾ
ನಾ ಅಡವೀಲಿ ಹುಟ್ಟಿದವನು ಅರಣ್ಯಕುಮಾರ
ನಾ ಪಟ್ಟಣಕೆ ಬತ್ತೀನೀ
ಪಟ್ಟಣವ ಬಿಟ್ಟುಕೊಡುತೀರಾ
ಯುದ್ದಕ್ಕೆ ಬತ್ತೀರಾ ಬಾಣಾವತಿ ದೊರೆಯೆ

ದೊರೆ ಮತ್ತೆಲ್ಡು ವಾಲೆ ಏನಂತ ಬರದಾರೊ
ನನಗೆ ಮುಪ್ಪಿನ ಕಾಲ ನಾ ಯುದ್ದಕೆ ಬರನಾರೆ
ನೀವು ಪಟ್ಟಣವ ಸೇರಿ ಸುಖವಾಗಿ ಬಾಳಿರೆಂದು
ವಾಲೆಯ ಬರೆದರು ಅವರು
ಇವರು ನಾಲ್ಕಾಳುವೇ ಪಟ್ಟಣ ಸೇರುತಾರೆ
ಅರಣ್ಯಕುಮಾರನಿಗೆ ಮದುವೆ ಮಾಡುತಾರೆ ಗಜಗನ್ನೆಯಾ
ಮದುವೆಯಾನೆ ಮಾಡಿ ಅವರೆಲ್ಲರೂ ಸುಖವಾಗಿ ಬಾಳುತಾರೆ

ಹರಿಯಾಲ ದ್ಯಾವಮ್ಮ

ತಂದ ನಾನ ತಂದೆನಾನ
ತಾನಂದನಾ ತಾನಂದನೋ–ನಾ ॥ ಪಲ್ಲವಿ ॥

ಹೇ ನೀಲಾವತಿ ದೊರೆಗಳಿಗೆ
ಎಲ್ಡಾಳು ಹೆಣ್ಣುಮಕ್ಕಳು
ಮಕ್ಕಳು ಹುಟ್ಟದ ಗಳಿಗೇಲಿ ನೋಡಿರೊ
ತಾಯಿಗೆ ಮರಣ ಬಂದ್ವಲ್ಲೋ
ಹೇ ನೀಲಾವತಿ ದೊರೆಗಳು
ಚಿಂತೆಯಾನೇ ಮಾಡುತ್ತಾರಲ್ಲೋ
ಹೇ ಮಕ್ಕಳ್ಗಿಂಗೆ ಸಾಕಲಾಂತವ
ಚಿಂತೆಯಾನೇ ಮಾಡುತ್ತಾರಲ್ಲೋ
ಕಂಡರಾನೇ ಗೌಡರ ಹೆಣ್ಮಕ್ಕಳು
ಚಿಂತೆಯಾನೇ ಮಾಡಬೇಡಿರಿ
ನೀವು ಕೇಳಿ ಕೇಳಿರಿ
ನೀವು ದೊರೆಗಳಿರಾ
ನಿಮಗಿಂತ ಹೆಚ್ಚಾಗಿ ನಾವೀಗ
ನಿಮ್ಮ ಮಕ್ಕಳ ನಾವೇ ಸಾಕತೀವಿ
ನೀವು ಇಷ್ಟಕೆ ನಿಮಗೆ ದೊರಗಳಿರಾ
ನೀವು ಇಷ್ಟಕೆ ಚಿಂತೆ ಮಾಡ್ವಿರಲ್ಲಾ
ಗೌಡ ಹೆಣ್ಮಕ್ಕಳು ಸಾಕುತಾರೆ

ಅವರಿಗೆ ದಿನೆಂಬುದೂ
ಒಂದು ದಿನವೆಂಬುದವರಿಗೆ
ಒಂದೆಯಾನೇ ತಿಂಗಳು ತುಂಬಿದಾವು
ಒಂದು ತಿಂಗಳೆಂಬುದವರಿಗೆ
ಒಂದೇ ಯಾನಾ ವರ್ಷ ತುಂಬಿದಾವು

ಒಂದು ವರ್ಷವೆಂಬುದೆನರಿಗೆ
ವರ್ಷ ಎಲ್ಡೇ ಆದವಲ್ಲಾ
ಎಲ್ಡು ವರ್ಷವೆಂಬುದೆವರಿಗೆ
ವರ್ಷ ನಾಕನೇಯಾದವಲ್ಲಾ
ನಾಕ ವರ್ಷವೆಂದವರಿಗೆ
ಆರು ವರ್ಷವು ತುಂಬಿದಾವು
ಆರು ವರ್ಷವೆಂದವರಿಗೆ
ಎಂಟು ವರ್ಷವು ತುಂಬಿದಾವು
ಎಂಟು ವರ್ಷವೆಂದವರಿಗೆ
ಹತ್ತು ವರ್ಷವು ತುಂಬಿದಾವು
ಹತ್ತು ವರ್ಷವೆಂದವರಿಗೆ
ಹನ್ನೆಲ್ಡು ವರ್ಷವು ತುಂಬಿದಾವು
ಅವರ ಅಕ್ಕ ತಂಗಿಯೂ ಇಬ್ಬಾರುವೆ
ಏಳು ಮಾಳಿಗೆಯಲ್ಲಿವರಲ್ಲಾ

ಹಿರಿಯಳ ಹೆಸರು ಹರಿಯಾಲ ದ್ಯಾವಮ್ಮ
ಕಿರಿಯಳ ಹೆಸರು ಪಾರ್ವತಮ್ಮಾ
ಕೇಳು ಕೇಳು ಅಕ್ಕಯ್ಯ ದ್ಯಾವಮ್ಮ
ನಾವು ನೆರೆದು ಹನ್ನೆಲ್ಡು ವರ್ಷವಾಯ್ತು
ನಾವು ಹಿಂಗೇ ಇದ್ದರೆ ಯಾರಿಗೆ ಪ್ರೀತಿ
ನಮ್ಮ ದಾರಿಲಿ ಹೋಗೋ ದಾಸಗೆ ಕೊಡಲೇಳೆ
ಹೇ ದಾರಿಲಿ ಹೋಗೋ ದಾಸಗೆ ಕೊಡಲೇಳೆ
ಧರ್ಮ ಕಲ್ಯಾಣ ಮಾಡಲೇಳೆ
ಆಗಾಲಾಗಲಿ ತಂಗಿ ಪಾರ್ವತಿದೇವಿ
ತಂದೆ ಅರಮನೆಗೆ ಬರಲೇಳೆ
ನಾವು ಬಿದ್ದು ಬಿದ್ದು ಬೇಡಿಕೊಳ್ಳೋಣ
ಅವರು ಪಾತಸಾಡಿಕೊಂಡು ಮಾಡಿಲಿ ಅವರಲ್ಲ

ಅವರು ನೀಲಾವತಿ ದೊರೆಗಳು
ಸಿಕಾರಿ ಹೋದವರು ಬಂದರೋ
ಗೌಡ ಹೆಣ್ಮಕ್ಕಳು ನೀರಾನೆಯ ಕೊಡುತ್ತಾರಲ್ಲಾ
ಅವರಿಗೆ ಊಟಕೆ ಇಕ್ಕುತಾರೆ

ಊಟ ಮಾಡಿ ಕೈಯನ್ನೇ ತೊಳೆದಾರೂ
ಮಂಚಕ್ಕೇನೆ ಬಂದಾರೂ
ಇಸರು ಮಾಳಿಗೆ ಬಿಟ್ಟು ಕೆಳ್ಗೆ ಬರುತಾರೆ
ತಂದೆಯ ಹತ್ತಿರಕೆ ಬರುತಾರೆ
ಅಂಜಿ ಬಿನ್ನಹ ಮಾಡ್ದೆ ತಂದೆ
ಅಳುಕಿ ಬಿನ್ನಹ ಮಾಡ್ದೆ ತಂದೆ
ನಾವು ನೆರೆದು ಹನ್ನೆಲ್ಡು ವರ್ಷವಾಯ್ತು
ನಾವು ಹಿಂಗಿದ್ದರೆ ಯಾರಿಗೆ ಪಿರೀತಿ
ನಮ್ಮ ಅರಮನೆ ಸುತ್ತಲು
ನಾವು ಸುತ್ತಿ ಸುಳಿದಾಡಿದರೇ
ನಿಮಗೆ ಅನುಕೋಟಿ ದೋಷವು
ನಾವು ಸುತ್ತಿ ಸುತ್ತೋದು
ನಮ್ಮ ದಾರೀಲಿ ಹೋಗ ದಾಸಕ್ಕೆ ಕೊಡಿ ತಂದೆ
ಧರ್ಮ ಕಲ್ಯಾಣ ಮಾಡಿ ತಂದೇ

ಆಗಲಾಗಲಿ ಮಕ್ಕಳಿರಾ
ನೀವು ಮಾಳಿಗೇನೆ ಹತ್ತಿ ಹೋಗಿರೊ
ಅವರು ಮಾಳಿಗೇ ಹತ್ತಿ ಹೋದರೊ
ನೀಲಾವತಿ ದೊರೆಗಳೂ
ಚಿಂತೆಯಾನೇ ಮಾಡ್ತಾರಲ್ಲಾ
ಏನು ತಾನೇ ಹೇಳುತ್ತಾರಲ್ಲಾ
ಗಂಡು ಹೆತ್ತವರೂ ಹೆಣ್ಣಿಗೆ ಹೋಗುತಾರೆ
ನಾ ಹೆಣ್ಣ ಹೆತ್ತಾವನು ಗಂಡಿಗ್ಹೋಗಬೇಕಲ್ಲಾ
ನಾನೆಂತ್ಹಾ ಹುಡಿಕೊಂಡು ಹೋಗಲಿ
ಅವರಿಗೆ ತಕ್ಕ ವರವ ಎಲ್ಲಿ ತರಲಿ
ಈ ಚಿಂತೆಯಾನೇ ಮಾಡ್ತಾರಲ್ಲಾ
ಕರೆದಾನಾ ಮಂತ್ರಿ ಪರಧಾನಿ
ಈ ಸ್ವಲ್ಪ ಕೆಲಸಕೆ ಚಿಂತೆ ಯಾತಕೆ
ದೇಸದ ಮೇಲೆ ಹೋಗಿ ಬರ್ತೀನಿ
ನನಗೆ ವಿಳ್ಳೈವಾ ಕೊಡಿರಿ
ಹೆಣ್ಮಕ್ಕಳ ಪೋಟಾನೆ
ಕೈಯಲ್ಲಾರೇ ಕೊಡಿ ದೊರೆಗಳೆ

ಆಗಲೇ ವಿಳ್ಯಾವ ಕೊಡುತಾರೆ
ಕೈಯಲ್ಲಾರೇ ಪೋಟಾ ಕೊಡುತಾರೆ
ಅವನಿಗೇ ಊಟಕ್ಕೆ ಇಕ್ಕುತ್ತಾರೆ
ಊಟಮಾಡಿ ಸಿಂಗಾರನಾಗುತಾನೆ
ಕುದುರೆಯಾನೇ ಬೇಗಾನೆ ಹಿಡ್ಕಂಡು
ಕುದುರೆಯಾ ಸಿಂಗಾರ ಮಾಡಿದಾರೂ
ಅದಕೆ ಜೀನ ಬಿಗಿದಾರೂ
ಅದಕೆ ಕಡಿವಾಣ ಹಾಕಿದಾರೂ
ಚಿತ್ರಾ ಪೋಟಾ ತೆಗೆದಾರೂ
ಬೇಗಾದಿಂದ ಕುದುರೆಯಾ ಏರಿಕೊಂಡು
ದೇಸದ ಮೇಲೆ ಹೋಗುತ್ತಾರಲ್ಲಾ

ಅತ್ತಲಿಂದ ಎಲ್ಡಾಳು ದೊರೆಗಳು
ಅವರು ಕಾಳಾವತಿ ಐರಾವತಿ ದೊರೆಗಳು
ಅವರಿಬ್ಬರೂ ಅಣ್ಣ ತಮ್ಮಂದಿರು
ನಮಗೆ ತಕ್ಕಾದ ಹೆಣ್ಣು ಸಿಕ್ಕಲಿಲ್ಲಾ
ನಾವು ದೇಸದ ಮೇಲೆ ಹೋಗಾನ
ನಮಗೆ ತಕ್ಕಾದ ಹೆಣ್ಣು ಮಕ್ಕಳು
ಹುಡುಕಿ ನಾವೇಯಾ ತರುವಾನಾ
ಹಂಗಂತಾ ಅವರೂವೇ ಬತ್ತಾರೆ

ಇತ್ತಲಿಂದ ಮಂತ್ರಿಯೂ ಹೋಗ್ತಾರೆ
ಅವರಿಗೆ ಮಂತ್ರಿ ಸಲಾಮು ಕೊಡುತ್ತಾರೆ
ಮಂತ್ರೀಗೆ ಅವರು ಸಲಾಮು ಕೊಡುತ್ತಾರೆ
ಅವರೂ ಮೂರು ಜನಾರು ಮಾತನಾಡುತಾರೆ
ನಿಮ್ಮದ್ಯಾವ ಪಟ್ಟಣ ದೊರೆಗಳಿರಾ
ಯಾವ ಕಾರ‍್ಯಕ್ಕೆ ಹೋಗುತ್ತೀರಿ
ನಮ್ಮದು ನೀಲಾವತಿಯ ಪಟ್ಟಣ
ನೀಲಾವತಿಯ ದೊರೆಗಳಿಗೆ
ಬುದ್ಧಿವಂತ ಮಂತ್ರಿ ಪರಧಾನಿ
ನಮ್ಮ ನೀಲಾವತಿಯ ದೊರೆಗಳಿಗೆ
ಎಡಾಳು ಹೆಣ್ಣುಮಕ್ಕಳೂ

ಅವರಿಗೆ ತಕ್ಕಾದ ವರಗಳು ಸಿಕ್ಕಿನಿಲ್ಲ
ನಾ ದೇಸದಾ ಮೇಲೇ ಹೋಗುತೀನಿ
ನಿಮ್ಮದ್ಯಾವ ಪಟ್ಟಣ ದೊರೆಗಳಿರಾ
ನೀವು ಯಾವ ಕಾರ್ಯಕೆ ಹೋಗುತೀರಿ

ಕಾಳಾವತಿ ಐರಾವತಿ ಪಟ್ಟಣ
ನಾವು ಕಾಳಾವತಿ ಐರಾವತಿ ದೊರೆಗಳು
ನಮುಗೆ ತಕ್ಕಾದ ಹೆಣ್ಣು ಸಿಕ್ಕಲಿಲ್ಲಾ
ನಾವು ತಕ್ಕ ಪೆಣ್ಣಿಗೆ ಹೋಗುತೀವಿ
ನಮುಗೆ ನಿಮ್ಮಯಾ ದೊರೆಗಳು
ಹೆಣ್ಣಗಳ ಕೊಟ್ವಾರ ಪರಧಾನಿ
ನಮುಗೆ ದೊರೆಗಳ ಮಾತೇನಲ್ಲಾ
ನಂದೇಯು ಮಾತನಲ್ಲವೇ
ಹೆಣ್ಣ ಮಕ್ಕಳಾ ಗುರ್ತು ತಂದಿದ್ದೀಯು
ನೀ ಕೊಡು ಕೊಡು ಮಂತ್ರಿ ಪರಧಾನಿ
ಚಿತ್ರ ಪೋಟೊ ಕೊಡುತಾನೆ
ಚಿತ್ರ ಪೋಟೊ ಹಿಡುಕೊಂಡು
ಅವರೇನಂತಾ ಹೇಳುತಾರಲ್ಲಾ
ಈಕೆ ಯಾರೂ ಮಂತ್ರಿ ಪರಧಾನಿ
ಈಕೆ ಹಿರೆಯಾರು ದೊರೆಗಳಿರಾ
ಈಕೆ ಕಿರಿಯೊರೊ ದೊರೆಗಳಿರಾ
ಈಕೆಯು ಹೆಸರೇನೂ ಮಂತ್ರಿ
ಹಿರಿಯದ್ದೆ ಸರೇ ಹರಿಯಾಲ ದ್ಯಾವಮ್ಮ
ಕಿರಿಯಾರೇ ಪಾರ್ವತಮ್ಮಾ

ಇವರಿಬ್ಬರ್‍ದ್ದೆಣ್ಣ ಮಕ್ಕಳು
ತಕ್ಕಾದ ಹೆಣ್ಣು ಮಕ್ಕಳು
ನಾವು ಜೋಸರತಕ್ಕೆ ಹೋಗೋಣ
ನಾವೇ ನಗ್ಣನಾ ಕೇಳಿಸಾಣಾ
ನಮುಗೆ ಒಳ್ಳೆದೂ ಬಂದಾರೀಗ
ನಾವು ನಗ್ಣನ ಆಗುತೀವಲ್ಲಾ
ಇವರು ಮೂರು ಜನರೂವೇ
ಜೋಯ್ಸರತಾಕೆ ಹೋಗುತಾರೆ

ಜೋಯ್ಸ ಸುಬ್ಬಯ್ಯನವರಿಗಾ
ನೀರ ಮೀದು ಶಿವಪೂಜೆ ಮಾಡುತಾರೆ
ಇಸರ ಮುಖುವ ಕಂಡವರೀಗಾ
ಬಗ್ಗಿ ಸಲಾಮು ಕೊಡುತಾರೆ
ಪಂಚವಾನೆ ವದರೀ ಹಾಸುತಾರೆ
ಯಾವ ಪಟ್ಟಣದ ದೊರೆಗಳಿರಾ
ಯಾವ ಕಾರ್ಯಕೆ ಬಂದೀರಿ

ನಮ್ಮದು ನೀಲಾವತಿ ಪಟ್ಟಣ
ನಮ್ಮದು ಕಾಳಾವತಿ ಐರಾವತಿ ಪಟ್ಟಣ
ನೀವು ಚಂದಾಗಿ ನೋಡ್ಬೇಳಿ ಐನಾರೆ
ಪೂಜೆಯಾನೇ ಮಾಡುತಾರೆ
ಹಣವಾನೇ ಕೊಡುತಾರೆ
ಐನಾರು ಪಂಚಾಗಸನಾ ತೆಗೀತಾರೆ
ಪಂಚಾಂಗ ಪೂಜೆ ಮಾಡುತಾರೆ
ಅವರೇನಂತ ಕೇಳುತಾರಲ್ಲಾ
ಹೆಣ್ಣಿನಾ ಹೆಸರೇನು ದೊರೆಗಳಿರಾ
ಗಂಡಿನಾ ಹೆಸರೇನು ದೊರೆಗಳಿರಾ
ಹಿರಿಯರ ಹೆಸರ ಹರಿಯಾಲ ದ್ಯಾವಮ್ಮ
ಕಿರಿಯರ ಹೆಸರು ಪಾರ್ವತಮ್ಮ
ಹಿರಿಯರ ಹೆಸರು ಕಾಳವತಿ ದೊರೆ
ಕಿರಿಯರ ಹೆಸರು ಐರಾವತಿ ದೊರೆ
ಐನಾರು ಪಂಚಾಂಗ ಪೂಜೆಯ ಮಾಡಿ
ಕಟ್ಟಿ ಹಿಡಿಪೇನಂತಾ ಹೇಳುತಾರೆ
ಹರಿಯಾಲ ದ್ಯಾವಮ್ಮ ಗಂಡಾಗ
ಧಾರೆ ಹಟ್ಟೇಲಿ ಮರಣ ಬರುತಾವೆ
ಹಾರವಯ್ಯ ಗುಟ್ಟಾಸೆಗೊಡಲಿಲ್ಲ
ಹೆಣ್ಣಾರೆ ಸಾಯ್ಲಿ ಗಂಡಾರೆ ಸಾಯ್ಲಿ
ನಮಗೆ ಪೂಜೆಯಾನೇ ಹಣ ಬರ್ಲಿ

ನಿಮ್ಮ ಹಾದಿ ಸಕುನ ಬೀದಿ ಸಕುನ
ಚಂದಾಗವೇ ದೊರೆಗಳಿರಾ

ಬುಧುವಾರ ಚಪ್ಪರ ಗುರುವಾರ ಧಾರೆ
ಸಮೀಪಕೆ ನಗುನ ದೊರೆಗಳಿರಾ
ಬುಧುವಾರ ಚಪ್ಪರ ಗುರುವಾರ ಧಾರೆ
ಸಮೀಪಕೆ ನಗುನ ದೊರೆಗಳಿರಾ
ಒದಗಿ ಬಂದೈತೆ ದೊರೆಗಳಿರಾ
ಈ ನಗ್ಣನ ಬಿಟ್ಟಾರೆ ದೊರೆಗಳಿರಾ
ಇನ್ನು ಮೂರು ವರ್ಷ ನಗ್ಣನಾ ಇಲ್ಲಾ

ಬಂದ ನಗ್ಣನ ಹಿಂದಕ್ಕಿಡಬೇಡಿ
ಒಂದು ಗುರುತಾ ಮಾಡಿಕೊಡಿರಿ ನೀವು
ಗುರುತ ಮಾಡಿಸಿಕೊಂಡವರು
ಒಂದು ಸಲಾಮು ಕೊಡುತಾರೆ
ನಾವು ಹೋಗಿ ಬರುತ್ತೀವಿ ಐನಾರೆ
ನೀವು ಧಾರೆ ಮೂರ್ತಕೆ ಬರಾಬೇಕು
ಆಗಲಾಗಲೀ ಕೇಳಿ ದೊರೆಗಳಿರಾ
ನೀವು ಹೋಗಿ ಬನ್ನೀ ದೊರೆಗಳಿರಾ

ಅವರು ಊರಿಂದೀಚೆಗೆ ಬರ್ತಾರೆ
ಅವರೂ ಮೂರೂ ಜನರೂ ಸೇರಿಕೊಂಡು
ಮೂರು ಮಾತನ್ನಾಡುತವರಲ್ಲಾ
ನಾವೇನೂ ಕೊಡಬೇಕು ಪರಧಾನಿ
ಬೇಗ ಬೇಗ ಹೇಳು ಮಂತಾರಿ
ನಾವೇನೂ ದುಡ್ಡಿಗ್ಹೆಣ್ಣ ಮಾರೊರಲ್ಲಾ
ನಾವು ಧರ್ಮ ಕಲ್ಯಾಣ ಮಾಡುತೀವಿ
ಹೆಣ್ಣಿಗೆ ತಕ್ಕಾವ ಲಿಂಗ ತಕ್ಕೊಂಡು
ನೀವು ಧಾರೆ ಮೂರ್ತಕ್ಕೆ ಬರಬೇಕು
ನಿಮ್ಮಯಾನೇ ಚಿತ್ರ ಪೋಟಾನೆ
ನೀವು ನನಗೆ ಕೊಡಿ ದೊರೆಗಳಿರಾ
ಕಾಳಾವತಿ ಐರಾವತಿ ದೊರೆಗಳು
ಅವರ ಚಿತ್ರ ಪೋಟೋ ಕೊಡುತಾರೆ
ಚಿತ್ರಾ ಪೋಟೊ ತಕ್ಕೊಂಡ
ಶರಣು ಸಲಾಮು ಕೊಡುತಾರೆ

ನಾವು ಹೋಗಿ ಬರ್‍ತೀವಿ ಮಂತ್ರಿ
ನೀವು ಹೋಗಿ ಬನ್ನೀ ದೊರೆಗಳಿರಾ
ಹೊತ್ತಿಗೆ ಸರಿಯಾಗಿ ದೊರೆಗಳಿರಾ
ಸರಿಯಾಗಿ ಮೂರ್ತ ಮಾಡಬೇಕು
ನೀವು ಮದುವೆ ಕರಕಂಡು ಬರಬೇಕು
ಆಗಲಾಗಲಿ ಮಂತ್ರಿ ಪರಧಾನಿ
ನಾವು ಹೋಗಿ ಬರುತೀವಿ ಅನ್ನುತ್ತಾರೆ
ಅತ್ತಲಾಗಿ ಅವರು ಹೋಗುತಾರೆ
ಇತ್ತಲಾಗಿ ಮಂತರೀ ಬರುತಾರೆ

ನೀಲಾವತಿ ದೊರೆಗಳು
ಕುರ್ಚಿ ಮೇಲೆ ಕೂತಾನರಲ್ಲಾ
ಇವನ್ಹೋಗಿ ಸಲಾಮು ಕೊಡುತಾನೆ
ಬಂದಪ್ಪಾ ಮಂತ್ರಿ ಪರಧಾನಿ
ಏನಾತೂ ಮಂತ್ರಿ ಪರಧಾನಿ
ನೀನ್ಹೋದ ಕಾರ್‍ಯವೊ ಪರಧಾನಿ
ನಗ್ಣನಾ ಪತ್ರಿಕೆ ಮಡಿಗಾನೂ
ಚಿತ್ರಪೋಟೊ ಮುಂದಕೆ ಮಡಗ್ಯಾನು
ನೀಲಾವತಿ ದೊರೆಗಳೂ
ಪತ್ರಿಕೆಯ ಓದಿ ನೋಡುತಾರೆ
ಚಿತ್ರ ಪೋಟೊ ನೋಡ್ಯಾರು
ಭಾಳ ಸಂತೋಷವಾಯ್ತು
ಇವನಾರು ಮಂತ್ರಿ ಪರಧಾನಿ
ಇವನಾವ ಪಟ್ಟಣಾದವನು
ಬೇಗದಿಂದಾ ಹೇಳು
ಇವರ್‍ದು ಕಾಳವತಿ ಐರಾವತಿ ಪಟ್ಟಣ
ಇವರ ಹೆಸರು ಕಾಳಾವತಿ ಐರಾವತಿ
ಹಂಗುತಾವ ಹೇಳುತಾನಲ್ಲಾ
ಹತ್ತುಕಣ್ಣು ಹದಿನಾರು ಭುಜವಾಗಿ
ಹಿಗ್ಗಿ ಹೆಗ್ಗೋಡನಾದರೊ
ಪಟ್ಟಣಾವ ಸಾರಿಸುತ್ತಾರಲ್ಲಾ
ಪಟ್ಟಣಾವ ಗುಡಿಸುತ್ತಾರಲ್ಲಾ

ಕಂಡವರಿಗೇ ವಾಲೆ ಬರೆದಾವರೆ
ಕಾಣದವರಿಗೆ ಕಾಗದ ಬರೆದಾರೆ
ಈ ಆಕಾಸ ಚಪ್ಪರೆನ್ನುತಾರೆ
ಭೂಮಿಣನೇ ಹಸೆಯ ಹಾಕುತಾರೆ
ಏ ನೆಂಟರೆಲ್ಲಾ ಬಂದು ಸೇರವರೆ
ಬಾಯಿಗೆ ಬೇಕಾದ ಅಡಿಗೆ ಮಾಡ್ಸವರೆ
ಬಂದವರಿಗೇ ಊಟ ಕೊಡುತಾರೆ
ಊಟ ಉಣದವರಿಗೆ ವಿಳ್ಯವ ಕೊಡುತಾರೆ

ಬುಧುವಾರ ಸಾಯ್ನಕಾಲಕ್ಕೆ
ಮದುವೆ ಬತ್ತಾನೆ ಐತ್ರಲ್ಲಾ
ಇವರು ಮದುವೆ ಮನೆದುಂಬಿಸಿಕೊಂಡು
ಮದುವೆ ಊಟಾನೇ ಕೊಡುತಾರೆ
ವಿಳ್ಯೆ ಕೊಡೋರಿಗೆ ವಿಳ್ಯೆ ಕೊಡುತಾರೆ
ಗಂಡು ದಿಬ್ಬಣ ಹೋಗುತಾವೆ
ಅವಳಾಗಲೇ ಹರಿಯಾಲ ದ್ಯಾವಮ್ಮಾ
ನೂರೊಂದು ಕಿಟಕೆಯಾ ಒಳಗೆ
ಬಗ್ಗಿ ಬಗ್ಗೀ ನೋಡುತ್ತಾಳಲ್ಲಾ
ನನ್ನ ತಂಗೆ ಗಂಡ ಹೆಂಗಸನಂತಾ
ಬಾಗೀ ನೋಡುತ್ತಾಳಲ್ಲಾ
ನನ್ನ ತಂಗಿಗೆ ತಕ್ಕ ಪುರುಸ ವೈದುನ
ಅವರಿಗೆ ತಕ್ಕ ಸತೀ ನನ್ನ ತಂಗೇ
ಈ ತಬ್ಸ ನೀಸಿ ಗಂಡಾನ ಪಡೆದುಕ್ಕೆ
ತಕ್ಕಾದ ಗಂಡಾನೇ ಸಿಕ್ಕಿದರು

ನೂರೊಂದು ಕಿಟಕಿ ಒಳಗೆ
ಪಾರ್ವತೀ ಬಗ್ಗಿಯೇ ನೋಡುತಾಳೆ
ನಮ್ಮ ಅಕ್ಕನಿಗೆ ಗಂಡ ಹೇಗಾ ಸೋವರೆಂದು
ಬಗ್ಗೀ ಬಗ್ಗೀ ನೋಡುತ್ತಾಳಲ್ಲಾ
ನಮ್ಮ ಅಕ್ಕನ ತಕ್ಕ ಪುರುಸ ನಮ್ಮ ಭಾವ
ಅವರಿಗೆ ತಕ್ಕ ಮಡದಿ ನಮ್ಮ ಅಕ್ಕಾ
ತಬ್ಸ ಗಂಡ ಕೂಡಿದುದಕ್ಕೆ

ತಕ್ಕಾದ ಎಣಿಯೋ ಸಿಕ್ಕೈತೀ
ಮಾತನಾಡಿಕೊಂಡು ಮಾಳಿಗೆಲವರೆ

ಅವರು ಶಾಸ್ತ್ರ ಸೂಸ್ರನೇ
ಬೇಗದಿಂದಾ ಶಾಸ್ತ್ರ ತೀರಿಸ್ತಾವರೆ
ಅಕ್ಕನ ಚಪ್ಪರ ಮುಂದ್ಲ ಬಾಗ್ಲಲ್ಲೀ
ತಂಗಿ ಚಪ್ಪರ ಹಿಂದ್ಲ ಬಾಗ್ಲಲ್ಲೀ
ನೀವು ಹೊತ್ತುನಾಗುತ್ತಂತ
ಧಾರೆಗೇ ನಿಲ್ಲಿಸವರಲ್ಲಾ
ಅರ್ಧ ಧಾರೆಯನಾಗೈತಿ
ಅರ್ಧ ಧಾರೇನಾಗಿಲ್ಲ
ಕಾಳಾವತಿ ದೊರೆಗಳಿಗೆ
ಅಂಗಟ ಸಂಗಟ ಬರುತಾವೆ
ತಾಳಾನಾರೇನೊ ತಡೆಯನಾರೇನು
ಓಡಿ ಬನ್ನಿರೀ ಗೆಣೆಕಾರರೆ
ನಾ ಸಾಯ್ತೀನಿ ಬೇಯ್ತಿನಿ ಅನ್ನುತಾನೆ
ಕುಟ್ಟಿ ಕುಟ್ಟಿ ಬಾಯಿ ಬಡಿಯತಾನೆ
ಅಲ್ಲಿದ್ದ ಸಭೆಯ ಜನರೆಲ್ಲಾ
ಅವನಿಗಾನೆ ಸೆಕೆಯಾ ಬೀಸುತಾರೆ
ಅವನಿಗೆ ನೀರಾನೇ ಕುಡಿಸುತಾರೆ
ತಾಳನಾರೇ ನನ್ನಯ ಗೆಣೆಕಾರರೆ
ತಡೆಯನಾರೆ ಗೆಣೆಕಾರರೆ
ನನಗೆ ಅಂಗಟ ಸಂಗಟ ಬರುತಾವೆ
ನಾ ಸಾಯ್ತೀನಿ ಬೇಯುತೀನೀ
ಅಕ್ಕವ್ವ ಇಕ್ಕವ್ವ ಲಿಂದೆನತ್ತಿಗೆ
ಅವನ ಕತ್ತಿನ ಕಳಸ ಹಿಂದಕ್ಕೆ ಮುರಿಯಿತೊ
ಅಲ್ಲಿಯ ಸಭೆಯ ಜನರೆಲ್ಲಾ
ಕೊಳ್ಳಕ್ಕೆ ಲಿಂಗ ಬೇಗ ಧರಿಸಾರೂ
ಅವನ ಜೀವವೇ ಹೊಂದಿ ಹೋಯ್ತಲ್ಲಾ
ಅವನ ತಂದು ಜಗಲೀಗೆ ಮಲಗ್ಸಾರು
ಹಿತ್ಲ ಬಾಗ್ಲಿಗೆ ಗುಟ್ಟಾ ಕೊಡಲಿಲ್ಲಾ
ಅವರು ಹಿತ್ತಲ ಬಾಗಿಲಲ್ಲೀ

ಪಾರ್ವತಿಯು ಧಾರೆ ಎರೆದಾರೂ
ಐರಾವತಿಯಾನೇ ಪಟ್ಟಣಕ್ಕೆ
ಮದುವೆ ಹೊಂಡ್ಸಿ ಬೇಗಾನೇ ಕಳಿಸವರೆ

ಅವಳಾಗಲೇ ಹರಿಯಾಲ ದ್ಯಾವಮ್ಮಾ
ಹಾಡಿಕೊಂಡು ದುಃಖನಾ ಮಾಡಃತ್ತಾಳೆ
ತಬ್ಬ ನೀಸಿ ಗಂಡನ ಕೂಡಿದಕ್ಕೆ
ಚಪ್ಪರದಟ್ಟೇಲಿ ಗಂಡನ ತಿಂದಕಂಡೆ
ಹೇ ಏಳೇಳೀ ನನ್ನ ದೊರೆಗಳಿರಾ
ಏಟೊತ್ತೂ ಸುಖ ನಿದ್ರೆ
ಅವಳ ಗಂಡನ ಮುದ್ದಾನೇ ಆಡ್ತಾಳೆ
ಅವನಿಗಾನೇ ಮುತ್ತನೇ ಕೊಡುತಾಳೆ
ನನ್ನ ಹಣೆಯು ಬರೆದಾಳ ದಂಡೇ ಹರಿಯಾಲಿ
ಹುಟ್ಟಿದಾ ಗಳಿಗೇಲಿ ತಾಯಿ ತಿಂದುಕೊಂಡು
ತಾಯಿ ತಿಂದುಕೊಂಡು ತಬ್ಬಲಿಯಾದೇನು
ಕೂಡಿದಾ ಗಳಿಗೇಲಿ ಗಂಡನಾ ತಿಂದುಕೊಂಡು
ಮುಂಡೆ ಬಾಳೆ ನೀಸೀನೊ

ಏಳೇಳಿ ನನ್ನಾಯ ದೊರೆಗಳೆ
ಏಟೊತ್ತು ಸುಖ ನಿದ್ರೆ
ನಾ ಹಣ್ಣಾ ತಂದೀನಿ
ನಾ ಹಾಲ ತಂದೀನ್ನಿ ದೊರೆಗಳಿರಾ
ನಾ ಕೆಟ್ಟೇ ಕೆಟ್ಟೇ ದೊರೆಗಳಿರಾ
ಎದ್ದು ಮಾತಾಡು ದೊರೆಗಳಿರಾ
ನಿಮ್ಮ ಕಟ್ಟಿದ ಕಂಕಣ ಕೈಲವಲ್ಲಾ
ಸೂಡಿದಾ ಬಾಸಿಂಗ ಹಣಿಯಲ್ಲಪಲ್ಲಾ
ಏಟೊತ್ತು ಸುಖನಿದ್ರೆ
ಎದ್ದು ಮಾತಾಡು ಮುದ್ದು ದೊರೆಯೆ
ನಾ ಮುಂಡ ಬಾಳೆ ನೀಸೀನೊ
ನನ್ನ ಸರಿಸಮದವರೆಲ್ಲಾ
ಆಡಿಕಂಡು ನಗುತಾರೆ ದೊರೆಯೇ
ಹೇ ಸಾಪಯಾನೇ ತರುಲಾಗೀ

ಕಾಳವತಿ ಪಟ್ಟಣವೇ ಹಾಳುಬಿತ್ತೂ
ಹಂಗಂತ್ಹೇಳಿ ದೊರೆಗಳೇ ನೀವು ಕೇಳಿ
ಜನಗಳು ನಗಾಡುವರಲ್ಲಾ
ನನಗಿಂತ ಕಿರಿಯೋಳು ನನ ತಂಗಿ
ಗಂಡಾನ ಹಿಂದಗೊಟಿ ಹೋದಾಳು
ನಾನ್ಯಾರ ಹಿಂದುಗೊಟಿ ಹೋಗಾಲಿ

ಏಳೇಳೀ ದೊರೆಗಳಿರಾ
ನಾ ಮುಂಡೆ ಬಾಳನೀಸೇನು
ಮೂರು ದಿನಾ ನಾ ತಿರುಗಲಾರೇನೂ
ಹಣ್ಣು ತಂದಿದ್ದೇನೆ ದೊರೆಗಳಿರಾ
ಹಾಲ ತಂದಿದೀನಿ ಕುಡಿಯೇಳಿ ದೊರೆಗಳಿರಾ
ನಾವಾಚಿಂದೀಜೆಗೆ ಒಂದು ದಿನ ತಿರುಗಲಿಲ್ಲ
ಅಕ್ರ ಪ್ರೀತಿಯಿಂದೂ ಒಂದೀನ ಕಳೆಯಲಿಲ್ಲ
ಜೊತೆಯಲ್ಲಿ ಕೂರಲಿಲ್ಲ
ಒಂದಿನ ವಿಳ್ಯೆ ಮೆದ್ದಲಿಲ್ಲಾ
ಏಳೇಳಿ ನನ್ನಯ ದೊರೆಯಗಳಿರೆ
ಏಟೊತ್ತು ಸುಖನಿದ್ರೆ

ಕಟ್ಟಿದ ಕಂಕಣ ಕೈಯಲ್ಲವಲ್ಲಾ
ಸೂಡಿದ ಬಾಷಿಂಗ ಹಣೆ ಮೇಲವಲ್ಲಾ
ಇಟ್ಟ ಸಾಸಿವೆ ಮುಂಡೆಯ ಮೇಲಾವೆ
ನನ್ನ ಹಣೆ ಬರೆದಾಳ ದಂಡೆ ಹರಿಯುಲಿ
ಏ ನನ್ನ ಮುಖ ಚೆಂದಾಗಿ ನೋಡಲಿಲ್ಲ
ನನ್ನ ಕೈಯಲ್ಲಿ ನೀರಾನೇ ಕುಡಿಯಲಿಲ್ಲ
ಅವಳು ಹಂಗಾಂತವು ದುಃಖ ಮಾಡುತಾಳೆ
ಅಲ್ಲಿದ್ದ ಸಭೆಯಲ್ಲಿದ್ದಾವರೊ
ಅವಳಾ ಗೋಳ ನೋಡಲಾರರೊ

ನೀಲಾವತಿಯಾನೇ ದೊರೆಗೊಳು
ಮಗಳಾನೇ ಮುದ್ದಾಡುತಾರಲ್ಲಾ
ಸುಮ್ಮನೀರೇ ಕಂದಾ ನಾನೀಗ
ನಿನ್ನ ಗೋಳ ಕಣ್ಣಿಂದ ನೋಡಲಾರೇ

ನಮ್ಮ ನೀಲಾವತಿಯು ಪಟ್ಟಣವಾ
ನಾನೇಯೇ ಪಟ್ಟಕಟ್ಟತೀನೀ
ಪಟ್ಟಣವಾ ಆಳಿಕೊಂಡು ನನ್ನ ಕಂದಾ
ಸುಖವಾಗಿ ಬಾಳೀ ನನ ಕಂದಾ
ನಿನ್ನ ಹಣೆ ಬರೆದೋಳ ದಂಡೆ ಹರಿಯುಲಿ
ನಿನ್ನ ಗೋಳ ಕಣ್ಣಿಂದ ನೋಡಲಾರೆ

ನಿಮ್ಮ ಪಟ್ಟಣವ ನಾನಾಳಿದರೆ
ಪಾಪೀ ನನ್ನ ತರಲಾಗಿ
ಪಾಪಿ ನನ್ನಾವ ತರಲೂ
ಕಾಳಾವತಿಯು ಪಟ್ಟಣ
ಹಾಳು ಬಿದ್ಹೋಯ್ತಲ್ಲಾ ತಂದೆ
ಆಳೋರು ದಿಕ್ಕಿಲ್ಲಾ ತಂದೆ
ನನ್ನ ಸರಿಸಮುಗಾರೆಲ್ಲಾ
ಆಡಿಕೊಂಡು ನಗತಾರೆ

ರಾಮು ರಾಮಾ ರಾಮಾ
ರಾಮು ರಾಮುನೇ ರಾಮುಚಂದ್ರಸ್ವಾಮಿ
ರಘು ರಾಮಾ

ಮುಂಡೆ ನಾನಾಗಲಾರೇ
ಜನರೆಲ್ಲಾ ಅವಳ ಸುಮ್ಮನಿರಿಸಿ
ಅವನ ಮೈ ತೊಳೆತಾರೇ
ಅವನ ಕಟ್ಟೆ ಕುರಿಸಿ
ಅವನ ಹೊತ್ತುಕಂಡು ಹೋಗುತಾರೆ
ಅದೇ ಉದ್ಯಾನದಲ್ಲೀ ದಪ್ಪನಾ ಮಾಡುತಾರೆ
ಹರಿಯಾಲ ದ್ಯಾವಮ್ಮಾ ಕುಟ್ಟೆ ಬಾಯಿ ಬಡಿತಾಳೆ
ಕೆಟ್ಟೇ ಕೆಟ್ಟೇ ನಾನು ಮುದ್ದು ನನ್ನ ದೊರೆಯೆ
ಎದ್ದು ಮಾತನಾಡಿ ದೊರೆಗಳಿರಾ
ಅಲ್ಲಿದ್ದಾ ಜನರೆಲ್ಲಾ ಅವಳ ಸುಮ್ಮನಿರಿಸಿ
ಏಳಮ್ಮಾ ಅರಮನೆಗೆ ಹೋಗಾನೇಳು
ಅರಮನೆಗೆ ನಾನೀಗ ಬರೋಳಲ್ಲಾ
ಕಾಳಾವತಿ ಪಟ್ಟಣ್ಕ ಹೋಗುತೀನಿ

ಕಾಳಾವತಿ ದೊರೆಯು ಮಂತ್ರಿ ಪರಧಾನಿಯ
ಏನಂತಾ ಕರಿತಾಳೆ
ಬಾರೋ ಬಾರೋ ನೀ ಮಂತ್ರಿ ಪರಧಾನಿ
ನಿಮ್ಮ ದೊರೆ ಕುರೋ ಕುದುರೆ ಕೊಡು
ಕಾಲ ಕಣಬಾ ಬಾಲ ಕಾಣಬಾ
ಹಣೆ ಬಟಗಾ ಕುದುರೆ ತಂದು ಕೊಟ್ಟಾನೂ
ಅದರಾ ಕಾಲಿಗೇ ಶರಣು ಮಾಡುತಾಳೆ
ದ್ಯಾವಮ್ಮ ಏನಂತಾ ದುಃಖ ಮಾಡುತಾಳೆ
ನಿನ್ನ ಮೇಲೆ ಕೂರಂತ ದೊರೆಗಳೆಲ್ಲೋದರೂ
ಕಣ್ಣಿಗೆ ಕಾಣಾರು
ಅವಳು ದುಃಖವ ಮಾಡೋದ
ಕುದುರೆ ನೋಡ್ತೈತೆ
ಅವಳು ಬಲಗೈ ಹೆಗಲ ಮೇಲೆ
ದುಂಡ ಹೇರಿಕಂಡು
ಅನುಕೋಟಿ ದುಃಖ ಮಾಡ್ತೈತೆ

ನಡೀ ನಡೀ ಮಂತ್ರೀ
ನೀ ಮುಂದಕೆ ಪಟ್ಟಣಕ್ಕೆ
ನಾ ಹಿಂದಾಗಿ ಬರ್ತೀನಿ
ಕಾಳಾವತಿ ಪಟ್ಟಣಕ್ಕೆ ಮಂತ್ರಿ ಹೋಗುತಾನೆ
ದ್ಯಾವಮ್ಮ ಎಲ್ಲಿಗೆ ಹೋಗುತಾಳೆ
ಕುದುರೆ ಕಡಿವಾಣ ಕೈಯಲ್ಲಿಡಿಕಂಡು
ಕಾಳಾವತಿ ಪಟ್ಟಣಕ್ಕೆ ಹೋಗುತಾಳೆ

ಕಾಳಮ್ಮನ ದೇವಸ್ಥಾನಕ್ಕೆ ಹೋಗುತಾಳೆ
ಕಾಳಮ್ಮನ ಪೂಜೆಮಾಡ್ತಾಳೇ
ಅಡ್ಡಬಿದ್ದು ಉದ್ದಕ್ಕೇಳುತಾಳಲ್ಲ
ಕೇಳಿ ಕೇಳಿ ನಮ್ಮವ್ವ
ನಿನ್ನಂತೀ ನಾ ಹೆಣ್ಣಲ್ಲವೋ
ನಿನ್ನಂತೀ ನಾ ಹೆಣ್ಣಲ್ಲವೋ ತಾಯಿ
ನನ್ನ ಗೋಳ ಕಣ್ಣಲೀ ನೀ ನೋಡೇ ತಾಯಿ
ನನ್ನ ಸರಿಸಮಂದವರು ನೋಡಿಕೊಂಡು ನಗುತಾರೆ

ನಾ ಮುಂಡೆ ಬಾಳ ನೀಸನಾರೆ
ಮೂರು ದಿನ ಬಾಳನಾರೆ
ಸಾಕು ಮಾಡೇ ನನ ತಾಯಿ
ಕೂಡಿದಾ ಗಳಿಗೇಲಿ ಗಂಡನಾ ತಿಂದುಕೊಂಡೆ
ಹುಟ್ಟಿದಾ ಗಳಿಗೇಲಿ ತಾಯಿ ತಿಂದುಕೊಂಡೆ
ನನ್ನ ಗೋಳಾ ನೋಡೇ ನನ್ನ ತಾಯಿ

ಆಕೆ ಕಾಳವ್ಮನೋರು ನೋಡುತಾರೆ
ಅವರು ಮೂರು ಮಾತನೇ ಆಡುತಾರೆ
ನಿನ್ನ ಗೋಳ ನಾ ಕಣ್ಣಿಂದಾ ನೋಡಲಾರೆ
ನಿನ್ನ ನಾ ಕೊಲ್ಲಲಾರೇ ತಾಯೇ
ನಿನಗೆ ಗಂಡು ಮಗಿನ ಫಲ ಕೊಡ್ತೇನಿ
ಗಂಡು ಮಗಿನ ಫಲ ಕೊಡ್ತಿನೀ ನನ್ನ ಮಗಳೇ
ನೀ ಪಟ್ಟಣಾ ಆಳಿಕೊಂಡು ಸುಖವಾಗಿ ಬದುಕ್ಹೋಗೆ

ನನ್ನ ಸರಿಸಮದವರು ನೋಡಿ ನಗುತಾರೆ ಬ್ಯಾಡಾ
ಗಂಡ ಇಲ್ಲದಾವಳಿಗೆ ಗಂಡು ಮಗುವೆಂದು
ಜನರೆಲ್ಲಾ ಆಡಿಕೊಂಡು ನಗುವೋರೊ
ಖಂಡಿತಾಬ್ಯಾಡ ನನ ತಾಯಿ
ಲೋಕದಾ ನುಡಿಗಳಾ ಈ ಕಿವಿಯಿಂದ ಕೇಳನಾರೇ
ಮಕ್ಕಳ ಫಲವು ನಂಗೆ ಬ್ಯಾಡ ನನ ತಾಯಿ

ನಗುವೋರ ನಾನೀಗ ನೋಡತೀನಿ
ನಿನಗೆ ಗಂಡು ಮಗಿನ ಫಲ ಕೊಡುತೀನಿ
ನನ ಮಗಳೆ ಕಂದನ ಸಾಕೊಂಡು ಬದುಕೆ
ಗಂಡು ಮಗಿನ ಫಲ ಕೊಡುತಾಳೆ ಕಾಳಮ್ಮ
ಆಗಲೇ ದ್ಯಾವಮ್ಮ ಹೋಗುತಾಳೆ
ಕಾಳಾವತಿ ಪಟ್ಟಣಕ್ಕೆ ಹೋಗುತಾಳೆ ದ್ಯಾವಮ್ಮ
ಹೋಗ ಹಾದೀಲಿ ಸೂತಕಾದೆಳಲ್ಲಾ
ಗೌಡ್ಡೆಣ್ಣ ಮಕ್ಕಳು ನೀರ ಕಾಯಿಸುತಾರೆ
ಅವಳಿಗೆ ನೀರ ಮೀಯಸುತಾರೆ
ಅವಳಿಗದೇ ಗರ್ಭ ನಿಲುತ್ತೈತಿ

ಒಂದು ದಿನವೆಂದರೇ ಒಂದು ತಿಂಗಳಾದವೊ
ಒಂದು ತಿಂಗಳೆಂದರೆ ಎಲ್ಡು ತಿಂಗಳಾದವು
ಎಲ್ಡು ತಿಂಗಳೆಂದರೆ ಆರು ತಿಂಗಳಾದವು
ನಾಕು ತಿಂಗಳೆಂದರೆ ನಾಕು ತಿಂಗಳಾದವೊ

ತಂದನಾನೊ ತಾನಂದನಾ ತಂದೆ ನಾನು
ತಂದನಾನು ತಾನಂದ ನಾ

ಆರು ತಿಂಗಳಿಗೆ ದ್ಯಾವಮ್ಮ
ಆಚಿಂದೀಚೆಗೆ ತಿರುಗಲಾರಳೂ
ಹೇ ಏಳು ತಿಂಗಳಿಗೆ ದ್ಯಾವಮ್ಮ
ತುಂಬೀ ಬಂದೈತಲ್ಲಾ
ಹೊತ್ತಿಗೊತ್ತಿಗೆ ಬ್ಯಾನೆ ಬರುತವೆ
ಕತ್ತಿಯಲ್ಲಿ ಕಡಿದಂಗೆ ಆಗುತಾವೆ
ನಾ ಹಿಂದೆ ಕಂಡವಳಲ್ಲ
ನಾ ಯಾರಿಗಾನೇ ಹೇಳಿಲಿ ಶಿವನೆಂದು
ಕುಟ್ಟಿ ಕುಟ್ಟಿ ಬಾಯನೇ ಬಡಿತಾಳೆ
ಗಂಟೆಗಂಟೆಗೆ ಬ್ಯಾನೆ ಬರುತಾವೆ
ಚೂರಿಯಲ್ಲಿರಿದ್ದಂಗೆ ಆಗುತಾವೆ
ತಂದೆಗ್ಹೇಳಲಾಂತವಳೆ
ಗಂಡಗ್ಹೇಳಲಾಂತವಳೆ
ಕುಟ್ಟಿ ಕುಟ್ಟಿ ಬಾಯಾನೇ ಬಡಿತಾಳೆ
ಒಕ್ಕಳ ದುಃಖ ಮಾಡುತಾಳಲ್ಲಾ
ತಡೆಯಲಾರೆ ತಾಳಲಾರೇನು
ನಾ ಯಾರಿಗಾನೆ ಹೇಳಲಂತವಾ
ದುಃಖ ಮಾಡುತಾಳಲ್ಲಾ

ಕಂಡರು ಗೌಡಣ್ಣನ ಮಕ್ಕಳು
ಕೇಳು ಕೇಳು ಮಂತ್ರಿ ಪರಧಾನಿ
ನಮ್ಮ ತಾಯಿ ದೊರೆಸಾನಿ ಯಾರೂ
ಕಷ್ಟದಿಂದ ಗೋಳಾಡುತಾರೆ
ಓಡಿ ಬಾರೋ ಮಂತ್ರಿ ಪರಧಾನಿ
ಸೂಲಗಿತ್ತಿ ಸಂಗಮ್ಮನ

ಮಂತ್ರಿ ಕರೆದು ಬಾ ಹೋಗು
ಆಗ ಮಂತ್ರಿ ಓಡಿ ಹೋಗುತಾರೆ
ಸೂಲಗಿತ್ತಿ ಸಂಗಮ್ಮನ ಕರೆತಂದೂ
ಸೂಲಗಿತ್ತಿ ಸಂಗಮ್ಮ ಎಂಬುವರು
ಬೇಗದಿಂದಾ ಓಡಿ ಬಂದವರೇ
ಆಕೆ ಹರಿಯಾಲ ದ್ಯಾವಮ್ಮ
ಸೂಲಗಿತ್ತಿಯ ಕಾಲಾನೇ ಕಟ್ಟುತಾಳೆ
ತಡೆಯಲಾರೇನು ಅಮ್ಮಾ ಸೂಲಗಿತ್ತಿ
ತಾಯಿಲ್ಲದ ತಬ್ಬಲೀ ನಾನೋ
ನನ್ನ ಗೋಳ ನೋಡೇ ತಾಯೀ

ಕೇಳುಕೇಳು ದೊರೆಸಾನಿ ನನ್ನ ತಾಯೀ
ನಿಮ್ಮ ಹಣೇಲಿ ಬರೆದಿತ್ತೊ ನನ್ನ ತಾಯೀ
ನಿಮ್ಮಯಾನೇ ಕಷ್ಟವಾನೇ ನನ್ನ ತಾಯೀ
ನಿಮ್ಮ ಕಷ್ಟ ನಾನೇ ನೋಡುವೇನು
ಎಣ್ಣೆ ಮಂತುರಿಸೀ ಸೊಂಟಕೆ ತಿಕ್ಕುತಾಳೆ
ಗಂಡು ಮಗುವಿನ ಜನನವಾಯ್ತು
ಹೊಕ್ಕಳಾವ ಹೊತ್ತುಸುತಾರಲ್ಲಾ
ನೀರಾನೇ ಮೀಯ್ಸುತಾರಲ್ಲಾ
ಅವಳಿಗಾನೇ ನೀರಾನೇ ಮೀಯ್ಸುತಾರೆ
ಅವಳಿಗಾನೇ ಆರೈಖೆ ಮಾಡುತಾರೆ
ಸೂಲಗಿತ್ತಿ ಸಂಗಮ್ಮನವರು
ಮರಾದನೆ ಮರ್ಯಾದಿ ಕೊಡುತಾರೆ
ಹನ್ನೆಲ್ಡು ದಿನಕ್ಕಾವಳಾ
ಸೂತಗಾನೇ ಬೇಗಾವ ತೆಗೆದಾರು
ತಂದೆ ಹೆಸರ ಮಗಿಗೆ ಕರಿತಾರೆ
ಕಾಳಾವತಿ ದೊರೆಯೇ ಎಂದೂ
ಅಲ್ಲಿಗೇ ತಿಂಗಾಳೂ ತುಂಬಿದಾವು

ಹರಿಯಾಲ ದ್ಯಾವಮ್ಮನೀಗಾ
ತಂಗಿಮೇಲೆ ಗ್ಯಾನವಾ ಬಿದ್ದಾಳು
ಕಂದಗೇ ಎದೆಹಾಲು ಬರನಿಲ್ಲಾ

ನಾವು ಹುಟ್ಟಿದಾರು ಎಲ್ಡಾಳು
ಬೆಳದಾರು ಎಲ್ಡಾಳು
ನನ್ನ ಮುಖ ನನ ತಂಗೆ ನೋಡಲಿಲ್ಲಾ
ನನ ತಂಗೆ ಮುಖ ನಾ ನೋಡಲಿಲ್ಲಾ
ಬಾರೋ ಬಾರೋ ಮಂತ್ರಿ ಪರಧಾನಿ
ನೀವು ಐರಾವತಿ ಪಟ್ಟಣಾಕೆ
ನೀವು ಹೋಗಿ ಬಾ ಹೋಗಿ ಪರಧಾನಿ
ಆಗಲೆಯು ಮಂತ್ರಿ ಪರಧಾನಿ
ಸುಂಗಾರ ಆಗುತಾನಲ್ಲಾ
ಕೇಳು ಕೇಳು ಮಂತ್ರಿ ಪರಧಾನಿ
ನಿಮ್ಮೊಡೆಯು ದೊರೆಗಳು
ಅವರ ಅರಮನೇಲಿಲ್ಲದಿದ್ದರೂ
ನನ್ನ ತಂಗಿಯೂ ಕರೆಕಂಡೂ ಬಾರೊ
ಅವರು ಸುಂಗಾರವಾದರು ಮಂತ್ರಿ
ಅವರು ಕುದುರೆಯಾ ಏರಿದಾರೊ
ಐರಾವತಿ ಪಟ್ಟಣಕ್ಕೆ ಅವನೀಗಾ ಹೋಗುತಾನೆ

ಐರಾವತಿ ಪಟ್ಟಣದ ದೊರೆಗಳು
ಅರಮಲ್ಲಿ ಇಲ್ಲವಲ್ಲೊ
ಪಾರ್ವತಿ ಮುಖವನೇ ಕಂಡಾಳು
ಬಂದೇನೋ ಮಂತುರಿ ಪರಧಾನಿ
ನನ್ಮಕ್ಕ ಹರಿಯಾಲ ದ್ಯಾವನ್ನು
ಚಂದಾಗಿದ್ದಾಳೊ ಪರಧಾನಿ
ನಿಮ್ಮಕ್ಕ ಹರಿಯಾಲ ದ್ಯಾವನ್ನು
ಬಾಳವಾಗಿ ಚಂದಾಗನರಲ್ಲಾ
ನಿಮ್ಮ ಮೇಲೆ ಗ್ಯಾನ ಬಿದ್ದಾರೆ
ದುಃಖವಾನೆ ಮಾಡುತ್ತಾರಲ್ಲಾ
ನಿಮ್ಮ ಕರಕಂಡು ಬರಾಕ್ಕೆ
ನನ್ನಾವ ಕಳಿಸಾರೂ ನನ್ನ ತಾಯಿ

ಆ ಮಾತ ಕೇಳ್ಯಾಳು ಪಾರ್ವತಿ
ಮಂತುರಿಗೆ ಊಟ ಇಕ್ಕುತಾಳೆ

ತಾನೂ ಊಟ ಮಾಡುತಾಳೆ
ಸುಂಗಾರವ ಬೇಗನೆ ಆಗುತಾಳೆ
ಪಟ್ಟೆ ಉಟ್ಟು ಪುಟ್ಟ ಮುತ್ತು ಕಟ್ಟುತಾಳೆ
ಮಂಡೆ ಬಾಚಿ ಮಲ್ಲಿಗೆ ಮುಡಿದಾಳೂ
ಅವಳು ಮತ್ತೇನ ಮಾಡುವಳಲ್ಲಾ
ಗಂಡವುಳ್ಳರೀಗಾ ಘನಮನ ಕಣ್ಣಾಲಿ ನೋಡಿರೊ
ಕಾಲಿಗಾನೇ ಜೋಡಾನೆ ಮೆಟ್ಟುತಾಳೆ
ಭೂಛತ್ರಿಯು ಹಿಡಿದಾಳೂ
ಗಂಡ ಕೊರ ಕುದುರೆಯಾ ಹಿಡಿದಾಳು
ಅದಕೆ ಸುಂಗಾರವ ಮಾಡಿದಾಳೂ
ಆಗಾ ಸುಂಗಾರವಾದಳಲ್ಲಾ
ಕುದುರೆಯ ಮೇಲೆ ಕೂತಳಲ್ಲಾ
ಕುದುರೆಯಾನೇ ಏರ್ಯಾಳು ಪಾರ್ವತಿ
ಅಕ್ಕನಾ ಪಟ್ಟಣಕ್ಕೆ ಬರುತ್ತಾಳೆ

ಅವಳೂ ಬಂದೇನ ಹೊತ್ತಿಗೆ
ಏನ ಮಾಡ್ಯವ್ಳೆ ದ್ಯಾವಮ್ಮ
ಸಣ್ಣಕ್ಕಿ ಹಾಕಿ ಬಾನವ ಬೇಯ್ಸಿ
ನಾ ತಂಗೆ ಬರ್‍ಲಿ ಊಟಾವ ಮಾಡಾನಾ
ಕಂದಗೆಣ್ಣೆ ಒತ್ತೆವಳೇ
ಅದಕೆ ನೀರಾ ಮಿಾಯ್ಸವಳೇ
ತೊಟ್ಟಿಲಿಗ್ಹಾಕಿ ತೂಗಾನೇ ಮನಿಗ್ಸವಳೆ
ತಂಗೆ ಬರೋ ದಾರೀ ನೊಡುತಾ
ಆಗ ಪಾರ್ವತಿ ಅವಳಾಗ ಅಕ್ಕನ ಪಟ್ಟಣಕೆ ಹೋದಾಳು
ತಂಗೆ ಮುಖವಾ ಬೇಗ ಕಂಡಾಳು
ತಂಗೇ ಸುಖವಾಗ ಬದುಕಾಲಿ
ಸುಖವಾಗಿ ಬದುಕಾಲಿಯಂತಾ
ಸಂತೋಸವಾ ಪಡುತಾಳಲ್ಲಾ
ಬಾಗಲಿಗೆ ಹೋದಾಳು ಪಾರ್ವತಿ
ಕುದುರೆ ಬೇಗನೇ ಇಳಿದಾಳು
ಪನ್ನೀರ ತಂದು ಪಾದ ತೊಳೆದಾಳು
ಪಟ್ಟೆ ಮಂಚ ಬೇಗನೆ ಪದರಿಹಾಸಿ

ತಂಗೆಯಾ ಮುದ್ದಾನಾಡುತಾಳೆ
ಬಂದೇ ಬಂದೆಯಾ ಪಾರ್ವತಿ
ನಾ ನಿನ್ನ ಮುಖ ನೋಡಿ ಏಸು ದಿನಾವೊ
ನನ್ನ ಮುಖ ನೋಡಿ ಏಸು ದಿನವೊ
ನಿನ್ನ ಪತಿಯು ಐರಾವತಿ ದೊರೆಯೂ
ಚಂದಾಗನರೇನೇ ತಂಗ್ಯಮ್ಮ
ಚಂದಾಗನರಕ್ಕಯ್ಯ
ಅವಳು ಹಂಗತಾವ ಹೇಳುತಾಳಲ್ಲಾ
ನೀ ಇಲ್ಲೇ ಕೂತಿರೂ ತಂಗ್ಯಮ್ಮ
ನಾ ಊಟವಾ ಮಾಡಿಲ್ಲ ತಂಗ್ಯಮ್ಮ
ನಾ ನೀರಾ ಮಿಾದೆಯೇ ಬರುತೀನಿ
ನಾವಿಬ್ಬರೂ ಊಟವಾ ಮಾಡಾನಾ
ಆಗಲಾಗಲೀ ಹೋಗಕ್ಕಯ್ಯ
ನೀ ನೀರಾನೆ ಮಿಾದೆ ಬಾ ಹೋಗೂ

ಅವಳು ಬಚ್ಚಲಿಗ್ಹೋಗಿ ಮಿಾಯಿತಾಳೆ
ಮಗುವೇ ಗರಗರನೆ ಅಳುತ್ತೈತೀ
ಪಾರ್ವತಿ ಏನಂತ ಹೇಳುತಾಳೆ
ಸಣ್ಣ ಮಗುವೇ ಅಳುವೊದೊ
ಇದುವೆನಾ ಕಾಣೇ ಅಂತ
ಒಳಿಕೆ ಎದ್ದೆಯಾ ಹೋಗುತಾಳೆ
ಇದು ಗರಗರನೆ ಮಗು ಅಳುತ್ತೈತೆ
ತೊಟ್ಟಿಲಲ್ಲಿ ಮಲಗೀ ಐತಲ್ಲಾ
ಮುಸುಗಾ ಬೇಗನೇ ತಗೆದಾಳು
ಚಂದಾಗಿ ಮಗುವಾನೆ ನೋಡುತಾಳೆ
ಗಂಡಾ ಇದ್ದಾವಳಿಗೆ ಗಂಡುಮಕ್ಕಳಿಲ್ಲಾ
ಗಂಡ ಇಲ್ಲದೊಳಿಗೆ ಗಂಡುಮಗು ಐತೆ
ಗಂಡ ಇಲ್ಲದೊಳಿಗೆ ಮಗು ಐತೆಂದು
ಚಿಲಚಿಲನೆ ನಗುತಾಳೆ ಕುಂಡಿ ಬಡ್ಕಂಡು
ಎಷ್ಟು ಚಂದಾಗಿರೋದು ನಮ್ಮ ಕಾಳ ದೊರೆಯ್ಹಂಗೆ
ನಮ್ಮ ಭಾವನಸದ್ಹಂಗೆಯೇ ಇರೋದು
ಬಾಳೀ ಬದುಕಿದಾ ಕಾಲಕ್ಕೆ ನಾ ಒಂದುದಿನಕ್ಕೆ

ಒಂದು ದಿನವಾದರೂ ಆಳಬೇಕೆಂದು
ಹಟವಾ ತೊಡುತಾಳಲ್ಲಾ
ಈ ಮುಂಡೆಮಗನ ನೋಡಲಾರೆ
ಮೆಟ್ರನಾರೇ ಚಿಂಗುಟತಾಳಲ್ಲಾ
ಈ ಮಗಿನ ನಾಳ ತುಂಡೇ ಆಯ್ತಲ್ಲಾ
ಆದರ ಜೀವವೇ ಹೊಂಟೋಯ್ತುಲ್ಲಾ

ಈವಳು ಈಚಿಗೆ ಬರುತಾಳೆ
ಕುದುರೆಯಾನೆ ಏರಿ ಪಾರ್ವತಿ
ಅವಳ ಪಟ್ಟಣಕ್ಕೆ ಹೋಗಿಯಾಳು
ಆಕೆ ಹರಿಯಾಲ ದ್ಯಾವಮ್ಮ
ನೀರ ಬೇಗಾನೇ ಮಾದಾಳೂ
ತಂಗಿ ಪಾರ್ವತಿಯುಂತಾ
ಅವಳು ಕರೆಯುತಾ ಬರುತಾಳೆ
ಅವಳ ಆಗಲೇ ಹರಿಯಾಲ ದ್ಯಾವಮ್ಮ
ಅಂಗಳಾವ ಹತ್ತುತಾಳಲ್ಲಾ
ಮಗಿನ ತೊಟ್ಟಿಲಾ ನೋಡುತ್ತಾ
ರಗುತ ಹರಿದೇ ನಿಂತೈತೆ
ತೊಟ್ಟಿಲ ಮುಸುಗಾನೇ ತಗುದಾಳು
ಮಗಿನ ಮುಖವಾನೆ ನೋಡಿಯಾಳು
ನಾಳ ತುಂಡೇನಾಗೈಯ್ತೆ
ಮಗಿನ ಜೀವವೇ ಇಲ್ಲವಲ್ಲಾ
ಕುಟ್ಟಿ ಕುಟ್ಟಿ ಬಾಯನ್ನೇ ಬಡಿತಾಳೆ
ಕೆಟ್ಟೇ ಕೆಟ್ಟೆ ನನ್ನ ತಂಗೆ

ರಾಮ ರಾಮೋ ರಾಮಾ ರಾಮ
ರಾಮನೆ ರಾಮಚಂದ್ರಸ್ವಾಮಿ ರಘುರಾಮೋ

ಆಸೆ ಬಿದ್ದು ನಾನು ತಂಗಿ ಕರೆದೇನೊ
ನನಗಿದಕ್ಕ ಅನ್ಯಾಯ ಮಾಡಿದೇನೊ
ನಾ ಬಾಳಿ ಬದುಕದಾ ಕಣ್ಣಲಿ ನೋಡದಾಂಗೆ
ಅನ್ಯಾಯ ಮಾಡಿದೇನೆ ತಂಗಮ್ಮಾ
ಮಗುವಾ ತೆಗೆದಾಳು ತೊಡೆಮೇಲೆ

ಹಾಕಿಕೊಂಡು ಹಾಡಿ ಅಳುತಾಳೆ ತಾಯಿ ದ್ಯಾವಮ್ಮ
ಗಂಡಂದಿರುವ್ರೊರಿಗೆ ಗಂಡಂದಿರಾ ಸಿರಿ
ಮಕ್ಕಳುಳ್ಳೊರಿಗೆ ಮಕ್ಕಳಾ ಸಿರಿ
ನಾನ್ಹೆಂಗೆ ಬದುಕಾಲಿ
ಎಳ್ಹೇಳು ನನ ಕಂದ ಏಟೊತ್ತು ಸುಖನಿದ್ರೆ
ಎದೆಹಾಲ ಸೀ ಕುಡಿ ನನ ಕಂದ
ಮಗುವಾ ಮುದ್ದಾಡುತಾಳೆ
ಅನುಕೋಟಿ ದುಃಖವಾ ಮಾಡುತಾಳೆ
ಮುದ್ದಾನಾಡುತಾಳೆ ಮುತ್ತಾನೆ ಕೊಡುತಾಳೆ
ಅನುಕೋಟಿ ದುಃಖವಾ ಮಾಡುತಾಳೆ
ಚಿನ್ನದ ತೊಟ್ಟಿಲು ರನ್ನದ ಜೋಕೆಯಾ
ಬೇಗಾದಿಂದ ತಗುದಾಳೂ ದ್ಯಾವಮ್ಮ
ಪಟ್ಟಿಯನವಳು ಹಾಸುತಾಳೆ
ಸತ್ತಮಗುವಾನೆ ಮನಿಗ್ಸಿತಾಳೆ ದ್ಯಾವಮ್ಮ
ಅದಕೆ ಪಟ್ಟಿ ಹೊದ್ದಸ್ಯಾಳು ದ್ಯಾವಮ್ಮ
ಅದನ ಹೊತ್ತುಕೊಂಡು ಹೋಗುತಾಳೆ

ಕಾಳಮ್ಮನ ದೇವಸ್ಥಾನಕೆ ಹೋದಾಳು
ತೊಟ್ಟಿಲಾ ಇಳಿಗ್ಯಾಳು ದ್ಯಾವಮ್ಮ
ಕಾಳಮ್ಮನ ಪೂಜೇ ಮಾಡವಳೆ
ಬೇಡ ಅಂದಾರು ಕೊಟ್ಟಲ್ಲೇ ತಾಯಿ
ನೀ ಕೊಟ್ಟ ಭಾಗ್ಯವ ನೀನೆ ನೋಡೆ
ಆಸೆ ಬಿದ್ದು ನಾ ತಂಗೆಮ ಕರೆಸೇನು
ನನಗಿದಕು ಅನ್ಯಾಯ ಮಾಡ್ಯಾಳು
ತಂಗಿಯಾನೆ ಬೇಕಾಂತ ಎದೆಹಾಲು ಹೋಗಿದ್ದ
ತಂಗಿಯಾನೆ ಕರೆಸಿದೆ ನನ ತಾಯಿ
ನನಗೆ ಇದಕ್ಕು ಅನ್ಯಾಯ ಮಾಡ್ಯಾಳ
ಕಣ್ಣಾರೇ ನೋಡೆ ನನ ತಾಯಿ
ಆಗಲೇ ಕಾಳಮ್ಮ ನೋಡೇನಾ ಹೇಳುತಾಳೆ
ನಿನ ಗೋಳಾ ನಾ ನೋಡಲಾರೆ
ನೀ ಹೆಣ್ಣಾಗಿ ಹುಟ್ಟಬಹುದೆ
ದರೆಯಲ್ಲಿ ಹುಟ್ಟಿದುದಕೆ ಸುಖವಿಲ್ಲ

ಸಾಕುಮಾಡು ನನ್ನ ಜಲ್ಮ
ಹಂಗ್ಹ ತವಳು ಹರಿಯಾಲ ದ್ಯಾವಮ್ಮ
ಅಡ್ಡ ಬಿದ್ದು ಉದ್ದಕ್ಕೆದ್ದಾಳು
ಚಿನ್ನ ತೊಟ್ಟಿಲು ರನ್ನದ ಜೋಕೆಯು
ಸಂಗೆ ಬಿರುದು ತಂದೀನಿ ಕೊಳ್ಳೀತಾಯಿ
ಅರಿಕೆಯು ಕೊಡುತಾಳೆ ದುಃಖನೂಡುತಾಳೆ
ಅದಕೇನ ಹೇಳುತಾರೆ ಕಾಳವ್ವನೋರು
ನಿನ್ನಯು ಗೋಳ ಕಣ್ಣಿಂದ ನೋಡನಾರೆ
ಹಿಂದಮುಕ್ಕನೇ ನೀ ನಿಲ್ಲೆ
ತೊಟ್ಟಿಲಲ್ಲಿ ಮಡಗಿ ಹಿಂದಮುಕ್ಕನೆ ನಿಲ್ಲವ್ವ
ನಿನ್ನ ಕಂದಾಗೆ ಜೀವ ಕೊಡವೆ

ಆಕೆ ಹರಿಯಾಲ ದ್ಯಾವಮ್ಮ ಹಿಂದಮುಕ್ಕನೆ ನಿಂತಾಳು
ಕಾಳವ್ವ ಮಂತ್ರ ಜಪೆಸ್ಯಾಳು
ಏನಂತಾ ಆಶೀರ್ವಾದ ಕೊಡುತಾರೆ
ಆಸ್ತಿವಂತನಾಗು ದೇಸಕೆ ದೊಡ್ಡವನಾಗು
ನಿನ್ನ ವೈರಿ ಪ್ರಾಣ ಕೊಲಬೇಕು
ಹಂಗತ್ತಾ ಆಸಿರ್ವಾದ ಕೊಡುತಾರೆ ಕಾಳಮ್ಮ
ಕಂದ ಗರಗರನೆ ಅಳುತ್ತೈತೆ
ಕೇಳಕೇಳೀ ದ್ಯಾವಮ್ಮ
ಕಂದಾನ ಸಾಕೆ ದ್ಯಾವಮ್ಮ
ಚಂದಾಗಿ ಬದುಕಮ್ಮ ಸುಖವಾಗಿ ಬಾಳೋಗಿ
ಕಾಳಮ್ಮ ಹರಕೆಯು ಕೊಟ್ಟಾಳು
ದ್ಯಾವಮ್ಮ ಕಂದನ ಕರಕಂಡು ಬರುತಾಳೆ ಚಂದಾಗಿ ಬದಕವಳೇ

ಒಂದು ತಿಂಗಳೆಂದರೆ ಒಂದು ವರ್ಸಾದೊ
ಒಂದು ವರ್ಸವೆಂದಾರೆ ಎಲ್ಡು ವರ್ಸಾದೊ
ಎಲ್ಡು ವರ್ಸವೆಂದರೆ ನಾಕು ವರ್ಸಾದೊ
ನಾಕು ವರ್ಸವೆಂದಾರೆ ಆರು ವರ್ಸದೊ
ಆರು ವರ್ಸಕೆ ಏನಂತಾ ಕೇಳುತಾನೆ
ಕೇಳಿ ಕೇಳಿ ತಾಯಿ ದೊರೆಸಾನಿ
ಜೊತೆಯು ಹುಡುಗರ ಕೂಟಿ

ಓದಾಕೆ ಹೋಗುತೀನಿ ತಾಯಿ
ಪುಸ್ತಕ ಸಿಲೇಟ್ ತಂದುಕೊಡಿ
ಬೇಡ ಬೇಡ ನನ ಮಗನೇ ಖಂಡಿತಾಬೇಡಾ
ಐರಾವತಿ ಪಟ್ಟಣಕೆ ಹೋಗಬೇಡಾ
ಚಿಕ್ಕಪ್ಪನ ಮನೆಗಾಗಿ ಹೋಗಬೇಕು ನನಮಗನೆ
ಚಿಕ್ಕವ್ವ ಕಂಡರೆ ಬಿಡೋಳಲ್ಲ
ಖಂಡಿತವಾಗಿಯೂ ನೀ ಹೋಗಬೇಡ
ಇಸಗೋಲಿಗೆ ನೀ ಹೋಗಬೇಡ
ತಾಯಿ ಹಡೆದವ್ವ ಎಂತ ಮಾತನಾಡೀರಿ
ನಿಮಗೇನಾ ಮಗ ಹೌದಾ
ನಿಮಗೆ ಮಗ ಹೌದು ಚಿಕ್ಕತಾಯಿಗೆ ಮಗನಲ್ಲವೆ
ಎಂತ ಮಾತನಾಡುತ್ತೀರಿ ತಾಯಿ

ತಂದೆ ನಾನ ತಂದೆನಾ ನಾನೆ ತಂದೆ ನಾ
ತಂದೆ ನಾನ ತಂದೆನಾ

ನಂಗೆ ಪುಸ್ತಕ ಸಿಲೇಟ ತಂದು ಕೊಡೆ ನನ ತಾಯಿ
ನಾ ಓದಾಕೆ ಹೋಗಾಬೇಕು
ಪುಸ್ತಕ ಸಿಲೇಟ ತಂದುಕೊಡುತಾಳೆ
ಜೊತೆಯಾ ಮಕ್ಕಳಿಗೆಲ್ಲಾ ಏನು ಹೇಳುತ್ತಾಳೀಗ
ಕೇಳಿ ಕೇಳಿ ಮಕ್ಕಳಿರೆಲ್ಲಾ
ನಿಮಗೆ ಕುಡಿಯಾಕೆ ಹಾಲ ಕೊಟ್ಟೇನು
ತಿನ್ನಕೆ ಹಣ್ಣಾನೆ ಕೊಟ್ಟೇನು
ನನ್ನ ಕಂದ ಬಲು ಜೋಕೆಕಣರಪ್ಪಾ
ಹಂಗತಾಂವ ಹೇಳುತ್ತಾಳಲ್ಲಾ
ಜೊತೆಯ ಮಕ್ಕಳಿಗೆಲ್ಲಾ
ನಿಮಗಿಂತ ಹೆಚ್ಚಾಗಿ ನನ ತಾಯಿ
ಜೊತೆಯ ಕರಕೊಂಡು ಬರುತೀವಿ
ಮಕ್ಕಳೂ ಕರಕಂಡು ಹೋಗುತಾವ
ಓದಾಕೆ ಹೋಗುತಾನಲ್ಲಾ

ದಿವ್ಸಾ ಓದಾಕೆ ಹೋಗಾಗ
ಚಿಕ್ಕ ತಾಯಿ ಪಾರ್ವತಿ

ಏಳು ಮಾಳಿಗೆಯು ಮೇಲೆ
ನೂರೊಂದಾ ಕಿಟಕಿಯು ವಳಗೆ
ಬಗ್ಗಿ ಬಗ್ಗಿ ನೋಡತವಳಲ್ಲಾ
ಮುಂಡೆಮಗನ ಜೀವವೇ ಹೋಗಿಲ್ಲಾ
ಅವನೀಗ ಇಸಗೋಲಿಗೆ ಬತ್ತವನೆ
ಮುಂಡೆಮಗನ ದಿಂಡೇವ ನೋಡೀಗ
ಅವನೀಗ ಎಷ್ಟು ಚಂದಾಗಿ ಹೋಗುತಾನೆ
ಬರ್‍ರಿ ಬರ್‍ರಿ ಗೌಡ್ತಿಣ್ಣು ಮಕ್ಕಳಿರಾ
ನಮ್ಮಕ್ಕನ ಹುಡ್ಗ ಇಸಗೋಲಿಗ ಹೋಗುತಾನೆ
ನಂಬಿಸಿ ಕರಕಂಡು ಬನ್ನೀರೆ
ನಾನವನಿಗೆ ಇಷವಾನೆ ಕುಡಿಸೀನು

ಗೌಡ್ತಿಣ್ಣು ಮಕ್ಕಳೇನು ಹೇಳುತಾರೆ
ಎಂತಹ ಮಾತನಾಡುತೀರಿ ತಾಯಿ
ನಿಮ್ಮಕ್ಕಗೇ ಮಗ ಹೌದೂ
ನಿಮಗೆ ಅದು ಮಗನಲ್ಲವೆ
ಇದವೊಂದು ದೋಸಕೆ ನಾವೀಗ
ಗುರೆಯಾಗುದಿಲ್ಲಸಲ್ಲಾ ತಾಯಿ
ಇವನು ಇಸಗೋಲಿಗೆ ಹೋದಾನು ನೋಡಿರಿ
ಓದಿ ಅತ್ತಲಿಂದ ಬರುತಾನೆ
ಮಾಳಿಗಿಂದ ಕೆಳಗಿಳಿದಾಳು
ನಂಬಿಸಿ ಮಗನ ಕರೀತಾಳೆ
ಬಾರೊ ಬಾರೋ ನನಕಂದ ನೀನೀಗ
ನೀ ಬಳಲಿ ಬಾಯಾರಿಲ್ಲವೇನೋ
ಹಣ್ಣ ತಿಂದು ಹಾಲು ಕುಡಿಬಾರೋ
ನಿನ್ನ ಎತ್ತಿ ಮುದ್ದಾಡೇನೊ
ಅವಳು ನಂಬಿಸಿ ಕರೆದಾರೂ
ಕತ್ತೆತ್ತಿ ತಾಯಿಯ ನೋಡಲಿಲ್ಲ
ಅರಮನೆಗೆ ಹೋದಾನು

ತಾಯಿ ದೊರೆಸಾನಿ ಅವಳೀಗ
ಊಟಕೆ ಮಗನೀಗೆ ಇಕ್ಕುತಾಳೆ

ನುತ್ತೇನ ಹೇಳುತಾನಳಲ್ಲಾ
ದುರಳ ಬುದ್ಧೀಲಿ ನೀ ಹೋಗಬೇಡ ಕಂದ
ಜನರು ದೂರುತಾರೆ ನನ ನುಗನೆ
ಏ ತಬ್ಬಲೀ ಅನುತಾರೆ ನನ ಕಂದ
ನಿನ್ನ ತಲೆಗೆ ಹೆಟ್ಟುತಾರೆ ಮಗನೆ
ನಾ ಹಾಳಾದ ಕಿವಿಯಿಂದ ನನ್ನ ನುಗನೆ
ನಾ ಕೇಳನಾರೇನೂ ಕಂದನ್ಮು
ನಾ ಹುಟ್ಟೇದ ಗಳಿಗೇಲಿ ತಾಯಿ ತಿಂದ್ಕಂಡೆ
ಕೂಡಿದ ಗಳಿಗೇಲಿ ಗಂಡನ ತಿಂದ್ಕಂಡೆ
ಕಾಳಮ್ಮನ ವರದಿಂದ ನನ್ನ ಮುಗನೆ
ನಿನ್ನ ನಾ ಪಡ್ಕಂಡೇನೊ

ನಿನಗೆ ತಿಂಗಳಾ ಬಾಣಂತಿ
ನನ್ನ ತಂಗೆಯಾ ಮೇಲೆ ಗ್ಯಾನಬಿದ್ದೇನೂ
ನಿನಗೆ ಎದೆ ಹಾಲೀ ಹೋಗಿದ್ದೊ
ನಾ ಆಶೆ ಬಿದ್ದು ತಂಗೆಯ ಕರಿಸಿದ್ದೆ
ನಿನ್ನನೇ ಕಣ್ಣಲಿ ನೋಡದೇಯಾ
ನಾ ಬಾಳಿ ಬದುಕ ನೋಡೀನೂ
ನಾ ಬಾಳಿ ಬದುಕನಾರದಾ
ನಿನ್ನ ಮೆಟ್ರ ಜಿಂಟೇ ಹೋದಾಳು
ನಿನ್ನ ಜೀವಾನೆ ಹೋಯ್ತು
ಕಾಳಮ್ಮನ ವರದಿಂದ ನಿನ್ನಾವ ಪಡ್ಕಂಡೆ
ಚಿಕ್ಕವ್ವನರಮನೆಗೆ ಹೋಗಬೇಡ ಕಂದ
ನಿನ್ನ ಚಿಕ್ಕವ್ವ ಕಂಡರೆ ಬಿಡೋಳಲ್ಲ
ನೆನ್ನೆ ನಾನೋದಿ ಬರಾಗ ನಂಬೆಸಿ ಕರದರು
ತಾಯಿಯಂತ ಗುರುತಾನೆ ಕಾಣೇನು
ನಾನೋಡಿ ಬಂದೇನು ನನ್ನ ತಾಯಿ
ಅವಳೇ ಚಿಕ್ಕ ತಾಯಿ ಕಂದಮ್ಮ
ನೀ ಹೋಗಬೇಡ ನನ್ನ ಕಂದಾ

ಇಸಗೂಲಿಗೆ ಹೋಗುತಾನವಲ್ಲಾ
ಇದ್ಯೆ ಬುದ್ಧಿ ಕಲಿಯುತಾನಲ್ಲಾ

ಒಂದು ಹೇಳಿದರೆ ಮಾಸ್ತರು
ಎಲ್ಡಾ ಬರೆದಾನು ದೊರೆಮಗ
ದಿವ್ಯಾ ದಿವ್ಯಾ ಮಾಸ್ತರು
ವರುಸ ಹನ್ನೆಲ್ಡನಾದವೋ
ಹನ್ನೆಲ್ಡನೇ ವರುಸಾದ ಮೇಲೆ
ಏನಂತಾವ ಕೇಳುತಾನಲ್ಲಾ
ಬೇಸಗೆ ಬಿಸುಲಲ್ಲಿ ನನ ತಾಯಿ
ನಾನು ಹಸ್ಗಂಡು ಹೋಗನಾರೆ
ಬಿಸಲಿನ ಬೇಗೆ ನನ ತಾಯಿ
ನಾ ತಡೆಯನಾರೇನು ನನ ತಾಯಿ
ಅಂಗಾಲಿ ಉರಿಯು ನನಗೆ
ನಾ ನಡೆದು ಹೋಗನಾರೆ ನನ ತಾಯಿ
ಕೂರಕಾನೆ ಕುದುರೆಯ ಕೊಟ್ಟಾರೆ
ನಾ ಚೆಂದಾಗಿ ಇದ್ದೇಯ ಕಲಿತೇನು
ನಿಮ್ಮ ತಂದೆ ಕೂರೊ ಕುದುರೆ
ಕುದುರೆಯ ಲಾಯದಲ್ಲಿ ಐತಲ್ಲ
ನೀ ಅದರ ಮೇಲೆ ಕೂರೊ ನನ ಕಂದ
ಚೆಂದಾಗಿ ಇದ್ದೇಯ ಕಲಿಯಪ್ಪಾ
ನೀ ಆಗತೀ ದೊರೆಮಗನು

ಕುದುರೆಬೇಗನೆ ಹಿಡ್ಕಂಡು ಪೂಜೆಯಾ ಮಾಡುತಾನೆ
ಬಗ್ಗಿ ಶರಣು ಮಾಡುತಾನೆ
ಅದಕೆ ಜೀನ ಬಿಗಿದಾನು
ಅದಕೆ ಕಡಿವಾಣ ಹ್ಹಾಕ್ಯಾರು
ಮುತ್ತಿನಾ ಮುಕರಂಬ ಹಾಕಿದರು
ರನ್ನದಾ ಸಬರಾವ ಬಿಗಿದಾರು
ಕುದುರೆನೇರಿ ಹೋಗುತಾರಲ್ಲಾ
ಇದ್ದೇಯ ಕಲಿಯುತವನಲ್ಲಾ

ಇವಳು ಏಳು ಮಾಳಿಗೆಯ ಮೇಲೆ
ನೂರೊಂದು ಕಿಟಕಿಯೊಳಗೆ
ಬಗ್ಗಿ ಬಗ್ಗಿ ನೋಡುತವಳಲ್ಲಾ
ನೋಡಿ ನೋಡಿ ಗೌಡ್ಹೆಣ್ಣು ಮಕ್ಕಳಿರಾ

ನನ್ನ ಸವತಿ ಮಗನ ಸಡಗರ ನೋಡಿರೆ
ಅವನೆಷ್ಟು ಚಂದವಾಗಿ ಬರುತಾನೆ
ಅವನಂದಾ ಚಂದಾವ ನೋಡಿರೆ
ಭಾವನಂಗೆ ಇರುವೋನು ಅವನೀಗಾ
ಇಂತಾವನೇ ಮಕ್ಕಳ ನಮಗೆ
ದೇವರು ಕೊಡಬಾರದಾ
ಇವನ ನಾ ಮಗನೆಂದು ಭಾವಿಸಲಾರೇನೊ
ಕಣ್ಣ ಬಿಟ್ಟು ನೋಡಲಾರೇನೊ
ಅವನಿತ್ತಲಿಂದ ಓದಕೆ ಹೋಗುತಾನೆ
ನೀವು ಇತ್ತಲಂದ ರಾಗಿ ಚೆಲ್ಲಿರೆ
ಅದರ ಮೇಲೆ ಚಾಪೆಯ ಹಾಸೀರೆ
ಕುದುರೆಯು ಜಾರಿ ಕೆಳಗೆ ಬೀಳಲಿ
ನನ್ನ ಏಳು ಮಾಳಿಗೆಯ ಮೇಲೆ
ಅವನ ಎಳ್ಕಂಡು ಬನ್ನಿರೆ ಗೌಡಿರೆ

ಅವನು ಬರುವ ಹಾದಿಗೆ ರಾಗಿ ಚೆಲ್ಲತಾರೆ
ಚಾಪೆಯಾ ಹಾಸುತಾರೆ
ಓದಿ ಅತ್ತಲಿಂದ ಬರುತಾನೆ
ಕುದುರೆ ಜಾರುತನೈತ್ತಲ್ಲಾ
ಕುದುರೆ ಕಡಿವಾಣವ ದಿಮ್ಮನೆ ಹಿಡಿದಾನು
ಕುದುರೆ ಭಾರವ ಬಿಡುತಾನೆ
ಮುಂಡೆಮಗನ ದಿಂಡೆವಾ ನೋಡೀರೆ
ನಾನೀಗಲೇಯೆ ಅಡ್ಡ ಕಟ್ಟುತ್ತೀನಿ
ಮಾಳಿಗಿಂದ ಕೆಳಕ್ಕಿಂದ ಇಳುದಾಳು
ಗಂಡನಾ ಬಟ್ಟೆಯು ತಗುದಾಳು
ಕೋಟು ಸರಟು ಇಕ್ಕುತಾಳೆ
ಸೊಂಟಕೆ ಕಾಸೇ ಹಾಕುತಾಳೆ
ತಲೆಗೆ ಪಾಗಾನೆ ಸುತ್ತುತಾಳೆ
ಕಣ್ಣಿಗೆ ಕನ್ನಡಿ ಹಾಕವಳೆ
ಚಂದ್ರಾಯ ಚಂದಾಗಿ ಮಸೆದಾಳು
ಗಂಡ ಕೂರ ಕುದುರೆ ತಗುದವಳೆ
ಕುದುರೆ ಮೇಲೆ ಬೇಗನೆ ಕೂತಾಳು ಪಾರ್ವತಿ

ಅಡ್ಡಕಟ್ಟಿ ಹೋಗುತಾಳಲ್ಲಾ
ಇವನೀಗ ಇತ್ತಲಿಂದ ಹೋಗುತಾನಲ್ಲಾ

ಅತ್ತಲಿಂದ ಅವಳೀಯು ಬರುತಾಳೆ
ಇವನೀಗ ಕುದುರೆಯಿಂದೆ ಕೆಳಕೆ ಇಳಿದಾನು
ಯಾರೇಯಾ ದೊರೆಗಳು ಬರುತಾರೆ
ಅವನು ಹಂಗ್ಡ ತಾವ ಈ ದೊರೆಮಗನು
ಬಗ್ಗಿ ಸಲಾಮು ಕೊಡುತಾನೆ
ಬಗ್ಗಿ ಸಲಾಮು ಕೊಡುವಾಗ
ಎತ್ತಿ ಚಂದ್ರಾಯದಲಿ ಕಡಿದಾಳು
ಶಿರಸ ಬೇರೆ ಮುಂಡ ಬೇರಾಯ್ತು
ಇವಳೇನಂತಾವು ಹೇಳುತಾಳಲ್ಲಾ
ನೀ ನೆಂಬಸಿ ಕರೆದರೂ ಅರಮನೆಗೆ
ನೀನೇಯಾ ಬರನಿಲ್ಲಾ
ನಿನ ಗೋಳೇನಾಯ್ತು ನೋಡಂತಾವ
ಹೇಳುತಾಳೆ ಪಾರವತಿ
ಹಿಂತಿರುಗಿ ಹೋದಾಳು ಪಾರವತಿ

ಸಂದೆ ಏಳು ಗಂಟೆನಾದವಲ್ಲೊ
ಅವಳಾಗ ಹರಿಯಾಲ ದ್ಯಾವಮ್ಮ
ಮಗ ಬರುವ ದಾರಿಯ ನೋಡುತಾಳೆ
ಇನ್ನೂ ನನ ಕಂದ ಬರನಿಲ್ಲ
ಬನ್ನೀ ಬನ್ನಿರೀ ಮಕ್ಕಳಿರಾ
ನಿಮ್ಮ ದೊರೆಯು ಬರನಿಲ್ಲವಲ್ಲಾ
ಮಕ್ಕಳಿಗೆ ಹಣ್ಣಾನೆ ಕೊಡುತಾಳೆ
ಹಾಲನ್ನ ಕೊಡುತಾಳೆ
ಬೇಡಿ ಬೇಡಿ ಮಕ್ಕಳಾ ಕೇಳುತಾಳೆ
ಅವು ಏನಂತಾವ ಹೇಳುತಾವಲ್ಲ
ನಾವು ದಾರಿಯಲ್ಲಿ ಬಂದೇವು ನನ್ನ ತಾಯಿ
ಅವರು ಹಾದೀಲಿ ಬಂದಾರು
ಅವರು ಕುದುರೆಯ ಮೇಲೆ ಬಂದಾರು
ನಾವು ದಾರೀಲಿ ಬಂದೇವೂ

ಅವಳಾಗಲೇ ಹರಿಯಾಲ ದ್ಯಾನವ್ನ
ಒಕ್ಕಳ ದುಃಖ ಮಾಡುತಾಳಲ್ಲಾ

ಕತ್ತಲಾದರೂ ಕಂದ ಬರನಿಲ್ಲ
ಹಂಗತ್ಲೀಳಿ ಹುಡ್ಕಿಂಡು ಹೋಗುತಾಳೆ
ರಾತ್ರಿ ಎಂಟು ಗಂಟೆಯಾಯ್ತು
ಮಗನ ಮುಕವೇ ಇಲ್ಲವಲ್ಲಾ
ಎಡದಾರಿಗೆ ಹೋಗಾನೆ ನೋಡುತಾಳೆ
ಸತ್ತು ಬಿದ್ದವನೆ ದೊರೆಮಗ
ಕುದುರೆ ಸುಮ್ಮನೆ ನಿಂತ್ರೈತೆ
ಕಣ್ಣೀರ ಸುರಿಸುತ್ರ್ಯೆತಲ್ಲಾ
ಹತ್ತರಕೆ ಹೋಗುತಾಳೆ ದ್ಯಾಸವ್ನ
ಕುಟ್ಟಿ ಕುಟ್ಟಿ ಬಾಯ ಬಡಿತಾಳೆ
ನಾ ಕಟ್ಟಿ ಕಟ್ಟಿ ಕಂದಮ್ಮಾ ನಾನೀಗ
ನನಗಿದ್ಕ್ಯಾ ಅನ್ಯಾಯ ಮಾಡಿದೆಯ
ಬೇಡವೆಂದು ಮೊದಲೇ ಹೇಳಿದ್ದೆ
ಮಾತು ಕೇಳದೆಯ ಬಂದಿದ್ದೆಯ
ತಲೆಯು ಮುಂಡವ ತಗುದಾಳು
ತೊಡೆಯು ಮೇಲೆ ಹಾಕ್ಕಂಡು ದ್ಯಾವವ್ನ
ಕುಟ್ಟಿ ಕುಟ್ಟಿ ಬಾಯ ಬಡಿತಾಳೆ
ಒಕ್ಕಳ ಸಂಕಟ ಪಡುತಾಳೆ

ಗಂಡ ಇದ್ದರೆ ಗಂಡನಾ ಸಿರಿ
ಮಕ್ಕಳಿದ್ದರೆ ಮಕ್ಕಳಾ ಸಿರಿ
ನಾನ್ಯಾವ ಸಿರೀಲಿ ಬದುಕಾಲಿ
ಏಳ್ಲೀಳು ನನ್ನ ಕಂದಮ್ಮ
ಸಂದೆವರೆಗೆ ಓದಿದಾನೆ ಮಗನೆ
ಬಳಲಿ ಬಾಯಾರಿಲ್ಲವೇ
ಹಾಲು ಕುಡಿಯೇಳು ನನ್ನ ಕಂದ
ಹಣ್ಣು ತಿನ್ನೇಳು ನನ್ನ ಕಂದಾ
ಕುಟ್ಟಿ ಬಾಯ ಬಡಿಯಾನೆ ಬಡಿತಾಳೆ
ಒಕ್ಕಳ ಸಂಕಟ ಪಡುತಾಳೆ

•

ದೊರೆಯೆ ಹುಟ್ಟಿದಕ್ಕೆ ನಾನೀಗ
ಒಂದೀಟು ನಂಗೆ ಸುಖವಿಲ್ಲ
ಪಾಪಿ ಜನುಮ ಇಲ್ಲದರೇನು
ಸಾಕು ಮಾಡಯ್ಯ ಶಿವನೆ

ನಿನ್ನ ಅಂದ ಚಂದಾವಾ ನೋಡನಾರೆ
ನೀ ಎಷ್ಟು ಚಂದಾಗಿ ಮಲಗಿದ್ದಿ
ಅವಳು ಹಾಡಿಕಂಡು ದುಃಖಮಾಡುತಾಳೆ
ಕೋಳಿ ಕೂಗ ಹೊತ್ತಾಯ್ತಲ್ಲಾ
ಶಿವನು ಪಾರವತಿಯು
ಇರುವೆಂಬ ಹನ್ನೆಲ್ಡು ಕೋಟಿಗೆ
ಪಡಿಯಳೆದು ಬರುವಾಗ
ಪಾರವತಿ ಈ ಸೊಲ್ಲ ಕೇಳಿ
ಇದುವೇನು ಮಹಾಸ್ವಾಮಿ ನಾಕಾಣೆ
ಸ್ತ್ರೀಯು ಸಂಕಟವು ಕೇಳೋದೆ
ನಾವ್ಹೋಗಿ ಬರೋನ ಮಾಸ್ವಾಮಿ
ಕಣ್ಣಿಂದಾವ ನಾವು ನೋಡೋನಾ
ಹೂವನೆಯ ಹುಳವೇ ಮುಟ್ಟುತಾವೆ
ಹಣ್ಣ ಹಕ್ಕಿ ಮುಟ್ಟುತಾವೆ
ನಮ್ಮ ತಾನಕೆ ಹೊತ್ತೇಯನಾಗುತ್ತೈತೆ
ನಾವು ಹೋಗನೇಳು ಪಾರವತಿ
ಬಂದರಾನೇ ಬರಬಹುದು ಮಾಸ್ವಾಮಿ
ನೀವು ಬರುದೆ ಹೋದಾರೆ ಸ್ವಾಮಿ
ನಿಮ್ಮ ಪಾದದಾ ಮೇಲೀಗಾ
ನಾ ಪರಾಣವ ಬಿಡುತೀನಿ
ನೀ ಹೆಂಗಸಿನ ಕೂಟಿ ಬಂದಾರೆ ಹೀಗೆಂದೂ
ಅವರಿಬ್ಬರೂವೆ ಬಂದಾನೆ ನೋಡುತಾರೆ
ಹೆಣವ ತೊಡೆಮೇಲೆ ಹಾಕಿಕೊಂಡು
ಇವಳು ಅನುಕೋಟಿ ಸಂಕಟ ಪಡುತವಳೆ
ನಿನ್ನ ಗೋಳ ಕಣ್ಣಿಂದ ನೋಡನಾರೆ
ಮುಂಡತಲೆಯ ಒಂದನೇ ಕೊಡವ್ವಾ
ಎದೆಯ ಮುಂಡಾವ ಒಂದುಗೂಡಿ

ನೀನು ಹಿಂದಮುಕನೆ ನಿಲ್ಲೆ ನನ್ನ ಮಗಳೇ
ಆಗ ದ್ಯಾವಮ್ಮ ಹಿಂದಮುಕನೆ ನಿಂತಾಳು
ಇವರು ಮೂರು ಮಂತ್ರ ಜಪಿಸವರೆ
ನಾಗ ಬೆತ್ತವನೆಳೆದಾರು
ಜೀವಾಳದ ಕಡ್ಡೀಲಿ ಉರಿಗಾರು
ಅಸ್ಸಂತಾ ಎದ್ದೇಯ ಕೂತಾನೆ
ಶಿವಪಾರವತಿ ಮಾಯವಾದರು

ಬೆಳಿಗೆದ್ದಲೇ ಏಳು ಗಂಟೆಯಾಯ್ತು
ಅವಳಾಗಲೇ ಹರಿಯಾಲ ದ್ಯಾವಮ್ಮ
ಮಗನ ಕೊರಳ ಕಟ್ಟಿಗಂಡು ದುಃಖಮಾಡುತಾಳೆ
ನಿನ್ನ ಕಂಚಿನಂತ ಮುಖವೆಲ್ಲಾ
ಕಂದಿ ಕುಂದಿದವೂ ಕಂದಮ್ಮಾ
ಹೇ ಬತ್ತಿ ಬಾಡಿದವೋ ಕಂದಮ್ಮ
ನೆಗು ಮುಖನಾಗು ಕಂದಯ್ಯ
ಅರಮನೆಗೆ ಹೋಗೋನ ಕಂದಯ್ಯ
ಹಣ್ಣು ತಿಂದು ಹಾಲನೇ ಕುಡಿಯೇಳು
ನಾ ಕಂಡಿತಾವು ಬರೋದಿಲ್ಲವೊ
ನನ್ನ ಚಿಕ್ಕಪ್ಪನರಮನೆಗೆ ತಾಯಿ
ನಾ ಹೋಗಲೆಯ ಹೋಗಿ ಬರುತ್ತೀನಿ
ಮಾರುದ್ದ ವಾಲೆಯ ತಗೆದಾನು
ತಾಯಿ ಹಡದವ್ವ ದೊರೆಸಾನಿ
ಬಿದ್ದ ಕಷ್ಟವೆಲ್ಲವು ಬರೆದಾನು
ತಕ್ಕಂಡೇ ಹೋಗುತಾನೆ ದೊರೆಮಗ
ನಾಳೆ ನಾನೇಯ ಬತ್ತೀನಿ
ನೀವು ಅರಮನೆಗೆ ನಡೀ ತಾಯಿ

ಚಿಕ್ಕಪ್ಪನ ಅರಮನೆಗೆ ಹೋಗುತಾನೆ
ಐರಾವತಿ ದೊರೆಗಳು
ಕೇಳೆ ಕೇಳೆ ನನ್ನ ಮಡದಿ ದೊರೆಸಾನಿ
ನಿಮ್ಮಕ್ಕನಾ ಮಗಾ ಬರುತ್ತೈತೆ
ಪಾದಕಾನೆ ನೀರಾನೆ ಕೋಡಾನೆ

ಕುಡಿಯಾಕೆ ಹಾಲ ಕೊಡಾನೆ
ಏನು ಬೇಡ ನೀವೆ ಕೇಳಿ ನನ ತಂದೆ
ಉಂಡೂಟ ಅರಿಗಿಲ್ಲವಲ್ಲಾ
ಅವನಪ್ಪನ ಸಮಾ ಹೋಗಿ ಕೂರುತಾನೆ
ಓಲೆ ತೆಗೆದು ಮುಂದಕೆ ಮಡಿಗಾನು
ಐರಾವತಿ ದೊರೆಗಳು ಓದುತವರಲ್ಲಾ
ಕಣ್ಣಾಲಿ ನೀರನೇ ತತ್ತ್ರಾವ
ಏನಂತಾವ ಹೇಳುತಾರಲ್ಲಾ
ಅಕ್ಕ ಬಾಳಿ ಬದುಕೋದು
ಇದಕೂ ಅನ್ಯಾಯ ಮಾಡಿದಳು
ಹಂಗೇತ್ಡೆ ೀಳಿ ದುಃಖ ಮಾಡುತಾರೆ
ಕಾಳಾವತಿ ದೊರೆ ಮಗನೂ
ಚಿನ್ನದಾ ಚಂದ್ರಾಯ ತೆಗೆದಾನು
ಚಂದಾಗಾನೆ ಚಂದ್ರಾಯುದ ಮಸೆದನು
ಚಿಕ್ಕಪ್ಪನ ಕಡಿಯುತಾನಲ್ಲಾ
ಏಳು ತುಂಡಿಗೆ ಚಿಕ್ಕಪ್ಪನ ಕಡಿದಾನು
ಏಳು ತೋರಣ ಹಾಕಿಸಾನು
ಅವರಪ್ಪನೂ ಮಗನೂವೆ
ತೋರಣದೊಳಗೆ ಹೋಗುತಾರೆ
ಅಪ್ಪಗೆ ಹೆಣ್ಣು ಕೇಳಿ ಮಗನೇ ಮದುವೆಮಾಡಿ
ಮಗನಿಗೆ ಹೆಣ್ಣು ಕೇಳಿ ಅಪ್ಪ ಮದುವೆಮಾಡಿ
ಐರಾವತಿ ಪಟ್ಟಣದಲಿ ಚಿಕ್ಕಪ್ಪ ಸುಖವಾಗಿ ಬಾಳವರೆ
ಕಾಳಾವತಿ ಪಟ್ಟಣದಲ್ಲಿವನು ತಾಯಿ ಸುಖವಾಗಿ ಬದುಕವರೆ

ಕುಸುಮಾಲೆ

ರಾಮಚಂದ್ರ ರಾಮ ರಾಮ ಗಿಣಿರಾಮಾ

ತಿಮ್ಮಪ್ಪಸ್ವಾಮಿ ಅವರು ಮದುವ್ಯಾಗಿ ಆರುವರ್ಸ
ಅವರ ಹೆಂಡ್ತಿ ಕುಸುಮಾಲೆ
ಅವರ ತವರಲ್ಲೆ ಬುಟ್ಟವರೆ
ಮದುವ್ಯಾಗಿ ಆರುವರ್ಸ ಕಂದ್ಹುಟ್ಟಿ ಮೂರುವರ್ಸ
ಗೆಣೆಕಾರ್ರು ಗಟ್ಟಕ್ಕೆ ಹೊಂಟಾರು
ತಾಯಿ ಹಡದವ್ವ ನನ್ನ ಗಟ್ಟದ ಗೆಣೆಕಾರ್ರು
ಗಟ್ಟಾಕೆ ಹೋಂಟಾರು
ರೊಟ್ಟಿಯ ಸುಟ್ಟುಕೊಡಿ ನಂಗೆ ಬುತ್ತಿಯ ಕಟ್ಟಿಕೊಡಿ
ನೀನು ಮದುವ್ಯಾಗಿ ಆರುವರ್ಸ
ನಿನಗೆ ಕಂದ್ಹುಟ್ಟಿ ಮೂರುವರ್ಸ
ನಿನ ಹೆಂಡ್ತಿ ಕುಸುಮಾಲೆ
ನೀ ತೌರಲ್ಲೇ ಬುಟ್ಟೀಯ
ಅವಳ ಕರ್ಕಂಡು ಬಂದು ನೀ ಕಂಡುಗ ಕುಟ್ಸಿಕೊಳ್ಳೊ
ನೀ ಕಂಡುಗ ಬೇಸಿಕೊಳ್ಳೊ
ತಂಗಿ ವರನಂದಿ ನೀ ಕಂಡುಗ ಕುಟ್ಟಿಕೊಡೆ
ತಂಗಿ ವರನಂದಿ ನೀ ಕಂಡುಗ ಬೇಸಿಕೊಡೆ
ಮದುವ್ಯಾಗಿ ಆರುವರ್ಸ
ಕಂದನ್ಹುಟ್ಟಿ ಮೂರುವರ್ಸ
ನಿನ ಹೆಂಡ್ತಿ ಕುಸುಮಾಲೆ
ನೀ ತೌರಲ್ಲೇ ಬುಟ್ಟೀಯ
ನಿನ್ನ ಹೆಂಡ್ತಿ ಕುಸುಮಾಲೆ
ಅವಳು ಸತ್ತೀ ಹೋಗವಳೋ
ಅವಳ ನೀ ಕರ್ಕಬಂದು ನೀ ಕಂಡುಗ ಕುಟ್ಟಿಸಿಕೊಳ್ಳೊ.

ತಿಮ್ಮಪ್ಪಸ್ವಾಮಿಗೆ ಸಿಟ್ಟುನಾದರೆ ಬಂದುವಲ್ಲೋ
ಕುದುರೆಯ ಏರಿದಾರು ಕುಸುಮಾಲೆ ಅರಮನೆಗೆ
ಕುಸುಮಾಲೆಯರಮನೆಗೆ ಅವರು ಹೋಗುತಾರಲ್ಲ
ಚಿಕ್ಕವಳು ಕುಸುಮಾಲೆ ಹಟ್ಟೇಲಿ ಮುತ್ತ ಕುಟ್ವಾಡುತ್ತಾಳೆ
ಭಾವನ ಮುಖ ಕಂಡು ಅವಳು ಒಳಗೆ ಓಡುತಾಳೆ
ಅಕ್ಕಯ್ಯ ಅಕ್ಕಯ್ಯ ನಮ್ಮ ಭಾವ ಬಂದಾರು
ಆಗಲೇ ಕುಸುಮಾಲೆ ಬಾಗಿಲಿಗೆ ಹಾಕವಳೆ
ಮುತ್ತಿನ ಹಸೆಯ ಮಣೆಯಾ
ತುಪ್ಪದಾರತಿ ತಂದು ಅವಳು
ಇಪ್ಪತ್ತು ಆರತಿ ಬೆಳಗವಳೆ
ಹವಳಾದರತಿಯ ತಂದು ಅವಳು
ಹನ್ನೆಲ್ಡು ಆರತಿಯ ಬೆಳಗವಳೆ
ಪನ್ನೀರಾ ತಂದಾಳು ಪಾದಾವ ತೊಳೆದಾಳು
ಕುಸುಮಾಲೆಯು ಮುಂಡೆ ಹನ್ನೆಲ್ಡು ಮಾರುದ್ದ
ಮುಂಡೆಯಾನೆ ಬಿಡಿಸಾಳು
ಗಂಡನ ಪಾದವ ವರೆಸಾಳು
ಪಟ್ಟದ ಮಂಚ ವದರಾಸಿ
ತಿಮ್ಮಪ್ಪಸ್ವಾಮಿ ಹೋಗಿ ಕುಂತರಲ್ಲ

ಇದೇನು ಮಾಸ್ವಾಮಿ
ನಿಮ್ಮ ಕಂಚಿನ ಮುಖವೆಲ್ಲ
ಹಂಚಿನಂಗಾಗವೇ
ಕಂದಿ ಕುಂದಿದಾವೆ
ನಗು ಮುಖವೆಲ್ಲಾ ಸ್ವಾಮಿ
ನಮುತ್ತೆ ಮಲ್ಲವ್ವ ತಾಯಿ
ಚಂದಾಗವರೇನು ಸ್ವಾಮಿ
ನಿಮುತ್ತೆ ಮಲ್ಲವ್ವ ತಾಯಿ
ಅವರು ಸತ್ತೇ ಹೋದರಲ್ಲಾ
ನಮ್ಮತ್ತಿಗೆ ವರನಂದಿ
ಚಂದಾಗವರೇನು ಸ್ವಾಮಿ
ನಿಮ್ಮತ್ತಿಗೆ ವರನಂದಿ
ಅವರು ಸತ್ತೇ ಹೋದರಲ್ಲಾ

ನಾ ಘಟ್ಟಕ್ಹೋಗಬೇಕು
ರೊಟ್ಟಿ ಸುಡಾವರಿಲ್ಲ
ಬುತ್ತಿಯಾ ಕಟ್ಟೋರಿಲ್ಲ
ಏಳೆ ಏಳೆ ಕುಸುಮಾಲೆ
ನಾವೀಗಲೇ ಹೋಗೋವ
ಆ ಮಾತ ಕೇಳಿದಾಳು
ತಾಯಿಗ್ಹೇನ್ಹೇಳ್ಯಾಳು
ತಾಯಿ ಹಡದವ್ವ
ತಿಮ್ಮಪ್ಪಸ್ವಾಮಿ ನನ್ನ ಕರೆಯೋಕೆ ಬಂದವರೆ
ನಿಮ್ಮಡಗೂಟ ಆದನೊತ್ತಿಗೆ
ನಾ ನನ್ನ ಗೆಳತಿರ ಮನೆಗೆ
ನಾ ಹೋಗಿ ಬರುತ್ತೇನೆ

ಕುಸುಮಾಲೆಯ ಗೆಣತೀರು
ಹನ್ನೆಲ್ಡು ಆಳು ಗೆಣತೀರು
ಅರಮನೆಗೆ ಹೋಗುತಾಳೆ
ಮುಖವಾ ಕಂಡರಲ್ಲಾ ಗೆಣತೀರು
ಹನ್ನೆಲ್ಡು ಗೆಣತೀರು ಅವಳೆತ್ತಿ
ಮುದ್ದಾನಾಡುತಾರೆ ಕುಣಿಸುತಾರೆ
ಪನ್ನೀರ ತಂದಾರು ಪಾದವ ತೊಳೆದಾರು
ಪಟ್ಟೆಯ ಮಂಚಾವ ತಟ್ಟನೆ ಹಾಸಾರು
ಅವಳು ಹೋಗಿ ಕುಳಿತಳಲ್ಲಾ
ಅವಳ ಹನ್ನೆಲ್ಡು ಗೆಣತೀರು
ಅವಳು ಮುದ್ದಾನಾಡುತಾರೆ
ಇದೇನೆ ಕುಸುಮಾಲೆ
ಎಂದಿನಂಗೆ ನೀ ಇಲ್ಲವಲ್ಲೆ
ಕಂಚಿನಂತೆ ಮುಖ ಹಂಚಿನಂಗಾಗವೆ
ಕಂದಿ ಕುಂದಿದಾವೆ ಇದೇನೆ ನಿನ ಮುಖ
ನಿನ್ನಾರೆ ಹೊಡೆದಾರು ನಿನ್ನಾರೆ ಬೈದಾರು
ನಿನಗಾವ ಕಷ್ಟ ಒದಗಿದಾವೆ
ನನ್ನಾರು ಹೊಡೆನಿಲ್ಲಾ ನನ್ನಾರು ಬೈಯನಿಲ್ಲಾ
ನನಗಾವ ಕಷ್ಟವೂ ಒದಗನಿಲ್ಲಾ

ತಿಮ್ಮಪ್ಪಸ್ವಾಮಿ ಕರೆಯಾಕೆ ಬಂದವರೆ
ಹೋಯ್ತೀನಿ ನನ್ನ ಗಣತೀರೆ ನಾನೀಗ
ನಾ ಹೋದರೆ ಬರೋದು ತಡವಲ್ಲಾ ಗೆಣತೀರೆ
ಅದಕಾಗಿ ನಾನು ಬಂದೆ ಕಣಿರೆ

ಆಗ ಗೆಣತೀರು ಆ ಮಾತಾ ಕೇಳಿದರು
ಅವರು ಬಾಯ್ಗೆ ಬೇಕಾದ ಅಡಿಗೆ ಅಟ್ಟು
ಕುಸುಮಾಲೆಗೆ ನೀರಾ ಕೊಡುತಾರೆ
ಹನ್ನೆಲ್ಡು ಗೆಣತೀರು ಬೇರೆ ತಳಿಗೆ ತೊಳೆದು
ನಾವೆಲ್ಲರೊಂದಿಗೆ ಉಣ್ಣಾವನಾ
ಹನ್ನೆಲ್ಡು ಗೆಣತೀರು ಒಂದೀಗೂಟವ ಮಾಡಿ
ಅವಳ್ಗೆ ಪಟ್ಟೇ ಸೀರೆಯು ಉಡಿಸಾರು
ಪುಟ್ಟುಮುತ್ತ ಕಟ್ಟವರೆ
ಮಂಡೆ ಬಾಚಿ ಮಲ್ಲಿಗೆಯು ಮುಡಿಸವರೆ
ಹನ್ನೆಲ್ಡು ಕಾಯು ಒಡಾದರು ಅಕ್ಕರಸಿ
ಅವಳಿಗೆ ಮುತ್ತಿನ ಮಡಲಕ್ಕಿ ಹುಯ್ಯದವರು
ಕುಸುಮಾಲೆ ಕರ್ಕಂಡು ಬರುತಾರೆ ಗೆಣತೀರು

ತಿಮ್ಮಪ್ಪ ಸ್ವಾಮಿ ಏನಂತಾ ಕೇಳುತಾರೆ
ಇದವೇನತ್ತಮ್ಮಾ ಊರು ಬಾಗಲಲ್ಲಿ
ಇದವೇನ ಗದ್ದಲಾ ಅತ್ತಿಗಮ್ಮಾ
ನಮ್ಮಕ್ಕನ ಗೆಣತೀರು ಹನ್ನೆಲ್ಡು ಗೆಣತೀರು
ಅಕ್ಕನ ಕರ್ಕಂಡು ಬರುತಾರೆ
ಮಾತು ಮಾತಾಡೊತ್ತಿಗೆ ಬಾಗಿಲಿಗೆ ಬಂದಾರು
ಅವರು ತುಪ್ಪಾದಾರತಿಯು ಬೆಳಗಾರು
ಪನ್ನೀರಾ ತಂದಾರು ಪಾದವಾ ತೊಳೆದಾರು
ಪಟ್ಟೆಯು ಮಂಚಾವ ವದರಾಸಿ ಗೆಣತೀರು
ಕುಸುಮಾಲೆ ಎತ್ತಿ ಕುರಿಸವರೆ
ಅವರ ತಾಯಿ ಹಡದವ್ವ ಹಬ್ಬಾವ ಮಾಡವರೆ
ಅವರಿಗೂಟಕ್ಕೆ ಇಕ್ಕುತಾರೆ ನೀರಾವೆ ಕೊಟ್ಟು
ಜೋಳದ ಕಡ್ಡಿ ಸೀರೆ ಉಡಿಸಾರು
ಏಳೆಂದೊಡವೆ ಉಡೀಸಿ

ಬೇಕಾದ ಬಂಗಾರ ಧರಿಸಿ
ಮುತ್ತಿನ ಮುಡಿಲಕ್ಕಿ ಹುಯ್ಯದಾರು
ಕುಸುಮಾಲೆ ಕರ್‍ಕಂಡು ಬರುತಾರೆ
ಊರಬಾಗಿಲ ತನಕ ಕಳಿಸಿ ಹೋಗುತಾರೆ
ಏನ ಹೇಳುತಾರೆ ಗೆಣತೀರು
ಹೋಗೋಳು ಹೋಗ್ತಿಯು ಬರುವೊದೇಸುದಿನ
ನೊಂದಿಯೆ ಕಾಣೆ ಕುಸುಮಾಲೆ
ಎಲೆ ಹೆಣ್ಣೇ ನಿಲ್ಲು ಮಲ್ಲಿಗೆ ನೆರಳಲ್ಲಿ
ಹನ್ನೆಲ್ಕು ಗೆಣತೀರು ಹಿಂತಿರುಗಿ ಹೋಗುತಾರೆ
ಇವರು ಕುಸುಮಾಲೆ ಕರ್‍ಕಂಡು ಬರುತಾರೆ

ಆಗ ಕುಸುಮಾಲೆ ಮತ್ತೇನ ಮಾಡುತಾಳೆ
ಕಂದಗೆದೆ ಹಾಲ ಕೊಡುತಾಳೆ ಕುಸುಮಾಲೆ
ಗುಡ್ಲಕೆ ಕೂಡಿ ಬೀಗ ಹಾಕುತಾಳೆ ಕಂದಮ್ಮಗೆ
ಅವಳು ಮತ್ತೇನು ಕೆಲಸ ಮಾಡುತಾಳೆ
ಕಂಡುಗ ಕುಟ್ಟುತಾಳೆ ಕಂಡುಗ ಬೀಸುತಾಳೆ
ಹನ್ನೆಡಿತ್ತಿಗೆ ಹೊರೆ ಮಾಡುತಾಳೆ
ರೊಟ್ಟಿ ಸುಡುತಾಳೆ ಬುತ್ತಿಯು ಕುಟ್ಟುತಾಳೆ
ಮತ್ತೇನಂತಾವ ಹೇಳುತಾಳೆ
ರೊಟ್ಟಿ ಸುಟ್ಟೇನು ರೊಟ್ಟೆರಡು ಬಾಗಾದ
ಇದೇನು ಮಾಸ್ವಾಮಿ ಅಪಸಕುನ
ಬುತ್ತಿ ಕಟ್ಟಿದೆನು ಬುತ್ತೆರಡು ಬಾಗಾದ
ಇದೇನು ಮಾಸ್ವಾಮಿ ಅಪಸಕುನ
ಹಸಿಟ್ಟು ತರಿಯಾಗಿ ರೊಟ್ಟಿ ಒಡೆದಾವು
ಇದಕೇಕೆ ನಿನಗನುಮಾನ
ಕಲ್ಲು ಸಿಕ್ಕಿದವು ಬುತ್ತಿ ಒಡೆದಾವು
ಇದಕೇಕೆ ನಿನಗನುಮಾನ
ಕುಸುಮಾಲೆ ನಾ ಹೋಗಿ ಬರುತೀನಿ
ಗೆಣೆಕಾರ್‍ರ ಒಡಗೂಡಿ
ನಾ ಬರೊತಂಕ ಬಲು ಜೋಕೆ
ನಾ ಗಟ್ಟಕ್ಹೋಗಿ ನಿಂಗ ಬೇಕಾದ ಸೀರೆ

ತಲೆ ಮುಂಡೆಗೆ ತಕ್ಕ ಚವಲಿಯ ತರ್ತೀನಿ
ನಿನಗನುಮಾನ ಬ್ಯಾಡ ಕುಸುಮಾಲೆ

ತಿಮ್ಮಪ್ಪಸ್ವಾಮಿ ಊಟವ ಮಾಡುತಾರೆ
ಮತ್ತೇನಂತಾವ ಕರೆದವರೆ
ಹೋಗೋದು ಮೂರು ತಿಂಗಳು
ಬರೋದು ಮೂರು ತಿಂಗಳು
ನಾ ಅಲ್ಲೇ ಮೂರು ತಿಂಗಳು ಇರಿತೀನಿ
ನಾವು ಒಂದಿಗೂಟವ ಮಾಡಾನಾ
ನಾ ಒಂದಿಗೂಟಾವ ಮಾಡಾಕೆ ಅಕ್ಕಲ್ಲ ತಂಗೆಲ್ಲ
ಬುಟ್ಟುಕೊಡಿ ನನಗೆ ಅರ್ಧವಾ
ಅರ್ಧ ಊಟವಾ ಮಾಡಿ ಅರ್ಧವ ಬುಟ್ಟುರು
ಅದವಾ ಕುಸುಮಾಲೆ ಊಟ ಮಾಡಿದಾಳು
ಮತ್ತೇನಂತಾ ಹೇಳುತಾರೆ
ಇಬ್ಬಾರು ಕೂತುಕೊಂಡು ವಿಳ್ಳೇವ ಮೆಲ್ಲವಾನು
ಕಂದಾನಾ ನೀನು ಕರತಾರೆ
ಕಂದಾನ ಕರ್ಕೊಂಡು ಇಬ್ಬಾರು ಕೂತುಕೊಂಡು
ಅವರಿಬ್ಬರೂ ವಿಳ್ಳೆವಾ ಮೆಲ್ಲುತಾರೆ
ಅವರಿಬ್ಬರೂ ವಿಳ್ಳೆವಾ ಮೆಲ್ಲುತಾ ಏನಂತಾರೆ
ತಂಬಲವಾ ಕೊಡಿ ಸ್ವಾಮಿ ಶರಣೋರೆ
ನಾ ವಿಳ್ಳೆವಾನ ಮೆಲ್ಲುತೀನಿ
ಕೈಗೆ ಕೊಟ್ಟರೆ ಮುಟ್ಟೋಳು ನಾನಲ್ಲ
ಬಾಯ್ಗ ತಂಬಲವ ಕೊಡಬೇಕು
ಬಾಯ್ಗ ಇಳ್ಳೆವ ಇಸ್ಕೊಂಡು ಮೆದ್ದಾಳು
ಅವಳು ಮುಂಡೆಯ ಕೂದಲು ಬಿಚ್ಚುತಾಳೆ
ಕುಸುಮಾಲೆ ಮುಂಡೆ ಹನ್ನೆರಡು ಮಾರುದ್ದಾ
ಅವರ ಕಾಲಿಗೆ ಕೂದಲ ಸುತ್ತುತಾಳೆ
ಅವಳು ಒಕ್ಕಳ ದುಃಖ ಮಾಡುತಾಳೆ
ಹೋಗೋದು ಮೂರು ತಿಂಗಳು ಬರೋದು ಮೂರು ತಿಂಗಳು
ನೀವಲ್ಲಾರು ತಿಂಗಾಳು ಇರುತೀರಿ ಮಾಸ್ವಾಮಿ
ತೌರಿಗೆ ನನ್ನ ಕಳಿಸ್ಹೋಗಿ

ಗಂಡ ಘಟ್ಟಕ್ಹೋದ ಹೆಂಡ್ತಿ ತೌರಿಗ್ಹೋದ
ಹೆಂಗತನ ಜನ ನಗುತಾರೆ ಕುಸುಮಾಲೆ
ನಾ ತಿಂಗಳಿಗೊಂದು ಸಲ ಬರುತೀನಿ
ಚಿಂತೆ ಮಾಡಬ್ಯಾಡ ಕುಸುಮಾಲೆ
ಅವಳಿಗ್ಹೇಳಿದಾರು ಮಗುನ ಎತ್ತಿಗೊಂಡು
ಮುದ್ದಾಡಿ ಮುತ್ತ ಕೊಡುತಾರೆ
ಮುದ್ದಾಡಿ ಮುತ್ತ ಕೊಟ್ಟೇನ ಹೇಳುತಾರೆ
ಅಳುಬ್ಯಾಡ ನನ್ನ ಅರಗಿಣಿ ಕಂದವ್ವ
ನಿನಗಂಗಿ ಕುಂಚಿಗೆಯು ತರುತೀನಿ
ತಂದೇನು ವಜ್ರದುಡುದಾರ ತರುತೀನಿ
ಅಳುಬ್ಯಾಡಕಾಣೊ ಅರಗಿಣಿಯೆ ನನ ಕಂದಯ್ಯ
ಕೇಳು ಕುಸುಮಾಲೆ ನಿನ್ನ ಭಂಗ ಹಾಳಾಗಲಿ
ಕಂದನ ನೀನು ಅಳಿಸೀಯು
ಅತ್ತೆಮ್ಮ ಹೊಡಿತಾರೆ ಅತ್ತಿಗಮ್ಮ ಬೈತಾರೆ
ನಾ ಯಾರಿಗೇಳಾಲಿ ಏನ ಸ್ವಾಮಿ
ಬೋದಾರೆ ಬೈಯಾಲಿ ಹೊಡೆದಾರೆ ಹೊಡೆಯಾಲಿ
ನಾ ತಿಂಗಳಿಗೊಂದು ಸಲ ಬರುತೀನಿ ಕುಸುಮಾಲೆ
ಜೋಕೆ ಕಾಣೆ ಎನ್ನ ಅರಮಾನೆ
ಅಂಗತವ್ಹೇಳಿ ರೊಟ್ಟಿ ಬುತ್ತಿಯು ತಗದಾರು
ಬೆನ್ನಿಗೆ ತಾನೂ ಬಿಗಿದಾರು ಮಾಸ್ವಾಮಿ
ಮಾಸ್ವಾಮಿ ಕುದುರೆಯು ತಾನು ಹಿಡಿದಾರು
ಕುದುರೆ ಹಿಡಿದಾರು ಸಿಂಗಾರ ಮಾಡ್ಯಾರು
ಕುದುರೆಗೆ ಜೀನ ಬಿಗಿದಾರು ಪಡಿವಾಣ ಹಾಕ್ಯಾರು
ಮುತ್ತಿನ ಸಬರ ಬಿಗಿದಾರು ಮಾಸ್ವಾಮಿ
ಕುದುರೆಯ ತಾವು ಏರ್ತಾರೆ ಮಾಸ್ವಾಮಿ

ಒಂದು ಮೆಟ್ಟಿಗೆಯು ಇಳಿದಾರು
ಅವರ ಬಲಗಾಲ ಅಲ್ಲಿ ಎಡಗೀತು
ಗ್ಯಾನ ಮಾಡಸಿಲ್ಲ ಎರಡ ಮೆಟ್ಟಿಗೆ ಇಳಿದಾರು
ಎಡಗಾಲು ಅಲ್ಲಿ ಎಡಗೀತು
ಮೂರು ಮೆಟ್ಟಿಗೆಯು ಇಳಿದಾರು ಮಾಸ್ವಾಮಿ
ಕುದುರೆ ಮುಂದಾಕೆ ಮುಗ್ಗರಿಸೀತು

ಇದುವೇನು ಜೀಜಿ ಬಲ್ಲವಿಲ್ಲವೇನು
ಬಲವೇ ಇಲ್ಲವೇ ಕಣ್ಣು ಕಾಣದಿಲ್ಲವಾ
ಎಡಗುತಾ ಮುಗ್ಗುತಾ ನಡೆದೀಯ
ಊರ ಬಾಗಿಲಿಗೆ ಹೋದಾರು ಮಾಸ್ವಾಮಿ
ಆವರ ಕುಸುಮಾಲೆ ಹಿಂದ್ಹಟ್ಟಿ ಹೋಗ್ತಾಳೆ
ಇದುವೇನಿ ಕುಸುಮಾಲೆ ಸುಕ್ಕಳಾಟ ಆಡುವೇಯ
ಹೋದಾರು ನನ್ನ ಗೆಣೆಕಾರರು ಕುಸುಮಾಲೆ
ನಾನೊಬ್ಬಾನಾತೀನೆ ಅಡವೀಲಿ
ಹಿಂದಟ್ಟು ನೀನು ಬರಬ್ಯಾಡ
ಅಡವೀಲಿ ನಾನು ಒಬ್ಬನು ಆಗ್ವಾಗೆ
ಹುಲಿ ಕಂಡಿಲ್ಲಿ ಬಲವಲ್ಲಿ ಕುಸುಮಾಲೆ
ಹಿಂದಟ್ಟಿ ನೀನು ಬರಬ್ಯಾಡ
ಆಗ ಕುಸುಮಾಲೆ ದುಃಖಾವ ಮಾಡುತ್ತಾ
ದಾರಿಯ ನೋಡುತ್ತಾ ನಿಂತಾಳಲ್ಲಾ
ಆಗ ತಿಮ್ಮಪ್ಪಸ್ವಾಮಿ ಘಟ್ಟಕ್ಕೆ ಹೋದಾರು
ಕುಸುಮಾಲೆ ನಿಂತ್ಕಂಡು ನೋಡುತಾಳೆ

ಕುಸುಮಾಲೆ ಹಿಂತಿರುಗಿ ಬರುತಾಳೆ
ಮನೆಗೆ ಬಂದವಳು ಮತ್ತೇನ ಮಾಡವಳೆ
ಕಂದಗೆಡೆ ಹಾಲ ಕೊಡುತಾಳೆ
ಗುಡ್ಲಕೆ ಕೊಡುತಾಳೆ ಬೀಗ ಹಾಕುತಾಳೆ
ಅವರತ್ತೆ ಮಲ್ಲವ್ವ ತಾಯಿ ಅತ್ತಿಗೆ ವರನಂದಿ
ಅವಳ ಅಂಗಳ ಹತ್ತಗೊಡರು
ಕುಸುಮಾಲೆಯು ದುಃಖವ ಮಾಡುತಾಳೆ
ತಿಮ್ಮಪ್ಪಸ್ವಾಮಿ ಘಟ್ಟಕಾನೆ ಹೋಗಿ
ಇಲ್ಲಿಗೆ ಮೂರು ದಿನ ಕಳದಾವು
ಕುಸುಮಾಲೆಗೆ ನೋಡು ಉಣ್ಣಕ್ಕೆ ಅನ್ನವಿಲ್ಲ
ಕುಡಿಯಾಕೆ ನೀರಾ ಕೊಡನಿಲ್ಲ
ಅತ್ತೆ ಮಲ್ಲವ್ವ ತಾಯಿ ಅತ್ತಿಗೆ ವರನಂದಿ
ಹೊಟ್ಟೆ ಹಸಿವು ನನಗೆ ಬಲುವಲ್ಲಾ
ನಿಮ್ಮಣ್ಣ ಹೋದದಿನ ಊಟಾವ ಮಾಡಿದ್ದು
ಈಟಂಬಲಿಯು ನನಗೆ ಕೊಡಿರವ್ವಾ

ಜೋಳದ ಕಡ್ಡಿಯ ಸೀರೆ ಉಟ್ಟದಿಯು
ಏಳೆಂಟು ವಡವೆ ಇಕ್ಕಿದಿಯಲ್ಲೆ ಎಲೆ ಹೆಣ್ಣೆ
ನಿನಗ್ಹೊಟ್ಟೆ ಹಸಿವೆಂದರೇನೆ
ಸೊಟೆಯು ಹಿಡಿತಾರೆ ಕೇಳಾವ ಸಿಗಿತಾರೆ
ಅಸರು ಕತ್ತು ಹಿಡಿದು ಈಜೆಗೆ ನೂಕುತಾರೆ
ದುಃಖವಾ ಮಾಡುತಾಳೆ ಕುಸುಮಾಲೆ
ದುಃಖವಾ ಮಾಡುತ್ತೀಯ ಚಿಂತೆ ಮಾಡುತ್ತೀಯ
ವ್ಯಸನೇನೆ ಮುಂಡೆ ನಿನಗೇನೆ
ಹಂಗಸಿ ಅವಳ ಬೈಯುತವಳಲ್ಲಾ
ಅವಳಿಗೆ ಕುಡಿಯಾಕೆ ನೀರ ಕೊಡನಿಲ್ಲ

ಅವರತ್ತೆ ಮಲ್ಲವ್ವ ಪತ್ತೇಲ್ಲಿ ಹೋಗುತಾರೆ
ಕುಂಬಾರ ಬೀದಿಗ್ಹೋಗುತಾರೆ
ಕುಂಬಾರ ಗುಂಡಯ್ಯ ಇಲ್ಲಿ ಕೇಳ ನನಮಾತ
ನಿಂಗೊಂದ್ವರವ ನಾ ಕೊಡುತೀನಿ ಕುಂಬಾರಶೆಟ್ರೆ
ನಂಗೆ ಮಿಣಿ ಸುತ್ತಿನ ಕೊಡ ಕೊಡಬೇಕು
ಆಗ ಗುಂಡಯ್ಯ ಮಿಣಿ ಸುತ್ತಿನ ಗುಂಬಾವ
ಮಾಡಿದ ಗುಂಬ ಕೊಡುತಾರೆ ಗುಂಡಯ್ಯ
ಮಲ್ಲವ್ವ ತಾಯಿ ತಕ್ಕೊಂಡೋಡಿ ಬರುತಾಳೆ
ಕೇಳೆ ಕೇಳೆ ಕಂದವ್ವ ವರನಂದಿ
ಸಣ್ಣದೊಂದ ಕೊಡವ ತಗಳೇಳೆ
ಅವಳಿಗೆ ಮಿಣಿ ಸುತ್ತಿನ ಗುಂಬ ಕೊಡು ಹೋಗೆ
ನೀರಾ ನೀವೀಗ ತರಬನ್ನಿ ನನ್ನ ಕಂದ
ಆಗ ಕುಸುಮಾಲೆ ಬಾಗುತಾ ಬಳುಕುತಾ
ಬಾವಿ ನೀರಿಗೇ ನಡದಾಳು
ಅವಳತ್ತಿಗೆ ವರನಂದಿ ಸಣ್ಣದೊಂದು ಗುಂಬಾವ
ಹೊತ್ತುಗೊಂಡು ಬ್ಯಾಗ ಬರುತಾಳೆ
ಅವಳಾಗ ಕುಸುಮಾಲೆ ದುಃಖವಾ ಮಾಡುತಾಳೆ
ನಾನು ಬತ್ತೀನಿ ಅತ್ತೀಗೆ ನನ ತಾಯೀ
ಕೊಡವ್ಹೊಟ ನಂಗೆ ಹೊರ್ಸಿರವ್ವೋ
ಆಗ ವರನಂದಿ ಹೊತ್ತುಕೊಂಡು ಬಂದಾಳು
ಬಾವೀಲಿ ಕುಸುಮಾಲೆ ಬಗ್ಗವಳೆ

ಏಟು ನಸುಗಿದರೂ ಏಳದಾಕೊಡವು
ಬಾವಿನಲ್ಲಿಯೇ ಬಗ್ಗ ವಳೆ
ಇದುವೇನು ವರನಂದಿ ಒಬ್ಬಳೆ ಬಂದೆಲ್ಲೆ
ಅವಳೆಲ್ಲಿ ಹೋದಾಳೆ ಕುಸುಮಾಲೆ
ಕೊಡವಾ ಹಿಡ್ಕೊಂಡು ಬಾವೀಲಿ ಬಗ್ಗ ವಳೆ
ಕೊಡವಾ ನಾನೀಗ ಹೊರ್ಸನಿಲ್ಲಾ
ಜೋಳದ ಕಡ್ಡಿ ಸೀರೆ ಉಟ್ಟವಳೆ
ಕಳ್ಳ ಮುಂಡೆ ಅವಳ್ಗ ವೈಭಾರವೇನೆ ಕೈ ಬಾರ್ವಾ
ಏಳೆಂಟು ವಡವೆಯಾ ಇಕ್ಕವಳೇ ಕಳ್ಳ ಮುಂಡೆ
ಅವಳಿಗೆ ಭಾರೆಂದರೇನೆ ಆ ಕೊಡ
ನೀನಾಗವತ್ತಿಗೆ ನೋಡಾದೇ ಬಂದೆ
ನಾನಾದ್ರೆ ಹೆಟ್ಟನೂಕೆ ಬರುತ್ತಿದ್ದೆ
ಅವಳಾಗ ವರನಂದಿ ನೀರುಗ್ಹೊೀಗಿ
ಅವಳು ನಿಂತು ನೋಡ್ತಾಳೆ ಅತ್ತಿಗೇಯು
ಅವಳು ನಿಂತು ನೋಡ್ತಾಳೆ ವರನಂದಿ
ಕುಸುಮಾಲೆಯು ಬಾವೀಗೆ ನೂಕುತಾಳೆ
ಬಾವಿಗೆ ನೂಕಿದಾಳು ಕುಸುಮಾಲೆಯು
ಬಾವಿಗೆ ಬಿದ್ದಾಳು ಕುಸುಮಾಲೆ
ಬಾವಿಗೆ ಬಿದ್ದಾಳೆಂದು ನೀರ ಪೊತ್ತುಕೊಂಡು ಬರುತಾಳೆ

ಊರ ಗೌಡರ ಮಗ ಊರ ಬಾಗಲ ಗದ್ದೆಗೆ
ಹೊನ್ನಾರನವರು ಕಟ್ಟವರೆ
ಆರು ಕಟ್ಟಿದರು ಆರಾನೆ ಬುಟ್ಟಾರು
ಎತ್ತ ನೀರಿಗೆ ಹೊಡೆದಾರು
ಎತ್ತು ನೀರಾ ಕುಡಿನಿಲ್ಲಾ
ಹಿಂತಿರುಗಿ ತಾವು ನಿಂತವೆ
ಇದವೇನ ಕಾಣೆ ಎತ್ತು ನೀರಾ ಕುಡಿನಿಲ್ಲ
ಏನು ಬಾವೀಲಿ ಇರಬೈದು ನಾಕಾಣೆ
ಹಂಗಂತ್ವ ಕೋಲ ತಗದವರೆ ಗೌಡರು
ಬಾವೀಲಿ ಚಕ್ರ ತಿರುಗಸವರೆ
ಕೋಲ ತಿರುಗಿಸಿ ಪೋಕೆ ನೇಸಗುತಾರೆ
ಕುಸುಮಾಲೆ ಮಂಡೆ ಬರುತ್ತೈತೆ

ಇದುವೇನೆ ಕಾಣೆ ಮಂಡೆ ಕೂದಲಂತ
ದಿನ್ಮನೆ ಮೇಕೆ ನೆಸುಗುತಾರೆ
ಆಗ ದಿಡ್ಡಕ್ಕೆ ಕುಸುಮಾಲೆಯು ಮಲಗಿಸಿ
ಏನಾಂತನವರು ಹೇಳುತಾರೆ
ತಾಯಿ ತೌರಲ್ಲಿ ಇದ್ದಂತ ಆ ಹೆಣ್ಣ
ಕರ್ಕಂಡು ಬಂದು ಬುಟ್ಟು ಘಟ್ಟಕ್ಕೆ ಹೋಗವ್ನೆ
ಅವಳಿಗಿಂತಾ ಕಷ್ಟ ಕೊಡಬಹುದೇ
ನಾ ಹಾಳಾದವನಿಲ್ಲೇ ನೀರಿಗೆ ಬರಬಹುದೆ
ನಾಂ ಇದೊಂದ ಪಾಪಕೆ ಗುರಿಯಾದೆ ನಾನೀಗ
ನಾ ಹಾಳಾದವನಲ್ಲಾ ಬರಬಹುದೇ ಅಂತವ್ಲೇಳಿ
ಅಂಗಡೀಲಿ ಕಪ್ಪುರ ತರಿಸಾರು
ಗೌಡರೂ ಅಲ್ಲಿ ಗಮಂನ ಹಾಕುತಾರೆ
ಹಗಲು ಮೂರು ದಿನ ಇಳ್ಳು ಮೂರು ದಿನ
ಗಮನ ಸುರುಲೋಕ ಹೋಗುತ್ತೈತೆ

ಶಿವ ಪಾರ್ವತಿ ಊಟವಾ ಮಾಡ್ಯಾರು
ವಿಳ್ಳೆ ಮೆಲ್ಲುತ ಕೂತೇನವರೆ
ಇದವೇನು ಸ್ವಾಮಿ ನರಲೋಕದ ಸಿರ್ಗೋಳ
ನಾವು ನೋಡಿ ಬರೋಣ ಶರಣೋರೆ
ಹೂವಾ ಹುಳುಗಳು ಮುಟ್ಟುತ್ತಾವೆ
ಹಣ್ಣುಗಳ ಹಕ್ಕಿಗಳು ಮುಟ್ಟುತ್ತಾವೆ
ಹೊತ್ತಾಗುತ್ತೈತೆ ಶಿವಪೂಜೆಗೆ ಪಾರ್ವತಿಯೆ
ಹೋಗಬಾರದೀಗ ಪಾರ್ವತಿಯೆ
ಸ್ತ್ರೀಯರ ಗೋಳು ಭಾಳ ಕಾಣತಾವೆ
ನಾ ಹೋಗಿ ನೋಡಿ ಬರುವೇನು
ಆಗ ಶಿವ ಪಾರ್ವತಿಯು ಬಂದು ನೋಡುತಾರೆ
ಮನಗವಳಲ್ಲ ಕುಂಸುಮಾಲೆ
ಆಗ ಶರಣಾರು ಮೂರು ಮಂತ್ರ ಜಪಿಸಾರು
ನಾಗ ಬೆತ್ತವ ಎಳೆದಾರು ಮಾಸ್ವಾಮಿ
ಜೀವಾಳದ ಕಡ್ಡೀಲಿ ಊದ್ಯಾರು
ಹಿಂತಿರುಗಿ ಅವರು ಬಾವಿಯ ನೋಡ್ತಾರೆ
ನೀ ನೋಡೆ ಪಾರ್ವತಿ ಇವಳ ಈ ಗೋಳ

ಮಿಣಿ ಸುತ್ತಿನ್ದೊಂದು ಕೊಡವಲ್ಲಾ ಇರೋದು
ಇವಳ ಗೋಳು ಮುಂದೇನಾಗೋದು
ಚಂದಾಗಿ ನಾವು ನೋಡೋಣ ಅಂತವ್ಳೇಳಿ
ಕೊಡಕೆ ಮಂತ್ರಾವ ಜಪಿಸವರೆ
ಬಂಡಿಯಂತೆ ಭಾರ ಹೂವಿನಂಗೆ ಬರಲೆಂದು
ಅವರು ಮಂತ್ರವ ಜಪಿಸಾರೆ ಮಾಸ್ವಾಮಿ
ಆವರು ಕಣ್ಣಿಗೆ ಮಾಯಾಗಿ ಹೋದರಲ್ಲ

ಕುಸುಮಾಲೆ ಎದ್ದು ಕೂರುತಾಳಲ್ಲ
ಯಾರಪ್ಪ ನನ್ನ ಪಡದಾರು
ತಾಯಿ ಇಲ್ಲವಲ್ಲಾ ತಂದೆ ಇಲ್ಲವಲ್ಲಾ
ನನ್ನ ಭಾಗಕ್ಯಾರು ಇಲ್ಲಸಲ್ಲಾ
ನನ್ನಾವ ಈಗಾರು ಪಡಾದವು
ಅಂತವ್ಳೇಳಿ ದುಃಖ ಮಾಡುತಾಳೆ
ಆಗ ಕುಸುಮಾಲೆ ದುಃಖ ಮಾಡಿದಾಳು
ಮೇಲಕ್ಕೆದ್ದು ಕೈಕಾಲು ತೊಳೆದಾಳು
ಕೊಡವನವಳೀಗ ನೆಸಿಗಾಳು ಕುಸುಮಾಲೆ
ಹೂವಿನಂಗೆ ಈಗ ಬರುತೈತೆ
ಕೊಡವ ಹೊತುಗೊಂಡು ಬಾಗುತವ ಬಳುಕುತವ
ಬಾಗಿಲಿಗವಳು ಬರುತಾಳೆ
ಅತ್ತಿಗವ್ಮ ನನ ತಾಯಿ ಕೊಡ ಇಳುಗಿ ನನತಾಯಿ
ಎಲೆ ಕಳ್ಳ ಮುಂಡೆ ಎಲೆ ಮಳ್ಳಿ ಮುಂಡೆ
ಈ ಕೊಡವು ನಿನಗೇ ಭಾರವೇನೆ
ಅತ್ತೆ ಮಲ್ಲವ್ವ ತಾಯಿ ಕೊಡವಾ ಇಳುಗಲು ಬನ್ನಿ
ಮೈ ಭಾರವೇನೆ ಕೈ ಭಾರವೇನೆ
ಹಂಗತ್ಲೇಳಿ ಹಿಂದಕೆ ನೂಕುತಾಳೆ
ಹಿಂದಕೆ ಹೆಟ್ಟುತಾಳೆ ಮುಂದಕೆ ನೂಕುತಾಳೆ
ದುಃಖವಾ ಮಾಡುತಾಳೆ ಕುಸುಮಾಲೆ
ಕೊಡವ ಇಳಿಗ್ಯಾಳು ಮೂಲಿಗೆ ಮಡಿಗ್ಯಾಳು
ಗುಡ್ಲದ ಬಾಗಿಲಾ ತೆಗದಾಳು
ಹಗಲು ಮೂರು ದಿನ ಇಳ್ಳು ಮೂರುದಿನ
ಅಲ್ಲಿಗಾರು ದಿನ ತುಂಬಿದಾವು ಕಂದಯ್ಯಗೆ

ಮಗನನೆತ್ತಿಕೊಂಡು ಎತ್ತಿ ಮುದ್ದಾಡುತಾಳೆ
ಕಂದಯ್ಯಗೆ ಹಾಲ ಕೊಡುತಾಳೆ ಕುಸುಮಾಲೆ
ಮತ್ತೆ ಗುಡ್ಲಕೆ ಕೂಡಿ ಬೀಗ ಹಾಕುತಾಳೆ

ಅತ್ತೆ ನನ ತಾಯಿ ಹೊಟ್ಟೆ ಬಾಳ ಹಸುವಲ್ಲಾ
ಊಟ ಅಂಬಲಿ ಕೊಡಿರಿ ನನ ತಾಯಿ
ಜೋಳದ ಕಡ್ಡಿ ಸೀರೆ ಏಳೆಂಟು ವಡೆವೆಲ್ಲಾ
ನಿನಗ ಹಸುವೆಂದರೇನೆ ಎಲೆ ಮುಂಡೆ
ಅತ್ತಿಗೆ ವರನಂದಿ ನಿಮ್ಮ ಅಣ್ಣಯ್ಯ ಹೋದದಿನ
ನಾ ಊಟ ಮಾಡಿದ್ದು ನನ ತಾಯಿ ಅತ್ತಿಗಮ್ಮ
ಊಟ ಅಂಬಲಿ ಕೊಡಿ ನನ ತಾಯಿ
ಜೋಳದ ಕಡ್ಡಿ ಸೀರೆ ಉಟ್ಟಿದ್ದೀರಕ್ಕಾಗಮ್ಮ
ನಿನಗ್ಹೊಟ್ಟಸವು ನಿಜವೇನೆ
ಬೆರಣಿಯಾ ಹೆಂಕಿ ಬಾಳ ದಿವಸವಾಯ್ತು
ನಾ ಬೆರಣಿಗೋಗುತೀನಿ ಹಡೆದವ್ವ
ಬೇಸಗೆ ಬಿಸಲಲ್ಲಿ ಬೀಸುವ ಗಾಳೀಲಿ
ಒಬ್ಬಳು ಹಸು ಬಳದು ನಡೆದೀಯು ವರನಂದಿ
ನಾ ಕೊರಮರ ಬೀದಿಗ್ಹೋಗಿ ಬರುತೀನಿ
ಅವರ ಅತ್ತೆ ಮಲ್ಲವ್ವ ಕೊರಮರ ಬೀದಿಗೆ
ಬೇಗಾದಿಂದಾ ನಡೆದಾಳು
ಕೊಮರ ಸಿದ್ದಯ್ಯ ಮಿಣಿಸುತ್ತಿನ ಜಲ್ಲೇಯು
ಮಾಡಿಕೊಡಯ್ಯ ಸಿಂಬೀಸು
ಮಿಣಿಸುತ್ತಿನ ಜಲ್ಲೇಯು ಮಾಡಿಕೊಟ್ಟರ ಎರಡು ವರಕೊ
ಮಿಣಿ ಸುತ್ತಿನ ಜಲ್ಲೆ ಮಾಡಿದ್ದೈತ್ತಲ್ಲಾ
ಸಿದ್ದಯ್ಯನಾಗ ಕೊಡುತಾರೆ
ಜಲ್ಲೆಯು ತಕೊಂಡು ಬಂದಾಳು ಮಲ್ಲಮ್ಮ
ಕೊಳ್ಳೆ ಕೊಳ್ಳೆ ಕುಸುಮಾಲೆ
ಬೆರಣಿಯಾ ಹೆಂಕಿ ಬಾಳ ದಿವಸಾಗಿತ್ತು
ಬೆರಣಿಯಾ ಹೆಂಕಿ ತರಹೋಗೆ
ಕೇಳೆ ನನ್ನ ಕಂದ ಚಿಕ್ಕೋಳೆ ವರನಂದಿ
ಅವಳ ಆರುಂದಡವೀಗೆ ಕರ್ಕಂಡು ಹೋಗೆ
ಅವಳ ಆರುಂದಡವೀಗೆ ಬುಟ್ಟಾರೆ ಬಂದಾರೆ

ಸತ್ತು ಹೋಗಲೇಳೇ ಕುಸುಮಾಲಿ
ಅವಳುಡುವ ಸೀರೆ ಅವಳಿಕ್ಕುವ ಪಡವೆ
ನಿನಗಲ್ಲವೇನೇ ವರನಂದಿ

ಆಗ ವರನಂದಿ ಅತ್ತಿಗೆಯು ಕರ್ಕಂಡು
ಹೋಗುತ್ತಾಳೆ ಆರಂಡಡವಿಯು ವರನಂದಿ
ಹೆಂಕವರೇ ನೋಡು ಬೆರಣಿಯಾ
ವರನಂದಿ ಕುಕ್ಕೆ ಸಣ್ಣದು
ಬೇಗಾನೆ ಅದು ತುಂಬಿತ್ತಲ್ಲಾ
ಇವಳು ಕುಕ್ಕೆ ಹೊತ್ತುಕಂಡು ಬರ್ತಾಳಲ್ಲ
ಏಳು ಕೇಳುತಾಳೆ ಕುಸುಮಾಲೆ
ಅತ್ತಿಗಮ್ಮ ನನ್ನ ತಾಯಿ ನಾ ಒಬ್ಬಳಾಗ್ತೀನಿ
ಹುಲಿ ಕಂಡಿಲ್ಲ ಬಲಸಲ್ಲಾ ಅತ್ತಿಗಮ್ಮ
ಹೆದರೀಕೆ ನನಗೆ ಆಗೋದು ಅತ್ತಿಗಮ್ಮ
ಅತ್ತಿಗಮ್ಮ ಬುಟ್ಹೋಗಬೇಡ ನನ್ನ ತಾಯಿ
ಜೋಳದ ಕಡ್ಡಿ ಸೀರೆಯು ಉಟ್ಟದಿಯು ಎಲೆಸುಂಡೆ
ಏಳೆಂಟು ಪಡವೆ ಇಕ್ಕಿದಿಯಲ್ಲೆ ಎಲೆಸುುಂಡೆ
ನಿಂಗ್ಹೆದರಿಕೆ ಅನ್ನೋದು ನಿಜವೇನೆ ಅಂತವ್ಹೇಳಿ
ಹೊತುಕೊಂಡು ಅವಳು ಬರುತಾಳೆ
ಹಗಲು ಮೂರು ದಿನ ಇಳ್ಳು ಮೂರು ದಿನ
ಆರು ದಿನ ಬೆರಣಿಯು ಹೆಂಕಾಳು
ಆರು ದಿನಕೆ ಜಲ್ಲೆ ತುಂಬಿತಲ್ಲಾ
ನೆಸಕಿ ನೋಡುತ್ತಾಳೆ ಕುಸುಮಾಲೆ
ಏಟು ನೆಸಕಿದರೂ ಜಲ್ಲೆ ಮೇಕೇಳದು
ದುಃಖವಾ ಮಾಡುತಾಳೆ ಕುಸುಮಾಲೆ
ಏಟು ನೆಸುಕಿದರು ಏಳದೀ ಜಲ್ಲೆ
ಸಾಕು ಮಾಡೆನ್ನಾ ಜಲುಮಾವ
ಹೆಣ್ಣಾಗಿ ಹುಟ್ಟೋದು ಮಣ್ಣಾಗಿ ಹುಟ್ಟಿದರೆ
ಮಣ್ಣಿನ ಮೇಲೆ ಮರವಾಗಿ ಹುಟ್ಟಿದರೆ
ಪುಣ್ಯಾತ್ಮರು ಕುರೋ ನೆರಳಾಗಿ ಬದುಕೇನು
ಸಾಕು ಮಾಡೆನ್ನ ಜಲುಮಾವ ಅಂತವ್ಹೇಳೆ
ದುಃಖ ಮಾಡುತಾಳೆ ಕುಸುಮಾಲೆ

ಕುಸುಮಾಲೆ ಕಣ್ಣೀರು ಪಾರ್ವತಿಯು
ಕಾಲಿಗೆ ಕಟ್ಟಿ ಬೇಡವೆ ಕಣ್ಣೀರು
ಈಗ ಪಾರ್ವತಮ್ಮ ಸ್ವಾಮಿಗೇನ ಹೇಳುತಾರೆ
ಇದುವೆ ಕೇಳಿ ಸ್ವಾಮಿ ನನ ಮಾತ
ಸ್ತ್ರೀಯರ ಗೋಳ ಭಾಳ ಗೋಳು
ಕಣ್ಣೀರ ನನೆ ಕಾಲ ಕಟ್ಟವೆ ಮಾಸ್ವಾಮಿ
ನಾವು ಹೋಗಿ ಬರೋಣ ಶರಣೋರೆ
ಹೂ ಹುಳು ಮುಟ್ಟತಾವೆ
ಹಣ್ಣ ಹಕ್ಕಿ ಮುಟ್ಟತಾವೆ
ನಮ್ಮ ತಾನಕ್ಹೊತ್ತು ಆಗುತ್ತೈತೆ
ಹೋಗನೇಳು ನಮ್ಮ ಅರಮನೆಗೆ
ಬಂದರೆ ಬರಬಹುದು ಬರದೆ ಹೋದರೆ
ಸ್ವಾಮಿ ನಾನೇ ಪ್ರಾಣ ಬುಡತೀನಿ
ಹೆಂಗ್ಸಿನ ಕೂಟೆ ಬಂದರೆ ಹೀಗಂತಾ ಹೇಳಿ
ಬತ್ತಾರೆ ಸ್ವಾಮಿ ಶರಣಾರೊ ಶಿವರಾಯ
ಶಿವರಾಯ ನಿಂದು ನೋಡಿದಾರು ಕುಸುಮಾಲೆ
ಜಲ್ಲೆಯ ಹಿಡಿದವಳು ಅಲ್ಲೇಯ ಬಗ್ಗವಳೆ
ಏನು ಹೇಳುತಾರೆ ಶಿವರಾಯ
ಇವಳ ಗೋಳು ನಾವು ಏಟುಸಲ ನೋಡಾಣ
ಇವಳ್ಗೆ ಮುಂದೇನಾ ಕಷ್ಟ ಒದಗಾವು
ನಾವು ನೋಡಿ ಇವಳ ಕಷ್ಟಕ್ಕೆದರಾಗಿ ಇರುವಾಣ
ಅಂತಹ್ಹೇಳಿ ಮೂರು ಮಂತ್ರವಾ ಜಪಿಸಾರು
ಬಂಡಿಯಂತ ಭಾರ ಹೂವಿನಂಗೆ ಬರಲೆಂದೂ
ಮೂರು ಮಂತ್ರವಾ ಜಪಿಸಾರು
ಬಂಡಿಯಂತ ಭಾರ ಹೂವಿನಂಗೆ ಬಂತಲ್ಲಾ
ಇವರು ಮಾಯಾಗಿ ನಡೆದಾರು
ಆಗ ಕುಸುಮಾಲೆ ಜಲ್ಲೆಯ ಹೊತ್ತುಕಂಡು
ಮೆಲ್ಲಕ್ಕೆನವಳು ಬರುತಾಳೆ

ಹಗಲು ಮೂರು ದಿನ ಇಳ್ಳು ಮೂರು ದಿನ
ಅಲ್ಲಿಗಾರು ದಿನ ತುಂಬಿದಾವು
ಅತ್ತೆ ಅತ್ತಮ್ಮ ಅತ್ತಿ ಮಲ್ಲವ್ವ ತಾಯಿ

ನನ್ನ ಜಲ್ಲೋಟು ನೀವು ಇಳಿಗೀರೊ
ಜೋಳದ ಕಡ್ಡಿಯು ಸೀರೆ ಉಟ್ಟದ್ದೆಯ
ನಿಂಗೆ ವೈ ಭಾರವೆಂದರೇನೆ
ಅತ್ತಿಗೆ ವರನಂದಿ ಜಲ್ಲೆಯು ಇಳಿಗಲು ಬನ್ನಿ
ಹೊಟ್ಟೆ ಹಸಿವು ನಂಗೆ ಬಲುವಲ್ಲೆ
ಏಳೆಂಟು ವಡಪೆಯಾ ಇಕ್ಕದ್ದಿಯು
ಭಾರ ಆಗೋದು ನಿಜವೇನೆ ಎಲೆ ಮುಂಡೆ
ಸತ್ತಳಂತಾವ ಮನೆಗೆ ನಾ ಬಂದಾರೆ
ಮತ್ತೇ ಬಂದೇ ಎಲೆ ಮುಂಡೆ ಅಂತವ್ಹಳಿ
ಅವಳ ಸೋಟೆಯು ಸಿಗಿದಾರು
ಅತ್ತೆಮ್ಮ ನನ ತಾಯಿ ಮೂರಾರು ದಿನ್ನ
ಇಲ್ಲಿಗೊಂಬತ್ತು ದಿನವಾದೂ ಅತ್ತಮ್ಮ
ಹೊಟ್ಟೆ ಹಸಿವು ಬಲುವಲ್ಲಾ ನನಗೆ
ಸಂಗೋಟ ಅಂಬಲಿಯಾ ಕೊಡಿರಮ್ಮಾ
ಬಾಗಿಲಿಗ್ಹೋಗುತಾಳೆ ಬೀಗವ ತಗಿತಾಳೆ
ಕೆಂದಗೆಡಿಹಾಲ ಕೊಡುತಾಳೆ
ಮತ್ತೆ ಕೂಡಿ ಬೀಗ ಜಡಿದಾಳು ಕುಸುಮಾಲೆ

ಇವರಪ್ಪನು ಮಗಳೂ ಮತ್ತೇನ ಮಾಡುತಾರೆ
ನಾವು ಇಸ್ದಡಿಗೆ ಅಡುವಾನ ಕಂದಮ್ಮ
ಅವಳಿಗೆ ಉಣಲಿಕ್ಕೆ ಇಕ್ಕಾನ
ಇಸ್ದ ಅಡಿಗೆ ಮಾಡಿ ಚಿಳ್ಳಲಿ ಕೂರುಸತಾರೆ
ಅನ್ನ ಇಕ್ಕುತ್ತಾರೆ ಅಟ್ಟೆಕ್ಕೆ ಹಾಕುತ್ತಾಳೆ ಹತ್ತು ಕಾಲೇಣಿಯ
ಬೇಕಾದ ಚಂದ್ರಾಯ ತರುತಾಳೆ ಅವರತ್ತೆ
ಚಂದಾಗಿನವಳು ಮಸದಾಳು
ಇವಳಿಗ್ಹೊಟ್ಟೆಗನ್ನವಿಲ್ಲ ಮೂರು ಆರು ದಿನವಾಗಿ
ಬಗ್ಗಿ ಅಂಬಲಿಯು ಸ್ವರದಾಳು ಕುಸುಮಾಲೆ
ಎತ್ತಿ ಕಡಿದವಳೆ ವರನಂದಿ
ಅತ್ತಿಗೆಯ ಸಿರಸ ತುಂಡೊಂದಾಗತಲ್ಲಾ
ಕೈಗಳ ತುತ್ತು ಕೈಯಲ್ಲಿರತಲ್ಲಾ
ಬಾಯಿಗಳ ತುತ್ತು ಬಾಯ್ಲಿತ್ತೆ
ಈ ಅಪ್ಪನು ಮಗಳೂವೆ ಅವಳ

ಹೊತ್ತುಕೊಂಡು ಹೋಗಿ ಆರಂದಡವಿಗೆ
ಉದ್ದುದ್ದ ಗುಂಡಿಯು ತೆಗೆದು
ಅವಳ ಏಳೆಂಟು ಒಡವೆಯು ಬಿಚ್ಚುತಾರೆ
ಅವಳ ಜೋಳದ ಕಡ್ಡಿ ಸೀರೆ ಬೇಗನಿಬ್ಬರು ಬಿಚ್ಚಿದರು
ಇಬ್ಬರೂ ಅವಳ ಉದ್ದುದ್ದ ಮಲಗಿಸ್ಯಾರು
ತಮ್ಮರಮನೆಗವರು ಬರುತಾರೆ

ಗುಡ್ಲದ ಬಾಗಿಲವರು ಬೇಗಾನೆ ತೆಗೆದಾರು
ಇವನಪ್ಪಗೆ ದೂರ ಹೇಳುತಾನೆ ಮುಂಡೆ ಮಗ
ನಾವು ಕತ್ತು ಹಿಡಿದಾಚೆಗೆ ನೂಕಾಣ
ಬಾಗಿಲ ತೆಗೆತಾರೆ ರಟ್ಟೆ ಹಿಡೀತಾರೆ
ಮಗಿನ ಸೋಟಿಗೆ ಹೆಟ್ಟುತಾರೆ
ಅಮ್ಮಮ್ಮ ಕೇಳೆ ದಮ್ಮಯ್ಯ ನನ್ನಮ್ಮ
ಹೊಡಿಬ್ಯಾಡ ನನ್ನ ತಡಿನಾರೆ
ಸೋಟೆ ಹಿಡಿತಾರೆ ಕೌಳೌನ ಸಿಗಿತಾರೆ
ಮುಂದಕೂ ಹಿಂದಾಕೆ ಎಳಿತಾರೆ
ಅತ್ತತ್ತೇ ನಿನ್ನ ಕಾಲ ಕಟ್ಟುತೀನಿ
ಹೊಡಿಬ್ಯಾಡ ನಾನು ತಡಿನಾರೆ
ಜೀವ ಬಿಡಿರನ್ವ ಎಲ್ಲಾರು ಬದುಕೇನು
ಅಮ್ಮಮ್ಮ ನನ್ನ ಜೀವ ಬಿಡಿರಮ್ಮ
ಎಲ್ಲಾರು ನಾನು ಬದುಕೇನು ಅಂತವ್ಳೇಳಿ
ಕೈ ಕೈಯನದು ಮುಗಿದೀತು
ಇಕ್ಕಿದಂಗಿಮ ಬಿಚ್ಚಿ ಮಡಗುತಾರೆ
ಅದರ ಮೈಮೇಲಿದ್ದೊಡವೆಯ ಕಸಿದವರೆ
ಈಚೆಗನವರು ನೂಕವರೆ
ಅಳುತಾ ಮಗ ಬೀದಲ್ಲಿ ಬರ್ತೈತೆ
ಇವರು ಸೋಮಾರ ಸಂತೆಗೆ ಪೋಗಿದ್ದ ಶೆಟ್ರಗಳು
ಅಲ್ಲಿಗೇ ಆವರು ಬರುತಾರೆ
ಅಜ್ಜಯ್ಯ ಸನ್ನಯ್ಯ ಬರುತೀನಿ ನಿಮ್ಮೊಟ್ಟಿಗೆ
ನಿಮ್ಮ ದನಕರವ ನಾನು ಕಾಯುತೀನಿ
ಮುಂದೆ ಬತ್ತಾರೆ ಎಲ್ಡಾಳ ಹುಡಗಾರು
ಏನಂತನರು ಹೇಳುತಾರೆ

ಕೆಂಡನರ ಮಕ್ಕಳ ಖಂಡಿತಾ ಸಾಕಬಾರದು
ಅವು ನನುಗೆ ಅನ್ನ ಕೊಡತಾವ
ಅಂತವ್ಹೇಳಿ ಸುಮ್ಮನಾದರು ಹೋದರಲ್ಲಾ
ಹಿಂದೆ ಒಬ್ಬರು ಮುದಕಯ್ಯ
ಅವರು ಹಿಂದಲಿಂದ ಬರುತಾರೆ
ನಾ ತಾಯಿ ತಂದೆ ಇಲ್ಲದ ತಬ್ಬಲಿ ನಾಸಾದೆ
ನಾನು ಅಜ್ಜಯ್ಯ ಬರುತೀನಿ
ನಿಮ್ಮ ಹಟ್ಟಿ ಗುಡಿಸೇನು
ಕೊಟ್ಟಗೆಯು ಹಾಕೇನು
ನಿಮ್ಮ ದನ ಕರುವ ನಾನು ಸಾಕುತೀನಿ
ನಿಂದು ನೋಡುತಾರೆ ಹೊಟ್ಟೆ ಉರಿದು ಬಂದು
ಏನು ಹೇಳುತಾರೆ ಮುದಕಯ್ಯ
ಅಯ್ಯ ನನ್ನ ಕಂದ ಯಾರೂ ಇಲನಪ್ಪಾ
ಹೋಗನ್ಹೇಳು ನಮ್ಮ ಅರಮನೆಗೆ ಅಂಗತನ್ಹೇಳಿ
ಅವರು ಕರಕೊಂಡು ಹೋಗುತಾರೆ
ಕರಕೊಂಡು ಹೋದಾರು ಹೆಂಡ್ತಿಗೇನಂದಾರು
ಇತ್ತ ಕೇಳೆ ಹೆಂಗ್ಸೆ ನನಮಾತ
ಯಾರೂ ಇಲ್ಲದ ತಬ್ಬಲಿ ಮಗು ಕಾಣೆ
ಹಾದೀಲಿ ಅಳುತಾವ ನಿಂತಿತ್ತು
ಅದ ಕರಕಂಡು ನಾನು ಬಂದ್ನಲ್ಲೇ
ನನ್ನ ಹೆಂಗ್ಸೇ ಚಂದಾಗಿ ನೀನು ಸಾಕ್ಬೇಕು
ತಬ್ಬಲಿ ಕಂದಾನ ಚಂದಾಗಿ ಸಾಕಿದರೆ
ನಮಗೊಳ್ಳೇದು ಬರುವೋದು

ಸ್ನೈ ತೊಳೆಯುತಾಳೆ ಬಟ್ಟೆಯು ಇಕ್ಕುತಾಳೆ
ಹಾಲನ್ನಾಪ ಅದಕೆ ಇಕ್ಕುತಾಳೆ ಮುದುಕನ್ಮ
ಕಂದಾನ ಚಂದಾಗಿ ಸಾಕುತಾಳೆ
ಆಗ ಅತ್ತೆ ಮಲ್ಲಮ್ಮ ಅತ್ತಿಗೆ ಮರನಂದಿ
ಕುಸುಮಾಲೆ ವಡವೆ ಇಕ್ಕೊತ್ತಾರೆ
ಕುಸುಮಾಲೆ ಸೀರೆ ಉಡುತಾರೆ
ಸತ್ತಳಂತಾವ ಸಂತೋಷದಿಂದಾವ
ಸಡಗಾರದಿಂದಾವರಲ್ಲಾ ಅವರತ್ತಮ್ಮ

ಆಗ ಕುಸುಮಾಲೆ ತನ್ನ ಗಂಡಾನ ಸಪ್ನಕೆ
ಏನಂತಾನವಳು ಹೋಗುತಾಳೆ
ಇದುವೇನು ಸ್ವಾಮಿ ಘಟ್ಟಬಿಟ್ಟು
ನಿಮ್ಮರಮನೆಗೇ ನೀವು ಬರಬಾರದ
ತಾಯಿ ತೌರಲ್ಲಿ ಆಡಿಕಂಡಿದ್ದ ನನ್ನ
ನೀವು ಬುಟ್ಟು ಘಟ್ಟಕ್ಕೆ ಹೋದಿರಲ್ಲಾ
ಬುಟ್ಟು ಘಟ್ಟಕ್ಕೆ ಬಂದಿರಲ್ಲಾ ಮಾಸ್ವಾಮಿ
ನೀವು ಅರಮನೆಗೆ ಬಂದು ನೋಡಬಾರ್ದ
ಹೆಂಡ್ತಿ ಏನಾದಳು ಮಗುವೇನಾಯ್ತು
ನೀವು ಬಂದು ನೋಡಬಾರದೆ ಶರಣಾರೆ
ತಿಮ್ಮಪ್ಪಸ್ವಾಮಿ ನಿದ್ದೇಲಿ ಮನಗಿದ್ದೋರು
ಎದ್ದೇನಂತ ಹೇಳುತಾರೆ ಇದುನೇನು
ಕಾಣೇ ಕೇಳಿರಿ ಗೆಣೆಕಾರ್ರೇ
ನಾ ಕಂಡೆನಲ್ಲ ದುರಸಪ್ನ
ಕೆಟ್ಟ ಸಪ್ನ ಕಂಡೆ ಕೀಳಸಪ್ನ ಕಂಡೆ
ಇದುವೇನ ಕಾಣೆ ಗೆಣೆಕಾರರೇ
ನಾ ತಿರುಗ ಘಟ್ಟ ನೀವೆ ತಿರುಗಿರಪ್ಪಾ
ನಾ ಮಾಡ ವ್ಯಾಪಾರ ನೀವೆ ಮಾಡಿರಪ್ಪಾ
ನಾ ಮುಂದಾಗಿ ನಾನು ಹೋಗುತೀನಿ
ಹಂಗತವ ಹೇಳಿದಾರು ಶರಣಾರು
ಅವರು ಬೇಗಾನೆ ಕುದುರೆಯ ಏರಿದಾರು
ಘಟ್ಟದಿಂದವರು ಬರುತಾರೆ

ಮೂರು ತಿಂಗಳ ಹಾದಿ ಒಂದು ತಿಂಗಳಿಗೆ ಬಂದರೂ
ಒಂದು ತಿಂಗಳ ಹಾದಿ ಮೂರು ದಿನಕೆ ಬಂದು
ಮೂರು ದಿನದ ಹಾದಿ ಒಂದು ದಿನಕೆ ಬಂದು
ಒಂದು ದಿನದ ಹಾದಿ ಒಂದು ಗಂಟೆಗೆ ಬಂದು
ಪೇಟೆಯ ಬೀದೀಲಿ ಬತ್ತಾವರೆ ಶರಣಾರು
ಹಾದೀಲಿ ಕೂತಗಂಡು ಈ ಮಗ ಆಡುತ್ತೈತೆ
ತಂದೆಯ ಮುಖವಾ ಕಂಡಿತಲ್ಲಾ ಮಗಾ
ಕುದುರೆಯ ಅಡ್ಡ ತಡದೀತು

ತಡೆಯ ಬೇಡಪ್ಪಾ ಬಿಡುವೇ ದಾರಿ
ನಾ ಹೋಯ್ತೀನಿ ಬಿಡು ಮಗನೆ
ಹೋಯ್ತೀನಂದರೆ ಮುಂದಕೆ ನಾ ಬಿಡೆನು
ಇಳಿದು ಮಾತಾಡಿ ನನ ತಂದೆ
ಗಕ್ಕನೆ ಕುದುರೆಯಿಂದ ಕೆಳಕೆ ಇಳಿದರು
ಇದರಂದ ಚಂದಾವ ನೋಡಿದರು
ನೋಡಿದ ಮಾತ್ರಕ್ಕೆ ನನ ಕಂದನಂಗೆ ಇರೋದು
ತಾಯಿ ಯಾರು ಮಗನೆ
ನಿನ ತಂದೆ ಯಾರು ಮಗನೆ
ಯಾರಪ್ಪ ನಿನಗೆ ಹಿತವೋರು
ಬುಟ್ಟೋದ ಮೇಲೆ ಸಾಕಿದರೊ
ಅವರೇ ನನಗೆ ಹಿತವೋರು
ನನ್ನ ಸಾಕಿದೋರಿಗೆ ಏನ ಕೊಡುತೀರಿ ನನ ತಂದೆ
ನಾನು ನಿಮಕುಟ್ಟೆ ಬರುತೀನಿ
ತಿಮ್ಮಪ್ಪಸ್ವಾಮಿ ಏನಂತಾ ಹೇಳುತಾರೆ
ಬನ್ನೀ ಬನ್ನಿ ಅಜ್ಜಯ್ಯನೋರೆ
ಈ ಕಂದನಾಡುವ ಮಾತುಗಳ ಕೇಳಿದರೆ
ನನ ಜೀವವೆ ಬೆಂಡಾಯ್ತು ಅಜ್ಜಯ್ಯ
ಮಾಜದೆ ನನ್ನೊಡನೆ ತಿಳಿಯಬುಡಿ

ಸೋಮಾರ ಸಂತೆಗೆ ಹೋಗಿದ್ದೆ ನನ್ನೊಡೆಯ
ಅಲ್ಲಿಂದ ನಾನು ಬರುವಾಗ ನನ್ನೊಡೆಯ
ಇದು ಹಾದೀಲಿ ಅಳುತಾವ ಬರುತ್ತಿತ್ತು
ಅದರ ಗೋಳ ನೋಡಿ ನಂಗೂ ಸಂಕಟ ಬಂದು
ಕರಕೊಂಡು ನಾನು ಬಂದೀಲ್ಲ
ಇಲ್ಲಿಗೇಟು ದಿನ್ಸ ಆಯ್ತು ಅಜ್ಜಯ್ಯ
ಮಾಜದೆ ನನ್ನ ಕುಟ್ಟ ಹೇಳಬೇಕು
ಹಗಲು ಮೂರು ದಿನ ಇಳ್ಳು ಮೂರು ದಿನ
ಇಲ್ಲಿಗಾರು ದಿನ ಕಳೆದಾವು
ತಿಮ್ಮಪ್ಪಸ್ವಾಮಿ ದುಃಖ ಮಾಡುತಾರೆ
ಒಂದು ವರವಾ ಕೊಳ್ಳಿ ಶರಣಾರೆ ಅಜ್ಜಯ್ಯ
ನನ್ನ ಕಂದ ಸಾಕಿದ್ದ ಕೊಡುತೀನಿ

ಬ್ಯಾಡ ಬ್ಯಾಡ ಸಂಬಳ ಬ್ಯಾಡ ನನಗೆ
ನನಗೆ ಪುಣ್ಯ ಬರಲೆಂದು ಸಾಕಿದೆ
ಸಂಬಳ ಇಸಕಳನಿಲ್ಲ ಕರಕ ಹೋಗಂದಾರು
ಮಗನೆತ್ತಿ ಮುತ್ತಾ ಕೊಡುತಾರೆ
ಹಾಲನ್ನ ಉಂಡು ಆಡಿಕೊಂಡಿದ್ದಲ್ಲಾ
ನೀನು ಏನು ಕಷ್ಟಕ್ಕೆ ಗುರಿಯಾದೋ ಕಂದಮ್ಮ
ತುಪ್ಪನ್ನ ಉಂಡು ಮುತ್ತಿನಂಗಿದ್ದಲ್ಲಾ
ಮತ್ತ್ಯಾವ ಕಷ್ಟಕ್ಕ ಗುರಿಯಾದೋ ಕಂದಮ್ಮ
ನಿಮ್ಮವ್ವ ಎಲ್ಲಿಗೋದಾಳು ಅರಗಿಣಿಯೇ
ಬುಟ್ಹೋದನಂತ ನಿಮ್ಮವ್ವ ಸಿಟ್ಟಂದಾ
ಕದ್ದು ಹೋದಳೇನ ತೌರೀಗೆ ಅಂತವ್ಳೇಳಿ
ಮುದ್ದಾಡಿ ಮುತ್ತ ಕೊಡುತಾರೆ
ಇಲ್ಲಿಲ್ಲ ತಂದೆ ಹೋಗಾನ ಏಳಿ ತಂದೆ
ನಮ್ಮ ತಾಯಿ ತಾಕೆ ಹೋಗಾನ
ಅಪ್ಪನ ಕರಕಂಡು ಅಡವಿಯ ಸೇರ್ಕೈಯ್ತಿ
ಇದುವೇನ ಕಂದ ನನ ಮಗನೆ
ನಿಮ್ಮ ತಾಯಿ ಕುಸುಮಾಲೆ ಅಡವೀಲಿದ್ದಾಳ
ಅಡವಿ ಸೇರಿ ನೀನು ನಡೆದೀಯ ಕಂದವ್ವ
ಅಲ್ಲವ್ವ ನಿನ್ನ ಹಡೆದವ್ವ
ಕಂದವ್ವ ಅಡವಿಯಾ ಸೇ ನಡೆದೀಯೆ
ಆರಂದಡವಿ ಕರಕಂಡು ಹೋಯ್ತು
ಮಣ್ಣ ತಗೀ ನನ ತಂದೇ
ಮಣ್ಣು ತೆಗೆದಾರೇ ಉದ್ದುದ್ದ ಮಲಗವಳೆ
ದುಃಖವಾ ಮಾಡವರೆ ಶರಣಾರು
ಹಾಳಾದವ ನಾನು ಬುಟ್ಟು ಹೋಗಬಹುದೇ
ನೀನಾವ ಕಷ್ಟಕ್ಕೆ ಗುರಿಯದೆ ಕುಸುಮಾಲೆ
ನಿನ್ನ ಬುಟ್ಟು ನಾನು ಹೋಗಬಹುದೆ
ಅಡವಿಯೊಳಗೆ ಬಳಲಿ ಬಾಯಾರಿದ್ದೀಯ
ಏಳವ್ವ ನೀರ ಕುಡಿಯೇಳೆ ಕುಸುಮಾಲೆ
ನಿಂಗೆ ಪಟ್ಟಿ ತಂದಿವ್ನಿ ಉಡಲೇಳೆ
ಪುಟ್ಟ ಮುತ್ತ ತಂದಿವಿನಿ ಕುಸುಮಾಲೆ

ಮುಂಡೆಗೆ ಮಲ್ಲಿಗೆ ಕೊಡುತೀನಿ ಕುಸುಮಾಲೆ
ಎದ್ದು ಮಾತಾಡೆ ಅರಗಿಣಿಯೆ
ಮಾತಾಡದಿದ್ದರೆ ನಾನೇನಿಲ್ಲಾಲಾರೆ
ಎದ್ದು ಮಾತಾಡೇ ಅರಗಿಣಿಯೆ
ಅವರ್ಥಂಗ ಹೇಳಿ ದುಃಖವಾ ಮಾಡುತಾರೆ
ಅವಳ ತಲೆಯ ತಗದು ತೊಡೆಯ ಮೇಲ್ಹಾ ಕಂಡು
ಒಕ್ಕಳ ಸಂಕಟ ಪಡುತಾರೆ

ಕೊಕ್ಕಂದ ಕೋಳಿ ಕೂಗ ಕೇಳಿ ಹೊತ್ತಾಯ್ತು
ಶಿವನೂ ಪಾರ್ವತಿಯು ಬರುತಾರೆ
ತಿಮ್ಮಪ್ಪನ ಗೋಳ ನಿರ್ಗೋಳು
ನಿನ್ನ ಸಂಕಟವ ಕಣ್ಣಿಂದ ನೋಡನಾರೆ
ಹಿಂದೆ ಮುಂದಾಗಿ ನಿಲ್ಲಬೇಕು
ಆಗ ತಿಮ್ಮಪ್ಪ ಹಿಂದ ಮುಖಗೆ ನಿಂತಾರು
ಮೂರು ಮಂತ್ರವಾ ಜಪಿಸಿ ಏನಾಂದರು
ನಾವೇಟು ಸಲವಾ ನೋಡೋಣ
ಕಂಡವರ ಮಕ್ಕಳವ ನೀವೇಕೆ ತರುತೀರಿ
ನಿಮಗೇಕೆ ಹೆಂಡ್ರು ಮಕ್ಕಳೀಗ
ಆಕೇಯ ಗೋಳ ಏಟು ಸಲವ ನೋಡೋಣ
ಇಲ್ಲಿಗೆ ಮೂರು ಸಲವಾ ಆದವಲ್ಲಾ
ಅಂತಹ್ಹೇಳಿ ಶಿವನು ಮಾಯುವ ಆಗುತಾನೆ

ಅಸ್ಸಿಂತನವಳು ಏಳುತಾಳೆ ಕುಸುಮಾಲೆ
ತಿಮ್ಮಪ್ಪ ಸ್ವಾಮಿ ಕೊಳ್ಳ ಕಟ್ಟಿ ಅಳುತಾರೆ
ಇವರು ದುಃಖವಾ ಮಾಡುತಾರೆ
ದುಃಖವಾ ಮಾಡಿ ಕರಕಂಡಾನ ಬಂದು
ಅವಳ ಗುಡ್ಲಕೆ ಕೂಡಿ ಬೀಗ ಹಾಕುತಾರೆ
ಬಾಗಲಲ್ಲೇನಂತ ಕರದಾರು ಘಟ್ಟಕ್ಕೆ ಹೋಗಿದ್ದೆ
ದಣಿದು ಬಂದೇನು ಕುಸುಮಾಲೆ ನೀರ ಕೊಡುಬಾರೆ
ತಂಗಿ ವರನಂದಿ ನೀರಾನೆ ತತ್ತಾಳೆ
ನಿಮ್ಮ ಅತ್ತಿಗೆಲ್ಲಿ ಹೋದಾಳೆ ವರನಂದಿ
ಮಗುವೆಲ್ಲಿ ಹೋಯ್ತು ತಂಗೆಮ್ಮ

ಅರನುಲ್ಲೀ ಅವರ ಸುಳಿವಿಲ್ಲ
ಕುಸುಮಾಲೆ ಸೀರೆಯು ನೀನೇ ಉಟ್ಟಿದ್ದೀಯ
ಅವಳೊಡವೆ ನೀನೇ ಇಕ್ಕಿದ್ದೀಲ್ಲೆ
ಇಕ್ಕಿದೊಡವೇಯು ಬಿಚ್ಚಿ ಮಡಗನಳೆ
ಹೇಳದ್ಹೋಗನರೆ ಅಣ್ಣಯ್ಯ
ಕೇಳಾದ ಹೋಗನರೆ ಅತ್ತಿಗನು
ಹೋದರ್ಹೋಗಲಿ ಅದಕೆ ಸಂತೋಷ
ಕಂದೆಲ್ಲಿ ಹೋಯ್ತು ಮರನಂದಿ
ಕಂದನ ಕರಕಂಡು ಹೋದಾರು ಅತ್ತಿಗಮ್ಮ
ಇಲ್ಲಿಗೆ ತಿಂಗಾಳು ಕಳದಾವು
ಹೋಪ ಕುಸುಮಾಲೆಯು ಹುಡುಕಿ ಹೋಗದಿಲ್ಲ
ನೀವು ಹಬ್ಬಾವ ಅಡಲ ಹೋಗಿ
ಘಟ್ಟಕ್ಕೆ ಹೋಗಿ ಸೀರೆ ರವಕೆ ತಂದಿವ್ನಿ
ನಾ ಹಿರಿಯರಗನ್ನ ಹಾಕಬೇಕ
ಅಂಗತವಾ ನೋಡು ಕೇಳಿದವರೀಗ
ಅವರು ಸಡಗದಿಂದ ಆಡುತಾರೆ
ಅಡಿಗೆಲ್ಲಾ ಆದೋ ಉಣಬನ್ನಿ
ನಾನು ಉಣ್ಣದಿರಲ್ಲಿ ಹಿರಿಯರಗನ್ನ ಹಾಕಿ
ನಿಮ್ಮ ಬಟ್ಟೆ ಬರೆಯು ಮಡಗ್ಹೋಗಿ
ಧೂಪನ ಮಡ್ಡಿ ಹಾಕ್ಯಾರು
ಬನ್ನಿ ಅಣ್ಣಯ್ಯ ಉಣ್ಣಲಿಕ್ಕೆ
ನಾನು ಉಂಡಾರೆ ನನ್ನಾರು ನೋಡೋರು
ಮಡ್ಲು ನೀವೋಟ ಮಾಡಿ ಅಣ್ಣಯ್ಯ
ಅಂತಷ್ಹೇಳಿ ಅವನ ಅಪ್ಪನು ಮಗಳು ಕುಂತಗ್ಗೊಂಡರು
ಇವನಟ್ಟಕ್ಕೆ ಹತ್ತುವನೆ ಚಂದ್ರಾಯ ತಂದಾನು
ಒಬ್ಬೊಬ್ಬರಾಗಿ ಕಡಿದಾನು
ಆರು ಮೂರು ಈಗ ಒಂಭತ್ತು ತುಂಡಾಗಿ
ಬಾಗಲಿಗಿ ತೋರಣ ಹಾಕಿಸ್ಯಾನು ತಿಮ್ಮಪ್ಪಸ್ವಾಮಿ
ಕುಸುಮಾಲೆ ಕರಕಂಡು ಬರುತಾರೆ
ಅವರಪ್ಪ ಮಕ್ಕಳ ಕೊಂಡಾನೆ ಕೊಡಿಸಿ
ಇವರು ಚಂದಾಗಿ ಬಾಳುತಾರೆ

ಬಾಣಂತಮ್ಮ–ಹುಲುಕೋಡಯ್ಯ

ಬಾಣಂತಮ್ಮ

ಹೇ ತಾಯಿ ಬಾಣಂತವ್ವಗೆ ಹೇಳಿಯೂ ಏಳೇಳು ಮಗದೀರು
ಏಸು ಹೇಳುತಾರೆ ಹಡದವ್ವಗೆ–ಮಗದೀರು ಏಳು ಜನ
ಏಳೇಳು ತಾಯಿ ಬಂದು ಬತ್ತು ಇದ್ದಾರೆ
ಹೊನ್ನು ನನುಗೆ ಕೊಡುರಲ್ಲಾ–ತಾಯವ್ವ
ನಾವು ದೂರ ದೂರಾಕೆ ನಡೆದೇವು
ನಾವು ದೂರ ದೂರಾಕೆ ನಡೆದು ನಾವು ಹೋದಾರೆ
ದೊಡ್ಡ ದೊಡ್ಡ ಬಿರುದು ಕೊಡುತಾರೆ–ತಾಯವ್ವ
ನಾವು ಹೋಗಿ ಬರುತೀವಿ ತಾಯವ್ವೋ
ಏಳೇಳು ಮಗದೀರು ಹೇಳಿ ಹೊಂಟವರೆ ಅವರು
ಏಳನಾಡಿಗೊಬ್ಬರು ನಡೆದಾರು–ಕೂನೂರಯ್ಯ
ಹೆತ್ತೂರಿಗೊಬ್ಬರು ನಡೆದಾರು
ಹೆತ್ತೂರಿಗೊಬ್ಬರು ನಡೆದು ಹೋದರಲ್ಲೊ
ಕುಂದೂರಿಗೊಬ್ಬರು ನಡೆದಾರು
ಕುಂದೂರಿಗೊಬ್ಬರು ನಡೆದು ಹೋದರಲ್ಲಾ
ಕಿತ್ತೂರಿಗೊಬ್ಬರು ನಡೆದಾರು
ಕಿತ್ತೂರಿಗೊಬ್ಬರು ನಡೆದು ಹೋದರಲ್ಲೊ
ಕುಲಕೋಡಿಗೊಬ್ಬರು ನಡೆದಾರು
ಕುಲಕೋಡಿಗೊಬ್ಬರು ನಡೆದು ಹೋದರಲ್ಲೊ
ಇವರೆಲ್ಲಾ ಕಿಂತವ ಹಿರಿಯವರು–ದೊಡ್ಡಯ್ಯ
ಘಟ್ಟ ಸೇರವರೆ ದೊರೆರಾಯ
ಆಜೆ ಬಾಣಂತವ್ವ ನೋಡಿ ಸಾಕಾದರು
ಮಗದಿರ ಸುಳಿವು ಇಲ್ಲವಲ್ಲಾ
ಹೇ ಬಂದಾರು ಬಾಣಂತವ್ವ
ನಿಂದಾರು ಜಗಲಿಯ ಮೇಲೆ

ಅವರ ಕಂದಾಳು ತುರುಬು ಸದುರುತಾ–ಬಾಣಂತವ್ವ
ಇಂದು ಬೆವತವರೇ ಬಿಸಲೀಗೆ
ಯಾಕೆ ಬಾಣಂತವ್ವ ತಾವು ಮುಂಡೆ ಸದರೀರಿ
ಕೆಂಡಸಂಪಿಗೆಯು ಗಿಡಹುಟ್ಟೆ–ಮರವಾಗಿ
ಅಂಗಡಿಕಾರರಿಗೆ ನೆರೆಳಾದೊ
ಏರಿಯು ಮೇಲೆ ನಿಂತ್ಕಂಡು ಎನ್ನೂಡತಿ ಬಾಣಂತವ್ವ
ಮೊರ ಹೋಗವರೆ ನಿಮ್ಮ ಮಗಾ–ದೊಡ್ಡಯ್ಯ
ಘಟ್ಟವನು ಅವರು ನಡೆದಾರೂ
ಘಟ್ಟ ಸೇರಿದಾರು ನಿಮ್ಮ ಮಗ ದೊಡ್ಡಯ್ಯ
ಅವರ ಬೆನ್ನಿನ ಪೂಜೆ ಘನವಾರ–ಬಾಣಂತವ್ವ
ನಿಮಗೆ ಹಿಂದೆ ಗಂಧ ಪರುಸಾದ ಬರುತಾವೆ–ಬಾಣಂತವ್ವ
ನಿಮಗೆ ಒಪ್ಪೂತ್ತು ಜಾತ್ರೆ ನಡೀತಾವೆ
ಆಚೆ ಬಾಣಂತವ್ವ ಬಾಗುತಾ ಬಳಕುತಾ
ಹೇ ಮಗನ ಕೊಮಾರಯ್ಯನ ಕರೆದಾರು
ಆರಾಳಿಗಿಂತ ಕಿರಿಯವನು ಕೊಮಾರಯ್ಯ
ಅವರು ಹೊಂಟವರೆ ಹೊರ ಪಯಣ
ಹೇ ಮಕ್ಕಳೇ ತರುವನ್ನಂಗೆ
ಗಂಡಾನ ಕೊಡಿರೇ ಮುಂಡೆ
ನೀನೆಲ್ಲಿ ಹೋತಿಯಾ ನನ್ನ ಮಗನೆ–ಕೊಮಾರಯ್ಯ
ನೀ ನನಗೆ ಕಾವಲ ಇರಬೇಕು
ಎಟೊ ಹೇಳಿದರೂ ಕೇಳದೆ ಚಂಡಾಳ
ಮುಂದಕೆ ಮೂರೆಜ್ಜೆ ನಡೆದಾರು
ಆಕೆ ಬಾಣಂತವ್ವಗೆ ಸಿಟ್ಟು ಬಂದಾವಲ್ಲ
ಈ ಸಿಟ್ಟನಿಂದ ದುದಿಗೆ ಎಸೆದಾರೂ–ಬಾಣಂತವ್ವ
ಕೊಮಾರಯ್ಯನ ಕಾಲು ಮುರಿದಾತು
ಕಾಲು ಮುರಿತಾಂತ ಸಿಟ್ಟು ಮಾಡಲುಬ್ಯಾಡ
ನಾ ತರಿಸೇನು ನಿನಗೆ ಕುದುರೆಯಾ
ಕೂರಕೆ ಕುದುರೆ ತರಿಸಿ ಹಿಡಿಯಕೆ ಚಿತ್ರ ತರಿಸಿ
ಗದ್ದಿಗೆ ಸಾಕಿ ಬೆಳ್ಳಿ ಚೌವಲಾವೂ
ನಿನಗೆ ಬೀಸಾಕೆ ಬೆಳ್ಳಿ ಚೌವಲಾವು ತರಿಸೇನು
ಸಿಟ್ಟುಬ್ಯಾಡ ಕಾಣೂ ನನ್ನ ಮಗನೇ–ಕೊಮಾರಯ್ಯ

ನಿನಗೆ ಚಿಕ್ಕದೊಂದು ಗುಡಿಯಾ ಕಟ್ಟಿಸೇನು–ನನ್ನ ಮಗನೆ
ನಿನಗೆ ಒಪ್ಪೂತ್ತಿಗೊಂದು ಜಾತ್ರೆ ನಾ ನಡಿಸೇನು
ಆಕೆ ಬಾಣಂತವ್ವ ಮಗನೀಗೆ ಹೇಳುತಾರೆ
ಹೇ ಮಡವಾಳಿಯ ಕರೆದು ಬರಹೋಗು–ನನ್ನ ಕಂದಾ
ನಾಳೆ ನಮ್ಮ ಐಸೂಖ
ನಾಳೆ ನಮ್ಮ ಐಸೂಖನ ಊರಿನೊಳಗೆ
ಹಸಿದೂರೂತ್ತು ನೆರೆದಾರು–ನೆರೆದಾರು ಕಂದಯ್ಯ
ಅವನಿಗೆ ತುಪ್ಪದಂತ ಮಡಿಯ ತರಬೇಕು
ಆಗ ಕೂಮಾರಯ್ಯ ಓಡಿ ಹೋಗುತಾರೆ
ಮಡಿವಾಳಿಯ ಕರೆದು ಬರುತಾರೆ
ಆಗ ಮಡಿವಾಳಿ ಓಡಿ ಬಂದವರಲ್ಲೊ
ಬಗ್ಗಿ ಸಲಾಮು ಕೊಡುತಾರೆ
ಎಲೆ ತಾಯವ್ವ ನನ್ನ ಕರಿಸಿದ್ದು
ಬ್ಯಾಗದಿಂದಾವ ಹೇಳಬೇಕು
ನಾಳೆ ನಮ್ಮಾವ ಐಸೂಖೂರಿನೊಳಗೆ
ಹಸಿದೂರತ್ತು ನೆರೆದಾರು–ಮಡಿವಾಳಿ
ತುಪ್ಪದಂತ ಮಡಿಯ ನೀ ತರಬೇಕು
ಪಟ್ಟಿಯ ತಕ್ಕಂಡು ಗಂಟಾ ಕಟ್ಟಿಕಂಡು
ಹ್ವಾದರು ಮಡಿವಾಳಿ ತಕ್ಕಂಡು ಓಡೋಡಿ ಹೋಗುತಾರೆ
ಹೇ ಕೆಮಳಿಗೇ ಅದ್ದುತಾರೆ ಉಬ್ಬೆಗೆ ಹಾಕುತಾರೆ
ಕಲ್ಲಮ್ಯಾಲ್ಹಾಕಿ ಸೆಣದವರೆ–ಮಡಿವಾಳ
ಪನ್ನೀರಿಗ್ಹಾಕಿ ತೊಳೆದಾರೂ
ಪನ್ನೀರಿಗ್ಹಾಕಿ ತೊಳೆದಂತ ಮಡಿಯ
ಬಿಸ್ಲಲ್ಹಂಡಿ ಒಣೆಗ್ಯಾವು
ಬಿಸ್ಲಲ್ಹಂಡಿ ಒಣಗದಂತ ಮಡಿಯ
ಬ್ಯಾಗನೇ ಮಳಿಗಿಯಾ ಮಾಡಿದಾರು
ಮಳಿಗೆ ಮಾಡಿದಾರು ತಕ್ಕಂಡು ಬರುತಾರೆ
ಕೊಳ್ಳ ಕೊಳ್ಳವ್ವಾ ನನ್ನ ತಾಯೇ–ಬಾಣಂತವ್ವ
ಮಡಿನಾ ತಂದಿವಿನಿ ಒಪ್ಪ ಬನ್ನೀ
ಬಂದರು ಬಾಣಂತವ್ವ ಮಡಿ ನಿಂದು ನೋಡಾರು
ಈ ಮಡಿಯು ನನಗೆ ಒಪ್ಪೇಇಲ್ಲಾ–ಮಡಿವಾಳಿ

ನೀ ತುಪ್ಪದಂತಾ ಮಡಿಯು ತರಬೇಕು
ಆಗ ಮಡಿವಾಳಿ ಗ್ಯಾನ ಮಾಡಿದಾರು
ಚಿಂತೆ ಮಾಡಿದರು ಮನದಲ್ಲೀ
ಇದುವೇಕೂ ಮಡಿವಾಳಿ ಚಿಂತೆ ಮಾಡತಿಯಾ
ನನ್ನೇರಿ ಕೆಳಗೈತೆ ಹೊಸ ಕೊಳ-ಮಡಿವಾಳಿ
ನೀ ತುಪ್ಪದಂತಾ ಮಡಿ ತರಹೋಗು
ಆಗ ಮಡಿವಾಳಿ ತಕ್ಕಂಡು ಹೋಗುತಾರೆ
ಹೊಸ ಕೊಳದಲ್ಲಿ ಬಟ್ಟೆ ಸೆಣೆದಾರೂ
ಬಟ್ಟೆಯು ಸೆಣೆದಾರೂ ಪನ್ನೀರಲಿ ತೊಳೆದಾರೂ
ಬಿಸ್ಲಿಲ್ಲಂಡಿ ಮಾಗ್ಯಾವೂ-ಮಡಿಯು
ಬ್ಯಾಗನೇ ಮಳಿಗೆಯಾ ಮಾಡಿದಾರು-ಮಡಿಯ
ತಕ್ಕಂಡೋಡಿ ಬರುತಾರೆ
ಕೊಳ್ಳಿ ಕೊಳ್ಳಿ ತಾಯಿ ನನ್ನ ಬಾಣಂತವ್ವ
ನಾ ಮಡಿಯ ತಂದಿದಿನಿ ಒಪ್ಪ ಬನ್ನಿ
ಬಂದರು ಬಾಣಂತವ್ವ ಮಡಿ ನಿಂದು ನೋಡಾರು
ಮಡಿ ನೋಡಿ ಮುರಿಸಿಗತವಾಗಿ-ಬಾಣಂತವ್ವ
ಮಗನ ಕೂಮಾರಯ್ಯನ ಕರೆದಾರು
ಬಾರೊ ಬಾರೋ ಕಂದಾ ನನ್ನ ಮಗ ಕೂಮಾರಯ್ಯ
ನಾ ಮಡಿಯು ತಂದಿದಿನಿ ಒಪ್ಪಬಾರೋ
ಹೇ ಕೂಮಾರಯ್ಯ ಬಂದಾರು ಮಡಿನಿಂದು ನೋಡಾರು
ಮಡಿ ನೋಡಿ ಮುರಿಸಿಗತವಾಗಿ
ಈ ಮಡಿಯು ನನಗೆ ಒಪ್ಪಿತು ಮಡಿವಾಳಿ
ಮಡಿವಾಳಿಗೆ ಕೊಡುವಾಣ ಮೊರ ಹೊನ್ನಾ
ಆಗ ಮಡಿವಾಳಿಗೆ ಮೊರ ಹೊನ್ನಾ ಕೊಡುತಾರೆ
ನಾಳೆ ಏಳಾಗಂಟೀಗೆ ಅವರಯ್ಯ ಐಸುಖ
ಐದಾ ವಲೆ ಇಟ್ಟು ವಲೆಯ ಪೂಜವೆ
ಅದಾ ಬಾಣಂತವ್ವಗೆ ಅಡಿಗಲ್ಲಾ
ಆದವು ಬಾಣಂತವ್ವಗೆ ಅಡಿಗೇನಾದವಲ್ಲಾ
ಬೋಳುಮಂಡೆ ಮೇಲೆ ಹೊರತ್ತಾರೆ
ಬೋಳುಮಂಡೆ ಮೇಲೆ ಹೊತ್ತಂತ ಮಡೆಗೋಳ
ಆದವು ಬಾಣಂತವ್ವಗೆ ಎಡೆಗಳೂ

ಕೆಂಬತ್ತಿ ಬೆಳೆಯು ಉಂಬಳಿ ಗದ್ದೆಯ ಭತ್ತ
ಬಂದಾ ಪರಿಸೀಗೆ ಪನಿವಾರೂ
ಕ್ಯಾಸಕ್ಕಿಯಾ ಬೆಳೆಯಾ ರಾಸಿ ಗದ್ದೆ ಭತ್ತಾ
ಬಂದಾ ಪರಿಸೀಗೆ ಪನಿವಾರೂ–ಆಗೋವಾಗ
ಏನು ಹೇಳುತಾರೆ ಬಾಣಂತವ್ವ
ಬಂದಾ ಪರಿಸೀಗೆ ಪನಿವಾರವ ತಿದ್ದಪರೇ
ಮರೆತಿರಿ ಕಾಣೆ ಹೊಸ ಮೊಗಗಳಿರಾ
ನನ್ನ ನಾಯಿಗೊಂದು ಎಡೆಯಾ ತಗದಿಡಿ
ಬಂದಾ ಪರಿಸೀಗೆ ಪನಿವಾರವಾದವಲ್ಲಾ
ಅವರಿಗೊಪ್ಪತ್ತಿನಾ ಜಾತ್ರೆ ನಡೆದಾವು
ಬೀಗದೆಡಿಗೆ ಬಿತ್ತ ಕೂರಿಗೆ ಬಂದಾ
ಮಾದೇವ ಸಾಲ ಹೊಡಿಬಾರೋ
ಈ ಜಾಣ ಮಾದಿಗನ ಮಿಣಿ ಬಂದೊ ನೊಗ ಬಂದೊ
ಹೇ ಮಾದೇವ ಸಾಲ ಹೊಡಿಬಾರೋ
ಆಕೆ ಬಾಣಂತವ್ವ ಮುತ್ತಾ ಮಡಿಲಲ್ಲಿ ಕಟ್ಟಿ
ಮಟ್ಟಿ ಕೂರಿಗೆ ಹೊಡೆಸ್ಯಾರೊ
ಆಚೆ ಬಾಣಂತವ್ವ ಹವಳಾ ಮಡಲಲ್ಲಿ ಕಟ್ಟಿ
ಸಾಲಾ ಕೂರಿಗೆ ಹೊಡೆಸ್ಯಾರೊ–ಕೂಮಾರಯ್ಯ
ಮಾದೇವ ಸಾಲ ಹೊಡಿ ಬನ್ನೀ

ಹುಲುಕೋಡಯ್ಯ

ದೊಡ್ಡಯ್ಯಗಿಂತಾ ಕಿರಿಯೋರು ಹುಲುಕೋಡಯ್ಯ
ಅವರು ಬಹಳಾ ತುಂಟರು–ಹುಲುಕೋಡಯ್ಯ
ಆರಾಳಿಗಿಂತ ಕೇಡಾಳ ನನ್ನ ತಮ್ಮಾ
ಹುಲುಕೋಡಯ್ಯನ ಮದುವೆ ಮಾಡಬೇಕು
ಹುಲುಕೋಡಿನ ಹೆಣ್ಣ ಕೇಳಿದಾರೂ
ಹುಲುಕೋಡಲಿ ಹೆಣ್ಣ ಕೇಳಿ
ಅವರ ಬಳಗೆಲ್ಲ ಸೇರಿಕಂಡು
ಹುಲುಕೋಡಯ್ಯನ ಮದುವೆ ಮಾಡುತಾರೆ
ಹುಲುಕೋಡಯ್ಯನ ಮಡದಿ ಆಕೆ ಚಿಕ್ಕಮ್ಮನೋರು

ಭಾರಿ ಚಂದಾರಿ ಚೆಲುವನಲ್ಲವೋ
ಆಕೆ ಚಿಕ್ಕನ್ನ ಚಂದಾರಿಯು ಚೆಲುವಾದರು
ಇವರ ತುಂಟಾಟ ಇವರು ಬಿಡರಲ್ಲಾ
ಕರುವ ಬುಟ್ಟುಗಂಡು ಕೋಡತಾವ ಹಿಡಕೊಂಡು
ಹುಲುಕೋಡು ಗದ್ದೆ ಬಯಲಲ್ಲೀ–ಹುಲುಕೋಡಯ್ಯ
ಉಚ್ಚೆಯನಾಡುವುದು ಬೆಳಗಾದೋ
ಹುಲುಕೋಡಿನಲ್ಲೊಂದು ಹೂವಿನ ಗಿಡಹುಟ್ಟಿ
ಕಿತ್ತೂರಿಗೆ ಬೇರು ಹರಿದಾವೂ
ಹುಲುಕೋಡಯ್ಯನ ಗುಡಿ ಮುಂದೆ ಕಿತ್ತಲಿ ಮರಹುಟ್ಟಿ
ಕೊಂಬೆ ಕೊಂಬೀಗೆ ಎಳೆಗಾಯಿ–ಸುಳಿಗಾಯಿ
ಸ್ವಾಮಿ ಹುಲಕೋಡಯ್ಯಗೆ ಇಡಗಾಯೀ
ಉಚ್ಚೆಯನಾಡುವರು ಹೆಚ್ಚಾಳಿಗಾರಾರು
ಉಚ್ಚೀನ ಬಾಣ ಉರಿ ಬಾಣಾವೇ ಹಿಡಕಂಡು
ಅವರುಚ್ಚೆಯನಾಡುವುದೂ ಬೆಳಗಾದೋ
ಎಂಟು ಸಾವಿರಗೆಜ್ಜೆ ಸೊಂಟಕೆ ಧರಿಸೀಗಂಡು
ಹಂಟಿ ಗದ್ದೇಲಿ ಬರುವರೂ–ಹುಲುಕೋಡಯ್ಯ
ಸದ್ದೂ ನಮ್ಮಾಗೆ ನಿಲ್ಲಭಾರ–ಹುಲುಕೋಡಯ್ಯ
ನೀವು ಹಿಂದಕೊಂದಜ್ಜೆ ದಯಮಾಡಿ
ಆರು ಸಾವಿರಗೆಜ್ಜೆ ಕಾಲಿಗೆ ಧರಿಸಿಗಂಡು
ಕೊಳೆ ಗದ್ದೇಲಿ ಬರಬಾರೋ
ಕೊಳೆ ಗದ್ದೇಲಿ ಬರುವರು ಹುಲುಕೋಡಯ್ಯ
ಅವರೊಬ್ಬರೇ ನಮಗೆ ನಿಲ್ಲಭಾರ–ಹುಲುಕೋಡಯ್ಯ
ನೀವು ಹಿಂದಕ್ಕೊಂದಜ್ಜೆ ದಯಮಾಡಿ
ಕೆಂಬತ್ತಿಯು ಬೆಳೆಯು ಉಂಬಳಿ ಗದ್ದೆ ಬಯಲಲ್ಲಿ
ಮುಂಬಲ್ಲ ಸುಲದು ಮುಖನೋಡಿ–ಏನಂದಾರು
ನನಗಿಂತ ಉಂಟೇ ಚೆಲುವಾರೂ
ಕೇಸಕ್ಕಿಯ ಬೆಳೆಯು ರಸಿಗದ್ದೆ ಬಯಲಲ್ಲಿ
ಮುಂಬಲ್ಲ ಸುಲದು ಮುಖನೋಡಿ–ಏನಂದಾರು
ನಾ ಲೋಕಕೆಲ್ಲಾ ವ ಕಡು ಚೆಲುವಾ
ನನಗುಂತ ಚೆಲುವಾರು ಇಲ್ಲವಲ್ಲಂತ್ಹೇಳಿ
ಕಲ್ಲಾರೆ ಮೇಲೆ ಕೂತವರೆ

ಎದ್ದಾ ಮೂರುಗದಲ್ಲಿ ಒಬ್ಬ ಮಾದಿಗರ ಹೆಣ್ಣು
ಹಿಡಿದ್ಲೊ ರೆಯೊಂದ ತೊತ್ತುಗಂಡು–ಮಾದಿಗರೆಣ್ಣು
ಬಾಗುತಾ ಬಳುಕೂತವ ಬರುತಾಳೇ–ಮಾದಿಗರೆಣ್ಣು
ಅವಳ ಪೋರಿಕೆ ಅವರಿಗೆ ಬಡಿದಾವೂ
ಸುತ್ತಲು ನೋಡಿದರೆ ಮತ್ತ್ಯಾರು ಇಲ್ಲವಲ್ಲ
ನಂಗೆ ಸೂರ್‍ಯಾನ ಪೊಳಪು ಹೊಳಾದಾವೂ–ನನ್ನ ಕಣ್ಣೀಗೆ
ಇಲ್ಲ್ಯಾರು ಕಾಣೆ ಬರುವಾರು–ಅಂತ್ಹೇಳಿ
ಹಿಂತಿರುಗಿ ತಾವು ನೋಡುತಾರೆ
ಎದ್ದ ಮೂರುಗದಲ್ಲಿ ಒಬ್ಬಳು ಮಾದಿಗರ ಹೆಣ್ಣು
ಬಾಗುತಾ ಬಳುಕುತಾವ ಬರುತಾಳೆ
ಲೋಕಕೆಲ್ಲಾವ ನಾ ಚೆಲುವನೆಂತಿದ್ದೆ
ನನಗಿಂತಲವಳು ಕಡು ಚೆಲುವೇ–ಮಾದಿಗರ ಹೆಣ್ಣು
ಇವಳೊಪ್ಪತ್ತಾರೇ ಇಡಬೇಕು–ಮಾದಿಗರ ಹೆಣ್ಣಾ
ನಾ ಸತ್ಯ ದುಡವ ತಿಳಿಯಾಬೇಕು
ದುಡವಾ ನಾ ತಿಳಿಬೇಕು ಮತ್ತೇನು ಮಾಡಿದರು
ಅಜ್ಜಜ್ಜನವರು ಮುದಕಾಗೀ ಕಜ್ಜಿಯ ಪರಿಯಾಗಿ
ಕಲ್ಲಾರೆ ಮೇಲೆ ಮಲಗವರೇ
ಇವಳೆಡಕ್ಕ್ಹೋಗಲಿಲ್ಲ ಬಲಕೆ ಹೋಗಾಸಿಲ್ಲ
ಅಲ್ಲಿಗಾ ಹೆಣ್ಣು ಬರುತಾಳೆ
ಯಾರವ್ವ ಮಗಳೇ ಎಲ್ಲೀಗೋತ್ತೀಯ ಕಂದ
ನನ್ನ ಬೆನ್ನ ನೀನೊಂದು ಸಲ ಕೆರದೋಗು
ಹಾಳಾಧೂಳಲ್ಲಿ ಹಾದಿದೆಪ್ಪೀ ಬಂದೆ
ಇದು ಒಂದು ಪಾಪಕ್ಕೆ ಗುರಿಯಾದೆ–ಎಲಶಿವನೆ
ನಾ ಹಾಳಾಧೂಳಲ್ಲಿ ಬರಬಹುದೇ
ಅಯ್ಯ್ಯಯ್ಯನವರೆ ಪರಕಾಲ ಪರಜಾತಿ
ಮುಟ್ಟೆಂಗೆ ಬೆನ್ನ ಕೆರೆಯಾಲಿ
ಯಾವ ಜಾತಿಯಾದರೇನೆ ಯಾವ ಕುಲವಾದರೇನೆ
ನನ್ನ ಬೆನ್ನ ನಿನೊಂದು ಸಲ ಕೆರೆದೋಗೆ
ನಾ ಕಣ್ಣು ಕಾಣದ ಕುಂಡ ಕಿವಿಯಾ ಕೇಳದ ಕಿವುಡ
ನನ್ನ ಮೈಯೆಲ್ಲಾ ಕಜ್ಜಿ ಪರಿಯಲ್ಲೇ–ನನ್ನ ಮಗಳೆ
ಕಜ್ಜೀಯು ಕಡಿತಾ ತಡೀನಾರೇ–ನನ್ನ ಮಗಳೆ

ನನ್ನ ಬೆನ್ನ ನೀನೊಂದು ಸಲ ಕೆರೆದ್ಹೋಗೆ
ನಾ ಹೆಂಡಪ ಕುಡಿಯೋಳು ಬಂಡಾವ ತಿನ್ನೋಳು
ಬಂಡಾರ ಕೊಡವಾ ನಾ ಕುಲಹೀನೆ–ಮಾದಿಗರ ಹೆಣ್ಣು
ಮುಟ್ಟಿಹೆಂಗೆ ಬೆನ್ನ ಕೆರೆಯಾಲಿ
ಹೆಂಡ ಕುಡಿದ್ರೆ ಕುಡಿಯೇ ಬಂಡಾ ತಿಂದರೂ ತಿನ್ನೆ
ಮುಟ್ಟೊಂದು ಬೆನ್ನ ಕೆರೆದೋಗೆ
ಹಾಳಾಧೂಳಿಲ್ಲಿ ಹಾದೀದಪ್ಪಿ ಬಂದೆ
ಇದುವೊಂದು ಪಾಪಕ್ಕೆ ಗುರಿಯಾದೇ–ಎಲೆ ಶಿವನೆ
ಹಾಳಾಧೂಳಿಲ್ಲೀ ಬರಬಹುದೇ
ನೀವು ನೋಡಿದರೆ ಲಿಂಗ ಜಂಗಮರು
ನಾನು ನೋಡಿದರೇ ಕುಲಹೀನ ಮಾದಿಗರೆಣ್ಣು
ಮುಟ್ಟಹೆಂಗೆ ಬೆನ್ನ ಕೆರೆಯಾಲೀ
ಲಿಂಗಾವ ತಗುದೇನು ಗಂಗೀಗೆ ಬುಟ್ಟೇನು
ಜಡಿಯಾ ಹಿಂದಕೆ ಪದರಲೇನೆ ಎಲ ಹೆಣ್ಣೆ
ನನ್ನ ಬೆನ್ನ ನೀನೊಂದು ಸಲ ಕೆರೆದೋಗೆ
ಏಟು ಹೇಳಿದರೂ ಕೇಳರು ಶರಣಾರು
ನನ್ನ ಮುಂದಕೆ ಮೂರು ಹೆಜ್ಜೆ ಬಿಡರಲ್ಲಾ–ಮಾಸ್ವಾಮಿ
ಹಾಳಾಧೂಳಲ್ಲಿ ನಾ ಬರಬಹುದೇ–ಅಂತ್ಹೇಳಿ
ಹಿಡ್ಡಲ ಹೊರೆಯ ಇಳಿಸ್ಯಾಳೂ–ಮಾದಿಗರೆಣ್ಣು
ಬಗ್ಗಿ ಬೆನ್ನೊಂದ ಕೆರೆದಾಳೂ
ಹೊತ್ತು ಹನ್ನೆರಡು ಗಂಟೆ ಸಂಜಾಯಿತು ಮಾಸ್ವಾಮಿ
ಮೈಯಲ್ಲಾ ರೋಮ ರಗುತಾಯಿತೊ–ಮಾಸ್ವಾಮಿ
ನಿಮಗೆ ಸಾಕೆಂಬ ಸೊಲ್ಲೀ ಇಲ್ಲವಲ್ಲಾ–ಮಾಸ್ವಾಮಿ
ನಂಗೆ ಅಂಗಟ ಸಂಕಟವೇ ಘನವಾದೊ
ನಂಗೆ ಅಂಗಟ ಬಲುವಲ್ಲ ಸಂಕಟ ಬಲುವಲ್ಲಾ
ನಾ ಅಳಲೀಕೆ ಬಳಲೀಕೆ ತಡೀಸಾರೇ–ಮಾಸ್ವಾಮಿ
ನೀರ ನಾನೀಗ ಕುಡೀಬೇಕೂ
ರಕ್ತವ ನೋಡಿದಳು ಮೂರೀಸಿ ಬಿದ್ದಾಳು
ಅವಳಿಗೆ ಅಂಗಟ ಸಂಕಟವೆ ಘನವಾದೋ
ಆಗ ಹುಲುಕೋಡಯ್ಯ ಹಿಂತಿರುಗಿ ನೋಡುತಾರೆ
ಹುಸಿನಗೆಯ ತಾನು ನಗುತಾರೇ–ಏನ್ಹೇಳುತಾರೆ

ಹೋಗೆಣ್ಣೆ ನೀರ ಕುಡಿಯೋಗೆ
ಬಾಳೆ ಬಲಕಿಡು ಸೀಗೆ ಎಡಕಿಡು
ನಾಗಸಂಪಿಗೆ ನಡುವೆ ಹೋಗು
ಅಲ್ಲವೆ ಜೋಡಕೋಣಗಳು
ಒಂದು ಹಾಲಿನ ಕೊಣವೆ ಇತ್ತು
ಒಂದು ನೀರಿನ ಕೊಣವೆ ಇತ್ತು
ನೀರಿನ ಕೊಣದಲ್ಲಿ ಕೈಯ ತೊಳಿ ಹೆಣ್ಣೇ
ಹಾಲ ಕೊಣದಲ್ಲಿ ಹಾಲ ಕುಡಿಯ್ಹೋಗೆ
ಆಗ ಮಾದಿಗರ ಹೆಣ್ಣು ಬಾಗುತಾ ಬಳುಕುತವ
ಬಾವಿ ನೀರಿಗೆ ನಡೆದಾಳೂ
ಅವಳ ಮುಂದೆ ಬುಟ್ಟುಕೊಂಡು
ಇವರು ಹಿಂದಲಿಂದ ಹೋದಾರು
ಹೊನ್ನರಳಿ ಮರದ ಮರಗಂದು–ಏನಂದಾರು
ದುಡುವ ನೋಡುತಾರೆ ಶರಣಾರೂ

ನೀರಿಗೆ ಹೋದವಳು ಕೈಯ ತೊಳೆಯಾನಿಲ್ಲ
ಹಂಗೆಯ ಹಾಲ ಕುಡಿದಾಳು
ನೀರು ಕುಡಿದವಳು ಬಾವಿದಡದಲ್ಲಿ
ಬಾವಿ ದಿಡದಲ್ಲಿ ಕೂತಳಲ್ಲಾ
ಆಗ ಹುಲುಕೋಡಯ್ಯ ಏನಂತ ಹೇಳುತಾರೆ
ಒಪ್ಪಿದೊಪ್ಪಿದೆ ಸತ್ಯದುಡವ ನಾನು
ಇವಳೊಪ್ಪುತ್ತಲಾರೆ ಇಡಬೇಕು–ಮಾದಿಗರ ಹೆಣ್ಣು
ನಾ ಜಾತಿಗೆಟ್ಟಾರು ಬಿಡನಾರೆ
ನಡೆದು ಹೋಗುವಾಗ ಅಂಗಾಲ ಪದುಮುವ ಕಂಡೆ
ಅಂಗಾಲ ಶುದ್ಧ ಸುಳಿಯೇ ಶುದ್ಧಾ–ಮಾದಿಗರ ಹೆಣ್ಣು
ನಾ ಜಾತಿಗೆಟ್ಟಾರು ಬಿಡನಾರೆ
ಬಗ್ಗಿ ನೀರ ಕುಡಿದಾಗ ನೆತ್ತಿ ಪದುಮುವ ಕಂಡೆ
ಇವಳ ನೆತ್ತಿಯು ಸುಳಿಸುದ್ಧ–ಮಾದಿಗರ ಹೆಣ್ಣು
ನಾ ಕುಲಗೆಟ್ಟಾರಿವಳ ಬಿಡನಾರೆ–ಅಂತ್ಹೇಳಿ
ಅಲ್ಲಿಂದ ಹಿಂತಿರುಗಿ ಬರುತಾರೆ–ಹುಲುಕೋಡಯ್ಯ
ಸುಂಗಾರವಾಗುತಾರೆ ಶರಣಾರು
ಹೇ ಹಿಂಗಾಸೆ ಮುಂಗಾಸೆ ನಡುವೆ ಲಿಂಗದಕಾಸೆ

ಅವರಿಗೆ ಬಾಸಿಂಗವಕಾಸೆ ಬಲಗಡಿಗೇ–ಮಾಸ್ವಾಮಿಗೆ
ಅಂಗಿ ಮೇಲಂಗಿ ಜಲತಾರಿ
ಸುತ್ತ್ಯಾರು ಕಾವಿಯು ಇಟ್ಟ್ಯಾರು ರುದ್ರಾಕ್ಷಿ
ಮುತ್ತಿನ ಪೇಟಾ ತಲೀತುಂಬಾ–ಸುತ್ತಿಗಂಡು
ನಾಗಬೆತ್ತಾವ ಹಿಡಕಂಡು–ಹುಲುಕೋಡಯ್ಯ
ನಿಲಗನ್ನಡಿ ತೆಗೆದು ಮುಖನೋಡಿ।
ಅವರು ಹಲವಾರು ವರುಷದ ಹುಡಗಾಗಿ
ಹುಸಿನಗೆಯು ತಾವು ನಗುತಾರೆ
ನೀರ ಕುಡಿದವಳು ದಣಿವಾರಿಸಿಗಂಡು
ಅವಳು ಬಾಗುತಾ ಬಳುಕುತ ಬರುತಾಳೆ
ಅಯ್ಯಯ್ಯನವರೆ ಸಂದ್ಯಾತು ಅಯ್ಯನವರೆ
ನಂಗೆ ಹೋಕಕೆ ಹಿಡ್ಲಲ ಹೊರೆಯು ಬಿಡಿ ಸ್ವಾಮಿ
ಸಂದ್ಯಾಗಲೇಳೆ ಮಿಂಚುಗವಿಯಲೇಳೆ
ನಾ ಮತ್ತೋಟು ದೂರ ಕಳೀಸೇನು–ಎಲ ಹೆಣ್ಣೆ
ಕೊಡು ನನಗೆ ಭಾಷೆ ಬಲಗೈಯ

ಹಾಳಾಧೂಳಲ್ಲಿ ಹಾದೀದಪ್ಪೀ ಬಂದೆ
ನಾನಿಂದೊಂದು ಪಾಪಕೆ ಗುರಿಯಾದೆ–ಎಲ ಶಿವನೆ
ನಾ ಹಾಳಾಧೂಳಲ್ಲಿ ಬರಬಹುದೇ
ಹೆಣ್ಣಾಗಿ ಹುಟ್ಟುವುದು ಮಣ್ಣಾಗಿ ಹುಟ್ಟಾಲು
ಮಣ್ಣೀನ ಮೇಲೆ ಮರವಾಗಿ–ಹುಟ್ಟಿದರೆ
ಪುಣ್ಯಾತ್ಮರು ಕುಂತಾರೆ ನೆರಳಾಗಿ–ಬದಿಕೇನು
ಸಾಕು ಮಾಡು ನನ್ನ ಜಲ್ಮವಾ

ಅಯ್ಯಯ್ಯನವರೆ ಪರಕುಲ ಪರಜಾತಿ
ಭಾಷೆ ಕೊಡುನಾರೆ ಬಲಗಯ್ಯಾ
ಯಾವ ಜಾತಿಯಾದರೇನೆ ಯಾವ ಕುಲವಾದರೇನೆ
ಕೊಡು ನನಗೆ ಭಾಷೆ ಬಲಗೈಯಾ
ನಾ ಗಂಡ ಉಳ್ಳವಳು, ಮಕ್ಕಳುಳ್ಳವಳು ಸ್ವಾಮಿ
ಭಾಷೆ ಕೊಡುನಾರೆ ಬಲಗೈಯಾ
ಗಂಡನಿರಲೇಳೆ ಮಕ್ಕಳಿರಲಿ
ನಿನ್ನ ಗಂಡಗೆ ಪೆಚ್ಚಾಗಿ ಮಡಿಗೇನು–ನಾ ನಿನ್ನ

ಕೊಡು ನನಗೆ ಭಾಷೆ ಬಲಗೈಯಾ
ತಾಯಿ ಉಳ್ಳವಳು ನಾನು ತಂದೆ ಉಳ್ಳವಳು ನಾನು
ಭಾಷೆ ಕೊಡುನಾರೆ ಬಲಗೈಯಾ
ತಾಯಿಯಿದ್ದಲಿರಲೇಳೆ ತಂದಿದ್ದಲಿರಲೇಳೆ
ನಿನ್ನ ಬಳಗಕೆ ಹೆಚ್ಚಾಗಿ ಮಡಿಗೇನು–ನಾ ನಿನ್ನ
ಕೊಡು ನನಗೆ ಭಾಷೆ ಬಲಗೈಯಾ ಎಲೆಹೆಣ್ಣೆ
ನಿನ್ನ ಬಳಗಕೆ ಹೆಚ್ಚಾಗಿ ಮಡಿಗೇನೂ–ನಾ ನಿನ್ನ
ಮರೆಯೆ ಹತ್ತೆಂಟು ಬಳಗವಾ
ಬಳಗ ಮರೆಯಂದ್ರೆ ಬಂದಾವು ಕಣ್ಣೀರು
ಕೆರೆಕಟ್ಟಿ ತುಂಬಿ ಮಿಗಿಲಾದ–ಕಣ್ಣೀರು
ನಾರಿರು ಕೊಣ ನೀಡಿ ಮಗೆದಾರೂ
ಚಿಂತೆ ಮಾಡಲು ಬ್ಯಾಡ ಗ್ಯಾನಮಾಡಲು ಬ್ಯಾಡ
ಕೊಡು ನನಗೆ ಭಾಷೆ ಬಲಗೈಯಾ
ನಾ ಹೆಂಡ ಕುಡಿಯುವಳು ಕಂಡಾವ ತಿನ್ನೋಳು
ಭಾಷೆ ಕೊಡುನಾರೆ ಬಲಗೈಯಾ
ಏಟು ಹೇಳಿದರೂ ಕೇಳರು ಶರಣಾರು
ನನ್ನ ಮುಂದಕೆ ಮೂರು ಹೆಜ್ಜೆ ಬಿಡಾರಲ್ಲ
ನೀವು ಹೆಂಡರುಳುಳ್ಳೋರು ಮಕ್ಕಳುಳ್ಳೋರು
ಭಾಷೆ ಕೊಡನಾರೆ ಬಲಗೈಯಾ
ಹೆಂಡರಿದ್ದರೇನೆ ಮಕ್ಕಳಿದ್ದರೇನೆ
ಅವರಿಗೆ ರಾಗದ ಚಾಣೆ ಇಲ್ಲ–ಎಲೆ ಹೆಣ್ಣೆ
ನೀನೆ ಪಂಜರದ ಗಿಳಿ ಕಣೇ
ಎಷ್ಟು ಹೇಳಿದರೂ ಕೇಳರು ಶರಣಾರು
ನನ್ನ ಮುಂದಕೆ ಮೂರು ಹೆಜ್ಜೆ ಬಿಡರಲ್ಲಾ–ಅಂತವ ಹೇಳಿ
ಭಾಷೆ ಕೊಡುತಾಳೆ ಬಲಗೈಯಾ

ನೆಂಬು ನೆಂಬೆಂದರೆ ನೆಂಬೀತು ಹೆಣ್ಣ ಜಲ್ಮ
ನಂಬೀದಕೆ ಎರಡ ಬಗೀಬ್ಯಾಡಿ–ಮಾಸ್ವಾಮಿ
ನಾ ನಂಬಿದೆನು ನಿಮ್ಮ ಸಿರಿ ಪಾದ

ಭಾಷೆಯ ಇಸ್ಗಂಡು ಹುಸುನಗೆಯ ನೆಗುತಾರೆ
ಅವಳ ಚೀಲದ ಇಳ್ಯಾವ ಮೆಲ್ಲುತಾರೆ
ಇಳ್ಯಾವೆದ್ದಾರು ಮತ್ತೇನ ಹೇಳ್ಯಾರು

ಹಿಡ್ಲೆಂಗೆ ನೀನು ಕೊಡುತೀಯೆ
ಹೊರೆಗೊಂದು ಆಣಿ ಪಡಿಗೊಂದು ಹಿಡಲಲ್ಲಾ
ಹಂಗಂತ ಹಿಡ್ಲ ಕೊಡುತೀನಿ
ಹಂಗೆ ಕೊಟ್ಟಾರೆ ಹೊಟ್ಟೆಂಗೆ ಅಂತಿಯೆ
ನಿನ್ನೆ ಮಕ್ಕಳಾ ಹೆಂಗೆ ನೀನು ಸಾಕುತಿಯೇ
ಹೊರೆಗೊಂದು ಕೊಳಗ ಹಿಡ್ಲಿಗೆ ಪಡಿವಾರಿ
ಹಂಗಂತ ಹಿಡ್ಲ ಕೊಡುಹೋಗೇ
ನಮ್ಮ ಗುಡಿಯಲ್ಲಿ ನನ್ನ ಮಡದಿದ್ದಾಳೆ
ಚಿಕ್ಕಮ್ಮ ಹಿಡ್ಲ ಕೊಳ್ಳುತಾಳೆ–ನನ್ನ ಮಡದಿ
ಅವಳಿಗೆ ಹಿಡ್ಲ ಕೊಡುಹೋಗೆ
ಹಿಡ್ಲ ಹೊರೆಯ ಹೊರಿಸ್ಯಾರು ಹುಲುಕೋಡಯ್ಯ
ಮುಂದಾಗಿ ನೀನು ನಡಿಯೇಳೆ–ಎಲ ಹೆಣ್ಣೆ
ನಾ ಹಿಂದನಿಂದಾವ ಬರುತೀನಿ

ಹಿಡ್ಲ ಹೊರೆಯ ಹೊತ್ತುಗಂಡು ಮಾದಿಗರ ಹೆಣ್ಣು
ಬಾಗುತಾ ಬಳುಕುತವ ನಡೆದಾಳೂ
ಆಕೆ ಚಿಕ್ಕಮ್ಮ ಬಾಗಲಲ್ಲವರಲ್ಲಾ
ಬ್ಯಾಡ ಬ್ಯಾಡಕಣೆ ಎಲ ಹೆಣ್ಣೆ
ಗುಡಿಯ ಗುಡಿಸೋದು ಕಕ್ಕೆ ಲಕ್ಕೆ ಸೊಪ್ಪು
ನಾವು ಹಿಡ್ಲಲ್ಲಿ ಗುಡಿಯ ಗುಡಿಸೋದಿಲ್ಲಾ
ಹಿಂದಕ್ಕೆ ಹೋಗೆ ಎಲ ಹೆಣ್ಣೇ
ಇವಳು ಹಿಡ್ಲ ಹೊತ್ತುಗಂಡು ಸುಮ್ಮನೆ ನಿಂತವಳೆ
ಸುತ್ತು ಮುತ್ತಾವ ನೋಡುತಾಳೆ
ಆಗ ಹುಲುಕೋಡಯ್ಯ ಹಿಂದಿನಿಂದ ಹೋದಾರು
ಅಟ್ಟಾಲು ಬೇಡ ನನ್ನ ಮಡದಿ–ಚಿಕ್ಕಮ್ಮ
ಅವಳು ಹಾದಿದಪ್ಪಿ ಇಲ್ಲಿ ಬಂದವಳೆ–ಎಲೆ ಹೆಣ್ಣು
ಅವಳಿಗೆ ಊಟಾವ ಇಕ್ಕಲೇಳೆ
ಅವಳೀಗೆ ಇಕ್ಕಿ ತಲೆಗೆ ತುಪ್ಪವ ಕೊಟ್ಟು
ಅವಳೀಗೆ ಮುತ್ತಿನ ಮಡಿಲಕ್ಕಿ ಕೊಡುಹೋಗೆ–ಎಲೆ ಹೆಣ್ಣೇ
ಅಕ್ಕರೆಯಿಂದವಳ ಕಳಿಸೋಗೆ

ಆಕೆ ಚಿಕ್ಕಮ್ಮ ನೀರ ಕೊಡುತಾರೆ
ಅವಳಿಗೆ ಊಟಕೆ ಇಕ್ಕುತಾರೆ

ಅವಳಿಗೆ ಊಟಕ್ಕಿಕ್ಕಿ ತಲಗೆ ತುಪ್ಪವ ಕೊಟ್ಟು
ಮುತ್ತಿನ ಮಡಿಲಕ್ಕಿ ಕೊಡುತಾರೆ
ಮುತ್ತಿನ ಮಡಿಲಕ್ಕಿ ಕೊಟ್ಟವರೆ ಚಿಕ್ಕಮ್ಮ
ನೀ ಹೋಗಿ ಬಾರೆ ಎಲೆ ಹೆಣ್ಣೇ

ಆಗ ಹುಲುಕೋಡಯ್ಯ ಅಂಗಳವ ಇಳಿದಾರು
ಹಿಡ್ಲ ಹೊರೆಯ ಬಿಚ್ಚುತಾರೆ
ಹಿಡ್ಲ ಎಣಿಸಾಕೆ ಅಂಳಗನ ಹತ್ತುತಾರೆ
ಪೆಟ್ಟಾವಿಗತ್ತಿ ಬತ್ತಾ ತರುತಾರೆ
ಮುತ್ತಿನ ಹಾನೀಲಿ ಅಳಿವಾರೂ
ಬತ್ತ ಅಳಿಯುವುದ ನೋಡಿದರು ಚಿಕ್ಕಮ್ಮ
ನಾ ಬಲ್ಲೆ ಬಲ್ಲೆ ನಿಮ್ಮ ತುಂಟ ಬುದ್ಧಿಯ–ನಾನು
ನಿಮ್ಮ ಮುಂದಕ್ಕೆ ಮೂರು ಹೆಜ್ಜೆ ಬಿಡನಾರೆ
ಬತ್ತವನಳಿದವರು ಹಸಿವೆ ಬಾಯಿಕಟ್ಟಿ
ಗಂಟುಕಟ್ಟಿ ಅವಳೀಗೆ ಹೊರಿಸ್ಯಾರು–ಹುಲುಕೋಡಯ್ಯ
ಕಣ್ಣ ಜಿಮುಕ್ಯವಳ ಕಳಿಸ್ಯವರೇ–ಏನಂತ
ಹೇ ಮುಂದಾಗಿ ನೀ ನಡೆಯಾಣೇ–ಎಲೆ ಹೆಣ್ಣೆ
ನಾ ಹಿಂದಲಿಂದಾವ ಬರುತೀನಿ
ಆಗ ಮಾದರೆಣ್ಣು ಹೋಗುತಾವಳಲ್ಲೊ
ಆಗ ಹುಲುಕೋಡಯ್ಯ ಅಂಗಳಾವ ಹತ್ತವರೆ
ಸುಂಗಾರ ಆಯಿತವರೆ ಶರಣಾರು
ಸುಂಗಾರ ಆಗುವುದಾ ಕಂಡಾರು ಚಿಕ್ಕಮ್ಮ
ಹೇ ಬಾಗಲಲ್ಲಿ ಅಡ್ಡ ಕುತ್ತೀವರೆ
ಹೇ ಬಲ್ಲೆ ಬಲ್ಲೇ ನಿಮ್ಮ ತುಂಟಬುದ್ಧಿ ಸ್ವಾಮಿ
ನಿಮ್ಮ ಮುಂದಕೆ ಮೂರು ಹೆಜ್ಜೆ ಬಿಡನಾರೆ–ಅಂತಾವ್ಹೇಳಿ
ಹೇ ಬಾಗಲಲ್ಲಿ ಅಡ್ಡ ಕೂತೇ ಅವಳೇ
ಹೇ ಸುಂಗಾರಾದರು ಈಚೀಗೆ ಬಂದಾರು
ಏನು ಹೇಳುತಾರೆ ಶರಣಾರು
ಎಟೊ ಹೇಳಿದರು ಕೇಳಳು ನನ್ನ ಮಡದಿ
ನನ್ನ ಮುಂದಕೆ ಮೂರು ಹೆಜ್ಜೆ ಬಿಡಳಾಲ್ಲ–ನನ್ನ ಮಡದಿ
ಮುಂದಾದಳಲ್ಲೊ ಎಲೆ ಹೆಣ್ಣು–ಅಂತಾವ್ಹೇಳಿ
ಪಟ್ಟನೆ ಈಚೆಗೆ ನೆಗೆದಾರು–ಹುಲುಕೋಡಯ್ಯ

ಹೋತಾರೆ ಸೂಳೆ ಒಡನಾಡಿ–ಹುಲುಕೋಡಯ್ಯ
ಕಟ್ಟವರೇ ಗುಡ್ಲ ಬಂದಾ
ಹೇ ಕಟ್ಟವರೇ ಸೊಪ್ಪಿನ ಗುಡ್ಲ ಬಂದು
ವಾಸಮಾಡುತಾರೆ ಅಡವೀಲಿ

ಆಕೆ ಚಿಕ್ಕಮ್ಮ ನೋಡಿ ಸಾಕಾದರು
ಗಂಡಾನ ಸುಳಿವು ಇಲ್ಲವಲ್ಲಾ
ಗಂಡಾನ ಸುಳಿವು ಕಂಡೇ ಅಂದವರಿಲ್ಲಾ
ಅತ್ತ್ಯಮ್ಮಗೆ ವಾಲೆ ಬರೆದಾರು
ಹೇ ಬೆಂಬಳೂರಿಲ್ಲಿರುವ ಅತ್ತೆ ಬಾರೇವ್ವ
ನಿಮ್ಮ ಮಗನೇ ಹ್ವಾದರೂ ವನದೇಸ
ಹೇ ಜಾತಿಗೆಟ್ಟಾರು ಕುಲವೇ ಕೆಟ್ಟಾರಲ್ಲಾ
ಹೇ ಸೂಳೆ ಒಡನಾಡಿ ಹ್ವಾದರೂ
ಹ್ವಾದರೂ ಸೂಳೆ ಒಡನಾಡಿ ನಿಮ್ಮ ಮಗಾ
ನಾ ಒಬ್ಬಳಾದನಲ್ಲಾ ಗುಡಿಗೆ
ಹೋದಾರೆ ಹೋಗಾಲಿ ಹುಡುಕಿ ನಾ ತತ್ತೀನೆ
ಅಂಜದೆ ಇರೆ ನನ್ನ ಸೂಸೆ
ಆಕೆ ಚಿಕ್ಕಮ್ಮ ಮತ್ತೊಂದು ವಾಲೆಯು ಬರೆದರು
ಭಾವಯ್ಯಗೆ ಕಳಿಸವರೇ
ಘಟ್ಟದ ಬಾಗಿಲಲ್ಲಿರುವ ದೊಡ್ಡಯ್ಯನವರೆ
ನಿಮ್ಮ ತಮ್ಮ ಹ್ವಾದರೂ ವನದೇಸ
ಜಾತಿಗೆಟ್ಟರು ಕುಲವೇ ಕೆಟ್ಟರಲ್ಲಾ
ಹ್ವಾದರು ಸೂಳೆ ಒಡನಾಡಿ–ನಿಮ್ಮ ತಮ್ಮ
ನಾ ಒಬ್ಬಳೇ ಆದನಲ್ಲಾ ಗುಡಿಗೆ
ಹೇ ಹ್ವಾದರೆ ಹೋಗಾಲಿ ಹುಡುಕಿ ನಾ ತತ್ತೀನೆ
ಅಂಜದೆಯಾ ಇರೆ ನನ್ನ ನಾದಿನೀ
ಸ್ವಾಮಿ ದೊಡ್ಡಯ್ಯ ಮತ್ತೊಂದು ವಾಲೆಯು ಬರೆದು
ಕಿತ್ತೂರಿಗೆ ವಾಲೆ ಕಳುವಿದರು
ಕಿತ್ತೂರಲ್ಲಿರುವ ಕಿರಿಯುವನೆ ನನ್ನ ತಮ್ಮ
ಸೀದಾ ಬರಬೇಕು ಕುಲಕೋಡಿಗೆ–ನನ್ನ ತಮ್ಮ
ನಿಮ್ಮತ್ತಿಗೆ ಕಾವಲ ಇರಬೇಕು

ಯಾರಿದ್ದರೇನು ಸೂರನಿಲ್ಲಾದ ಮೇಲೆ
ಸೂರ ನನ್ನ ತಪ್ಪು ಹುಲುಕೋಡಯ್ಯ–ಇಲ್ಲಾದ ಮೇಲೆ
ಯಾರಿದ್ದರೇನು ಫಲವಿಲ್ಲಾ–ಅಂತಾಪ್ಹೇಳಿ
ಉಕ್ಕಿನ ಪಂಜಾರವ ಕೊಡಿಸ್ಯಾರು–ಮುತ್ತಿನ ಬಲೆಯು ಬೀಸಿ
ಹುಲುಕೋಡಯ್ಯನ ಹುಡುಕುತಾರೆ

ಎಲ್ಲಿ ಹುಡುಕಿದರೂ ಹುಲುಕೋಡಯ್ಯ ಸುಳಿವಿಲ್ಲಾ
ಅವರು ಸೇರವರೆ ಅರಣ್ಯಾದ ಅಡವಿಯಾ
ಹೇ ಅಡವಿ ಅರಣ್ಯ ಸೇರಿದ ಮೇಲೆ
ಏನು ಹೇಳುತಾಳೆ ಎಲೆ ಹೆಣ್ಣು
ಹೆಂಡರುಳ್ಳವರಿನರು ಮಕ್ಕಳುಳ್ಳವರಿನರು
ಹೇ ಸೆರಗಾನ ಕುಟ್ಟ್ಯಾ ಇವರು–ಹುಲುಕೋಡಯ್ಯ
ನಾ ಸತ್ಯದುಡವಾ ತಿಳೀಬೇಕು ಅಂತ
ಏನು ಹೇಳುತಾಳೆ ಅಡವೀಲಿ
ನೀ ಹುಲ್ಲೇನೆ ತರಬೇನು ಹಿಡ್ಲಾನೆ ಕಟ್ಟೇನು
ಹೊತ್ತು ಮೀರಿದು ಭತ್ತ ತರುಬೇನು ಅಯ್ಯನೋರೆ
ಏನು ಕೆಟ್ಟ ಮಾದಿಗಿತ್ತಿ ಎಂದಾ
ಮಾದಿಗಿತ್ತಿ ಎಂಬ ಸೊಲ್ಲ ಕಾಣೆ ನಾರಾಯಣಾ
ಏನು ಕೆಟ್ಟ ಮಾದಿಗಿತ್ತೆಂಡೊ
ಹೊತ್ತು ಮೆರೆಯು ಭತ್ತಾ ತರುಬನ್ನಿ ಅಯ್ಯನೋರೆ
ನಾವು ಕುಟ್ಟುಣ್ಣಲೇಳಿ ನಾವು ಹಗಲೂಟಾ
ಏನು ಕೆಟ್ಟೆ ಮಾದಿಗಿತ್ತಿ ಎಂದಾ
ಮಾದಿಗಿತ್ತಿ ಎಂಬ ಸೊಲ್ಲ ಕಾಣೆ ನಾರಾಯಣ
ಏನು ಕೆಟ್ಟನೆಂದು ಮಾದಿಗಿತ್ತಿ ಎಂದು
ನಲಿ ನಲಿ ಮಾಗ್ಯೆತೆ ಜ್ವೆನೇರಿ ಸೇಂಪ್ಯೆತೆ
ನನಗೊಂದು ಸೇರು ಹೆಂಡಾ ತಂದುಕೊಡಿ ಅಯ್ಯನೋರೆ
ಕೆಟ್ಟನೂ ನಾರಾಯಣ ಏನು ಕೆಟ್ಟನೂ ಮಾದಿಗಿತ್ತಿಂದಾ
ನನಗೊಂದು ಸೇರು ಹೆಂಡಾ ತಂದುಕೊಡಿ ಅಯ್ಯನೋರೆ
ನಿಮಗೆ ಹೆಂಡದ ಗಡಿಗೇಲಿ ನೀರಾ ಕಾಯಿಸಿ ಹುಯ್ದೇನು–ಅಯ್ಯನೋರೆ
ನಿಮ್ಮ ಮುತ್ತಿನಂತಾ ಜನಿವಾರ ಹಿಂದಕೆ ಹಾಕಿ ಸ್ವಾಮಿ
ಏನು ಕೆಟ್ಟನೇ ಮಾದಿಗಿತ್ತಿ ಎಂದಾರು
ಮಾದಿಗಿತ್ತಿ ಎಂಬ ಸೊಲ್ಲ ಕಾಣನಿಲ್ಲವಲ್ಲಾ ನಾರಾಯಣ

ಒಪ್ಪಿದೊಪ್ಪಿದೀ ನಿಮ್ಮ ಸತ್ಯದುಡವಾ ನಾನು
ದುಃಖಮಾಡಬ್ಯಾಡ ನೀವು ಶರಣಾರೇ
ಏನು ಕೆಟ್ಟೀ ಮಾದಿಗಿತ್ತಿಂದಾ
ಮಾದಿಗಿತ್ತಿ ಎಂಬ ಸೊಲ್ಲ ಕಡದು ನಾರಾಯಣ
ಏನು ಕೆಟ್ಟನಲ್ಲಾ ಮಾದಿಗಿತ್ತಿಂದಾ
ಹೇ ದುಃಖವಾ ಮಾಡುವುದಾ ಕಣ್ಣಿಂದಾ ನೋಡಿದಾಳು
ಅಳಬ್ಯಾಡೀ ನೀವು ಶರಣಾರೇ
ಒಪ್ಪಿದೊಪ್ಪಿದೀ ಸತ್ಯವಾ ದುಡವಾನು
ಹೋಗೋಣ ನಡೆ ನಿಮ್ಮ ಹುಲುಕೋಡಿಗೆ
ಹೇ ಸೂಳೆ ಕರ್ಕಂಡು ಹಿಂತಿರುಗಿ ಬಂದಾರು
ಹೇ ಹುಲುಕೋಡಿಗೆ ಅವರು ಬರುತಾರೆ–ಹುಲುಕೋಡಯ್ಯ
ಹೇ ಹೊನ್ನಸಳಿ ಮರಾದ ನೆರಳಲ್ಲಿ–ಕೂತ್ಕಂಡು
ಏನು ಹೇಳುತಾರೆ ಶರಣಾರು
ಹತ್ತೂರು ತಿರುಗಿದೇ ಹೊಟ್ಟೆ ಭಾಳಾ ಹಸಿವಾಯ್ತು
ನಾ ಹೋಗಿ ಬತ್ತೀನಿ ಅರಮನೆಗೆ–ಎಲೆ ಹೆಣ್ಣೆ
ನಾ ನಿನಗೆ ಅಟ್ಟಾ ಅಂಬಲಿಯಾ ತರುತೀನಿ–ಎಲೆ ಹೆಣ್ಣೆ
ಇಲ್ಲಿಯೇ ನೀ ಇರುತ್ತಿಯೋ
ಆಗಲಾಗಲಿ ಸ್ವಾಮಿ ಇಲ್ಲೇ ನಾ ಇರುತಿನಿ
ನೀವು ಹೋಗಿ ಬರ್ರ್ಹೋಗಿ ಅರಮನೆಗೆ

ಆಗ ಹುಲುಕೋಡಯ್ಯ ಅರಮನೆಗೋಗುತಾರೆ
ಚಿಕ್ಕಮ್ಮ ಮುಖಾವ ನೋಡಿದಾರು
ಆಕೆ ಚಿಕ್ಕಮ್ಮ ಗಂಡಾನ ಮುಖಕಂಡು
ಆಕೆ ಮುತ್ತಿನಾ ಸೆರಗಾ ಮುಖ ತುಂಬಾ–ಮುಚ್ಚಿಕೊಂಡು
ಆಕೆ ವಕ್ಕಳಾ ದುಃಖಸ ಮಾಡುತಾರೆ
ನಿಮ್ಮ ಕಂಚಿನಂತ ಮುಖಾ
ಕಂದಿ ಕುಂದಿದಾವೆ
ಬತ್ತಿ ಬಾಡಿದಾವೆ ನಗೆ ಮುಖಾ–ಶರಣಾರೆ
ನಿಮ್ಮ ಹಣೆಯಲ್ಲಿ ಏನಂತಾ ಬರೆದಿತ್ತು
ಚಿಕ್ಕಮ್ಮ ದುಃಖಾವ ಮಾಡುವುದಾ ನೋಡಿದಾರು
ಹೇ ಹುಲುಕೋಡಯ್ಯ ದುಃಖ ಮಾಡುತಾರೆ
ಹತ್ತೂರು ತಿರುಗಿದೇ ಹೊಟ್ಟೆ ಭಾಳಾ ಹಸಿವಾಯ್ತು

ಇಟಾ ಅಂಬಲಿಯ ಕೊಡೇ ನನ್ನ ಮಡದಿ
ಆಕೆ ಚಿಕ್ಕಮ್ಮ ಬಲಗೈನಲಿ ನೀರು
ಎಡಗೈಲಿ ಹಾಳೆ ತರತಾರೆ–ಚಿಕ್ಕಮ್ಮ
ಅವರು ಕೀಳಲ್ಲಿ ಕೂರಿಸವರೆ–ಇಕ್ಕತಾರೆ
ಆಗ ಹುಲುಕೋಡಯ್ಯ ಊಟ ಮಾಡಿದಾರು
ಮತ್ತೇನಂತಾವ ಕೇಳತಾರೆ
ನಂಬು ನಂಬಂದರೆ ನಂಬೀತು ಹೆಣ್ಣು ಜಲ್ಮ
ನಂಬಿದಾಕೆರುಡಾ ಬಗೆದಾರು–ಬಗೆದಿಯಾ ನನ್ನ ಮಡದಿ
ಹಸದವಳಲ್ಲೇ ಎಲೆ ಹೆಣ್ಣು–ನನ್ನ ಮಡದಿ
ಅವಳಿಗೂ ಅಟಾ ಅಂಬಲಿ ಕೊಡುತ್ತಿಯಾ
ಪಟ್ಟೆ ವಸ್ತ್ರವ ಕೆಳ್ಗೆ ಹಾಸುತಾರೆ
ತಂದು ಇಕ್ಕುತಾರೆ ಚಿಕ್ಕಮ್ಮನವರು
ಅನ್ನ ಇಕ್ಕಿಸ್ಕಂಡು ಗಂಟಾ ಕಟ್ಟಕೊಂಡು
ತಕ್ಕೊಂಡೋಡಿ ಬತ್ತಾರೆ

ಅವರು ಬಂದಿರೊತ್ತಿಗೆ ಇವಳು ಏನ ಮಾಡವಳೆ
ಹೇ ಹೆಂಡರುಳ್ಳವರಿವರು ಮಕ್ಕಳುಳ್ಳವರಿವರು
ಬಂದು ಸೇರಿದರು ಹುಲುಕೋಡಿಗೆ–ಶರಣಾರು
ನನ್ನ ಹಂಬಲಾಕೆ ಮರೆತಾರು–ಅಂತಾವ್ಹೇಳಿ
ಗೆಣಿಸಿನ ಗುಂಡಿಯೊಳಕೆ ಅವಿತಾಳು

ಅನ್ನ ತಂದವರೆ ಅರಸಿ ನೋಡುತಾರೆ
ಹೇ ಸೂಳೆಯ ಸುಳಿವು ಇಲ್ಲವಲ್ಲಾ
ಜಾತಿಗೆಟ್ಟನಲ್ಲೇ ಕುಲವಾ ಕೆಟ್ಟನಲ್ಲೇ
ನಾ ಮರೆತ ಹತ್ತೆಂಟಾ ಬಳಗವಾ–ನಿನಗಾಗಿ
ಎಲ್ಲಿ ಹೋದೇ ನನ್ನ ಅರಗಿಣಿ–ಎಲೆ ಹೆಣ್ಣೆ
ನಿನ್ನ ನೋಡದೆ ಅರಗಳಿಗೆ ಇರನಾರೆ
ಎಲ್ಲಿ ಹೋದೆ ನನ್ನ ಅರಗಿಣಿ ಹೆಣ್ಣೆ
ನಿನಗೆ ಅನ್ನ ತಂದಿವಿನಿ ಉಣ್ಣಾ ಬಾರೆ
ಜಾತಿಗೆಟ್ಟನಲ್ಲಾ ಕುಲವೇ ಕೆಟ್ಟನಲ್ಲೇ
ನಾ ತೊರೆದೆ ಏಳೆಂಟು ಬಳಗಾವ–ನಿನಗಾಗಿ
ಎಲ್ಲಿ ಹೋದೆ ನನ್ನ ಅರಗಿಣಿ–ಎಲೆ ಹೆಣ್ಣೇ

ನಿನ್ನ ಕಾಣದೆ ಅರಗಳಿಗೆ ಇರನಾರೆ
ನನಗೆ ಹೆಂಡರಿದ್ದರೇನೆ ಮಕ್ಕಳಿದ್ದರೇನೆ
ಹೇ ಪಟ್ಟದ ಮಡದಿ ಕಡು ಚೆಲುವೆ–ಆದರೇನೆ
ಅವಳಿಗೆ ರಾಗ ರಕ್ಕಣೆ ಇಲ್ಲಕಣೆ ಎಲೆ ಹೆಣ್ಣೆ
ನೀನೇ ಪಂಜರದ ಗಿಣಿ ಕಾಣೆ–ಎಲೆ ಹೆಣ್ಣೆ
ನಿನ್ನ ನೋಡದೆ ಅರಗಳಿಗೆ ಇರನಾರೆ–ಎಲೆ ಹೆಣ್ಣೆ
ನಿನಗೆ ಅನ್ನ ತಂದಿವಿನಿ ಉಣ್ಣ ಬಾರೆ
ಇವರು ದುಃಖ ಮಾಡದ ಕಣ್ಣಿಂದ ನೋಡ್ಯಾಳು
ಕಿಲಕಿಲನೆ ನಗುತಾಳೆ ನೋಡಿ–ಏನಂತ ಅಂತಾಳೆ
ಇಲ್ಲಿ ಇವಿನಿ ಬನ್ನಿ ಶರಣಾರೆ
ಆಗ ಹುಲುಕೋಡಯ್ಯ ಹುಸಿನೆಗೆ ನಗುತಾವ
ಸೂಳಿಗೆ ಅನ್ನಾವ ಕೊಡುತಾರೆ
ಆಗ ಊಟಮಾಡಿ ಇಬ್ಬರು ಕೂತ್ಕಂಡು
ಅವರಿಬ್ಬರೂ ಇಳ್ಯಾವ ಮೆಲ್ಲುತಾರೆ
ಅವರಿಬ್ಬರೂ ಕುಂತ್ಕಂಡು ಇಳ್ಯಾವ ಮೆಲ್ಲುವಾಗ
ಹೇ ದೊಡ್ಡಯ್ಯ ಹುಡುಕಿಕೊಂಡು ಬರುತಾರೆ
ಅಣ್ಣಾನ ಮುಖಾವ ಕಂಡಾರು ಹುಲುಕೋಡಯ್ಯ
ಅವರು ವಕ್ಕಳಾ ದುಃಖವಾ ಮಾಡುತಾರೆ
ಆಗ ದೊಡ್ಡಯ್ಯ ಏನಂತ ಹೇಳುತಾರೆ
ಅಂಜಾದೆ ಇರು ನನ್ನ ತಮ್ಮಾ–ಹುಲುಕೋಡಯ್ಯ
ನಿನ್ನ ಹಣೆಯಲ್ಲಿ ಹಂಗಂತ ಬರೆದಿತ್ತು–ನನ್ನ ತಮ್ಮಾ
ತಪ್ಪಿಸಕ್ಕೊ ಯಾರಿಗೂ ಆಗದಲ್ಲೊ
ತಪ್ಪಿಸಕ್ಕೆ ಆಗದು ಅಂತಾವ ಹೇಳತಾರೆ
ಹುಲುಕೋಡಯ್ಯನ ಕರ್ಕಂಡು ಹೋಗುತಾರೆ
ಏಳು ಗುಡ್ಲ ಕಟ್ಟ ಏಳ ಚೌವರಾವ ಮಾಡಿಸಿ
ಅವರ ಕುಲದವರೆಲ್ಲಾ ಸೇರುತಾರೆ–ಬ್ಯಾಗನೇ
ಹುಲುಕೋಡಯ್ಯನ ಸುದ್ದವಾ ಮಾಡಿ–ಕುಲದವರು
ಇವರಿಗೆ ವರುಷಕ್ಕೊಂದು ಸಾರಿ ಅಪ್ಪಣೆ ಕೊಡುತಾರೆ

ನೆಂಬು ನೆಂಬೆಂದರೆ ನೆಂಬಿತು ಹೆಣ್ಣು ಜಲ್ಮಾ
ನೆಂಬಿದಾಕೆರಡಾ ಬಗೆದಿಯಾ–ನನ್ನ ತಮ್ಮಾ
ವರುಷಕ್ಕೊಂದು ಸಲ ಬಂದೇ ಹೋಗು

ವರುಷಕ್ಕೊಂದು ಅಪ್ಪಣೆ ಕೊಟ್ಟವರೆ ಕುಲದವರು
ವರುಷಕ್ಕೊಂದು ಸಲ ಬಂದೇ ಹೋಗುತಾರೆ
ಅವರು ಸೂಳೆಯು ಮನೆಗೆ ಬರುತಾರೆ
ವರುಷಕ್ಕೊಂದು ಸಲ ಕುಲದವರೆಲ್ಲಾ ಸೇರಕತಾರೆ
ಹೇ ಹುಲುಕೋಡಯ್ಯ ಕುಲಾವ ಸುದ್ದ ಮಾಡಿ–ಕುಲದೋರು
ಅವರಿಗೆ ವರುಷಕ್ಕೊಂದು ಅಪ್ಪಣೆ ಕೊಟ್ಟರಲ್ಲಾ

ಕೆಂಚವ್ವ

ಪ್ರಾರ್ಥನೆ

ಸರಸತಿ ಸಣ್ಣವಳೆ ನಿಜಮುಖದ ಕಣ್ಣವಳೆ
ಕರಕಡಗ ಧರಿಸೆ ಗಿರಿಜಮ್ಮ–ಪಾರವತಿ
ಕಲಿಸು ಕಲ್ಯಾಣದ ಕತೆ ನೂರಾ

ಸರಸತಿಯೆಂಬೊಳು ಸಾವಿರಕು ದೊಡ್ಡವಳು
ಲೋಕಪಾಲಕರ ಕಿರಿದಂಗೆ–ಸರಸತಿ
ನನಗೆ ಬೇಕಾದಟ್ಟು ಹಾಡ ಬರಕೊಡು

ನುಗ್ಗಿಯ ಹೂವ ಬಗ್ಗಿ ಮೂಗಳ ಕುಯ್ದೆ
ಉಗ್ರಣ್ಣ ಬೀರಣ್ಣನಿಗೆ ಶರಣೆಂದೆ–ನನ ಧನಿಯು
ಕುಗ್ಗಾದೆ ಬರಲಿ ಸಭೆ ಮುಂದೆ

ಕಣಗಿಳ ಹೂವಾ ಕೈ ತುಂಬಾ ನಾ ಕುಯ್ದೆ
ಕಣಿವೆಯ ಈರಣ್ಣನಿಗೆ ಶರಣೆಂದೆ–ನನ ಧನಿಯು
ಸಮವಾಗಿ ಬರಲಿ ಸಭೆ ಮುಂದೆ

ಎಳ್ಳು ಹೊಲದಲ್ಲಿರುವ ಡೊಳ್ಳು ಹೊಟ್ಟೆ ಬೆನವಣ್ಣ
ನಾನು ಎಳ್ಳು ಉಂಡಲಿಗೆ ನೆನೆಗಡ್ಲೆ–ತಂದೇನು
ಇದ್ದೂಟ ಮತಿಯ ಬರಕೊಡೆ

ಕಡ್ಲೆ ಹೊಲದಲ್ಲಿರುವ ಕಡಿದೊಟ್ಟೆ ಬೆನವಣ್ಣ
ನಾನು ಕಡ್ಲೆ ಉಂಡಿಲಿಗೆ ನೆನಗಡ್ಲೆ–ತಂದೇನು
ಕಂಡೂಟ ಮತಿಯ ಬರಕೊಡು

ಸುಬ್ರಾಯರ ತಂಗೆ ಒಬ್ಬರು ಕೆಂಚವ್ವ
ಆಕೆ ಇಬ್ಬನೀ ಹುಲ್ಲಾ ತುಣಕಂಡು–ಕೆಂಚವ್ವ
ಸದ್ದಿಲ್ಲತ್ತಾವ ನೆಲೆಸಾರು

ಸ್ವಾಮಿ ಸುಬ್ರಾಯರು ಹೆಣ್ಣೀಗೆ ಹೋದಾರು
ಹೆಣ್ಣಿಗೆ ಹೋಗಿ ಮನಿಗೆ ಬರುವಾಗ–ಕೆಂಚವ್ವ
ಪದಾಕಗ್ಗಣೆಯ ಹಿಡದವ್ರೆ

ಪಾದ ತೊಳ್ಕಂಡು ಒಳಗ್ಹೋಗಿ ಅಣ್ಣ ಸುಬ್ರಾರಾಯರು
ಚಿನ್ನಾದ ಹರಿವಾಣವ ಕೆಮ್ಮಣ್ಣಲಿ ಬೆಳಗಿ ಉಣ್ಣಲಿಕ್ಕಿ–ಸುಬ್ರಾರಾಯರು
ಊಟ ಮಾಡಿದಾರೂ ಹಸ್ತವಾ ತೊಳೆದಾರು
ಮಂಚಕೆ ತಾವು ಬರುತಾರೆ

ಮಂಚಕೆ ಬಂದವರಿಗೆ–ವಿಳ್ಳೆವ ಮಡಗ್ಯಾರು
ಕದವಾ ಮರೆಮಾಡಿ ಯಾರ್ಹಂಗವರಣ್ಣ ಅತ್ತಿಗಮ್ಮ

ಉದ್ದಾ ನಿನ್ಹಂಗೇ ಗುಡ್ಡ ನಿನ್ಹಂಗೆ
ಕೆಂಪು ನಿನ್ಹಂಗೇ ನಿನ್ನ ಅತ್ತಿಗಮ್ಮ

ಅಣ್ಣ ಸುಬ್ರಾಯಸ್ವಾಮಿ ಹೆಣ್ಣಿಗೆ ಪೋದಕ್ಕೆ
ನಿಮ್ಮ ಹೆಂಡ್ತಿಗೂ ನನಗೂ ಸಮನಂದಾ–ಅಣ್ಣಯ್ಯ
ನಾ ಹೊಂಡ್ತೀನಣ್ಣಯ್ಯ ಪನಪೇಸಕೆ

ನಾನು ನೋಡಿಲ್ಲ ನಿನಗೆ ಹೇಳಿದ್ದಲ್ಲ
ನಾಡಮೇಲ ನುಡಿಕಾಣೇ–ಕೆಂಚವ್ವ
ನಾ ಒಬ್ಬನೇ ಕಾಣೆ ಅರಮಲ್ಲೀ
ಎಲ್ಲಿಗೆ ನಿನ್ನ ಹೊರ ಪಯಣಾ

ಎಷ್ಟು ಹೇಳಿದರೂ ಕೇಳವಳು ನಾನಲ್ಲ
ನಾ ಹೋಯ್ತಿನಣ್ಣ ಹೊರದೇಸ
ನಿಮಗೆ ತೆಂಗಿನಕಾಯಿ ಬ್ಯಾಡ
ನನಗೆ ಗಟ್ಟದೆ ಉಪ್ಪೇ ಬ್ಯಾಡ

ಉಟ್ಟಂತ ಸೀರೇಲಿ ತೊಟ್ಟಂತಾ ರವಕೇಲಿ
ಹೊಂಟಾಳು ಕೆಂಚವ್ವ ಹೊರದೇಸಕೆ
ಹೊಳೆಯ ಸಾಲಲ್ಲಿ ಹೊಂಗೇ ತೋಪಲ್ಲಿ
ಹಾಕಾಳು ಜಾಲದ ಮರದಡಿಯಾ ಕೆಂಚವ್ವ
ಕಾಲಾಡಿ ಮಗ್ಗ್ಲು ಮೂರುದಾರು–ಕೆಂಚವ್ವ

ಸಾಲಾವೆ ತಾಯಿ ನಿಮ್ಮ ತುರುಬೀಗೆ
ಆಸಿ ಕೆಂಚಮ್ಮ ದಾರಿಯಾ ನಡೆದಾರೂ
ದಾರಿಯಾ ನಡೆದೂ ದಣವಾಗಿ–ದಣದು ದಂಬಾರು
ಹೊನ್ನರಳೀ ಮರದಾ ನೆರಳಲ್ಲಿ–ಕೂತಗಂಡು
ಕವತೂ ಬೆವತೂ ಹರದಾರು
ಬ್ಯಾಸಿಗೆ ಬಿಸಿಲಲ್ಲಿ ದಾರಿಯ ನಡದೋಳಲ್ಲ
ದಾರಿಯ ನಡೆದು ದಣವಾಯ್ತು
ನೀರಾ ನಾನೀಗ ಕುಡೀಬೇಕು

ನೀರಾರು ನನಗೇ ಕೊಡುವಾರು–ಅಂತವ್ಳೆ ಳಿ
ಬಲ್ಗ ಡಿಗೇ ಬೆವರಾ ಎಸೆದಾರು–ಕೆಂಚವ್ವ
ಬಲದಲ್ಲಿ ಹುಟ್ಟಿದರು ಬಲಮುಗಾ–ಕರ್ಣಗಲಬಂಟ
ಈಗ ಏನಂಥ ಹೇಳ್ತಾವೆ ಮಗನೀಗೆ
ನನಗ ಅಂಗಟ ಬರುವಲ್ಲ ಸಂಗಟ ಬರುವಲ್ಲ
ಅಳಲಿಕೆ ಬಳಲಿಕೆ ತಡೀನಾರೆ–ಮಗನೆ
ಕುಡಿಯಾಕೆ ನೀರ ತರುಹೋಗು
ಆಗ ಕಣಗಲ ಬಂಟ ಗಿಂಡಿಯ ತಕ್ಕೊಂಡು
ಹೋದಾರ ಎಣ್ಣೆ ಹೊಳೀಗಾಗಿ–ನೀರಿಗ್ಹೋಗುವಾಗ
ಬೇಡ್ತಿ ಹುಡುಗೀರು ಐದಾಳು ಹೆಣ್ಣುಮಕ್ಕ
ಅಲ್ಲಿ ಕುಣಿದಾಡುತಾ ಅವರಲ್ಲಾ
ನೀರಿಗೆ ಹೋದಾನು ನೀರ ತರನಿಲ್ಲ
ಬೇಡ್ತಿರ ನೋಡಿ ಬೆರಗಾದ–ಕಣಗಲ ಬಂಟ
ತಾಯ ಹಂಬಲಾವ ಮರೆತಾರು

ಆಕೆ ಕೆಂಚಮ್ಮ ನೋಡಿ ಸಾಕಾದ್ರು
ಕೈಯಲ್ಲಿ ತಗೆದಾರು ಕೊಣವಾ
ಹಿಪ್ಪೆ ಮರದಲ್ಲಿ ಬಾವಿಯ ತೆಗೆದಾರು
ಬೇಕಾದೋಟ ನೀರು ಕುಡಿದಾರು–ಕೆಂಚಮ್ಮ

ಎಡಗಡೆಗೆ ಬೆವರಾ ಎಸೆದಾರು–ಕೆಂಚಮ್ಮ
ಏನಾ ಹೇಳ್ತಾರೆ ಮಗನೀಗೆ
ಮಕ್ಕಳ ಹೆತ್ತಾರು ಬಂಜೆ
ಗಂಡವಾ ಕೂಡಿದ್ರು ಮುಂಡೆ

ನೀನೆಲ್ಲಿಗ್ಹೋಯ್ತಿಯೇ ಎಲೆ ಮಗನೆ–ಸಿಂಗಪಟ್ಣ
ನೀ ನನಗೆ ಕಾವಲ ಇರಬೇಕು–ನನ ಮಗನೆ
ನಿನ್ನ ಹರಿವಾಣದಲ್ಲಿ ನೆಲಸೇನು–ನನ ಮಗನೆ
ನಿನ್ನ ಬೋಳಮಂಡೆ ಮೇಲೆ ಹೊರಿಸೇನು–ನನ ಮಗನೆ
ನಿಂಗೆ ಸಣ್ಣದೊಂದು ತೇರಾ ಹರಿಸೇನು–ನನ ಮಗನೆ
ನೀ ನಂಗೆ ಕಾವಲಾ ಇರಬೇಕು
ಆಕೆ ಕೆಂಚವ್ವ ನೋಡಿ ಸಾಕಾದಳು
ನೀರಿಗ್ಹೋದ ಮಗಾ ಬರನಿಲ್ಲ
ಬೇಡ ಬೇಡಂಡೇ ಬೇಡರಗೇರಿಗೆ ಹೋದರು ನೋಡೆ ಕೆಂಚವ್ವ
ನಿನ ಮಗ ಕಣಗಲ ಬಂಟ ಬೇಡ್ತಿರಾ ನೋಡಿ ಬೆರಗಾದ್ರು
ಬೆರೆಗಾದರಾಗಲಿ ನಾ ಹೊರಗೆ ಇರುತ್ತೀನಿ
ಅವನಿಗೆ ತಂದಂತಾ ದವನಾ ಬಾಳೆ ಹಣ್ಣಾ
ತಂದಿಟ್ಟೆ ನನ್ನ ಕೋಣೆಗೇ
ಒಡವೇ ಇಕ್ಕವಳೆ ಕಡಗ ತೊಟ್ಟವಳೆ
ಆಕೆ ಒಡದು ಮೂಡಪಳೆ ಗುಡಿತುಂಬಾ–ಕೆಂಚವ್ವ
ಬಂದು ಶರಣ ಶರಣೆಂದು ಕೊಡುತ್ತಾರೆ
ಸಿಡಿಲು ಗುಡುಗು ಪೂಜೆ ಆಗುತ್ತೈತೆ

ಆಕೆ ಕೆಂಚವ್ವಗೆ ಅರಸಾರೆ ಬಣ್ಣವಾ
ಅರಸ ಕೆಂಚವ್ವನ ಮಳಿಗೇಲಿ
ಅರಸವರೆ ಹೋಸ್ಕೋಟೆ ಮಳಿಗೇಲಿ
ಸೋಮಾರ ಸಂತೆ ಮಳಗೇಲಿ ಆಡ ಮುರಿಗೊಂಬೆ
ಚಂದ್ರಾಗವಿ ಸೀರೆ ಚಂದಲ್ಲಾ ಅಂತ್ಹೇಳಿ
ಆಕೆ ಚಂಡಿ ಹೋರವ್ರೆ ಕೊಣದಲ್ಲಿ
ಚಂದ್ರಾಗವಿ ಸೀರೆ ಚಂದಲ್ಲಿದಿದ್ರೆ
ಕುದಹಗಿ ನಾಡ ಹೊಸಬಣ್ಣ ತಂದಿದ್ದಿವಿ
ಚಂಡಿ ಬಿಡೆ ತಾಯಿ ಕೊಣದಿಂದಾ
ದೂರದ ಹರಕೆ ಬಂದಾ ಧೂಪ ಕಾಣಿಕೆ ಬಂದಾ
ಬಾಗಲ ತೆಗಿಯೆ ಕಡಗಣ್ಣೆ ಕೆಂಚವ್ವ
ನಾವು ಧೂಪ ಕಾಣಿಕೆಯಾ ಸುಡುತೀವಿ
ಹರಕೆ ಒಪ್ಪವಾಗ ಚಿಕ್ಕವ್ವರ ಮಗಳಿಲ್ಲ
ಸುತ್ತೀ ಬಾ ನನ್ನ ಪವಳಿ ಬಾಗಲ ಮುಂದೆ

ಹೊತ್ತಿಗಾಳಿ ಹೊನ್ನ ಕಳಸವಾ–ನೀ ಮುಂದೆ
ಒಪ್ಪಿಸೇ ನನ್ನ ಹರಕೆಯಾ
ಈ ಅಕ್ಕ ಮನೆದೇವರ ಇಂಗಾವುದ
ನಾ ತುಪ್ಪ ಹೊರನಾರೆ ಗಿರಿದೂರ ಕೆಂಚಮ್ಮ
ನಾ ತಪ್ಪು ಕಾಣಿಕೆ ಕೊಡುತೀನಿ ಕೆಂಚಮ್ಮ
ಅಣ್ಣನ ಮನೆ ದೇವ್ರು ಹನ್ನೆರಡು ಗಾವುದ
ನಾ ಹಣ್ಣ ಹೊರನಾರೆ ಗಿರಿದೂರ ಕೆಂಚವ್ವ
ನಾ ಹೆಣ್ಣ ಮಕ್ಕಳ 'ತೆರಾ'ವ ಕೊಡುತೀನಿ
ಸಿಂಗಪಟ್ಣ ಬರುವಾಗ ಅಂಜಿತೂ ಸಭೆಯೆಲ್ಲಾ
ನಂಬಿಗೆ ಕೊಡೊ ಕಿಡಿಗಣ್ಣೇ–ಕೆಂಚವ್ವ
ಅಂಜಾಡುತಾರೇ ಸಭೆಯೆಲ್ಲಾ
ನೀ ಬಲಗೈ ಬಾಸಾದ ಎಡಗೈ ನಂಬಿಗಾದ
ಇಾಬಿ ಹೆಣ್ಣಿನಲ್ಲಿ ಬಲಮಗ ಬರ್‍ರ್ತಾನೇ
ಅಂಜಾದೀರಿ ಸಭೆಯಲ್ಲಾ
ಆಕೆ ಕೆಂಚವ್ವ ಲೋಕಕ್ಕೆ ದೊಡ್ಡಾರು
ಲೋಕದ ನಾಡಲ್ಲಿ ನೆಲಸವ್ರೇ
ಬಂದಾ ಬೆರಸೀಗೆ ಕೊಂಡಾರೂ ಕೋಟೆಯ
ಕೊಂಡವ್ರೇ ಕೋಟೇ ದುರುಗಾವ–ಕೆಂಚವ್ವ
ಇದು ಹೆಂಗ್ಸೀಗೇತಕ್ಕೆ ದೊರೆತಾನ–ಕೆಂಚವ್ವ
ಕೊಂಡಲ್ಲೀ ಕೋಟೆ ದುರಗಾವ
ಕೆಂಚವ್ವಗೂ ಮದುವಿಲ್ಲ ಸುಬ್ರರಾಯರಿಗೂ ಇಲ್ಲಾ

ಉತ್ತರದೇವಿ

ಉತ್ತರೆ ನೀರಿಗೋಗಿ ಮತ್ತೇಕೆ ಬರಲಿಲ್ಲ
ಉತ್ತರ ಪೇಸೆಂಬೂ ಮಳೆ ಹುಯ್ದು–ಕೆರೆ ತುಂಬಿ
ಹನಿ ಬಿದ್ದು ಹರಬಿ ಒಡೆದಾವು

ಅಳ್ಳಡಸಗಾರೆಣ್ಣೆ ಮೇಲಕ್ಕೆ ನೀರಿಗೋಗಿ
ಮುಳ್ಳು ಸಿಕ್ಕಿ ಸೀರೆ ಸೆರಗಿರಿದೊ–ದಾಳಿಂಬೆ
ಹನಿಬಿದ್ದು ಹರಬಿ ಒಡೆದಾವು

ನೀರೇಕೆ ಕಲಕಿದವು ನರಿಗೇಕೆ ಮಾಸಿದವು
ಮಾವನ ತೋಟಾದ ಮರುಗಾವು–ಕುಯ್ಯಕ್ಹೋಗಿ
ಬಾಳೆಯ ಮುಳ್ಳು ಸೆಣೆದಾವು

ಬಾಳೀಗೆ ಮುಳ್ಳುಂಟೆ ಬದನೀಗೆ ಚಪ್ಪರುಂಟೆ
ಹಸಿನಾಲಿಗೆ ಇಸವುಂಟೇ–ಸೊಸಿಬಾಲೆ
ಸೊಸಿ ಬಾಲೆ ನಿನ ಮಾತು ನಿಜವೇನೇ

ಎತ್ತಿಗೆ ಮಾತುಂಟೆ ಕತ್ತೇಗೆ ಕೋಡುಂಟೆ
ಋಷಿಯಾಡಿದ ಮಾತೀಗೆ ಹುಸಿಯುಂಟೆ–ಅತ್ತೆಮ್ಮ
ಅತ್ತ್ಯಮ್ಮ ನಿಮ ಮಾತು ನಿಜವುಂಟೇ

ಅತ್ತೆಗೂ ಸೊಸಿಗೂ ಹತ್ತ್ಯಾವೆ ಕಾಳಗ
ಉತ್ತರದೇವೆಂಬಾ ಸೊಸಿ ಬ್ಯಾಡ

ಉತ್ತು ಬಂದ ಮಗನಿಗೆ ತುಪ್ಪ ಅನ್ನ ಇಕ್ಕ್ಯವಳೆ
ಉತ್ತರದೇವೆಂಬ ಸೊಸಿಬ್ಯಾಡ–ಕಂದಯ್ಯ
ಬಿಟ್ಟು ಬಿಡವಳ ತವರೀಗೆ

ಬಿಟ್ಟು ಬಿಡಲಿಕ್ಕೆ ಎತ್ತಲ್ಲ ಎಮ್ಮೆಲ್ಲ
ಹತ್ತುವರ ಮುಟ್ಟಿ ತೆರಮುಟ್ಟಿ–ಬಂದವಳ
ಬಿಟ್ಟಿರುನಾರೆ ಹಡದವ್ವಾ

ಅವಳ ಕೊರಳಲ್ಲಿರುವ ಸಲಿಕೆ ಸರಪಳಿ ಮಾರಿ
ನಿನ್ನ ಮಂಚಾಕೆ ರಾಣಿಯು ತರಬಲ್ಲೆ–ಕಂದಯ್ಯ
ಉತ್ತರದೇವೆಂಬ ಸೊಸಿ ಬ್ಯಾಡಾ

ಅರಗಿ ಬಂದ ಮಗನೀಗೆ ಹಾಲನ್ನ ಇಕ್ಕ್ಯವಳೆ
ಬೇಡತಿಯೆಂಬ ಸೊಸಿ ಬ್ಯಾಡ–ಕಂದಯ್ಯ
ಬಿಟ್ಟು ಬಿಡವಳ ತವರೀಗೆ

ತವರೀಗೆ ಬಿಡುವಾಕೆ ಎತ್ತಲ್ಲ ಎಮ್ಮೆಲ್ಲ
ಆರು ವರ ಮುಟ್ಟಿ–ಬಂದವಳ
ನೋಡದಿರುನಾರೆ ಹಡದವ್ವಾ

ಮೂಗುತಿ ಮುರಿದಾರೆ ಮಾಡಿಸಬಹುದು
ಮಡದಿ ಸತ್ತಾರೆ ತರಬಹುದು–ಕಂದಯ್ಯ
ನಿನ್ನ ಹೆತ್ತವ್ವನೆಲ್ಲಿ ಪಡೆದಿಯೋ

ಅವಳ ಕಾಲಲಿರುವ ಪಿಲ್ಲಿ ಸರಪಣಿ ಮಾರಿ
ನಿನ್ನ ಮಂಚಾಕೆ ರಾಣಿಯು ತರಬಲ್ಲೆ–ಕಂದಯ್ಯ
ಬಿಟ್ಟು ಬಿಡವಳ ತವರೀಗೆ

ಮಡದೀಯು ಕರದವನು ಮತ್ತೇನ ಪೇಳ್ಯಾನು
ಇತ್ತ ಕೇಳೆ ಮಡದಿ ನನ್ನ ಮಾತಾ

ಆಗ ತಂದವನಲ್ಲ ಈಗ ಕಳಗವನಲ್ಲ
ಹೋಗಿರು ನಿನ್ನ ತವರೀಗೆ

ತಂದರಾಯರೀಗೆ ಘಟ್ಟದ ಮಡದೊಪ್ಪಿಲ್ಲವ
ನಾ ಹೋತಿನಿ ರಾಯ ತವರೀಗೆ
ನಾ ಪೋದಳು ಎಂದು ಚಿಂತಿ ಮಾಡಲು ಬ್ಯಾಡ
ನೀ ನನಗಿಂತ ಚೆಲುವೇ ತರಬೇಕು

ತಂದಾರು ತತ್ತನ್ನಿ ನನಗಿಂತಲು ಚೆಲುವೆಯಾ
ನಾ ಮುಡಿದು ನನ್ನ ಶಿರ ಮುಡಿದು–ಇಕ್ಕಿದ್ದ ಹೂವ
ಯಾವ ರಾಣ್ಯಾರೇ ಮುಡಿಯಾಲಿ

ಆಗ ಉತ್ತರದೇವಿ ಮತ್ತೆಲ್ಲಿಗೆ ಹೋಗುತಾಳೆ
ಕಿತ್ತಲಿ ವನಕೆ ನಡದವಳೆ

ಕಿತ್ತಲಿ ನೀವು ಕೇಳಿ ಕಿತ್ತಲಿಯ ವನಕೇಳಿ
ನಾನು ಬಂದಾಗ ಸಸಿಗೋಳು
ಗೊಬ್ಬರವಾ ಹಾಕಿ ಸಲುವಿದೇನು ವನಗಳಿರಾ
ಹೋತೀನಿ ನನ್ನ ತವರೀಗೆ

ನೀರ ಹುಯ್ಯವರ್ಯಾರೆ ಗೊಬ್ಬರ ಹಾಕವರ್ಯಾರೆ
ಹಣ್ಣಾದರ್ಯಾರೆ ಮೆಲ್ಲುವರೂ

ಅತ್ತೆಮ್ಮ ನೀರು ಹುಯ್ಯುತಾರೆ
ಅತ್ತೆಮ್ಮ ಗೊಬ್ಬರ ಹಾಕುತಾರೆ
ಹಣ್ಣಾದರಾಕೆ ಮೆಲ್ಲುತಾರೆ

ಅಲ್ಲಿಂದುತ್ತರದೇವಿ ಬಾಳೆ ವನಕ್ಹೋಗಿ
ನಾನು ಬಂದಾಗ ಎಳೆ ಕಂದು
ಬೂದಿಹಾಕಿ ಸಲುವಿದೇನು ವನಗಳಿರಾ
ಹೋತೀನಿ ನನ್ನ ತವರೀಗೆ

ಬೂದಿ ಹಾಕವರ್ಯಾರೆ ನೀರ ಹುಯ್ಯವರ್ಯಾರೆ
ನಾ ಹಣ್ಣಾದಾರೇ ಮೆಲ್ಲುವರ್ಯಾರೆ

ಅತ್ತೆಮ್ಮ ನೀರು ಹುಯ್ಯುತಾರೆ
ಅತ್ತೆಮ್ಮ ಬೂದಿ ಹಾಕುತಾರೆ
ಹಣ್ಣಾದರಾಕೆ ಮೆಲ್ಲುತಾರೆ

ಅಲ್ಲಿಂದೆ ಹಿಂದಿರುಗಿ ಅರಮನೆಗೆ ಬರುತಾಳೆ
ಅಡಿಗೆಯ ಮಾಡಿದಳು ನೀರಾನೆ ತಂದಾಳು
ಮಾವನಿಗೆ ನೀರಾ ಕೊಟ್ಟಳು ಉತ್ತರದೇವಿ

ಮಾಳಿಗೆಯ ಮೇಲೆ ಮಲಗಿರುವ ಮಾವಯ್ಯ
ಊಟಕ್ಕಪ್ಪಣೆ ದಯಮಾಡಿ

ನೆನ್ನೆ ಉಂಡಾ ಊಟ ಇನ್ನು ನಂಗೆ ಅರಗಿಲ್ಲಾ
ನಿನ್ನಾಣೆಗು ನಂಗೆ ಹಸಿವಿಲ್ಲಾ

ಮಾಳಿಗೆಯ ಮೇಲೆ ಮಲಗಿರುವ ಮಾವಯ್ಯ
ನಾ ಹೋಗಿ ಬತ್ತೀನಿ ತವರೀಗೆ

ತೌರೀಗೆ ಹೋದಾರೆ ತೌರಲ್ಲಿರಬ್ಯಾಡ
ತೌರೊಳ್ಳೆದಂತ ಇರಬ್ಯಾಡ—ಉತ್ತರದೇವಿ
ನಾಳೆ ಬುಧುವಾರ ಬರಬೇಕು

ಅಲ್ಲಿಂದ ಉತ್ತರದೇವಿ ಅಂಗಳಾವ ಇಳಿದಾಳು
ಅವರ ಭಾವನ ಪಾದಕೆ ಶರಣೆಂದು—ಏನಂದಳು
ಹೋತೀನಿ ಭಾವಯ್ಯ ತವರೀಗೆ

ಹೋಗಿ ಬಾರೆ ಹೋಗಿ ಬಾರೆ ಹೊನ್ನೋಲೆ ಕಿವಿಯೋಳೆ
ನಾಗಭೂಷಣದ ನರಿಗ್ಯಳೀ—ಉತ್ತರದೇವಿ
ತೌರೊಳ್ಳೆದಂತ ಇರಬ್ಯಾಡ—ಉತ್ತರದೇವಿ
ನಾಳೆ ಬುಧುವಾರ ಬರಬೇಕು

ಅತ್ತೆಗೆ ಶರಣೆಂದು ಮತ್ತೇನ ಹೇಳ್ಯಾಳು
ಹೋತಿನತ್ತಮ್ಮ ತವರೀಗೆ

ಹೋಗಿ ಬಾರೆ ಹೋಗಿ ಬಾರೆ ಹೊನ್ನೋಲೆ ಕಿವಿಯೋಳೆ
ನಾಗಭೂಷಣದ ನರಿಗ್ಯಳೀ—ಉತ್ತರದೇವಿ
ಮಳ್ಳ ಮಗುಚಿ ಮನೆಗೆ ಬರಬ್ಯಾಡ

ಅತ್ತಿಗೆಗೆ ಶರಣೆಂದಾಳು ಮತ್ತೇನ ಹೇಳ್ಯಾಳು
ಹೋತಿನತ್ತಿಗ್ಯಮ್ಮ ತವರೀಗೆ

ಹೋಗಿ ಬನ್ನಿ ಹೋಗಿ ಬನ್ನಿ ಹೊನ್ನೋಲೆ ಕಿವಿಯವರೆ
ನಾಗಭೂಷಣದ ನರಿಗ್ಯವರೆ—ಅತ್ತಿಗ್ಯಮ್ಮ
ನೀವು ಮಳ್ಳ ಮಗುಚಿ ಮನೆಗೆ ಬರಬ್ಯಾಡಿ

ಒಂದಾನೆತ್ತಿಕೊಂಡು ಕಂದಾನ ಕೈಲಿಹಿಡಕೊಂಡು
ಹಟ್ಟಿ ಮೆಟ್ಟಿಗೆ ಇಳಿದಾಳು
ಮೆಟ್ಟೀಗೆ ಇಳಿವಾಳು ಅತ್ತೆಗೆ ಏನ ಹೇಳ್ಯಾಳು
ಅತ್ತಮ್ಮ ಅತ್ತಮ್ಮ ಇತ್ತ ಕೇಳಮ್ಮಾ
ನಾ ಹೋಗಿ ಬತ್ತೇನಿ ತವರೀಗೆ

ನಾಕು ತಪ್ಪಲೆ ಚೊಂಬೆಯು ನಾಕು
ನಾಕು ದೀಪಲೆಯು ಕಂಭ ನಾಕು
ನಮ್ಮಪ್ಪ ಕೊಟ್ಟ ಐನೂರು–ತಪ್ಪಲೆಯ
ತಗದಿಡತ್ತಮ್ಮ ಹೊರಗಡೆಗೇ

ಎಮ್ಮೆ ಎಮ್ಮೆ ನೂರು ಎಮ್ಮೆಯ ಕರು ನೂರು
ನಮ್ಮಪ್ಪ ಕೊಟ್ಟ ಐನೂರು–ಎಮ್ಮೆಯ
ಬಿಟ್ಬೊಡೆಯತ್ತಮ್ಮ ನನ್ನ ಕುಟಿ

ಹಸು ಹಸುವೇ ನೂರು ಹಸೀನ ಕರು ನೂರು
ನಮ್ಮಪ್ಪ ಕೊಟ್ಟ ಐನೂರು–ಹಸುಗಳಾ
ಬಿಟ್ಬೊಡೆಯತ್ತಮ್ಮ ನನ್ನ ಕುಟಿ

ಆಡು ಆಡೇ ನೂರು ಆಡಿನ ಮರಿ ನೂರು
ನಮ್ಮಪ್ಪ ಕೊಟ್ಟ ಐನೂರು–ಆಡುಗಳ
ಬಿಟ್ಬೊಡೆಯತ್ತಮ್ಮ ನನ್ನ ಕುಟಿ

ಒಂದಾನೆತ್ತಿಕೊಂಡು ಕಂದಾನ ಕೈಲಿಡ್ಕಂಡು
ಅಂಗಳಾವ ಬಿಟ್ಟು ಇಳಿವಾಗ
ಅವರತ್ತೇನಂತಾ ನುಡಿದಾಳು
ಅಟ್ಟದ ಮೇಲೆ ಪಟ್ಟೆಯು ಸೀರ್ಯೆತ್ತೆ
ಉಟ್ಟು ಹೋಗೆ ಸೊಸೆ ಬಾಲೆ

ನಾನು ಉಟ್ಟಾರೆ ನನ್ಯಾರು ನೋಡೋರು
ನೀವುಟ್ಟು ನಿಮ್ಮ ಮಗ ನೋಡಿ ಅತ್ತಮ್ಮ
ಮುಂದೆ ಬರೋಳಿಗೆ ಮಡಗೀರಿ

ಮಾಳಿಗೆಯ ಮೇಲೆ ಮಾಡಿಸಿದ ಓಲೆ ಅವೆ
ಇಕ್ಕೊಂಡ್ಹೋಗೆ ಸೊಸೆ ಬಾಲೆ

ನಾನು ಇಕ್ಕಿದರೆ ನನ್ಯಾರ ನೋಡೋರು
ನೀವು ಇಕ್ಕಿ ನಿಮ್ಮ ಮಗ ನೋಡಿ–ಅತ್ತಮ್ಮ
ಮುಂದೆ ಬರೋಳಿಗೆ ಮಡಗೀರಿ

ಒಂದಾನೆತ್ತಿಕೊಂಡು ಕಂದಾನ ಕೈಲಿಹಿಡ್ಕಂಡು
ಮುಂದಲ ಚಿಕ್ಕೆ ಬೆಳಕಲಿ–ಉತ್ತರದೇವಿ
ಕುಂದೂರಿಗ್ಯಾಗಿ ನಡೆದಾಳು

ಕುಂದೂರಿಗ್ಯಾಗಿ ನಡೆದು ಹೋಗಾಗ
ಕುಂದೂರು ಗೌಡಾರು ತಡೆದು–ಏನಾಂದರು
ನಾವು ಒಂದು ವರ ಕೊಡುತೀನಿ ಇರುಬಾರೆ

ಒಂದು ವರ ಎಂಬುದು ನನ್ನ ಕಂದಾಗೆ ಬೆಲೆಇಲ್ಲಾ
ನಾ ಮುಂದಾಕೆ ಕಂದಾನ ನಡಿಸೇನು

ಒಂದಾನೆತ್ತಿಕೊಂಡು ಕಂದಾನ ಕೈಲಿ ಹಿಡ್ಕಂಡು
ಮುಂದಲ ಚಿಕ್ಕೆ ಬೆಳಕಲಿ–ಉತ್ತರದೇವಿ
ಭಾಗೂರಿಗಾಗಿ ನಡೆದಾಳು

ಭಾಗೂರಿಗಾಗಿ ನಡೆದು ಹೋಗಾಗ
ಭಾಗೂರು ಗೌಡಾರು ತಡೆದು–ಏನಾಂದರು
ಆರು ವರ ಕೊಡುತೀವಿ ಇರುಬಾರೆ

ಆರು ವರ ಎಂಬುದು ಆಡಿನ ಬೆಲೆ ಇಲ್ಲಾ
ನಾ ಮುಂದಾಕೆ ಕಂದಾನ ನಡಿಸೇನು

ಒಂದಾನೆತ್ತಿಕೊಂಡು ಕಂದಾನ ಕೈಲಿ ಹಿಡ್ಕಂಡು
ಮುಂದಾಲ ಚಿಕ್ಕೆ ಬೆಳಕಲ್ಲಿ–ಉತ್ತರದೇವಿ
ತಾಳೂರಿಗಾಗಿ ನಡೆದಾಳು

ತಾಳೂರಿಗಾಗಿ ನಡೆದು ಹೋಗಾಗ
ಈ ತಾಳೂರ ಗೌಡಾರು ತಡೆದು–ಕೇಳಿದರಲ್ಲಾ
ಎಂಟು ವರ ಕೊಡುತಿನಿ ಇರುಬಾರೆ

ಎಂಟು ವರ ಎಂಬುದು ನನ್ನ ದಟ್ಟಿಯು ಬೆಲೆ ಇಲ್ಲಾ
ನಾ ಮುಂದಾಕೆ ಕಂದಾನ ನಡಿಸೇನು

ಒಂದಾನೆತ್ತಿಕೊಂಡು ಕಂದಾನ ಕ್ಯೆಲಿ ಹಿಡ್ಕಂಡು
ಮುಂದಲ ಚಿಕ್ಕಿ ಬೆಳಕಲ್ಲಿ–ಉತ್ತರದೇವಿ
ಹೆತ್ತೂರಿಗಾಗಿ ನಡೆದಾಳು

ಹೆತ್ತೂರಿಗಾಗಿ ನಡೆದು ಹೋಗಾಗ
ಹೆತ್ತೂರಗೌಡಾರು ತಡೆದು–ಏನಾಂದರು
ಹತ್ತುವರ ಕೊಡುತಿನಿ ಇರುಬಾರೆ

ಹತ್ತುವರ ಎಂಬುದು ನನ್ನ ಎತ್ತಿನ ಬೆಲೆ ಇಲ್ಲಾ
ನಾ ಮುಂದಾಕೆ ಕಂದಾನ ನಡಿಸೇನು

ಒಂದಾನ್ನೆತ್ತಿಕೊಂಡು ಕಂದಾನ ಕ್ಯೆಲಿ ಹಿಡ್ಕಂಡು
ಹ್ವಾದಳು ತಾಯವ್ವನ ಅರಮನೆಗೇ

ತಾಯಿ ಬಾಗಿಲಾ ತೆಗೆ ತಾಯವ್ವ ಬಾಗಿಲಾ ತೆಗೆಯೋ
ನಾ ಬಂದನೇ ತಾಯಿ ತೆಗಿ ಬಾಗಿಲವಾ

ಬಾಗಿಲಾ ತೆಗೆಯುವುದಕೆ ನಾ ಹೆಂಗೆ ತೆಗಿಯಾಲಿ
ನಿಮ್ಮಪ್ಪ ತೋಳಲ್ಲಿ ಮರಗವರೇ–ಉತ್ತರಪೇವಿ
ಹೋಗೇ ಅಣ್ಣಯ್ಯನರಮನೆಗೇ

ಅಣ್ಣಾ ಬಾಗಿಲ ತೆಗಿ ಅಣ್ಣಯ್ಯ ಬಾಗಿಲಾ ತೆರೆ
ನನ್ನ ಮಕ್ಕಳು ಬಾಯಾರಿ ಬಳಲಿಮೊ–ಅಣ್ಣಯ್ಯ
ನಾ ಬಂದೇನು ಕದಾವ ತೆಗಿರಣ್ಣ

ಕದವಾ ತೆಗೆಯಾಕೆ ತಂಗಿ ನಾ ಹೆಂಗೆ ತೆಗೆಯಾಲಿ
ನಿಮ್ಮತ್ತಿಗೆ ತೋಳಲ್ಲಿ ಮರಗವಳೆ–ಉತ್ತರಪೇವಿ
ಹೋಗೇ ತಮ್ಮಯ್ಯನರಮನೆಗೆ

ತಮ್ಮಯಾ ಬಾಗಿಲಾ ತೆಗೆಯೊ ತಮ್ಮ ಬಾಗಿಲಾತೆಗೆ
ನನ್ನ ಮಕ್ಕಳು ಬಾಯಾರಿ ಬಳಲಿವೊ–ತಮ್ಮಯ್ಯ
ನಾ ಬಂದೇ ತಮ್ಮ ತೆಗೆ ಬಾಗಿಲು

ಬಾಗಿಲಾ ತೆಗೆಯಾಕೆ ನಾ ಹೆಂಗೆ ತೆಗೆಯಲಕ್ಕ
ನಿನ್ನ ನಾದಿನಿ ತೋಳಲ್ಲಿ ಮಲಗವಳೆ–ಅಕ್ಕಯ್ಯ
ಹೋಗೇ ಅಕ್ಕಯ್ಯನರ ಮನೆಗೆ

ಅಕ್ಕ ಬಾಗಿಲ ತೆಗೆಯೇ ಅಕ್ಕಯ್ಯ ಬಾಗಿಲ ತೆಗೆ
ನನ್ನ ಮಕ್ಕಳು ಬಾಯಾರಿ ಬಳಲಿದೊ–ಅಕ್ಕಯ್ಯ
ನಾ ಬಂದೇ ಕದಾವ ತೆಗೆ ಅಕ್ಕಯ್ಯ

ಕದಾವ ತೆಗೆಯಾಕೆ ತಂಗಿ ನಾನ್ಹೆಂಗೆ ತೆಗೆಯಾಲಿ
ನಿಮ್ಮ ಭಾವ ತೋಳಲ್ಲಿ ಮಲಗವರೆ–ತಂಗ್ಯಮ್ಮ
ಹೋಗೇ ತಂಗ್ಯಮ್ಮನರಮನೆಗೆ

ತಂಗಿ ಬಾಗಿಲಾ ತೆಗೆ ತಂಗಮ್ಮಾ ಬಾಗಿಲಾ ತೆಗೆಯೇ
ನನ್ನ ಮಕ್ಕಳು ಬಾಯರಿ ಬಳಲಿದೊ–ತಂಗಮ್ಮ
ನಾ ಬಂದೆನು ತಂಗಿ ತೆಗಿ ಕದವಾ

ಕದಾವ ತೆಗೆಯಾಕೆ ತಂಗಿ ನಾನ್ಹೆಂಗೆ ತೆಗೆಯಾಲಿ
ನಿನ್ನ ವೈದನ ತೋಳಲ್ಲಿ ಮಲಗವರೆ–ಅಕ್ಕಯ್ಯ
ಹೋಗೇ ಅಪ್ಪಾಜಿಯರಮನೆಗೆ

ಅಪ್ಪಾ ಬಾಗಿಲು ತೆಗೆ ಅಪ್ಪಾಜಿ ಬಾಗಿಲು ತೆರೆ
ನನ್ನ ಮಕ್ಕಳು ಬಾಯಾರಿ ಬಳಲಿದೊ–ನನ್ನ ತಂದೆ
ತಂದೆ ನೀವು ಕದಾವ ತೆಗಿರಿ ತಂದೆ

ಕದಾವ ತೆಗೆಯ್ಯಾಕೆ ಮಗಳೆ ನಾನ್ಹೆಂಗೆ ತೆಗೆಯಾಲಿ
ನಿಮ್ಮ ತಾಯಿ ತೋಳಲ್ಲಿ ಮಲಗವಳೆ–ಉತ್ತರದೇವಿ
ಎದ್ದ್ಹೆಂಗೆ ಕದಾವ ತೆಗೆಯಾಲಿ

ಹತ್ತೂರು ತಿರುಗಿದರೂ ನೆತ್ತೀಗೆ ಎಣ್ಣೆಯಿಲ್ಲಾ
ಒಬ್ಬಾರು ಕದಾವ ತೆಗೆನಿಲ್ಲಾ

ಮಗಳ ಸಂಕಟ ನೋಡಿ ತಾಯಿ ಏನು ಹೇಳುತಾರೆ
ಇತ್ತಾ ಕೇಳೇ ಕಂದಾ ನನ್ನ ಮಾತು

ಹಿಂದಾಲ ಕಾಲದಲ್ಲಿ ನೆನಗೂ ಈ ಸಾಗಿತ್ತು
ನಿಮ್ಮಪ್ಪಾ ನನ್ನ ಉರಿಸಿದಾರು–ಉತ್ತರದೇವಿ
ನನ್ನ ಸಾಗು ನಿನಗೇ ಒದಗೀತು–ಉತ್ತರದೇವಿ
ಹೋಗೆವ್ವ ಹಂಪೆ ಹೊಳೆಗಾಗಿ

ಒಂದಾನ್ನೆತ್ತಿಕೊಂಡು ಕಂದಾನ ಕೈಲಿ ಹಿಡ್ಕಂಡು
ವಕ್ಕಳಾ ಸಂಕಟಾವ ಮಾಡತಾಳೆ–ಉತ್ತರದೇವಿ
ಹ್ವಾದಾಳೂ ಹಂಪೆ ಹೊಳೆಗಾಗಿ

ಹಂಪೆ ಹೊಳೆಗೋಗಿ ಕಂದಾನ ಇಳಿಸ್ಯಾಳು
ಅಡ್ಡ ಬಿದ್ದು ಉದ್ದಾಕೆ ಏಳುತಾಳೆ–ಉತ್ತರದೇವಿ
ಪೂಜೆ ಮಾಡೋಣಾಂದರೆ ಹಣ್ಣಿಲ್ಲ ಕಾಯಿಲ್ಲಾ

ಇತ್ತ ಕೇಳೇ ಗಂಗವ್ವ ನನ ಮಾತು
ನನ್ನಂತ ಪಾಪಿಗೆ ಯಾರೂ ಇಲ್ಲಾ
ಯಾರು ಇಲ್ಲಾದವರಿಗೆ ನೀವೇ ತಂದೆ ತಾಯಿ
ನಾನು ನನ್ನ ಬಳಗಾವ ಒಳಕಳ್ಳಿ

ಅಡ್ಡ ಬೀಳುತಾಳೆ ಕೈಮುಗೀತಾಳೆ
ಪಟ್ಟೆ ಕಂಬಿಸೀರೆ ಜಳದಾಳೂ–ಉತ್ತರದೇವಿ
ಮಕ್ಕಳ ಕಣ್ಣಾ ಕಟ್ಟುತಾಳೆ

ಮಕ್ಕಳು ದುಃಖವಾ ಮಾಡುತ್ತವೆ
ಇದುವೇನೆ ತಾಯಿ ಅಪಸಕುನವು

ಈರೀತಿ ಮಾಡುವಕೆ ನಮ್ಮೇಕೆ ಸಾಕಿದಿರಿ
ಮುದ್ದು ಕೊಟ್ಟು ನಮ್ಮ ಕೊಲ್ಲಬಾರದೂ

ಮಕ್ಕಳ ನೋಡುತಾಳೆ ವಕ್ಕಳ ಸಂಕಟವಮಾಡಿ
ನೀವೆಲ್ಲಿ ಹೋತಿರೊ ನನ್ನ ಕಂದಾ–ಮಕ್ಕಳಿರಾ
ನನ್ನ ಜೊತೇಲಿ ಇರಬನ್ನಿ

ಹಂಗಂತಾಪ ಹೇಳುತಾಳೆ ಮಕ್ಕಳಾ ಕಂಕಳಲ್ಲಿ ಎತ್ತಿ
ಒಂದೊಂದು ಪೆಟ್ಟಿಗಿ ಇಳಿವಾಳು–ಉತ್ತರದೇವಿ
ಗಂಗವ್ಮ ತಾಯಿ ಒಳ್ಕಂಡರು

ಅತ್ತ ಹರಿಯಾಗಂಗೆ ಇತ್ತ ಹರಿಯುವ್ವ
ಒತ್ತಿ ಹರಿಯುವ್ವ ಸಿವಗಂಗೆ

ಎತ್ತ ಹರಿಯಾ ಗಂಗೆ ಇತ್ತ ಹರಿಯುವ್ವ
ದಿಡ ಸೂಸಿ ಹರಿಯುವ್ವ ಸಿವಗಂಗೆ

ಅತ್ತ ಹರಿಯಾಗಂಗೆ ಇತ್ತಾವು ಹರಿದಾಳು
ತುಂಬಿ ಹರಿದಾಳು ಸಿವಗಂಗೆ

ಗಿರಿಜಾ ಮಲ್ಲಯ್ಯ

ಮಲ್ಲಯ್ಯ ಇರುವಾದು ಇಲ್ಲಿಗೆ ಹನ್ನೆರಡು ಗಾವುದ
ಮಲ್ಲಯ್ಯನ ಹೆಂಡತಿ ಗಿರಿಜಮ್ಮ–ಇರುವುದು
ಕಲ್ಲೂಮಳೀಗೆ ಕೈಲಾಸ

ಮಲ್ಲಿಗೆಯಾ ಹೂವ ಅಲ್ಲಿಟ್ಟೆ ಇಲ್ಲಿಟ್ಟೆ
ಕಲ್ಲಮ್ಯಾಲಿಟ್ಟೆ ಕೈಯಬಿಟ್ಟೆ–ಮಲ್ಲಯ್ಯನ
ಗಿರಿಯ ಮ್ಯಾಲಿಟ್ಟೆ ದವನಾವ

ಬಿದಿರು ಚೆನ್ನಯ್ಯ ಬೆಳಮೆಕಾರರೂ
ನೀರಿಗೋವರ ನೆಡಿಗೆಯ್ಯೋರೆ–ಎನೆಂದೂ
ಗೋಡೆಲಿ ಕನ್ನ ತೋರಿಸವರೇ

ನೀರಿಗೆ ಹೋಗುವರು ಯಾವ ಯಾವ ಕುಲದವರು
ನೀಲಮ್ಮನ ತಂದೆ ಗಿರಿಜಮ್ಮ–ಪಾರ್ವತಿ
ನಾಲಾಳಿ ಗಗ್ಗರಣಿಗೆ ಮುಗೆದಾರು

ಹರಬಿಯ ಬಾಯಿಗೆ ಹಲವಂಗ ದುಸ್ತಾರ
ಬೆನ್ನ ಮೇಲೆ ಬೆಳ್ಳಿ ಶಿವದಾರೊ–ಗಿರಿಜಮ್ಮಾಗೆ
ನಡು ಬಗ್ಗಿ ಅಗ್ಗಣಿಯ ಮುಗದಾರೊ

ನಡುಬಗ್ಗಿ ಅಗ್ಗಣೆಯ ಮುಗಿಯಾ ಗಿರಿಜೆ ಕಂಡು
ಮಲ್ಲಯ್ಯನ ತಾವು ಮರೆತಾರೂ–ಕೇಳಿದರಲ್ಲ
ನೀನ್ಯಾವ ತಾಲೂಕಿನ ಗಡಿ ಹೆಣ್ಣೆ

ಲಿಂಗದ ಮಗಳಾದೆ ಜಂಗಮಗೆ ಸೊಸಿಯಾದೆ
ಗುಡುಗರ ರಾಮಣ್ಣನ ಕಿರಿದಂಗೆ–ಬೈರಾಪುರದ
ಮಾಲಿಂಗ ನಮ್ಮಕಕೆ ಬಿಜಿಮಾಡಿ

ನಿಮ್ಮ ಠವ ನಾನೇನ ಬಲ್ಲೇನೆ
ತೋರಿಕೊಡು ನಿಮ್ಮ ಮಠದ ಹಾದಿ

ಬಾಳೆ ಬಲಕಿಟ್ಟು ಸೀಗೆಯ ಎಡಕಿಟ್ಟು
ನಾಗಸಂಪಿಗೆಯ ನಡುವೇಯೆ–ಬಂದಾರೆ
ಅಲ್ಲವೆ ನಮ್ಮ ಗುರುಮಠಾ

ಗುರುಮಠದ ಗುರುತ ಇನ್ನು ನಾನರಿಯೇನು
ತಿಳಿದೇಳೆ ಗುರುಮಠವಾ

ಹವಳದ ಗಿರಿ ಚಿನ್ನದುತ್ತರಾಸ
ಪುಟ್ಟು ರುದ್ರಾಕ್ಷಿ ಗುರುಮಠಾ–ಶರಣಾರೆ
ಮಾಲಿಂಗನ ಮಠ ಬಿಜಿಮಾಡಿ

ತುಪ್ಪವನುಂಡು ಮುತ್ತಿನ ಚಡವುದ್ದ
ಅವರ ಉಕ್ಕಿನ ಕಿನ್ನುಡಿಯ ನುಡಿಸುತ್ತಾ–ಮಾಲಿಂಗಸ್ವಾಮಿ
ಹೆಣದ ತೇರೀನ ಮೆರೆದವ್ರೇ

ಹಾಲನ್ನವುಂಡು ಹೂವೀನ ಕೆಡವಿದ್ದು
ಅವರು ಬಾರಿನ ಕಿನ್ನುಡಿ ನುಡಿಸುತ್ತಾ–ಮಾಲಿಂಗಸ್ವಾಮಿ
ನಿತ್ರೆದ ಕೇರೀಲಿ ಮೆರೆದಾರು

ಇಳಿಬೆನರ ಎತ್ತುತ್ತ ಕುಡಿ ಬೆವ್ರ ನೆಕ್ಕುತ
ಅವರ ಎಡೆ ಎಡೆಯ ಸುಂಕ ನುಡಿಸುತ್ತಾ–ಮಾಲಿಂಗಸ್ವಾಮಿ
ಗಿರಿಜದ ಕೇರೀಲಿ ಮೆರೆದಾರೂ

ಗಿರಿಜದ ಕೇರೀಲಿ ಮೆರೆಯುತ್ತಾ ಏನಂದಾರು
ಯಾರಿರುವರು ತಾಯಿ ಅರಮನೇಲೀ
ಯಾರಿರುವರು ನನ್ನ ತಾಯಿ ನೀವೀಗ
ನನಗೆ ಕುಡಿಯಕೊಸಿ ನೀರ ಕೊಡಿರವ್ವಾ
ಸಾಲು ಮಂಚದ ಮೇಲೆ ಒರಗಿರುವ ನೀವೆ ಕೇಳಿ
ಕುಡಿಯರಿಗೆ ನೀರ ಕೊಡ್ಡೇಳಿ

ನೀನು ನೀರುಳ್ಳಿಯ ಕತ್ತರಿಸೆ ನೀರುಳ್ಳಿಯ ಉತ್ತರಿಸೆ
ನೀರಮಜ್ಜಿಗೆ ಹದಗೊಡೇ–ಗಿರಿಜಮ್ಮ
ಕುಡಿಯರಿಗೆ ನೀರ ಕೊಡು ಹೋಗೇ

ಅವಳಾಗ ಗಿರಿಜಮ್ಮ ಅಂಗಳವ ಇಳಿದಾಳು
ಮತ್ತೇನು ಕೆಲಸ ಮಾಡುತಾಳೇ

ಸಕ್ಕರೆ ಕತ್ತರಿಸಿ ಸಕ್ಕರೆ ಉತ್ತುರುಸಿ
ಹಾಲೀಗು ಸಕ್ಕರೆಗು ಹದಗೂಡೀ–ಗಿರಿಜಮ್ಮ
ಕುಡಿಯರಿಗೆ ನೀರ ಕೊಡುತಾಳೇ

ಹಟ್ಟೀಲಿ ನಿಂತಿರುವ ಪಟ್ಟಿ ಜೋತ್ರೆದಾರೆ
ಬಟ್ಟಲಲ್ಲಿ ಹಾಲ ಕುಡೀ ಬನ್ನಿ

ಬೀದೀಲಿ ನಿಂತಿರುವ ಸಾಲು ಜೋತ್ರದವರೆ
ಜೋಳಿಯಲ್ಲಿ ಹಾಲ ಕುಡೀ ಬನ್ನಿ

ಹಾಲ ಕುಡಿದಾರು ಮೇಲೇನ ಹೇಳ್ಯಾರು
ಒಪ್ಪಿದಿ ನಿನ್ನ ಅವದುಡವ ಎಲೆಗಿರಿಜೆ
ನಿನ್ನ ತತ್ತೀನಿ ನನ್ನ ನಿಧಾನಕ್ಕೆ

ನೀರ ಕೊಟ್ಟಳು ಅಂಗಳವಾ ಇಳಿದಾಳು
ಮೊರದಲ್ಲಿ ಮುತ್ತ ತರುತಾಳೇ–ಗಿರಿಜಮ್ಮ
ಜೋಗಿ ಪಡಿದಾನ ಕೊಡುತಾಳೇ

ಪಡಿದಾನ ಕೊಟ್ಟರೆ ಹಿಡಿಯುವ ಮಗನಲ್ಲ
ನಿಮ್ಮ ತಾಯಿ ತಂದೇಯ ಗುರುತ್ಹೇಳೇ–ಗಿರಿಜಮ್ಮ
ನಿನ್ನ ತತ್ತೀನಿ ನನ್ನ ನಿಧಾನಕ್ಕೆ

ಸಾಲು ಮಂಚದ ಮೇಲೆ ತಾಯವ್ವ ಕೂತವ್ರೆ
ಅವ್ರು ತಿರುಗಿ ನೋಡಿದರೆ ಬೈದಾರೂ–ಶರಣಾರೆ
ಕೊಟ್ಟ ಪಡಿದಾನ ಹಿಡಿರಯ್ಯಾ

ಸಾಲು ಮಂಚದ ಮ್ಯಾಲೆ ತಾಯವ್ವ ನೀವೆ ಕೇಳಿ
ನಾ ಪಡಿದಾನ ಕೊಟ್ಟಾರೆ ಹಿಡಿನಲ್ಲಾ

ನೀನು ಯಾವ ಸೀಮೆ ಜೋಗಯ್ಯ
ಕೊಟ್ಟ ಪಡಿದಾನ ಹಿಡಿರಯ್ಯ–ಎಲೆ ಜೋಗಿ
ನಮ್ಮ ಸೀಮೆಲ್ಲಿಂತ ಜೋಗಿಗಳ ನೋಡಿಲ್ಲಾ

ಬಾರಿನ ಕಿನ್ನುಡಿಯ ಬೇಗಾನೆ ತಗದವ್ರೆ
ಭೂಮಿಯ ಮ್ಯಾಲೆ ಮಡಗವ್ರೇ–ಮಲ್ಲಯ್ಯ
ಅವರ ಮಾವನ ಕಾಲೀಗೆ ಶರಣೆಂದು

ಪಡಿವಾನ ಕೊಟ್ಟರೆ ಹಿಡಿಯುನ ಮಗನಲ್ಲ
ನಿಮ್ಮರಮನೇಲಿ ಆಡೋ ಅರಗಿಣಿಯ–ಗಿರಿಜಮ್ಮಾನ
ಕೊಡಬೇಕು ನನ್ನ ನಿಧಾನಕ್ಕೆ

ಉಕ್ಕಿನ ಕಿನ್ನುಡಿಯ ತಟ್ಟನೆ ತಗುದಾರು
ಭೂಮಿಯ ಮೇಲೆ ಬರ ಮಡಿಗ್ಯಾರು–ಮಲ್ಲಯ್ಯ
ಅವರತ್ತೆ ಕಾಲೀಗೆ ಶರಣೆಂದು–ಏನಂದಾರು

ನಿಮ್ಮ ಮಗ ಕೂತಿರುವ ಹಸುಳೆ ಗಿರಿಜಮ್ಮಾನ
ಕೊಡಬೇಕು ನನ್ನ ನಿಧಾನಕ್ಕೆ

ನೀನು ಭಿಕ್ಷೆಕೆ ಬಂದ ಜೋಗಿ ಬಾಲೆ ಮೇಲೆ ಕಣ್ಣಿಟ್ಟೆ
ನಮ್ಮ ಬಾಲೆ ಕಣ್ಣೀನ ಕುಡಿಹುಬ್ಬ–ಬಾಮಾಕೆ
ಜೋಗಿ ನೀ ಮನಸಾ ಇಡಬಹುದೇ

ಕೋಡಗಲ್ಲ ಮ್ಯಾಲೆ ಕೂತುಗಂಡು ಗಿರಿಜಮ್ಮ
ಕಾಲು ಬಂಗಾರದ ಬೆಳಗೋಳೂ–ನಾ ನೋಡಿ
ಅವಳ ಕೂಡುಬ್ಬ ನೋಡಿ ಮನಸ್ಸಿಟ್ಟೆ

ಗಿರಿಜೆ ಕೇಳಲಿಕ್ಕೆ ಗಿರಿಜಾ ಮಲ್ಲಯ್ಯ ಬರಲಿ
ಗಿರಿಜುದ್ದ ಹೊನ್ನ ಅಳಮಾಲೀ–ಮಲ್ಲಯ್ಯ
ನಾ ಗಿರಿಜೆಗೆ ಮಾತ ಕೊಡುತೀನಿ

ಗಿರಿಜೆ ಕೇಳೋಕೆ ಗಿರಿಯಿಂದಲೆ ಬಂದಿದ್ದೀನಿ
ಗಿರಿಜುದ್ದ ಹೊನ್ನ ಅಳಕೋಳೆ–ಅತ್ತೆಮ್ಮ
ನಾ ಗಿರಿಜೆಗೆ ಮಾತ ಕೊಡುತೀನಿ

ಅವಳು ಹಾಲನುಣ್ಣೋಳು ಹವಳ ಮಗದವಳು
ಮೇಲೂಂದ ಕೆಲಸ ಅರಿಯಾಳೂ–ಗಿರಿಜೆಯು
ಸಣ್ಣೋಳು ಗಿರಿಜೆಯ ಕೊಡುನಾರೆ

ತುಪ್ಪನುನ್ನೊಳು ಮುತ್ತು ಮಗದನಳು
ಮತ್ತೊಂದು ಕೆಲಸ ಅರಿಯಾಳು–ಗಿರಿಜೆಯು
ಗಿರಿದೂರ ಗಿರಿಜೆಯು ಕೊಡನಾರೇ

ತುಪ್ಪವನುಂಡು ಇಪ್ಪತ್ತು ಗಂಗಳ ಸಮದ
ಕೋಣೆಗೆ ನಡುಮನೆಗೆ ನೆಲಸಮದ–ಗಿರಿಜೆಗೆ
ಅರಿಯಾದ ಗಿರಿಜೆ ಕೊಡುನಾರೆ

ಹಾಲುಅನ್ನ ಉಂಡು ಆರು ಗಂಗಳ ಸಮದ
ಹಟ್ಟಿಗೆ ನಡುಮನೆಗೆ ನೆಲಸಮದ–ಗಿರಿಜೆಗೆ
ಅರಿಯಾದ ಗಿರಿಜೆ ಕೊಡನಾರೇ

ನೀವು ಹಾದೀಲಿ ಉಣ್ಣೋರು ಬೀದೀಲಿ ಕೈತೊಳೆಯೋರು
ಜೋಳಿಗೆ ಹಿಡಿದು ತಿರಿದುಣ್ಣೋ–ಜೋಗಿಗೆ
ಹಸುಳೆ ಗಿರಿಜಮ್ಮನ ಕೊಡುನಾರೇ

ಕೊಟ್ಟಗೇಲಿ ಉಣ್ಣೋರು ಹಟ್ಟೇಲಿ ಕೈ ತೊಳೆಯೋರು
ಬಟ್ಟಲ ಹಿಡಿದು ತಿರದುಣ್ಣೋ–ಜೋಗಿಗೆ
ಸಣ್ಣನಳು ಗಿರಿಜಮ್ಮನ ಕೊಡುನಾರೇ

ಕೋಟೆ ಕೊತ್ತಲ ಮೇಲೆ ರಾಟೆಯ ನೂಲೋರು
ನೀವು ರಾಣವನದಲ್ಲಿ ಒರಗೋರು–ಮಲ್ಲಯ್ಯ
ಅರಿಯದ ಗಿರಿಜೆ ಕೊಡನಾರೇ

ಒಲ್ಲದ ಮಾತೀಗೆ ಕಂದಿಯಾರು ಮಾಸ್ವಾಮಿ
ಕುಂದಿ ಬಂದೀತು ಸಂಸಾರ–ಮಲ್ಲಯ್ಯಾಗೆ
ಬತ್ತಿ ಬಾಡಿದವು ನಗೆ ಮುಖಾ

ಕಂಡಳು ಗಿರಿಜಮ್ಮ ಅಂಗಳವ ಇಳಿದಾಳು
ಕುಂದಬೇಡ ಸ್ವಾಮಿ ಮನದಲ್ಲಿ

ಒಲ್ಲದ ಮಾತೀಗೆ ಕೋಪಿಸಿ ಶರಣೋರೆ
ನಮ್ಮ ತಾಯಿತಂದೆ ಕಾಲ ಕಟ್ಟುತೀನಿ–ಮಾಸ್ವಾಮಿ
ಕುಂದು ಬ್ಯಾಡ ನಿಮ್ಮ ಮನದಲ್ಲಿ

ಆಗ ಗಿರಿಜಮ್ಮ ಅಂಗಳನ ಇಳಿದಾಳು
ಅವರ ತಂದೆ ಪಾದಕ್ಕೆ ಶರಣೆಂದು–ಏನಂದಾಳು
ತಂದೇರ ನನ್ನ ಕೊಡಬೇಕು

ಹಟ್ಟೇಲಿ ನಿಂತಿರುವ ಪಟ್ಟೆ ಜೋತ್ರದವರು
ಐವತ್ತೇಳು ಜಡೆಯವರೂ–ಶರಣರಿಗೆ
ತಂದೇರೆ ನನ್ನ ಕೊಡಬೇಕು

ಆಗ ಗಿರಿಜಮ್ಮ ಅಂಗಳನ ಹತ್ಯಾವಳೆ
ಅವಳ ತಾಯಿ ಪಾದಾಕೆ ಶರಣೆಂದು–ಏನಂದಾಳು
ತಾಯವ್ವ ನನ್ನ ಕೊಡಬೇಕು

ಬೀದೀಲಿ ನಿಂತಿರುನ ಸಾಲು ಜೋತ್ರದವರು
ನೂರನುುವತ್ತು ಜಡೆಯುನರು–ಮಾಸ್ವಾಮಿಗೆ
ತಾಯುವ್ವ ನನ್ನ ಕೊಡಬೇಕು

ತಪ್ಪಳು ಗಿರಿಜೆಯು ಚಪ್ಪೆ ಮೇಲೆ ಹಾಕೀದೆ
ಅವಳ ಕಪ್ಪು ಬಂಗಾರವ ಕಸಗಳಿರೇ–ಗಿರಿಜಮ್ಮನ
ನಮ್ಮ ಹಟ್ಟಂದಾಚಾಗೆ ಕಳಿಸೀರೆ

ಚಪ್ಪಿಗೆ ಹಾಕೋಕೆ ತಪ್ಪೇನ ಮಾಡಿದೆನಮ್ಮ
ನನ್ನ ಕಪ್ಪು ಬಂಗಾರವ ಕಸಿಯೋಕೆ–ಹಡೆದವ್ವ
ನಾ ಒಪ್ಪಿದ ಪತಿಯ ಬಿಡನಾರೆ

ಚಾಲೊಳ್ಳ ಗಿರಿಜೆಯು ಕೆನ್ನೆಮ್ಯಾಲೆ ಹಾಕೀ
ಅವಳೋಲೆ ಬಂಗಾರವ ಕಸಗಳ್ಳಿರೇ–ಗಿರಿಜಮ್ಮನ
ನಮ್ಮ ಬಾಗಲಾಚೇಗೆ ಕಳಿಸೀರೆ

ಕೆನ್ನಿಗೆ ಹಾಕಲಿಕೆ ಚಾಲೇನ ಮಾಡಿದೆನು
ನನ್ನೋಲೆ ಬಂಗಾರ ಕಸಿಯೋಕೆ–ಹಡೆಪವ್ವಾ
ನಾ ನಂಬೀದ ಪತಿಯ ಬಿಡನಾರೆ

ಹಾದೀಲಿ ಉಣ್ಣವರು ಬೀದೀಲಿ ಕೈತೊಳೆಯುವರು
ಜೋಳಿಗೆಯ ಹಿಡಿದು ತಿರುದುಣ್ಣೊ–ಜೋಗಿಗೆ
ಏನು ಮನಸ್ಸಿಟ್ಟೀ ಎಲಾ ಗಿರಿಜೆ

ಬಿದಿರು ಅರಮನೆ ಅದು ನಮ್ಮ ಚಾವಡೀ
ಜೋಳಿಗೆ ನಮ್ಮ ಕಣಾಜವು–ಹಡೆದವ್ವ
ನನ್ನ ಆತ ಮಲ್ಲಯ್ಯಗೆ ಕೊಡಬೇಕು

ಕೊಟ್ಟಗೇಲಿ ಉಣ್ಣವರು ಹಟ್ಟೇಲಿ ಕೈತೊಳೆಯುವರು
ಬಟ್ಟಲಾ ಹಿಡಿದು ತಿರಿದುಣ್ಣ–ಜೋಗಿಗೆ
ಏನಾ ಮರುಳಾದೆ ಎಲಾ ಗಿರಿಜಾ

ಕೊಟ್ಟಗೆ ಅರಮನೆ ಹಟ್ಟಿ ನಮ್ಮ ಚಾವಡಿ
ಒಟ್ಟಲೆ ನಮ್ಮ ಪಟ್ಟಸಾಲೆ–ಹಡೆದವ್ವ
ನನ್ನ ಶಂಭೊಮಲ್ಲಯ್ಯಗೆ ಕೊಡಬೇಕು

ಸ್ಯಾಲೆ ಉಡೋಗೆ ಸರವುತ್ತಾಕಟ್ಟೀ ಗಿರಿಜೆ
ಸಾಲು ಮಾಳಿಗೇಲಿ ಇರುಹೋಗೇ–ಗಿರಿಜಮ್ಮ
ಒಳ್ಳೆಯರಿಗೆ ನಿನ್ನಾ ಕೊಡುತೀನಿ

ನಿಮ್ಮ ಸ್ಯಾಲೆ ಹರಿಯಾಲಿ ನಿಮ್ಮ ಸರವುತ್ತಾ ಕೀಳಾಲಿ
ನಿಮ್ಮ ಸಾಲು ಮಾಳಿಗೆ ಇರಲೇಳಿ–ಹಡೆದವ್ವ
ನನ್ನ ಶಂಭೊಮಲ್ಲಯ್ಯಗೆ ಕೊಡಬೇಕು

ಶಂಭು ಮಲ್ಲಯ್ಯನೆ ಸುಂಗಾರ ನೋಡಿದರೆ
ನಿಮ್ಮ ಬಂಗಾರು ಬ್ಯಾಡ ಬಳೆಬ್ಯಾಡ–ಬೆಟ್ಟದಪುರದ
ಶಂಭುಮಲ್ಲಯ್ಯಗೆ ಕೊಡಬೇಕು

ಆತ ಮಲ್ಲಯ್ಯನ ಶೋಕಿಯಾ ನೋಡಿದರೆ
ನಿಮ್ಮ ಬಂಗಾರವೂ ಬ್ಯಾಡ ಬಳಗವೂ ಬ್ಯಾಡ–ಬೆಟ್ಟದಪುರಾದ
ನನಗೆ ಆತ ಮಲ್ಲಯ್ಯನೇ ಸತಿ ಪುರುಷಾ

ನೀ ಒಪ್ಪಿದ ತಪ್ಪಿಗೆ ಕೊಡೋಣ
ಅವರು ಬಾಯಿಗೆ ಬೇಕಾದ ಅಡಿಗೆ ಅಟ್ಟು–ಅವರವ್ವ
ಗಿರಿಜಾಗೆ ಮಲ್ಲಯ್ಯಗೆ ಉಣಲಕ್ಕಿ–ಅವರವ್ವ
ಮುಂಡೆ ಬಾಚಿ ಮಲ್ಲಿಗೆ ಮುಡಿದಾರು

ಪಟ್ಟೆ ಉಡಿಸ್ಯಾರು ಪುಟ್ಟಮುತ್ತ ಕಟ್ಟ್ಯಾರು
ಅವರಿಗೆ ಮುತ್ತಿನ ಮಡಲಕ್ಕಿ ಹೊಯ್ದರು–ಅವರವ್ವ
ಗಿರಿಗೆ ಹೊಂಡಿಸಿ ಕಳಿಸವರೇ

ಗಿರಿಗೆ ಕರ್‍ಕಂಡು ಮಲ್ಲಯ್ಯ ಹೋಗುವಾಗ
ಅವರತ್ತೆಗೂ ಮಾವಗೂ ಶರಣೆಂದು

ಹೋತಿನಿ ಅತ್ತ್ರನ್ಮ ಬತ್ತೀನಿ ಮಾವಯ್ಯ
ನಾ ಹೋತಿನಿ ನಮ್ಮ ಗಿರಿಪುರಾಕೆ–ಮಾವಯ್ಯ
ನೀವು ತಿಂಗಳಿಗೆ ಬರಬೇಕು ಗಿರಿಗೆ

ಗಿರಿಜೆ ಕರ್‍ಕಂಡು ಹೋಗಿ ಅಲ್ಲಿಗೆ ತಿಂಗಳಾದೂ
ಬತ್ತಾರೆ ಅವರ ತಂದೆ ತಾಯಿ

ಆಗ ಮಲ್ಲಯ್ಯ ಗಿರಿಜೆಗೇನ ಹೇಳವರೆ
ಬತ್ತಾರೆ ನಿಮ್ಮ ತಂದೆ ತಾಯಿ–ಗಿರಿಜಮ್ಮ
ಹೇ ಬಾಯಿಗೆ ಬೇಕಾದ ಅಡಿಗೆ ಅಡೆ–ಗಿರಿಜಮ್ಮ
ನಿಮ್ಮ ತಾಯಿ ತಂದೆಗೆ ಉಣದಕ್ಕೇ

ಅವರು ಬರಾಗ ನಾನಿರುವುದಿಲ್ಲಾ
ನಾ ಮೂರು ಮನೆ ಭಿಕ್ಷೆ ತರುತೀನಿ

ಅವರ ತಂದೆ ತಾಯಿ ಬ್ಯಾಗನೇ ಬಂದನರೆ
ಪನ್ನೀರಲ್ಲೇ ಪಾದ ತೊಳೆದಾಳು–ಗಿರಿಜಮ್ಮ
ಪಟ್ಟೆಮಂಚಾವ ಪದರಿಹಾಸಿ–ಗಿರಿಜಮ್ಮ
ತಂದೆ ತಾಯಿಗೆ ಉಣಲಿಕ್ಕಿ

ಇದುವೇನೆ ಗಿರಿಗೆ ನಾವು ಬಂದ್ದೂ ತ್ತಾಯಿತು
ಎಲ್ಲಿ ಹೋದರೆ ನಿನ್ನ ಶರಣಾರು

ಉಣ್ಣಕ್ಕೆ ಅನ್ನ ಇಲ್ಲ ಉಡಕೆ ಬಟ್ಟೆ ಇಲ್ಲಾ
ಅವರು ಮೂರು ಮನೆ ಭಿಕ್ಷಾ ತರಬೇಕು–ನನ್ನ ಭಕ್ತರು
ನಾವು ಅದರಲ್ಲೇ ಜೀವ ಸಾಕತೀವಿ

ಮಾತಾಡಹೊತ್ತಿಗೆ ಬಂದನರೆ ಮಲ್ಲಯ್ಯ
ಅವರ ಅತ್ತೆ ಮಾವಾಗೆ ಶರಣೆಂದು

ಬಂದಿರಾ ಅತ್ತೆಮ್ಮ ಬಂದಿರಾ ಮಾವಯ್ಯ
ನನ್ನ ಬಡಾವನ ಮನೆಗೆ ಬರಬಹುದೆ

ಬಂದರೂ ಚಿಂತೆಇಲ್ಲ ನಾವು ಗಿರಿಗೆ ಹೋಗಿಬರೋಣ
ಅತ್ತಮ್ಮ ಮಾವಾನ ಕರ‍್ಕಂಡು ಮಲ್ಲಯ್ಯ
ಗಿರಿಯ ಹತ್ತಿ ಗಿರಿಯಾ ಇಳಿದಾರು

ಗಿರಿಯ ಹತ್ತುತಾ ಮಾವ ಏನ ಹೇಳಾರು
ಮಲ್ಲಯ್ಯ ಗಿರಿ ಪರುತೊ
ಗಿರಿಯಾ ಇಳಿವಾ ಅತ್ತೇನ ಅಂತಾರೆ
ಗಿರಿಗೆ ನಿನ್ನ ಗಿರಿ ಪರುತೊ

ಆ ಗಿರಿ ಈ ಗಿರಿ ಮೇಲೆ ಮುತ್ತಿನಾ ಗಿರಿ
ಮಲ್ಲಯ್ಯನ ಗಿರಿ ಪರುತೊ

ಗಿರಿಯ ಇಳಿದಾರು ಮತ್ತೇನ ಹೇಳಾರು
ಹೋಗಿ ಬತ್ತೀವಿ ನಮ್ಮೂರ‍ಮನೆಗೇ

ಹೋಗಿ ಬನ್ನೀ ಅತ್ಯಮ್ಮ ಹೋಗಿ ಬನ್ನೀ ಮಾವಯ್ಯ
ವರುಸಕ್ಕೊವ್ಮೆ ನನ್ನ ಮದುವೆಯಲ್ಲಾ–ಮಾವಯ್ಯ
ನೀವು ವರುಸಕ್ಕೊಂದು ಸಲ ಬರಬೇಕು

ಶಿವ ಗಂಗೆ

ಪಟ್ಟೆಯ ಉಟ್ಟುಕೊಂಡು ಮುತ್ತಾ ಕಟ್ಟಿಕೊಂಡು
ಬಟ್ಟಗನ್ನಡೀಲಿ ಮುಖನೋಡಿ–ಗೌರಮ್ಮ
ಕುಸಲಾದ ನಗೆಯಾ ನಗುತಾರೆ

ಸ್ಯಾಲೆಯುಟ್ಟುಕೊಂಡು ಸರಮುತ್ತಾ ಕಟ್ಟಿಕೊಂಡು
ನಿಲಗನ್ನಡೀಲಿ ಮುಖನೋಡಿ–ಗೌರಮ್ಮ
ಬಿಲ್ಲಾಣೀ ನಗೆಯ ನಗುತಾರೆ

ಇದೇನು ಸಿರಿಗೌರಿ ನನ್ನ ನೋಡಿ ನಗುತಿಯಾ
ನನ್ನಲ್ಲೇನು ಕಂಡೆ ಅವದುಡ

ನನ್ನ ರುದ್ರಾಕ್ಷಿಯ ನೋಡಿ ಕಾವಿಯ ಜೆಲ್ಲಾಣ ನೋಡಿ
ನನ್ನ ಭಸ್ಮಾಂಗಾವ ನೋಡಿ ನಗೆ ಬಂತೊ

ನನ್ನ ಜಡೆಮುಡಿ ನೋಡಿ ನನ್ನ ರುದ್ರಾಕ್ಷಿನೋಡಿ
ನನ್ನ ಮುದಿಮಾರಿ ನೋಡಿ ನಗೆ ಬಂತೊ

ನಿಮ್ಮ ನೋಡಿ ನಗನಿಲ್ಲ ನಿಮ್ಮ ಕಂಡು ನಗನಿಲ್ಲ
ನನ್ನ ಖುಷಿ ಬಂದು ನಗೆ ಬಂದೊ

ಪಟ್ಟೆ ಉಟ್ಟಿದ್ದೇ ಮುತ್ತು ಕಟ್ಟಿಕೊಂಡಿದ್ದೆ
ನಾ ಬಟ್ಟಗನ್ನಡೀಲಿ ಮುಖನೋಡಿ–ಮಾಸ್ವಾಮಿ
ನನ್ನಗಿಂತ ಉಂಟೆ ಚೆಲುವೇರು–ಎಂಬುದಾಗಿ
ನನ್ನ ಖುಷಿ ಬಂದೂ ನಗೆ ಬಂದೂ

ಸ್ಯಾಲೆ ಉಟ್ಟಿದ್ದೇ ಸರಮುತ್ತು ಕಟ್ಟಿದ್ದೇ
ನಾ ನಿಲಗನ್ನಡಿ ತಗದು ಮುಖನೋಡಿ–ಮಾಸ್ವಾಮಿ
ನನಗಿಂತ ಉಂಟೇ ಚೆಲುವೇರು–ಎಂಬುದಾಗಿ
ನನ್ನ ಖುಷಿಗೊಂದ ಮಾತು ನಗೆಬಂದೊ

ನಾ ಚೆಲುವೆನಂತ ಕೊಚ್ಚಬ್ಯಾಡ
ನಾ ತರುವೇನು ನಿನಗಿಂತ ಚೆಲುವೆಯಾ–ವಯ್ಯಾರಿಯು
ನಿಂದಿರೆ ನೀ ಮನಾದಲ್ಲಿ

ನನಗಿಂತ ಚೆಲುವೆ ತರಗಂಟ
ನಿಮ್ಮ ತಾನ ತಪಾ ಹೊರಗೆ
ಮಾಡಾ ಶಿವಪೂಜೆಗೆ ಆಡಾ ಪಗಡೆಗೆ ಆಣೆ

ನಿಮ್ಮ ಈರಣ್ಣನಿಗೆ ಆಣೆ
ನನಗಿಂತ ಚೆಲುವೆ ತರಬೇಕು–ಮಹಾಸ್ವಾಮಿ
ನನಗಿಂತ ಚೆಲುವೆ ತರಬೇಕು

ನಾ ಮೂಡಸೀಮೆಗೆ ಮುತ್ತಾ ಕೊಳ್ಳಕ್ಹೋಗಿ
ನಾ ಹತ್ತು ತಿಂಗಳಿಗೆ ಬರುತೀನಿ–ಸಿರಿಗೌರಿ
ಗ್ಯಾನುಳ್ಳೀ ನಿನ್ನ ಮನಾದಲ್ಲಿ

ಬಡಗಲ ಸೀಮೆಯುವರ ಜೆಡಗ ನೋಡಾಕ್ಹೋಗಿ
ನಾ ಎಂಟಾ ತಿಂಗಳಿಗೆ ಬರುತೀನಿ–ಸಿರಿಗೌರಿ
ಚಿಂತಿರಲಿ ನಿನ್ನ ಮನದಲ್ಲಿ

ಸ್ವಾಮಿಶಿವರಾಯು ಮತ್ತೆಲ್ಲಿಗೆ ಹ್ವಾದರು
ಸುಂಗಾದರಮನೆಗೆ ನಡೆದಾರು–ಸ್ವಾಮಿರಾಯರು
ಸುಂಗಾರಾಯಿತವರೆ ಶರಣಾರು

ಹಿಂಗಾಸೆ ಮುಂಗಾಸೆ ನಡುವಿಗೆ ಲಿಂಗಾದಕಾಸೆ
ಅವರಿಗೆ ಬಾಸಿಂಗದಾಕಾಸೆ ಬಲಗಡೆಗೆ–ಮಾಸ್ವಾಮಿಗೆ
ಅಂಗಿ ಮೇಲಂಗಿ ಜರತಾರೀ

ಸುತ್ತಿದಾರು ಕಾವಿಯು ಇಟ್ಟಾರು ರುದ್ರಾಕ್ಷಿಯ
ಮುತ್ತಿನ ಕ್ಯಾಮಾಳಿಗೆ ಮೆಟ್ಟಿಕೊಂಡು–ಮಾಸ್ವಾಮಿ
ಭೂಚಕ್ರದ ಕೊಡೆ ಹಿಡ್ಕಂಡು–ಮಾಸ್ವಾಮಿ
ಕರದವರೆ ಚೆನ್ನಬಸವಯ್ಯನ–ಏನ ಹೇಳಾರು
ಹೋಗೋನ ಬಸವ ವನದೇಶವೊ

ಅಣ್ಣ ಬಸವಯ್ಯಗೆ ಇನ್ನೇನ ಅವತಾರ
ಚಿಕ್ಕರೆಡು ಗಂಟೆ ಕಿರುಗೆಜ್ಜೆ—ಮಕರಂಬ
ಅಣ್ಣ ಬಸವಯ್ಯಗೆ ಹಸನಾದೊ

ಅಪ್ಪ ಬಸವಯ್ಯಗೆ ಮತ್ತೇನ ಅವತಾರ
ಈ ಸಣ್ಣವೆರಡು ಗಂಟೆ ಕಿರಗೆಜ್ಜೆ—ಕಂಭಿಸಾಳೂ
ಅಪ್ಪ ಬಸವಯ್ಯಗೆ ಹಸನಾದೊ

ಕೊಂಬಿಗೆ ಕೊಂಬಹಣಸು ಕೊಳ್ಳಾಕೆ ಕಿರುಗೆಜ್ಜೆ
ಜೆನ್ನಿಗೆ ಮುತ್ತಿನ ಸಬರಾದೊ—ಬಸವಯ್ಯಗೆ
ಇರವರೆ ಚೆನ್ನಬಸವಯ್ಯನೊ—ಹೇಳಾರು
ಹಂಪೆ ಹೊಳೆಗಾಗಿ ನಡೆಯಯ್ಯ—ಬಸವಯ್ಯ
ಅಲ್ಲೆ ಅವಳೆ ನನ್ನ ಸತಿಪತಿ—ಗಂಗೆಯ
ನೋಡಿ ತರುವೆ ಬಸವಯ್ಯ

ಹಂಪೆ ಹೊಳೆಗಾಗಿ ನಡೆದಾನು—ಬಸುವಯ್ಯ
ಹೊನ್ನರಳಿಮರದ ನೆರಳಾಲ್ಲಿ—ಹೇಳಾರು
ಈ ತಳವುಳ್ಳಗಾನೂ ತಳಗಾನೆ
ಉದ್ದಿನ ಹುಲು ಮೇಯ್ದು ಗೋಧಿನೀರ ಕುಡಿದು
ಬಗ್ಗನೆ ಬರಹೋಗೂ ಬಸವಯ್ಯ
ಕನಲೆ ಹುಲ್ಲ ಮೇಯ್ದು ಕಡೆಯಲ್ಲೇ ನೀರಾಕುಡಿದು
ತಟ್ಟನೆ ಬರಹೋಗೂ ಬಸವಯ್ಯ
ಬಸವಯ್ಯ ಹೋದಾನೂ ಮುರುಗಾವ ಮೇಯ್ದಾನು
ತಟ್ಟನೆ ಬಂದಾನೊ ಅವರ ಬಳಿಗೆ—ಬಸವಯ್ಯ ಹೇಳಾರು
ಇತ್ತ ಕೇಳೂ ಬಸವಾ ನನ್ನ ಮಾತಾ

ಆಳಾದ್ದ ನೀರಿಲ್ಲಿ ಆಡ್ಕಂಡವಳೆ
ಅಡ್ಯಾಕ್ಕಂಡು ಹಾಡ ಜಲಗವಳು—ಶಿವಗಂಗೆಯ
ಕುಲವಾ ಕೇಳೋಗು ಬಸವಯ್ಯ

ಹತ್ತಾಳುದ್ದ ನೀರಲ್ಲಿ ಮುತ್ತಿನಂಗವಳೆ
ಮತ್ತೆ ಜ್ಯಾಜವ ಗೆಲ್ಲವಳು—ಸಿವಗಂಗೆಯ
ಬಳಗ ಕೇಳೋಗು ಬಸವಯ್ಯ

ಉತ್ತು ಹೊಲದಲ್ಲಿ ಎತ್ತಾ ಬಿಟ್ಟುಕೊಂಡು
ಕುಲಾನ ಕೇಳನರು ಇಸರ್‍ಯಾರೂ–ಮುದಿಜಂಗಮ
ನಾ ಕುಲದಲ್ಲಿ ಹಾರುವರ ಮಗಳಲ್ಲವಾ

ಅರಗೀದ ಹೊಲದಲ್ಲಿ ಹೋರಿಯ ಬಿಟ್ಟುಕೊಂಡು
ಬಳಗಾವ ಕೇಳನರು ಇಸರ್‍ಯಾರೂ–ಮುದಿಜಂಗಮ
ನಾ ಬೆಡಿಗಿನಲ್ಲಿ ಅಂಬಿಗರ ಮಗಳಲ್ಲವಾ

ಎತ್ತನ್ನ ಬ್ಯಾಡ ಮುತ್ತಿನ ಕೋಡು ಬಸವಾ
ಮತ್ತೇಳು ಲೋಕಾನ ಸಲುವಾನು–ಬಸವಾನ
ಎತ್ತನ್ನ ಬ್ಯಾಡ ಸತಿಯುವಳೆ

ಅರಗಿದ ಹೊಲಾದಲ್ಲಿ ಹೋರಿನ್ನ ಬ್ಯಾಡ
ಹೂವಿನ ಕೋಡಿನ ಬಸವಾನ
ನಿನ್ನೇಳಲೋಕಾ ಸಲುವಾನು–ಬಸವಯ್ಯನ
ಹೋರಿನ್ನ ಬ್ಯಾಡ ಸತಿಯುವಳೆ

ಸತಿಯುವಳೆ ಅಂತ ನನ್ನ್ಯಾಕೆ ಅಂದಿರಿ
ಹಸುಮಾನಕಾರ ಅಣ್ಣದೀರು–ಕೇಳಿದರೆ
ನಿಮ್ಮ ಬೆನ್ನಿಗೆ ಬಿಳಿ ಹಂಬ ಬಿಗಿದಾರು

ಬಿಗಿದಾರೆ ಬಿಗಿಯಾಲೇಳೆ
ನಾ ಹರದು ಹೋಗುವುವಾ ಬಲ್ಲೇ ಕಣೆ–ಸಿವಗಂಗೆ
ಕೊಡು ಭಾಷೆ ನನಗೆ ಬಲಗೈಯಾ

ನಾ ತಾಯಿ ಉಳ್ಳವಳು ನಾ ತಂದೆಯುಳ್ಳವಳು
ನಿಮಗೇಕೆ ಭಾಷೆ ಕೊಡವಲ್ಲೇ

ನಿಮ್ಮ ತಾಯಿ ಇದ್ದರೆ ಇರಲೇಳೆ
ನಿಮ್ಮ ತಂದೆ ಇದ್ದರೆ ಇರಲೇಳೆ
ನಿನ್ನ ಬಳಗಾವ ಕೊಂಡ ಬರುತೇನಿ–ಸಿವಗಂಗೆ
ಕೊಡು ನನಗೆ ಭಾಷೆ ಬಲಗೈಯಾ

ನೀವು ತಾಯಿಯುಳ್ಳವರು
ನೀವು ತಂದೆಯುಳ್ಳವರು
ಭಾಷೆ ಕೊಡನಾರೆ ಬಲಗೈಯಾ

ತಾಯಿಲ್ಲ ತಂದೆಯಿಲ್ಲ ನನಗೆ ಸಿವಗಂಗೆ
ನಾ ಒಬ್ಬನೇ ನನ್ನರಮನೇಲಿ

ನೀವು ಹೆಂಡರುಳ್ಳವರು ನೀವು ಮಕ್ಕಳುಳ್ಳವರು
ನಾ ಭಾಷೆ ಕೊಡನಾರೆ ಬಲಗೈಯಾ

ಹೆಂಡರಿಲ್ಲ ಕಾಣೆ ಮಕ್ಕಳಿಲ್ಲ ಕಾಣೆ
ನಾ ಒಬ್ಬನೇ ಕಾಣೆ ಅರಸುನಲ್ಲೀ

ನಿಮ್ಮ ಹಲ್ಲೆಲ್ಲಾ ಹೋಗವೆ ಬೆನ್ನೆಲ್ಲಾ ಭಾಗವೇ
ನೀವು ಮುನ್ನೂರು ವರುಷದ ಮುದುಕಯ್ಯ–ಮಾಸ್ವಾಮಿ

ನಾ ಹನ್ನೆಲೆಡು ವರುಷಾದ ಹಸುಳೆ
ಶಿವನಿಗೂ ಸಿವಗಂಗೆಗೂ ಎಣೆಯಿಲ್ಲ

ಹುಣಿಸೆಯ ಮರ ಮುಪ್ಪಾದರೇನೆ
ಹುಳಿಯಿಲ್ಲವೇನೆ ಸಿವಗಂಗೆ–ಶಿವನೀಗೆ
ದುಡಿವಿಲ್ಲವೇನೆ ಶಿವನಲ್ಲಿ

ಮುದುಕಯ್ಯನೆಂದು ಮುಂಗೋಪ ಮಾಡಬ್ಯಾಡ
ಹಿಂದೆ ಮುಂದಾಗೆ ಸತಿಹೇಳಿ

ಆಗ ಸಿವಗಂಗೆ ಹಿಂದ ಮುಂದಾದಳು
ಇವರು ಕರೆದವರೆ ಚೆನ್ನಬಸವಯ್ಯನ

ಉತ್ತ ಹೊಲದಲ್ಲಿ ಪತ್ರೆ ಮೇಯುವನೆ
ಪತೆ ಗಮನಾಕೆ ಬೆವರವನೆ–ಬಸವಯ್ಯ
ತಟ್ಟನೆ ಬಾರಯ್ಯ ನನ್ನ ಬಳೀಗೆ

ಅರಗಿದ ಹೊಲದಲ್ಲಿ ಮರುಗಾವ ಮೇಯುವನೆ
ಮರುಗಾದ ಗಮನಾಕೆ ಬೆವರವನೆ–ಬಸವಯ್ಯ
ಸೀದಾ ಬಾರಯ್ಯ ನನ್ನ ಬಳೀಗೆ–ಬಸವಯ್ಯ
ನನ್ನ ಒಪ್ಪಾಳೆ ಸಿವಗಂಗೆ

ಮುದುಕಯ್ಯ ಅಂತ ಮುಂಗ್ವಾಪ ಮಾಡುತಾಳೆ
ಬಂಗಾರ ಕೊಡು ಬಾರೊ ಬಸವಯ್ಯ

ಬಸವಯ್ಯ ಬಂದಾನೊ ಬಂಗಾರ ಕೊಟ್ಟಾನೊ
ಸಿಂಗಾರ ಆಯಿತಾರೆ ಶರಣಾರು

ಅವಳು ಹನ್ನೆರೆಡು ವರುಷಾದ ಹಸುಳೆ
ಇವರು ಹದಿನಾರು ವರಷಾದ ಹಸುಳೆಯಾಗಿ–ಮಾಸ್ವಾಮಿ
ನಿಲಗನ್ನಡಿ ತೆಗೆದು ಮುಖನೋಡಿ–ಮಾಸ್ವಾಮಿ
ಹುಸಿ ನಗೆಯ ತಾನು ನಗುತಾರೆ–ಏನಂಥ ಅಂತಾರೆ
ಇಲ್ಲಿ ನೋಡು ನನ್ನ ಅವತಾರ

ಆಗ ಸಿವಗಂಗೆ ಹಿಂದಿರಿಗಿ ನೋಡ್ಯಾಳು
ಬಗ್ಗಿ ನೋಡಿ ಪಾದಾಕೆ ಶರಣೆಂದು–ಏನಂದಾಳು
ಒಪ್ಪಿದೆ ನಿನ್ಮ ಅವದುಡವಾ–ಮಾಸ್ವಾಮಿ
ನಂಬಿದೇನು ನಿಮ್ಮ ಸಿರಿಪಾದವಾ

ನೆಂಬು ನೆಂಬಂದರೆ ನಂಬಿತು ಹೆಣ್ಣು ಜಲ್ಮ
ನಂಬಿದಾಕೆರಡು ಬಗೆದರೆ–ಮಾಸ್ವಾಮಿ
ನೆಂಬಿದೇನು ನಿಮ್ಮ ಸಿರಿಪಾದಾ

ಒಂದಿಗೆ ಹ್ವಾದರೆ ನೆಂಬ್ಯಾರು ಅಣ್ಣತಮ್ಮರು
ಮುಂದೆ ಹೋಗಲೇಳಿ ಶರಣಾರು

ನಂಬೊ ನಂಬೆಂದರೆ ನೆಂಬನಾರೆ ಹೆಣ್ಣು ಜಲ್ಮಾವ
ನಾವು ಒಂದಿಗೆ ಹೋಗೋಣ ನಡೆ ಗಂಗೆ

ಒಂದಿಗೆ ಹ್ವಾದರೆ ನಂಬೆರು ತಾಯಿ ತಂದೆ
ಮುಂದೆಯಾಗಿ ನಡೇರಿ ಶರಣಾರು

ಒಂದಿಗೆ ಹೋಗಾದಕೆ ಅಂಜಿಕೆಯೆಂದರೆ ಗಂಗೆ
ಇರು ಬಾರೇ ನನ್ನ ಸುರಗಿ ಕೆಂಜೆಡೇಲಿ
ಮುಗುಟಾದೊಳಗೆ ಇರುಬಾರೇ

ಗಂಗೆ ತಗದವರೆ ಕಿರುಜಡೆಗೆ ಮಡ್ಗವರೆ
ಹೋಗವರೆ ತಮ್ಮರಮನೆಗೆ

ಸ್ವಾಮೀಯ ಮುಕವಾ ಕಂಡು ಅರಮನೆಯವರು
ಪನ್ನೀರಲ್ಲಿ ಪಾದಾ ತೊಳೆದಾರೂ–ಮನೆಯರೊ
ಪಟ್ಟೆ ಮುಂಚಾವ ವದರಿ ಹಾಸಿ–ಮನೆಯರೊ
ಕರ್ಪೂರದೀಳ್ಯಾವ ಮಡ್ಗ್ಯಾರೂ

ಕರ್ಪರ ದೀಳ್ಯಾಕೆ ಕೈನೀಡ ಮಗನಲ್ಲ
ಸಿವಗಂಗೆಗೆ ಮಾತ ಕೊಡಬೇಕು.

ನೀವು ತಾಯಿಯುಳ್ಳವರು ನೀವು ತಂದೆಯುಳ್ಳವರು
ಸಿವಗಂಗೆಗೆ ಮಾತ ಕೊಡನಾರೆ

ತಾಯಿ ಇಲ್ಲವಲ್ಲ ತಂದೆ ಇಲ್ಲವಲ್ಲ
ಒಬ್ಬಾನೇ ನಮ್ಮರಮನಲ್ಲೀ

ನೀವು ಹೆಂಡಾರುಳ್ಳವರು ನೀವು ಮಕ್ಕಳುಳ್ಳವರು
ನಾ ಸಣ್ಣವಳ ಸಿವಗಂಗೆ ಕೊಡನಾರೆ

ನನಗೆ ಹೆಂಡರು ಇಲ್ಲ ಮಕ್ಕಳು ಇಲ್ಲ
ಒಬ್ಬಾನೇ ಅರಮನಲ್ಲೀ
ನಿಮ್ಮ ಹಲ್ಲೆಲ್ಲಾ ಹೋಗವೆ ಬೆನ್ನೆಲ್ಲಾ ಭಾಗವೆ
ನೀವು ಮುನ್ನೂರು ವರುಷಾದ ಮುದುಕಯ್ಯ–ಮಾಸ್ವಾಮಿ
ನಾ ಹಸುಳೆ ಸಿವಗಂಗೆ ಕೊಡನಾರೆ

ಮುದುಕಯ್ಯನಂದು ಮುಂಗ್ವಾಪ ಮಾಡಬ್ಯಾಡ
ಹಿಂದೆ ಮುಂದಾಗಿ ಮನೆಯವರೆ

ಆಗ ಮನೆಯವರು ಹಿಂದಮುಂದಾದರು
ಇವರು ಹದಿನಾರು ವರುಷದ ಹಸುಳೆಯಾಗಿ–ಮಾಸ್ವಾಮಿ
ಏನಂಥ ಹೇಳುತಾರೆ ಸಿವರಾಯ

ಅತ್ತ ನೋಡಿ ಮನೆಯವರೆ ಇತ್ತ ನೋಡಿ ಮನೆಯುವರೆ
ತಿರುಗಿ ನೋಡಿ ನನ್ನ ಅವತಾರವ

ಆಗ ಮನೆಯವರು ಹಿಂತಿರುಗಿ ನೋಡ್ಯಾರೂ
ಬಗ್ಗಿ ಪಾದಕೆ ಶರಣೆಂದೂ–ಏನಂದಾರು
ಶಿವನಿಗೂ ಸಿವಗಂಗೆಗೂ ಎಣ್ಣೈತೆ–ನಾವು ಈಗ
ಸಿವಗಂಗೆಗೆ ಮಾತ ಕೊಡೋಣ

ಕೊಟ್ಟಣ ಕುಟ್ಟಿಸವರೆ ಪಟ್ಟಣ ಸಾರಿಸವರೆ
ಈ ಗಂಗೆಗೂ ಸಿವರಾಯಗೂ ಮದುವೆಂದೂ

ಆಕಾಸ ಚಪ್ಪರಾದೂ ಭೂಮಿ ಹಸೆಯಾದೂ
ಗಂಗೆಗೂ ಸಿವರಾಯಗೂ ಮದುವೆಂದೂ

ಕಂಡವರಿಗೆ ಹೇಳಿದಾರು ಕಾಣದವರಿಗೆ ವಾಲೆ ಬರೆದಾರೂ
ಗಂಗೆಗೂ ಸಿವರಾಯಗೂ ಮದುವೆಂದೂ

ಗಂಗೆಗೂ ಸಿವರಾಯಗೂ ಧಾರೇನು ಆಗುವಾಗ
ಬಂದವೆ ಎರಡು ಗಿಣಿಗಳು

ಮೂಡಲಿಂದ ಎರಡು ಮುತ್ತಿನ ಗಿಣಿ ಬಂದೂ
ರಕ್ಕೆಯ ಬಡಿದು ನಿಲ್ಲುತ್ತಾವೆ–ಏನಂಥ ಅಂತಾವೆ
ಅಕ್ಕಗೂ ಭಾವಗೂ ಒಳ್ಳೆ ಎಣೆಂದೂ

ಮೂಡಲಿಂದ ಮುತ್ತಿನ ಎರಡು ಗಿಣಿ ಬಂದೂ
ಪುಕ್ಕವಾ ಹುಯ್ದು ನಗುತ್ತಾವೆ–ಏನಂಥ ಅಂತಾವೆ
ಭಾವ ಅಕ್ಕಯ್ಯಗೂ ಎಣೆಂದೂ

ಈ ಭಾವಗೂ ಅಕ್ಕಯ್ಯ ಎಣೆಂದೂ
ನಮ್ಮಕ್ಕಗಿಂತಾ ಕರಚೆಲುವೆ–ಗಂಗಕ್ಕ
ಹೋಗೇಳಕ್ಕನಿಗೆ ವಸುಗೆಯಾ

ಹಾಲುಅನ್ನಕ್ಕಿ ಬಾಲೂ ನಿಮ್ಮ ಅರಸಿದೇ
ಎಲ್ಲಿ ಹೋಗಿದ್ದೆ ಗಿಣಿ ರಾಮಾ

ನಿನ್ನ ಹಾಲುಅನ್ನದ ಮನೆ ಹಾಳಾಗ್ಲಿ
ಭಾವ ಅಕ್ಕಯ್ಯನ ತರತಾರೆ

ತುಪ್ಪ ಅನ್ನಕ್ಕಿ ಮತ್ತೆ ನಿಮ್ಮ ಅರಸಿದೇ
ಎತ್ತ ಹೋಗಿದ್ದೇ ಗಿಣಿರಾಮಾ

ತುಪ್ಪ ಅನ್ನದ ಮನೆ ಹಾಳಾಗ್ಲಿ ಹೋಗಕ್ಕ
ಕಾಯಬಿಟ್ಟು ಹಣ್ಣು ಮೆಲ್ಲುತ್ತಿದ್ದವು–ಗೌರಕ್ಕ
ಭಾವ ಅಕ್ಕಯ್ಯ ತರುತಾರೆ–ಗಂಗಕ್ಕ
ನಿನಗಿಂತ ಅವಳು ಕಡು ಚೆಲುವೆ

ಹೇ ಸಿಡಿವಿಡಿಗೊಡುತಾ ಹಾರಾಡತ
ಹೇ ಎಡಗಾಲಬೆಟ್ಟು ಎಡವಿದಾಳು–ಕಾಣದೆ
ತಾಳ ಮುಂಡಿಗೆ ಜಡಿದವಳೆ

ಹೇ ಮದುವೆಯಾಗಿ ಇಲ್ಲಿಗೆ ಒಂದು ತಿಂಗಳಾದವೂ
ಏನು ಹೇಳುತಾರೆ ಶರಣಾರು

ಹೇ ನಾ ಇಲ್ಲಿಗೆ ಬಂದು ತಿಂಗಳಾದವೂ
ಹೋಯಿತಿನಿ ನನ್ನ ಅರಮನೆಗೆ–ಮನೆಯವರೆ
ಸಿವಗಂಗೆ ನೀವು ಕಳಿಸಿಂದೊ

ಆ ಮಾತ ನೋಡಿ ಕೇಳಿದರು ಮನೆಯವರು
ಗಂಗೆಗೂ ಈ ಸಿವರಾಯನಿಗೂ ಊಟಕಿಕ್ಕಿ–ಮನೆಯವರು
ಇವಳಿಗೆ ಮುತ್ತಿನ ಮಡಲಕ್ಕಿ ಹುಯ್ದಾರು–ಮನೆಯವರು
ಸಿವಗಂಗೆ ಹೊಂಡಿಸಿ ಕಳುಸೀರು

ಗಂಗೆಯು ಕರ್ಕೊಂಡು ಸಿವರಾಯ ಬರಾಗ
ನೊಂದವಳೆಲ್ಲಾ ಸಿವಗಂಗೆ

ಬ್ಯಾಸಿಗೆ ಬಿಸಿಲಲ್ಲಿ ದಾರಿ ನಡೆದವಳಲ್ಲಿ
ಅವಳ ಕಂತು ಬೆವತು ಹರಿದಾಳೂ

ಸ್ವಾಮಿ ಸಿವರಾಯ ಹಿಂತಿರುಗಿ ನೋಡವರೆ
ನೊಂದೇನೆ ನನ್ನ ಅರಗಿಣಿ–ಸಿವಗಂಗೆ
ಇರು ಬಾರೇ ನನ್ನ ಕಿರಜಡೆಗೆ

ಗಂಗೆ ತಗೆದಾರೂ ಕಿರುಜಡೆಗೆ ಮಡಗಿದಾರೂ
ಹೋದಾರೊ ತಮ್ಮರಮನೆಗೇ–ಶರಣಾರು
ಇವಳು ತಾಳ ಮುಂಡಿಗೆಯ ಜಡಿದಾಳು

ಮೂಡ ಸೀಮೆಗೆ ಮುತ್ತಾ ಕೊಳ್ಳಕೆ ಹೋಗಿ
ನಾ ಒಬ್ಬನೇ ಬಂದೇ ಗಿಡಾದಲ್ಲಿ–ಸಿರಿಗೌರಿ
ಎದ್ದು ಬಂದು ಕದವಾ ತೆಗೆ

ಕದಾವ ತೆಗೆಯಾಕೆ ನಾ ಹ್ಯಾಗೆ ತೆಗೆಯಾಲಿ
ಇದ್ದದ್ದೊಂದು ಸೀರೆಯಾ ಅಗಸಾಗೆ–ಹಾಕಿವಿನಿ
ನಾ ಹುಟ್ಟಿದಂಗ ಇದ್ದೀನಿ ಶರಣರೇ

ಅಟ್ಟಕ್ಕೆ ಹಾಕು ಹತ್ತು ಕಾಲೇಣಿಯು
ಕಾಗೋಡುಕರಿದ ಮುಸುಗಿಡು–ಸಿರಿಗೌರಿ
ಎದ್ದು ಬಂದು ಕದವಾ ತೆಗೆ ಗೌರಿ

ನೀ ಒಡಗಲ ಸೀಮೆಯುವರ ಬೆಡಗಾ ನೋಡಕೆಹೋಗಿ
ನಾ ಒಬ್ಬನೇ ಬಂದೇ ಗಿಡಾದಲಿ–ಸಿರಿಗೌರಿ
ಎದ್ದು ಬಂದು ಕದವಾ ತೆಗೆ ಗೌರಿ

ಕದವಾ ತೆಗೆಯಾಕೆ ನಾಹೆಂಗೆ ತೆಗೆಯಾಲಿ
ನಿಮ್ಮ ಮುದ್ದು ಈರಣ್ಣ ತೊಡೆಮ್ಯಾಲೆ–ಮನಗವನೆ
ಎದ್ದಂಗೆ ಕದವಾ ತೆಗೆಯಾಲಿ

ಮುದ್ದು ಈರಣ್ಣ ಗದ್ದಿಗೆಯ ಮೇಲೆ ಮನಗಿಸಿ
ಎದ್ದು ಬಂದು ಕದವಾ ತೆಗೆ ಗೌರಿ

ಅವಳು ಸಿಡಿಸಿಡಿಗೊಡುತಾ ಕಿಡಿ ಕಿಡಿನೆ ಹಾರುತ್ತಾ
ಅವಳು ಎಡಗಾಲಬೆಟ್ಟ ಎಡುವುದಾ–ಕಾಣದೇ
ತಂದಿಟ್ಟಳು ಜೋಡು ಮಣೆಯಾ

ಇದೇನು ಸಿರಿಗೌರಿ ಮಾತೊಂದು ಮಣೆರಡು
ಎರಡುಂಟೇನೆ ಜೋತಿ ಅರಮನಲ್ಲೀ–ಸಿರಿಗೌರಿ
ನಿನಗಿಬ್ಬರುಂಟೇ ಪುರುಷಾರು

ಅಂಜಿ ಬಿನ್ನ ಮಾಡಲ ಅಳಿಕಿ ಬಿನ್ನ ಮಾಡಲ
ನಿಮ್ಮ ಸುರಿಗಿ ಕೆಂಜೆಡೆಯ ಮಗಟಾದೊಳಗೆ–ಇರುವ
ಸಿವಗಂಗೊಂದು ನಿಮಗೊಂದು

ಗಂಗೆ ತಂದವನಂತೆ ಗೌರಿಗೆ ಹೇಳಿದವರ್ಯಾರು
ಕೊಂಡಕಾರ ಚೆನ್ನಬಸವಯ್ಯ
ದಂಡಿನಾ ಕೂಟಿ ತುಣಿಸೇನು

ಬಸವಯ್ಯ ಹೇಳಿದರು ಬಹು ಕ್ವಾಪಮಾಡಬ್ಯಾಡಿ
ನಿಮ್ಮರಮನಲ್ಲಿ ಆಡೂ ಅರಗಿಣಿ–ಗಿಣಿರಾಮ
ತಂದ್ದೇಳಿವೆ ವಸುಗೆಯಾ

ಆಗ ಶರಣಾರು ಹುಸಿನಗೆ ನಗುತಾರೆ
ತಗದಿಟ್ಟರು ಗಂಗೆಯ ಎಡಗಡೆ
ಅತ್ತೆಗೆ ಶರಣನ್ನು ಮಾವಾಗೆ ಶರಣನ್ನು
ನಿಮ್ಮಕ್ಕ ಗೌರಿಗೆ ಶರಣನ್ನು
ನನ್ನಗಿಲ್ಲದ ಅತ್ತೆವರೆ ಇಲ್ಲದ ಮಾವವರೆ
ನನ್ನಗಿಲ್ಲದ ಗೌರಕ್ಕ ಅವರಲ್ಲಾ

ನಿನ್ನ ತರುವಾಗ ಎಷ್ಟೊ ಸುಳ್ಳು ಹೇಳಿದೆ
ಚಿಕ್ಕವಳು ಗಂಗೆ ತರುವಾಗ–ಸಿವಗಂಗೆ
ಸುಳ್ಳು ಹೇಳಿ ನಿನ್ನ ತಂದೆ ಕಾಣೆ

ಅತ್ತೆಗೆ ಶರಣೆಂದೆ ಮಾವಾಗೆ ಶರಣೆಂದೆ
ಅಕ್ಕ ಗೌರಕ್ಕಗೆ ಶರಣೆಂದೆ–ಮಾಸ್ವಾಮಿ
ಅವಳಡ್ಡ ಮಾರೆಯ ತೆಗೆದಾಳೂ

ನಿನ್ನ ಕತ್ತರಿಸ ನಿನ್ನ ಹುತ್ತಿರಿಸಿ
ಚಿನ್ನದ ಮಂಕರಿಗೆ ತುಂಬಲೇಳಿ–ಸಿವಗಂಗೆ
ಸಿವನ ಎಡಗಡೆ ಮಡಗಾಲಿ

ಚಿಕ್ಕವಳು ಅಂತ ರಷಾಡ ಬ್ಯಾಡ
ಸಣ್ಣವಳು ಕಾಣೆ ಅವಳು ಅಳುತಾಳೆ–ಸಿವಗಂಗೆ
ಬಯ್ಯಬ್ಯಾಡ ನಮ್ಮ ಎದುರಾಗೆ

ವಾರವಾರಗಿತ್ತೀರು ಒಂದಾಗಿರುವಾಗ
ಅಂಗಳಾದ ಕಲ್ಲಾ ಸಿವಮೆಟ್ಟಿ–ಏನಂದಾರೂ
ಅಂಜಬ್ಯಾಡ ಗಂಗ ಗೌರಿಗೆ

ಈ ಅಕ್ಕ ತಂಗೇರು ತೆಕ್ಕೇಲಿರುವಾಗ
ಬಚ್ಚಾಲ ಕಲ್ಲಾ ಸಿವಮೆಟ್ಟಿ–ಏನಂದಾರೂ
ದಕ್ಕ ಬ್ಯಾಡ ಗಂಗೆ ಗೌರೀಗೆ

ಸಂಗ್ರಹ ವಿವರ

ಹಾಡಿದವರು	:	ಶ್ರೀಮತಿ ಗಂಗಮ್ಮ
ವಯಸ್ಸು	:	೫೫ ವರ್ಷ
ಮತ	:	ಹರಿಜನರು
ಸ್ಥಳ	:	ಸುಂಡುವಳ್ಳಿ
ಸೊಲ್ಲು ಹೇಳಿದವರು	:	ಶ್ರೀಮತಿ ಕೆಂಚಮ್ಮ
ವಯಸ್ಸು	:	೩೦ ವರ್ಷ
ಮತ	:	ಹರಿಜನರು
ಸ್ಥಳ	:	ಕೊಡ್ಲಿಪೇಟೆ
ಸಂಗ್ರಹಿಸಿದ ಸ್ಥಳ	:	ರಾಂಪುರ. ಉತ್ತರ ಕೊಡಗು ಜಿಲ್ಲೆ
ಸಂಗ್ರಹಿಸಿದ ದಿನಾಂಕ	:	೧೦-೫-೧೯೭೭ ರಿಂದ ೨೨-೫-೧೯೭೭





ಕನ್ನಡ ಅಧ್ಯಯನ ಸಂಸ್ಥೆ

ಜಾನಪದ ಮಾಲೆಯ ಪ್ರಕಟಣೆಗಳು

1. ತಿಮ್ಮಕ್ಕನ ಪದಗಳು : ಸಂ. ಎಲ್. ಆರ್. ಹೆಗ್ಗಡೆ
2. ಮಳಲಿ ಗಿಡ್ಡಮ್ಮ : ಸಂ. ಎಂ. ಸಿ. ವಸಂತಕುಮಾರ್
3. ಆಯ್ದ ಜನಪದ ಕಥೆಗಳು : ಸಂ. ಜೀ. ಶಂ. ಪರಮಶಿವಯ್ಯ
4. ಕೈಲಿಯಕರೆದ ನೊರೆಹಾಲು : ಸಂ. ಗುಂಡ್ಮಿ ಚಂದ್ರಶೇಖರ ಐತಾಳ
5. ಜನಪದ ಬೆಡಗಿನ ವಚನಗಳು : ಸಂ. ಸುಧಾಕರ
6. ಕನ್ನಡ ಜನಪದ ಕಥೆಗಳು : ಸಂ. ಜೀ. ಶಂ. ಪರಮಶಿವಯ್ಯ
7. ಭೂತಾರಾಧನೆ : ಸಂ. ಸೇವ ನಮಿರಾಜಮಲ್ಲ
8. ಹುಟ್ಟಿದಹಳ್ಳಿ–ಹಳ್ಳಿಹಾಡು : ಸಂ. ಅರ್ಚಕ ರಂಗಸ್ವಾಮಿ
9. ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು : ಸಂ. ಕ್ಯಾತನಹಳ್ಳಿ ರಾಮಣ್ಣ
10. ಶ್ರೀಕೃಷ್ಣ ಪಾರಿಜಾತ : ಸಂ. ಆರ್. ಜಿ. ಕುಲಕರ್ಣಿ
11. ಕನ್ನಡ ಶಿಶುಪ್ರಾಸಗಳು : ಸಂ. ರಾಮೇಗೌಡ
12. ಗೊಂದಲಿಗರ ಕಥೆಗಳು : ಸಂ. ಕ್ಯಾತನಹಳ್ಳಿ ರಾಮಣ್ಣ
13. ಬೆಳಗಾಂ ಜಿಲ್ಲೆಯ ಲಾವಣಿಗಳು : ಸಂ. ಟಿ. ಎಸ್. ರಾಜಪ್ಪ
14. ಒಗಟುಗಳು : ಸಂ. ಎಚ್. ಜೆ. ಲಕ್ಕಪ್ಪಗೌಡ
15. ನಮ್ಮ ಜನಪದ ನಂಬಿಕೆಗಳು : ಸಂ. ಜಿ. ವಿ. ದಾಸೇಗೌಡ
16. ಕೆಲವು ಲಾವಣಿಗಳು : ಸಂ. ಡಾ. ಎಲ್. ಆರ್. ಹೆಗ್ಗಡೆ
17. ನಮ್ಮ ಸುತ್ತಿನ ಗಾದೆಗಳು : ಸಂ. ಸುಧಾಕರ
18. ಕಾಡು ಹೂಗಳು : ಸಂ. ಜಿ. ಬಿ. ಖಾಡೆ
19. ನಮ್ಮ ಸುತ್ತಿನ ನಂಬಿಕೆಗಳು : ಸಂ. ಡಿ. ಕೆ. ರಾಜೇಂದ್ರ
20. ಬಯಲುಸೀಮೆಯ ಲಾವಣಿಗಳು : ಸಂ. ಕಾಳೇಗೌಡ ನಾಗವಾರ
21. ಬೆಳಗಾಂ ಜಿಲ್ಲೆಯ ಜನಪದ ಕಥೆಗಳು : ಸಂ. ಟಿ. ಎಸ್. ರಾಜಪ್ಪ
22. ಹಾಡಿಗೆ ಹನ್ನೆರಡು ಕಬರು : ಸ. ಕುಂಜಿಬೆಟ್ಟು ಸುಬ್ರಮಣ್ಯ ಕೆದ್ಲಾಯ
23. ಅಂಟಿಗೆ ಪಂಟಿಗೆ ಪದಗಳು : ಸಂ. ಶ್ರೀಕಂಠ ಕೂಡಿಗೆ
24. ಹಾಲಕ್ಕಿ ಪಾಯಸ : ಸಂ. ಎಲ್. ಜಿ. ಭಟ್
25. ಕನ್ನಡ ಜಾನಪದ ಗ್ರಂಥಸೂಚಿ : ಸಂ. ಡಾ. ಹಾ. ಮಾ. ನಾಯಕ